ನಿಲುವಳಿ ಸೂಚನೆ (ಮಂಡನೆಗೆ ಅನುಮತಿ ಕೋರಿಕೆ)

ಕೆಲವು ರಾಜಕೀಯ ಮುಖಂಡರ ಟೆಲಿಫೋನ್ ಟ್ಯಾಪ್ ಮಾಡಿರುವ ಬಗ್ಗೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧಪಕ್ಷದ ನಾಯಕರು) —ಮಾನ್ಯ ಅಧ್ಯಕ್ಷರೆ, ನಮ್ಮ ನಿಲುವಳಿ ಸೂಚನೆಗೆ ಸಂಬಂಧಿಸಿದಂತೆ ತಾವು ನಮಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾವು ಕೃತಜ್ಞತರಾಗಿದ್ದೇವೆ.

ಅಧ್ಯಕ್ಷರು—, ಇದು ಪ್ರಿಲಿಮಿನರಿ ಸಬ್‌ಮಿಷನ್ ಅಲ್ವಾ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ—, ಹೌದು, ಪ್ರಿಲಿಮಿನರಿ ಸಬ್‌ಮಿಷನ್. ಅಧ್ಯಕ್ಷರೇ, ಈ ಟೇಪಿನ ವ್ಯವಹಾರ ಬಹಳ ಕೆಟ್ಟ ವ್ಯವಹಾರ ಆಗಿಹೋಯಿತು. ಬೈರೇಗೌಡರ ಟೇಪ್ ಆಗಲಿ ಅಥವಾ ಮೊಯಿಲಿಯವರ ಟೇಪ್ ಆಗಲಿ ಅಥವಾ ಕದ್ದು ಕೇಳತಕ್ಕ ಟೇಪ್ ವ್ಯವಹಾರ ಆಗಲಿ ಇವುಗಳ ಬಗ್ಗೆ ಯಾವಾಗಲೂ ಹೇಳುತ್ತಿದ್ದೇವೆ......

ಶ್ರೀ ಬಿ. ಎಸ್. ಯಡಿಯೂರಪ್ಪ—. ಅಧ್ಯಕ್ಷರೇ, ಈಗ ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ತಮ್ಮ ಹತ್ತಿರ ನನ್ನ ಸಬ್‌ಮಿಷನ್ ಏನೆಂದರೆ, ನಿನ್ನೆ ದಿವಸ ನಿಲುವಳಿ ಸೂಚನೆಯನ್ನು ತಂದು ಮಾನ್ಯ ವಿರೋಧಪಕ್ಷದ ನಾಯಕರು, ನಾವು ಟೆಲಿಫೋನ್ ಸಂಭಾಷಣೆ ಬಗ್ಗೆ ಚರ್ಚೆ ಪ್ರಾರಂಭ ಮಾಡಿದಾಗ ತಾವು ರೂಲಿಂಗ್ ಕೊಟ್ಟು, ಸಭಾನಾಯಕರ ಅಭಿಪ್ರಾಯ ತೆಗೆದುಕೊಂಡು ನಾಳೆ ದಿವಸ ಎರಡು ಗಂಟೆ ಮೇಲೆ ಈ ವಿಚಾರ ತೆಗೆದುಕೊಳ್ಳೋಣ. ಆಗ ಮಾಜಿ ಮುಖ್ಯಮಂತ್ರಿಗಳೂ ಇರುತ್ತಾರೆ. ಆ ಸಮಯದಲ್ಲಿ ಪ್ರಸ್ತಾಪ ಮಾಡಿದರೆ ಸೂಕ್ತವಾಗುತ್ತದೆ ಎಂದು ಹೇಳಿದ ಮೇಲೆ ಒಳಗಡೆ ತಾವು ಕರೆದು ಮಾತನಾಡಿದ ಮೇಲೆ ಮಧ್ಯಾಹ್ನ 2 ಗಂಟೆಗೆ ಟೆಲಿಫೋನ್ ಪ್ರಕರಣದ ಬಗ್ಗೆ ಚರ್ಚೆ ಮಾಡಬೇಕೆಂದು ತಾವು ರೂಲಿಂಗ್ ಕೊಟ್ಟಿದ್ದೀರಿ. ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಕಾನೂನಿನ ಚೌಕಟ್ಟಿನಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ನಿಲುವಳಿ ಸೂಚನೆಯನ್ನು ತಂದಾಗ ಯಾವ ದಿನದಂದು ನಿಲುವಳಿ ಸೂಚನೆಯನ್ನು ತರಲಾಗಿದೆಯೋ ಆ ದಿನ ಪ್ರಸ್ತಾಪ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಈ ದಿವಸ ನಿಲುವಳಿ ಸೂಚನೆಯನ್ನು ನಾನು ಕಳುಹಿಸಿಕೊಟ್ಟಿದ್ದೇನೆ. ಕೋಟ್ಯಾಂತರ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವಂಥ ವಿಚಾರದ ಬಗ್ಗೆ, ಒಂದು ದಿನಕ್ಕೆ ನಾಲ್ಕು ಸಾವಿರಕ್ಕೂ ಹೆಚ್ಚು ಜಾನುವಾರುಗಳನ್ನು ಕಸಾಯಿಖಾನೆಗೆ ತೆಗೆದುಕೊಂಡುಹೋಗಿ ಕೊಲೆ ಮಾಡುವಂತಹ ವಿಚಾರದ ಬಗ್ಗೆ......

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿದೆ ? ಈ ವಿಷಯವೇ ಬೇರೆ, ಆ ವಿಷಯವೇ ಬೇರೆ ಪಾಯಿಂಟ್ ಆಫ್ ಆರ್ಡರ್ ಹೇಗೆ ಬರುತ್ತದೆ ಇಲ್ಲಿ ? ಈ ಸಬ್ಜೆಕ್ಟ್ ಮೇಲೆ ಪಾಯಿಂಟ್ ಆಫ್ ಆರ್ಡರ್ ಹೇಗಾಗುತ್ತದೆ ?

ಶ್ರೀ ಬಿ. ಎಸ್. ಯಡಿಯೂರಪ್ಪ —ಹಿರಿಯ ಸದಸ್ಯರಾದ ತಾವು ಹೀಗೆ ಮಾಡಿದರೆ ಹೇಗೆ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದು ಅನ್ಯಾಯ.

ಅಧ್ಯಕ್ಷರು.—ಯಡಿಯೂರಪ್ಪನವರೆ, ನಿಮ್ಮ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ —ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಸದನ ಪ್ರಾರಂಭವಾಗುವ ಮುಂಚೆ ಕಾನೂನಿನ ಚೌಕಟ್ಟಿನಲ್ಲಿ ನಿಲುವಳಿ ಸೂಚನೆಯನ್ನು ನಾನು ಕಳುಹಿಸಿದ್ದೇನೆ. ನಿನ್ನೆ ದಿವಸದ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವ ಮುಂಚೆ ನಾನು ಕಳುಹಿಸಿರುವ ನಿಲುವಳಿ ಸೂಚನೆ ಬಗ್ಗೆ ಕೇಳುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಯಾವುದೇ ಸದಸ್ಯರು ಹೊಸ ವಿಷಯದ ಬಗ್ಗೆ ನಿಲುವಳಿ ಸೂಚನೆ ಕಳುಹಿಸಿದ್ದರೆ ಅದಕ್ಕೆ ಮೊದಲು ಅವಕಾಶ ಮಾಡಿಕೊಡಬೇಕು. ಆಮೇಲೆ ವಿರೋಧಪಕ್ಷದ ನಾಯಕರಿಗೆ ಅವಕಾಶ ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ಹೇಳಿದ ಮೇಲೆ ತಾವು ಏನು ತೀರ್ಪು ಕೊಡುತ್ತೀರೋ ಅದಕ್ಕೆ ತಲೆ ಬಾಗಿ ಕುಳಿತುಕೊಳ್ಳುತ್ತೇನೆ. ಈ ದಿನ ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆ ನಾನು ಹೊಸದಾಗಿ ನಿಲುವಳಿ ಸೂಚನೆಯನ್ನು

ಕಳುಹಿಸಿರುವುದರಿಂದ, ಆದರ ಬಗ್ಗೆ ನನಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾನು ಪ್ರಸ್ತಾಪ ಮಾಡುವ ವಿಷಯ ಸರಿ ಎಂದು ಕಂಡುಬಂದರೆ ಯಾವ ರೀತಿಯಲ್ಲಾದರೂ ಪ್ರಸ್ತಾಪ ಮಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಕೂಡ್ರಿ ನೀವು

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಈ ದಿನ ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಬೇರೆ ಯಾವುದೇ ಸದಸ್ಯರು ಈ ದಿನ ನಿಲುವಳಿ ಸೂಚನೆಯನ್ನು ಕಳುಹಿಸಿ ಪ್ರಸ್ತಾಪ ಮಾಡದೇ ಇದ್ದಾಗ......

ಅಧ್ಯಕ್ಷರು.—ಕೂಡ್ರಿ. ನಿಮಗೆ ಕಾನೂನು ಗೊತ್ತಿಲ್ಲ, ರೂಲ್ಸ್ ಇಲ್ಲ ರೆಗ್ಯುಲೇಷನ್ಸ್ ಇಲ್ಲ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ತಾವು ಈ ಮಾತು ಹೇಳಿದರೆ ನನಗೆ ಅಪಮಾನ ವಾಗುತ್ತದೆ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಬಿಟ್ಟು ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಹೇಳು ತ್ತಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟೆ. ಕಾನೂನಿನ ಚೌಕಟ್ಟಿನಲ್ಲಿ ನಿಲುವಳಿ ಸೂಚನೆಯನ್ನು ಇವತ್ತು ಕಳುಹಿಸಿರುವುದು ನಾನೊಬ್ಬನೆ ನಿನ್ನೆ ನೀಡಿದಂಥ ನಿಲುವಳಿ ಸೂಚನೆಯನ್ನು ಎರಡು ಗಂಟೆ ಹೊತ್ತಿಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ, ಅದರ ಬಗ್ಗೆ ನನ್ನ ವಿರೋಧ ಇಲ್ಲ. ನಾನು ಇವತ್ತು ಹೊಸದಾಗಿ ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿರುವಾಗ, ಬೇರೆ ಯಾರೂ ಇಲ್ಲದೇ ಇದ್ದಾಗ ನನಗೆ ಮೊದಲು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಾನು ಹೇಳುವುದು ಸರಿಯಿಲ್ಲ, ನನಗೆ ಕಾನೂನು ಗೊತ್ತಿಲ್ಲ ಅಂದರೆ ಅದನ್ನು ಹೇಳಿ. ಅದಕ್ಕೆ ನನ್ನ ವಿರೋಧ ಇಲ್ಲ.

ಅಧ್ಯಕ್ಷರು.—ಅವರು ನಿಲುವಳಿ ಸೂಚನೆಯನ್ನು ಹಿಂದಿನ ದಿವಸವೇ ಕೊಟ್ಟಿದ್ದರು. ಆ ಬಗ್ಗೆ ನಿನ್ನೆ ನಾನು ಏನು ಹೇಳಿದೆ ಎಂದರೆ, ರೂಲ್ ೬೮ ರ ಪ್ರಕಾರ ನೀವು ಒಪ್ಪುವುದಾದರೆ ಇವತ್ತೇ ಚರ್ಚೆಗೆ ತೆಗೆದುಕೊಳ್ಳಬಹುದು ಅಂತ ಹೇಳಿದ್ದೆ. ಆದರೆ ರೂಲ್ ೬೮ ರ ಕೆಳಗೆ ಚರ್ಚೆ ಮಾಡುವುದಕ್ಕೆ ಅವರು ಒಪ್ಪಲಿಲ್ಲ. ಅದನ್ನು ನಿಲುವಳಿ ಸೂಚನೆಯಾಗಿಯೇ ತೆಗೆದುಕೊಳ್ಳ ಬೇಕಾಯಿತು, ಅವರು ನಿಲುವಳಿ ಸೂಚನೆಯ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೋಸ್ಕರ ನಾನು ಅವರಿಗೆ ಅಪ್ಪಣೆಯನ್ನು ಕೊಟ್ಟಿದ್ದೇನೆ, ನಿಮ್ಮ ನಿಲುವಳಿ ಸೂಚನೆ ಇವತ್ತು ಬೆಳಗ್ಗೆ ಏನು ಕೊಟ್ಟಿದ್ದೀರಿ. ಅದನ್ನು ನಾನು ರಿಜೆಕ್ಟ್ ಮಾಡಿ, ಕಾಲಿಂಗ್ ಅಟೆನ್ಷನ್ ಆಗಿ ಕನ್ವರ್ಟ್ ಮಾಡಿ, ನಾಳೆಯೇ ಅದಕ್ಕೆ ಅವಕಾಶ ಮಾಡಿಕೊಡಿ ಅಂತ ಹೇಳಿ ದ್ದೇನೆ. ನಾಳೆಯೇ ನಿಮ್ಮ ಗಮನ ಸೆಳೆಯುವ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಆಗ ನಿಮಗೆ ಸಾಕಷ್ಟು ಅವಕಾಶವನ್ನು ಕೊಡುತ್ತೇನೆ, ಮತ್ತೆ ಈ ನಿಲುವಳಿ ಸೂಚನೆಯ ಬಗ್ಗೆ ನೀವೂ ಸಹಿ ಮಾಡಿದ್ದು ಇದ್ದರೆ, ನೀವೂ ಮಾತನಾಡಬಹುದು. ಮಾನ್ಯ ಕೃಷ್ಣನ್ ರವರೂ ಕೂಡ ಮಾತ ನಾಡುತ್ತಾರೆ. ಯಾರ್ಯಾರು ಈ ನಿಲುವಳಿ ಸೂಚನೆಗೆ ಸಹಿ ಮಾಡಿದ್ದಾರೋ ಅವರೆಲ್ಲರಿಗೂ ಮಾತ ನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ . ...

ಅಧ್ಯಕ್ಷರು.—ನಾನು ನೀವು ಎತ್ತಿದಂತಹ ಕ್ರಿಯಾಲೋಪಕ್ಕೆ ರೂಲಿಂಗ್ ಕೊಟ್ಟಿದ್ದು ಆಯಿತು. ನಿಮ್ಮ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಯಾವುದೇ ಉರುಳು ಇಲ್ಲ. ಸತ್ಯಾಂಶವೂ ಇಲ್ಲ. ಅದಕ್ಕಾಗಿ ಅದನ್ನು ತಳ್ಳಿ ಹಾಕಿದ್ದೇನೆ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಕಾರವೇ ಒಪ್ಪಿಕೊಂಡಿದೆ, ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಳ್ಳಬಹುದು ಅಂತ. ಅದಕ್ಕಾಗಿ ಪ್ರಿಲಿಮಿನರಿ ಸಬ್‌ಮಿಷನ್ ಏನು ಬೇಕಾಗಿಲ್ಲ. ಪೂರ್ತಿ ವಿಷಯ ಏನು ಇದೇ ಅದನ್ನು ನಾವು ಹೇಳುತ್ತೇನೆ. ಅದಕ್ಕೆ ಸರ್ಕಾರ ಉತ್ತರ ಕೊಡ ಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಲುವಳಿ ಸೂಚನೆಗೆ ನಾವು ಒಪ್ಪಿಕೊಂಡಿಲ್ಲ. ರೂಲ್ ೬೯ರ ಕೆಳಗೆ ಚರ್ಚೆ ಮಾಡುವುದಾದರೆ ಮಾಡಿ ಎಂಬುದಾಗಿ ಹೇಳಿದ್ದು. ಈಗ ನಿಲುವಳಿ ಸೂಚನೆ ಬಗ್ಗೆ ಏನಿದ್ದರೂ ಪ್ರಿಲಿಮಿನರಿ ಸಬ್‌ಮಿಷನ್ ಮಾತ್ರ ಮಾಡಬೇಕಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲ ಇಲ್ಲ. ನಾವು ರೂಲ್ ೬೯ರ ಕೆಳಗೆ ಚರ್ಚೆ ಮಾಡಲು ಒಪ್ಪಿಕೊಂಡೇ ಇಲ್ಲ.

ಅಧ್ಯಕ್ಷರು.—ರೂಲ್ ೬೯ರ ಕೆಳಗೆ ಚರ್ಚೆ ಮಾಡುವುದಕ್ಕೆ ಅವರು ಒಪ್ಪಿಲ್ಲ. ಆದರೆ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಬೇಕಾದರೆ ಮೊದಲು ಪ್ರಿಲಿಮಿನರಿ ಆರ್ಗ್ಯುಮೆಂಟ್ ಮಾಡಬೇಕಾಗುತ್ತದೆ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡುವುದಕ್ಕೆ ಪೂರ್ಣವಾಗಿ ಅವಕಾಶ ಸಿಕ್ಕಮೇಲೆ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರ ಪ್ರಸ್ತಾಪಕ್ಕೆ ಬಂದಾಗಲೇ ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಒಪ್ಪಿಕೊಂಡರು.

ಅಧ್ಯಕ್ಷರು.—ಮೊದಲು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನೀವೇನೆ "Government has no objection to take up this Adjournment Motion tomorrow" ಎಂದು ಹೇಳಿದ್ದೀರಲ್ರೀ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ೬೯ರ ಚರ್ಚೆ ಮಾಡುವುದಕ್ಕೆ ಒಪ್ಪಿಕೊಂಡಿದ್ದೇರಿ. ಅದರ ಬಗ್ಗೆ ಚರ್ಚೆ ಮಾಡುವಾಗ ಅಡ್ಜರ್ನ್‌ಮೆಂಟ್ ಮೋಷನ್ ಅಂತ ಮೆನ್ಷನ್ ಮಾಡುತ್ತೇವೆಂದು ಹೇಳಿದಿರಿ. ಮಾಡಿ ಅಂತ ನಾನು ಹೇಳಿದ್ದೆ.

ಶ್ರೀ ಎಸ್. ಬಂಗಾರಪ್ಪ.—ನೀವು ಆ ರೀತಿ ಹೇಳಿದ್ದೀರಿ ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ.

ಅಧ್ಯಕ್ಷರು.—ನಿಲುವಳಿ ಸೂಚನೆ ಅಂತ ತೆಗೆದುಕೊಂಡಿದ್ದೀರಿ, ಮೊದಲು ಅದಕ್ಕೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ. ಆ ಮೇಲೆ ನೋಡೋಣ.

ಶ್ರೀ ಯಂ. ಭೂಪತಿ.—ಇವತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಬರುತ್ತಾರೆ, ಅವರನ್ನು ಎದುರುಗಡೆ ಕೂಡಿಸಿಕೊಂಡು ಚರ್ಚೆ ಮಾಡೋಣ ಅಂತ ಹೇಳಿದರು, ಅವರು ಎಲ್ಲಿ.

ಶ್ರೀ ಜಿ. ನಾರಾಯಣ ಕುಮಾರ್.—೨ ಗಂಟೆಗೆ ಬರುತ್ತಾರೆ.

ಶ್ರೀ ಯು. ಭೂಪತಿ.—ಅವರ ಪರವಾಗಿ ಮಾತನಾಡುವವರು ನಾರಾಯಣಕುಮಾರ್ ಇದ್ದಾರೆ ಸಾಕಾಗುವುದಿಲ್ಲ, ಅವರು ಎಲ್ಲಿ ? ಯಾವಾಗ ಬರುತ್ತಾರೆ ? ಅವರನ್ನು ಕೂಡಿಸಿಕೊಂಡು ಮಾತನಾಡಬೇಕಲ್ಲ.

ಅಧ್ಯಕ್ಷರು.—ಈಗಲೂ ನಿಲುವಳಿ ಸೂಚನೆಯ ಮೇಲೆ ಚರ್ಚೆ ಬೇಡ ಅಂದರೆ ರೂಲ್ ೬೯ರ ಕೆಳಗೆ ಚರ್ಚೆ ಮಾಡುವುದಕ್ಕೆ ಈಗಲೇ ಒಪ್ಪಬಹುದು. ಆದರೆ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಬೇಕಾದರೆ ಮೊದಲು ಪ್ರಿಲಿಮಿನರಿ ಸಬ್‌ಮಿಷನ್ ಮಾಡಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಿಲಿಮಿನರಿ ರಿಮಾರ್ಕ್ಸ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆಂದು ತಾವು ಹೇಳುತ್ತಿದ್ದಿರಿ. ಆದರೆ ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆಲ್‌ರೈಟ್ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕವೇ ಚರ್ಚೆ ಮಾಡಿ ಅಂತ ಹೇಳಿದರು. ಅವರು ಯಾವ ಮಾತಿನಲ್ಲಿ ಹೇಳಿದರೋ ಗೊತ್ತಿಲ್ಲ. ಅಂತೂ ಆ ರೀತಿ ಹೇಳಿದರು.

ಶ್ರೀ ಯು. ಭೂಪತಿ.—ಆಗಿದ್ದರೆ ರೆಕಾರ್ಡ್ ತರಿಸಿ ನೋಡಿ.

ಶ್ರೀ ಎಂ. ಎಸ್. ಕೃಷ್ಣನ್.—ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಮಾತನಾಡಿದರೆ ಏನೋ ಸರ್ಕಾರದ ಮೇಲೆ ಎಲ್ಲಿ ಸೆನ್ಸ್ಯೂರ್ ಮಾಡಿಬಿಡುತ್ತಾರೆಂದು ಹೇಳುವ ದೃಷ್ಟಿಯಿಂದ ಒಪ್ಪಿಕೊಳ್ಳುವುದು ಬೇಡ ಅಂತ ಹೇಳಿದಂತಾಗುತ್ತದೆ.

ಅಧ್ಯಕ್ಷರು.—ರೂಲ್ ೬೮ರ ಕೆಳಗೆ ನೇರವಾಗಿ ಚರ್ಚೆ ಮಾಡುವುದು ಬೇಡ ಅಂತ ಹೇಳಿದ ಮೇಲೆ ನಿಲುವಳಿ ಸೂಚನೆಯಾಗಿ ಚರ್ಚೆಗೆ ತೆಗೆದುಕೊಳ್ಳಬೇಕಾದರೆ ಮೊದಲು ಪ್ರಿಲಿಮಿನರಿ ಸಬ್‌ಮಿಷನ್ ಅನ್ನು ನಾಳೆ ಮಾಡಿ ಅಂತ ಹೇಳಿದರು.

ಶ್ರೀ ಎನ್. ಎಂ. ಅಡ್ಯಂತಾಯ.—ಹಾಗಿದ್ದರೆ ರೆಕಾರ್ಡ್‌ನ್ನು ತರಿಸಿ ನೋಡೋಣ.

ಶ್ರೀ ಧರ್ಮಸಿಂಗ್.—ಹೆಗಡೆಯವರು ಬರುತ್ತಾರೆ, ಅವರ ಸಮ್ಮುಖದಲ್ಲೇ ಚರ್ಚೆ ಯಾಗಲಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ಅಧ್ಯಕ್ಷರು.—ಆಯಿತು, ಶ್ರೀಮತಿ ನಾಗರತ್ನಮ್ಮನರು ಪ್ರಾರಂಭ ಮಾಡಿದ್ದಾರೆ. ಅವರ ಮಾತನಾಡಲಿ.

ಶ್ರೀ ಯು. ಭೂಪತಿ.—ರೆಕಾರ್ಡ್ ತರಿಸಿ ನೋಡಿ.

ಅಧ್ಯಕ್ಷರು.—ಮಾನ್ಯ ನಾಗರತ್ನಮ್ಮನವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ವಿರೋಧ ಪಕ್ಷದ ನಾಯಕಿಯವರು. ಅವರು ಮಾತನಾಡುವಾಗ ಬೇರೆ ಯಾರೂ ಅಡ್ಡಿ ಪಡಿಸಬಾರದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗಾಗಲೇ ಸುರು ಮಾಡಿದ ಹಾಗೆ ಟೆಲಿಫೋನ್ ಟ್ಯಾಪ್ ಪ್ರಕರಣ ಬಹಳ ಆಗಿ ಇದು ಯಾರ್‍ಯಾರ ಕತ್ತನ್ನು ತೆಗೆದುಕೊಂಡಿತೆಂದು ನಮಗೆಲ್ಲಾ ಗೊತ್ತಾಗಿದೆ. ಈ ಟೆಲಿಫೋನ್ ಟ್ಯಾಪ್ ಪ್ರಕರಣ ಅಂದರೆ ಕದ್ದು ಕೇಳುವಂತಹದ್ದು. ಈ ಒಂದು ಪ್ರಕರಣದಿಂದ ರಾಮಕೃಷ್ಣ ಹೆಗಡೆಯವರ ಕತ್ತನ್ನು ತೆಗೆದುಕೊಂಡಿತು. ಜುಲೈ ೧೧ನೇ ತಾರೀಖು ಕನ್ನಡ ಪ್ರಭಾ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ದಿನ ಪತ್ರಿಕೆಗಳಲ್ಲಿ ಶ್ರೀಮಾನ್ ಅಜೀತ್ ಸಿಂಗ್ ಹಾಗೂ ಶ್ರೀಮಾನ್ ದೇವೇಗೌಡರ ನಡುವೆ ನಡೆದಂತಹ ಸಂಭಾಷಣೆ ಈ ಪತ್ರಿಕೆಗಳಲ್ಲಿ ಪೂರ್ತಿಯಾಗಿ ಬಂತು. ಆಗ ಇದಕ್ಕೆ ತಪ್ಪಿತಸ್ಥರು ಸೆಂಟ್ರಲ್ ಗೌರ್ನಮೆಂಟ್‌ನವರು, ಹೆಗಡೆಯವರ ತಪ್ಪಿಲ್ಲ ಅಂತ ಹೇಳಿದರು, ಆಗಿನ ನಮ್ಮ ಮುಖ್ಯಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ೧೬–೭–೮೮ ರಲ್ಲಿ ಅಂದರೆ ಅದೇ ದಿವಸ ನನ್ನ ಟೆಲಿಫೋನ್ ಕೂಡ ಟ್ಯಾಪ್ ಆಗುತ್ತಿದೆ ಅಂತ ಹೇಳಿದರು.

ಈ ವಿಚಾರವನ್ನು ಮಾಧವರೆಡ್ಡಿಯವರು, ಮಧುದಂಡವತೆಯವರು ಪ್ರಸ್ತಾಪ ಮಾಡಿದಾಗ Prime Minister has categorically denied it. ನಾವು ಸೆಂಟ್ರಲ್ ಗೌರ್ನಮೆಂಟ್ ನವರು ಕೈಹಾಕಿಲ್ಲ, ಅದಕ್ಕೂ ನಮಗೂ ಸಂಬಂಧ ಇಲ್ಲ'' ಎಂದು ಹೇಳಿದರು. ಇಷ್ಟರಮಧ್ಯದಲ್ಲಿ ಡಿಐಜಿ ರಘೋರಾಮನ್ ಅವರ ಕಾಗದ ಬಂತು. ಟೆಲಿಫೋನ್ ಟ್ಯಾಪ್ ಮಾಡಿರುವ ವಿಚಾರ ಪ್ರೆಸ್‌ನಲ್ಲಿ ಬಂತು. ಆಮೇಲೆ ವೀರಭದ್ರ ಸಿಂಗ್ ಅವರು ಎಲ್ಲರ ಹೆಸರನ್ನು ಕೊಟ್ಟರು. ಪೊಲಿಟಿಶಿಯನ್ಸ್ ಹೆಸರು, ಜರ್ನಲಿಸ್ಟ್ ಹೆಸರು ಹಾಗೂ ಪ್ರೈವೇಟ್ ಇಂಡಿವಿಜ್ಯುಯಲ್ಸ್ ಹೆಸರು ಅದರಲ್ಲಿ ಇದ್ದವು. ಇದಕ್ಕೆ ನಮ್ಮ ಹೆಗಡೆಯವರು ೧೫ನೇ ಆಗಸ್ಟ್‌ರಂದು ಏನು ಹೇಳಿದರು. ಇದು ಇವತ್ತಿನ ಕತೆ ಅಲ್ಲ ವೀರೇಂದ್ರ ಪಾಟೀಲರ ಕಾಲದಲ್ಲೂ ಆಗುತ್ತಿತ್ತು, ಗುಂಡೂರಾಯರ ಕಾಲದಲ್ಲೂ ಆಗುತ್ತಾ ಇತ್ತು ಎಂದು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಇದು ಆದನಂತರ ವೀರೇಂದ್ರ ಪಾಟೀಲರು ಇದನ್ನು ಖಂಡನ್ ಮಾಡಿದರು. ನನ್ನ ಕಾಲದಲ್ಲಿ ಎಂದರೆ ಅವರ ಕಾಲವೂ ಆಗುತ್ತದೆ. ಇಗು ಆಗುತ್ತಾ ಇಲ್ಲ. ಎಲ್ಲೋ ಕೆಲವು ಆಂಟಿ ಸೋಶಿಯಲ್ ಎಲಿಮೆಂಟ್ಸ್‌ದು ಫೋನ್ ಟ್ಯಾಪ್ ಮಾಡಲಾಗುತ್ತಿತ್ತು ಎಂದರು. ಇದು ಗುಂಡೂರಾಯರ ಕಾಲದಲ್ಲೂ ಆಗಿದ್ದಿಲ್ಲ. ಇದು ಬರೀ ಸುಳ್ಳು ಎಂದು ವೀರೇಂದ್ರಪಾಟೀಲರು ಹೇಳಿದರು. ಇಷ್ಟೆಲ್ಲಾ ಆದಮೇಲೆ ಉರಿ ಉಪ್ಪನ್ನು ಹಾಕಿದಹಾಗೆ ಆಗ ಮುಖ್ಯಮಂತ್ರಿಯಾಗಿದ್ದವರು ಹೇಳಿದರು. ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಇನ್‌ಸ್ಟ್ರುಮೆಂಟನ್ನು ಅಮದು ಮಾಡಿಕೊಂಡಿದ್ದು ಅದು ಪ್ರೈಮಿನಿಸ್ಟರ್ ಮನೆಯಲ್ಲಿ ಇದೆ. ಉಸಿರು ಬಿಡಲೀ, ಅದು ಸಹ ಟೇಪ್ ಆಗುತ್ತದೆ ಎಂದು ಹೇಳಿದರು. ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಖಂಡುಗ ಮಾತನಾಡುತ್ತಿದ್ದ ಇವರು ಇಷ್ಟೆಲ್ಲಾ ಕತೆ ಮಾಡಿದರೂ ಕೂಡಾ ಇದಕ್ಕೆ ಯಾವ ನೈತಿಕ ಹೊಣೆ ಇತ್ತು ? ಯಾವ ನೈತಿಕ ಹೊಣೆ ಇಟ್ಟು ಕೆಲಸ ಮಾಡುತ್ತಿದ್ದರು ಎಂದು ನನಗೆ ಆಶ್ಚರ್ಯವಾಗುತ್ತದೆ. ಈಗ ಹೊಸ ರಾಗ ಎಳೆಯುತ್ತಿದ್ದಾರೆ. ಹಿಂದೆ ಇದ್ದ ಮುಖ್ಯ ಕಾರ್ಯದರ್ಶಿಗಳು ಅವರಿಗಿಂತ ಹಿಂದೆ ಇದ್ದ ಮುಖ್ಯ ಕಾರ್ಯದರ್ಶಿಯವರ ಆರ್ಡರನ್ನು ರಿನ್ಯೂ ಮಾಡಿದರು ಎಂದು ಅವರು ರಾಗ ಎಳೆಯುತ್ತಿದ್ದಾರೆ. ಯಾರಯಾರ ಟೆಲಿಫೋನ್ ಟ್ಯಾಪ್ ಮಾಡಿದ್ದಾರೆ ? ದೇವೇಗೌಡರದ್ದು ಮುಖ್ಯವಾಗಿ ಟ್ಯಾಪ್ ಮಾಡಿದ್ದಾರೆ. ಅಂದರೆ ಅವರು ಒಬ್ಬರು ಆಂಟಿಸೋಶಿಯಲ್ ಎಲಿಮೆಂಟ್ ಎಂದಹಾಗೆ ಆಯಿತು. ಈಗಿನ ಮುಖ್ಯಮಂತ್ರಿಗಳು

ಅವರನ್ನು ಮಂತ್ರಿಗಳಾಗಿ ತೆಗೆದುಕೊಂಡಿದ್ದಾರೆ. ಇವರು ಎಂತಹ ಎಲಿಮೆಂಟ್ ಎಂದು ಮಾನ್ಯ ಮುಖ್ಯಮಂತ್ರಿಗಳು ನಮಗೆ ಹೇಳಬೇಕು. ಇವರು ಯಾವ ಆಂಟಿಸೋಶಿಯಲ್ ಎಲಿಮೆಂಟ್, ಏನು ಎಂದು ನಮಗೆ ಗೊತ್ತಾಗಬೇಕು. ಈ ಲಿಸ್ಟನ್ನು ಹಾಗೇ ನೋಡಿದರೆ ಯಾರ ಯಾರ ಹೆಸರು ಇದೆ ಎಂದರೆ, ಮೊಯ್ಲಿಯವರ ಹೆಸರು, ಬಂಗಾರಪ್ಪನವರ ಹೆಸರು, ಕೆ. ಎಚ್. ಪಾಟೀಲರ ಹೆಸರು, ಗುಂಡೂರಾಯರ ಹೆಸರು, ನಂಜೇಗೌಡರ ಹೆಸರು, ಶ್ರೀ ಕಂಠಯ್ಯನವರ ಹೆಸರು, ಕೊನೆಗೆ ನನ್ನ ಹೆಸರೂ ಇದೆ. ನನಗೆ ಕುಡಿದು ಹುಚ್ಚಾಪಟ್ಟೆ ಮಾತನಾಡುವುದಕ್ಕೆ ಗೊತ್ತಿಲ್ಲ. ನನಗೆ ಬ್ಲಾಕ್ ಮಾರ್ಕೆಟ್ ವ್ಯವಹಾರ ಗೊತ್ತಿಲ್ಲ. ನಾನು ಒಬ್ಬ ಪ್ಯೂರ್ ಅಗ್ರಿಕಲ್ಚರಿಸ್ಟ್. ಕೊಲೆ, ದರೋಡೆ, ಸ್ಮಗ್ಲಿಂಗ್ ಎಲ್ಲವನ್ನೂ ನಾನು ಸಿನಿಮಾದಲ್ಲಿ ನೋಡಿದ್ದೇನೆ. ನಾನು ಯಾವ ರೀತಿಯ ಆಂಟಿ ಸೋಶಿಯಲ್ ಎಲಿಮೆಂಟ್ ? ಅದು ನನಗೆ ಗೊತ್ತಿಲ್ಲ. ಹೇಳುವುದೆಲ್ಲಾ ಬರೀ ಶಿಷ್ಟಾಚಾರ ಮಾಡುವುದು ಅನಾಚಾರ ಎಂದು ಮಾಡಿ ಇದ್ದಾಗ ಕತ್ತಿಗೆ ಉರುಲು ಬಿದ್ದಿರುವ ಅವಸ್ಥೆಗೆ ಸಿಕ್ಕಿ ರಾಜೀನಾಮೆ ಕೊಡತಕ್ಕ ಪ್ರಸಂಗ ಇದು. ನಿಜವಾಗಿ ಹೇಳಬೇಕೆಂದರೆ ಇದು ಬಹಳ ದುರ್ದೈವ. ನನ್ನ ಹತ್ತಿರ ಬೇಕಾದಷ್ಟು ಮಾಹಿತಿಗಳು ಇವೆ. ನಮ್ಮ ಕಡೆಯವರ ಹತ್ತಿರ ಕೂಡಾ ಮಾಹಿತಿ ಇದೆ. ಇಂತಹ ವ್ಯವಹಾರ ಮಾಡುವುದಕ್ಕಿಂತಲೂ ಎಲ್ಲಾದರು ಪಾಂಡವರ ರೀತಿ ವನವಾಸ ಹೋಗುವುದು ಒಳ್ಳೆಯದು. ರಾಮ, ಕೃಷ್ಣ ಎಂದು ಅವರ ಹೆಸರು ಇರುವುದರಿಂದ ಅವರು ವನವಾಸ ಹೋಗುವುದು ಒಳ್ಳೆಯದು. ಈ ರೀತಿ ಮಾಡಿ ಮಾನ ಮರ್ಯಾದೆ ಇಟ್ಟುಕೊಂಡು ಬಾಳುತ್ತಿರುವ ನಮ್ಮ ದೂರವಾಣಿಗಳನ್ನು ಟೇಪ್ ಮಾಡಿಸಿದ್ದಾರೆ. ನಾವು ಏನು ಅಂತಹ ಅವ್ಯವಹಾರ ಮಾಡಿದ್ದೇವೆ ? ಯಾತಕ್ಕೋಸ್ಕರ, ಯಾವ ಕಾರಣಕ್ಕೋಸ್ಕರ ನಮ್ಮ ಫೋನ್‌ಗಳನ್ನು ಬಗ್ ಮಾಡಿದರು ? ಇದನ್ನು ಮಾಡಿದ್ದರಿಂದ ಅವರಿಗೆ ಸಿಕ್ಕ ಆಸ್ತಿಯಾದರೂ ಏನು ? ಇದರ ಹಿಂದಿನ ವಿಚಾರ ಏನೆಂಬುದು ನಮಗೆ ಗೊತ್ತಾಗಬೇಕು ?

೧-೩೦ ಪಿ.ಎಂ.

ರಾಜ್ಯದ ಮರ್ಯಾದಸ್ಥರನ್ನು ಬಗ್ ಮಾಡಿ ಅವರ ಮರ್ಯಾದೆ ಕಳೆಯುವುದರಲ್ಲಿ ಸ್ವಲ್ಪವೂ ಅರ್ಥವಿಲ್ಲ, ಇಂತಹವರು ರಾಜ್ಯವನ್ನು ಆಳುವುದಾದರೆ ಮರ್ಯಾದಸ್ಥರು ಬಾಳುವುದಕ್ಕೆ ಇಲ್ಲಿ ಸ್ಥಳವಿಲ್ಲ. ಇನ್ನೂ ಅನೇಕ ವಿಚಾರಗಳನ್ನು ಈ ಬಗ್ಗೆ ತಮ್ಮ ಗಮನಕ್ಕೆ ತರಬೇಕು ಆದ್ದರಿಂದ ದಯಮಾಡಿ ನಮಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧಪಕ್ಷದ ನಾಯಕರು ಕೆಲವು ವಿಷಯಗಳನ್ನು ಪ್ರಿಲಿಮಿನರಿಯಾಗಿ ಪ್ರಸ್ತಾಪ ಮಾಡಿದ್ದಾರೆ, ಈ ಹಿಂದಿನ ಮುಖ್ಯ ಮಂತ್ರಿಗಳು ಟೆಲಿಫೋನ್ ಟ್ಯಾಪಿಂಗ್ ಪ್ರಕರಣದಲ್ಲಿ ಒಂದು ನೈತಿಕ ಹೊಣೆಯನ್ನು ಹೊತ್ತು ನಾನು ರಾಜೀನಾಮೆಯನ್ನು ಕೊಟ್ಟಿದ್ದೇನೆಂದು ಹೇಳಿದ್ದಾರೆ. ಆದರೆ ಅವರು ಎಷ್ಟರಮಟ್ಟಿಗೆ ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಟ್ಟಿದ್ದಾರೆ ? ಅಥವಾ ಅವರು ಎಷ್ಟರಮಟ್ಟಿಗೆ ವ್ಯಕ್ತಿ ಸ್ವಾತಂತ್ರ್ಯವನ್ನು ಹರಣಮಾಡಿ ಫಂಡಮೆಂಟಲ್ ರೈಟ್ಸನ್ನು ಕರ್ಟೈಲ್ ಮಾಡಿ ತನ್ನ ರಾಜಕೀಯ ಗುರಿಯನ್ನು ಸಾಧಿಸಬೇಕೆಂದು ಹೇಳಿ ಮಾಡಿದಂತಹ ಒಂದು ಹೀನ ಕೃತ್ಯಕ್ಕೆ ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ ಹೊರತಾಗಿ ಅದು ನೈತಿಕ ಹೊಣೆಯಿಂದ ಅಲ್ಲ. ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ಒಂದು ಗಾದೆಯಿದೆ ಅದು ತಮಗೂ ಗೊತ್ತಿದೆ. ಅದೇನೆಂದರೆ, ''ಊರು ಸಾಕಾಗಕ್ಕೆ ಗೌಡ ಬೇಡಾನಕ್ಕೆ'' ಹಾಗೆ ಇವರಿಗೆ ಇಲ್ಲಿ ಏನಾಗಿತ್ತೆಂದರೆ ಭಿನ್ನಮತೀಯರ ಚಟುವಟಿಕೆ ಜಾಸ್ತಿಯಾಗಿ ಬಲಾಬಲ ಶಕ್ತಿ ಕಡಿಮೆಯಾದಾಗ ಅಂತಹ ಸಂದರ್ಭದಲ್ಲಿ ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ ಹೊರತು ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಟ್ಟಿಲ್ಲ. ಇದು ಇವತ್ತಿನ ಪ್ರಕರಣ ವಲ್ಲ, ಇವರು ಟೆಲಿಫೋನ್ ಟ್ಯಾಪಿಂಗ್ ಮಾಡತಕ್ಕದ್ದು ನನ್ನ ನಜರಿಗೆ ಬಂದಿಲ್ಲ, ನನಗೆ ಅದು ಗೊತ್ತೇ ಇಲ್ಲ ಎನ್ನತಕ್ಕ ಮಾತನ್ನು ಆಗಸ್ಟ್ ೧೧ನೇ ತಾರೀಖು ಹೇಳಿದ್ದಾರೆ. ಆದರೆ ಇವರು ಫೋನ್ ಟ್ಯಾಪಿಂಗ್ ಮಾಡುತ್ತಿದ್ದುದು ಯಾವಾಗ ಅಂದರೆ, ಈ ಪ್ರಕರಣ ಎಲ್ಲಾ ಗೊತ್ತಿದ್ದು ಮಾಡಿಸಿದ್ದು ಯಾವಾಗ ಅಂದರೆ ಹೋದ ಸಲ ಸುಮಾರು ಎರಡು ವರ್ಷ ಅಥವಾ ಒಂದು ವರ್ಷದ ಹಿಂದೆ ಮಾನ್ಯ

---

† ಈ ಚಿಹ್ನೆ ಸಂಬಂಧ ಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಮೇಶ್‌ಕುಮಾರ್‌ರವರು ಒಂದು ಫೋನ್ ಟ್ಯಾಪಿಂಗನ್ನು ಸಭೆಗೆ ತಂದಿದ್ದರು. ಟೆಲಿಫೋನ್ ಮುಖಾಂತರ ನಡೆದಂತಹ ಸಂಭಾಷಣೆ ಅದು, ಮಾನ್ಯ ಬಂಗಾರಪ್ಪಜೀ ಮತ್ತು ಮಾನ್ಯ ಶಿವಮೂರ್ತಿಯವರ ಮಧ್ಯೆ ನಡೆದಂತಹ ಸಂಭಾಷಣೆ ನಮ್ಮಲ್ಲಿದೆ ಎಂದು ರಮೇಶ್‌ಕುಮಾರ್‌ರವರು ತಂದರು. ಅವರು ಇದನ್ನು ಬಹಳ ಧೈರ್ಯದಿಂದ ಹೇಳಿದರು. ಹಿಂದಿನ ಮುಖ್ಯಮಂತ್ರಿಗಳು ಇದರ ಬಗ್ಗೆ ಎಲ್ಲರನ್ನು ಡಿಫೆಂಡ್ ಮಾಡಿಕೊಂಡು ಮಾತನಾಡಿದರು. ಅಂದರೆ ಇದರ ಅರ್ಥ ಇದೆಲ್ಲಾ ಅವರಿಗ ಗೊತ್ತಿತ್ತು ಆದರೆ ತಮ್ಮ ಪ್ರೆಸ್‌ಸ್ಟೇಟ್‌ಮೆಂಟ್‌ನಲ್ಲಿ ರಾಜೀನಾಮೆಯನ್ನು ಕೊಡುವಾಗ ನಾನು ಇನೋಸೆಂಟ್ ನಾನು ನಿರಪರಾಧಿ ಇದು ನನಗೆ ಗೊತ್ತೇ ಇಲ್ಲ, ಇದು ಮೋಸವಾಗಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಈ ಸರ್ಕಾರಕ್ಕೆ ಎರಡು ನಾಲಿಗೆ ಇದೆ ಎಂದು ನನಗನಿಸುತ್ತದೆ ಒಂದು ಸುಳ್ಳು ಹೇಳುವುದು, ಇನ್ನೊಂದು ಮೋಸ ಮಾಡುವುದು. ಅದು ಇಲ್ಲದಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ವಿರೋಧಪಕ್ಷದ ಉಪನಾಯಕರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಸರ್ಕಾರಕ್ಕೆ ಎರಡು ನಾಲಿಗೆ ಇದೆಯೆಂದು ಆರೋಪ ಮಾಡತಕ್ಕದ್ದು ಸರಿಯಲ್ಲ. ಅವರು ಸರ್ಕಾರಕ್ಕೆ ಎರಡು ನಾಲಿಗೆಯಿದೆಯೆಂದು ಹೇಳುತ್ತಿದ್ದಾರೆ, ಎರಡು ನಾಲಿಗೆ ಎಲ್ಲಿದೆ ?

(ಗೊಂದಲ)

ಅಧ್ಯಕ್ಷರು.—ರಾಜ್ಯ ಸರ್ಕಾರಕ್ಕೆ ಎರಡು ನಾಲಿಗೆ ಇವೆಯೆಂದು ನೀವು ಹೇಳಿದರೆ ಅವರು ಕೇಂದ್ರ ಸರ್ಕಾರಕ್ಕೆ ಎರಡು ನಾಲಿಗೆ ಇವೆಯೆಂದು ಹೇಳುತ್ತಾರೆ. ಇಲ್ಲಿ ಸರ್ಕಾರಕ್ಕೆ ಎರಡು ನಾಲಿಗೆ ಇವೆಯೆಂದು ಹೇಳುವುದು ಬೇಡ. ಅವರೂ ಹೇಳುವುದು ಬೇಡ, ನೀವೂ ಹೇಳುವುದು ಬೇಡ.

SRI MALLIKARJUN M. KHARGE.—He was the head of the Government. I have got every right to tell.

ಅಧ್ಯಕ್ಷರು.—ನೀವು ವಿಷಯಕ್ಕೆ ಬನ್ನಿ. ನೀವು ಬಹಳ ಚೆನ್ನಾಗಿ ಮಾತನಾಡುತ್ತಾ ಇದ್ರಿ, ನೀವು ಏತಕ್ಕೆ ಈ ರೀತಿ ಮಾತನಾಡುತ್ತೀರಿ ? ವಿಷಯದ ಬಗ್ಗೆ ಮಾತನಾಡಿ.

ನೀವು ಬಹಳ ಒಳ್ಳೆಯ ಭಾಷಣಕಾರರಿದ್ದೀರಿ. ಅವರನ್ನು ಉದ್ರೇಕಗೊಳಿಸದೆ ನೇರವಾಗಿ ಮಾತನಾಡಿ. ಸತ್ಯಕ್ಕೆ ದೂರವಾದುದು ಎನ್ನುವುದಕ್ಕೂ 'ಸುಳ್ಳು' ಎನ್ನುವುದಕ್ಕೂ ಫರಕ್ ಇದೆ. ಅದಕ್ಕೆ ನಾನು ಹೇಳಿದ್ದು.

ಶ್ರೀ ಡಿ. ಟಿ. ಜಯಕುಮಾರ್.—ಪ್ರಧಾನ ಮಂತ್ರಿಗಳು ಏರ್‌ಪೋರ್ಟ್‌ನಲ್ಲಿ ಒಂದು ಹೇಳುತ್ತಾರೆ, ಮನೆಯಲ್ಲಿ ಒಂದು ಹೇಳುತ್ತಾರೆ. ಇದು ಎರಡು ನಾಲಿಗೆ ಅಲ್ಲವೇನು ?

ಅಧ್ಯಕ್ಷರು.—ಶ್ರೀ ಖರ್ಗೆಯವರೇ ನೀವು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದು ಒಂದು ಕಡೆ ಆಯಿತು. ಎರಡನೆಯದು ತಮಗೆ ಗೊತ್ತಿದೆ, ಅದು ಇನ್ನೊಂದು ವಿಷಯ. ಈ ಸದನದ ಗೌರವಯುತ ಸದಸ್ಯರು ಶ್ರೀಮಾನ್ ಬಂಗಾರಪ್ಪನವರು ಅವರು ಮೊದಲು ವಿರೋಧಪಕ್ಷದ ನಾಯಕರಾಗಿದ್ದರು. ಮಂತ್ರಿಗಳಾಗಿದ್ದರು ಮತ್ತು ರಾಜಕೀಯ ಪಕ್ಷದಲ್ಲಿ ಅನೇಕ ಸಲ ಮಹತ್ವದ ಪಾತ್ರವಹಿಸಿದಂಥ ಒಬ್ಬ ವ್ಯಕ್ತಿ. ಶ್ರೀ ಮೋರ್ಗ್‌ಲಕರಲ್ಲಿ ಶ್ರೀ ಮೂಪನಾರ್ ಜೊತೆಯಲ್ಲಿ ಅವರು ಮಾತನಾಡಿದ್ದನ್ನು ಕೂಡ ಟೇಪ್ ಮಾಡಿ, ಟ್ಯಾಪ್ ಮಾಡಿ ಅದನ್ನು ಸಂಡೇ ಮ್ಯಾಗಜಿನ್‌ಗೆ ಮತ್ತು ಕನ್ನಡ ಪ್ರಭ ಪತ್ರಿಕೆಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಯಾರು ಮಾಡಿದರು ? ಅದು ಹೇಗೆ ಹೋಯಿತು ? ಒಂದು ವೇಳೆ ಸರ್ಕಾರಕ್ಕೆ ಟೇಪ್ ಮಾಡುವುದಕ್ಕೆ ಆಥರೈಸ್ ಮಾಡಿಕೊಡತಕ್ಕಂಥ ಅಧಿಕಾರ ಇದೆಯೆಂದರೂ ಕೂಡ ಅದನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದು ಯಾರು ? ಯಾರು ಇದನ್ನು ಮಾಡಿದ್ದು ? ಇವಕ್ಕೆ ಯಾವಾಗ ರಂಗು ಬಂದಿತು ಎಂದರೆ ಶ್ರೀಮಾನ್ ಅಜಿತ್‌ಸಿಂಗ್ ಮತ್ತು ದೇವೇಗೌಡರ ನಡುವೆ ನಡೆದ ಸಂಭಾಷಣೆಯನ್ನು ಕೂಡ ಟ್ಯಾಪ್ ಮಾಡಿ ಅದನ್ನು ಕೂಡ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕನ್ನಡ ಪ್ರಭಕ್ಕೆ ಬಿಡುಗಡೆ ಮಾಡ ಲಾಯಿತು. ಅಂದರೆ ಹಿಂದಿನ ಮುಖ್ಯಮಂತ್ರಿಗಳು ವ್ಯಕ್ತಿಸ್ವಾತಂತ್ರ್ಯವನ್ನು ಹರಣ ಮಾಡತಕ್ಕಂಥ ಕೆಲಸವನ್ನು ಈ ರೀತಿಯಾಗಿ ಮಾಡಿದ್ದಾರೆ. ಅದೂ ಅಲ್ಲದೆ ತಮ್ಮ ವಿರೋಧಿಗಳನ್ನು ಹತ್ತಿಕ್ಕಬೇಕು,

ರಾಜಕೀಯದಲ್ಲಿ ತಮ್ಮ ಪ್ರಭಾವವನ್ನು ಬೆಳಿಸಬೇಕು ಅವರಿಗೆ ತೊಂದರೆ ಕೊಟ್ಟು ಬೇರೆ ರಾಜಕೀಯ ಪಕ್ಷಗಳನ್ನು ಮುಗಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ಟೆಲಿಗ್ರಾಫ್ ಆ್ಯಕ್ಟ್ ಸೆಕ್ಷನ್ ೫ ಸಬ್ ಕ್ಲಾಸ್ ೨ ಅದರ ಆಧಾರದ ಮೇಲೆ ಇವರೆಲ್ಲರ ಫೋನ್‌ಗಳನ್ನು ಟ್ಯಾಪ್ ಮಾಡತಕ್ಕಂಥಾದ್ದನ್ನು ಮಾಡಿದರು. ಇದರಲ್ಲಿ ಯಾರ್ಯಾರು ಇದ್ದಾರೆ ಎಂದರೆ, ಶ್ರೀಮತಿ ನಾಗರತ್ನಮ್ಮನವರು, ಶ್ರೀ ಬಂಗಾರಪ್ಪನವರು, ಶ್ರೀ ವೀರಪ್ಪ ಮೊಯಿಲಿಯವರು, ಶ್ರೀ ಕೆ. ಎಚ್. ಪಾಟೀಲರು, ಶ್ರೀ ಕೆ. ಎನ್. ನಾಗೇಗೌಡರು, ಶ್ರೀ ಎ. ಕೆ. ಸುಬ್ಬಯ್ಯನವರು ಹೀಗೆ ೫೧ ಜನರಲ್ಲಿ ಶ್ರೀ ದೇವೇಗೌಡರು, ಶ್ರೀ ರಘುಪತಿಯವರು, ಶ್ರೀ ಬಿ. ಎಲ್. ಶಂಕರ್‌ರವರೂ ಇದ್ದಾರೆ. ಇವರೆಲ್ಲರೂ ದೇಶದ್ರೋಹಿಗಳಾ ? ಇವರೆಲ್ಲರೂ ದೇಶಕ್ಕೆ ಘಾತವಾಗತಕ್ಕಂಥ ಕೆಲಸದಲ್ಲಾಗಲೀ ಅಥವಾ ದೇಶವನ್ನು ಛಿದ್ರ ಛಿದ್ರ ಮಾಡತಕ್ಕಂಥ ಕೆಲಸದಲ್ಲಿ ಕೈಹಾಕತಕ್ಕಂಥ ಜನಗಳಾ ! ನಾನು ಕೇಳುತ್ತೇನೆ ಇವರೇನು ಎಕನಾಮಿಕಲ್ ಅಫೆಂಡರ್‍ರಾ ? ಅಥವಾ ಬ್ಲ್ಯಾಕ್‌ಮಾರ್ಕೆಟಿಯರ್‍ರಾ ? ಯಾವ ಆಧಾರದ ಮೇಲೆ ಇವರ ಫೋನ್‌ಗಳನ್ನು ಟ್ಯಾಪ್ ಮಾಡಿದರು ? ಟೆಲಿಗ್ರಾಫ್ ಆ್ಯಕ್ಟ್‌ನ ಸೆಕ್ಷನ್ ೫ ಸಬ್‌ಕ್ಲಾಸ್ ೨ ಏನು ಹೇಳುತ್ತದೆ ?

I will read the relevant protion.—

'On the occurrence of any public emergency, or in the interest of public safety, the Central Government or a State Government or any officer specifically authorised in this behalf by the Central Government or a State Government may, if satisfied that it is necessary or expedient so to do in the interests of the sovereignty, and integrity of India, the security of the State, friendly relation with Foreign States or publ c order or for preventing incitement to the commission of an offence, for reasons to be recorded in writing, by order, direct that any message or class of messages to or from any person or class of persons, or relating to any particular subject, brought for transmission by or transmitted or received by any telegraph, shall not be transmitted, or sh ll be intercepted or detained, or shall be disclosed to the Government making the order or an officer there of mentioned in the order'.

ಅಂದರೆ ಯಾರು ದೇಶದ್ರೋಹಿ ಕೆಲಸ ಮಾಡುತ್ತಾರೆ. ಯಾರು ಇದಕ್ಕೆ ಎನ್‌ಕರೇಜ್ ಮಾಡುತ್ತಾರೆ, ಯಾರಿಂದ ಈ ದೇಶಕ್ಕೆ ಭಯ ಇದೆ ಅಥವಾ ಶಾಂತಿಯನ್ನು ಕಾಪಾಡುವುದಕ್ಕೋಸ್ಕರ ಯಾರಾದರೂ ತೊಂದರೆ ಮಾಡಿದಂಥವರು ಇದ್ದಾರೆ ಆ ಜನರ ಟೆಲಿಗ್ರಾಫ್ ಆಗಲೀ, ಟೆಲಿಫೋನ್ ಆಗಲೀ ನೋಡಬಹುದು ಎನ್ನತಕ್ಕಂಥ ಕಾನೂನು ಇದೆ. ಆದರೆ ಇವರು ಫೋನ್ ಟ್ಯಾಪ್ ಮಾಡಿದ್ದು ಯಾರಿಗೆ, ಎಲ್ಲಾ ಪೊಲಿಟೀಷಿಯನ್ಸ್. ಈ ವಾದವನ್ನು ಮುಚ್ಚಿಕೊಳ್ಳುವುದಕ್ಕೆ ಮುಖ್ಯಮಂತ್ರಿಗಳು ಏನು ಹೇಳಿದರು, ಇದು ನಾನು ಮಾಡಿಲ್ಲ, ಇದೆಲ್ಲಾ ಸರ್ಕಾರದವರು ಮಾಡುತ್ತಾರೆಯೋ ? ಹಿಂದೆ ವೀರೇಂದ್ರ ಪಾಟೀಲರು ಮಾಡಿದರು, ಗುಂಡೂರಾವ್ ಅವರು ಮಾಡಿದರು, ಆಮೇಲೆ ಬೇರೆ ಎಲ್ಲರೂ ಮಾಡಿದ್ದಾರೆ. ಆದರೆ ನಾನೂ ಕೂಡ ಮಾಡಿದ್ದೇನೆಂದು ಹೇಳಲಿಲ್ಲ. ನಮ್ಮ ಪೋಲೀಸಿನವರೂ ಕೂಡ ಮಾಡಿರಬಹುದು ಎಂದು ಹೇಳಿದರು. ಪೋಲೀಸಿನವರು ಮಾಡಬೇಕಾದರೆ, ಇವರ ಅಧಿಕಾರಿಗಳು ಮಾಡಬೇಕಾದರೆ, ಇವರನ್ನು ಕೇಳದೇ ಮಾಡುತ್ತಾರೆಯೋ ? ಯಾವುದೇ ಸರ್ಕಾರಿ ಅಧಿಕಾರಿಗಳಿಗೆ ಈ ಧೈರ್ಯ ಇದೆಯೋ ? ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಯ ಫೋನ್ ಟ್ಯಾಪ್ ಮಾಡತಕ್ಕಂಥ ಧೈರ್ಯ ಯಾರಿಗೆ ಇರುತ್ತದೆ. ವಿರೋಧ ಪಕ್ಷದ ನಾಯಕರ ಟೆಲಿಫೋನ್ ಟ್ಯಾಪ್ ಮಾಡತಕ್ಕಂಥ ಧೈರ್ಯ ಒಬ್ಬ ಸರ್ಕಾರಿ ನೌಕರನಿಗೆ ಇರುತ್ತದೆಯೋ ? ಎಲ್ಲಿಯವರೆಗೆ ಮುಖ್ಯಮಂತ್ರಿಗಳು ನೇರವಾಗಿ ಹೇಳುವುದಿಲ್ಲ, ಅಥವಾ ಅಧಿಕಾರದಲ್ಲಿರತಕ್ಕಂಥ ಮನುಷ್ಯ ಇವರಿಗೆ ಡೈರಕ್ಷನ್ ಕೊಡುವುದಿಲ್ಲವೋ

ಅಲ್ಲಿಯವರೆಗೆ ಈ ಕೆಲಸ ಇ[illegible]ಗುವುದಿಲ್ಲ. ಕೆಲವೊಂದು ಸಾರಿ ನೀವು ಕೊಟ್ಟಂಥ ಆದೇಶ ಅವರ ಮನೆಗೆ ಬೇಗನೆ ಮುಟ್ಟುವುದಿಲ್ಲ, ಅನೇಕ ಒಳ್ಳೆಯ ಕೆಲಸ ಮಾಡಬೇಕೆಂದು ಡೈರಕ್ಷನ್ ಕೊಟ್ಟರೂ, ಅವು ಬೇಗನೆ ಇಂಪ್ಲಿಮೆಂಟ್ ಆಗುವುದಿಲ್ಲ. ಆದರೆ ಇಂತಹ ಕಠಿಣವಾದ ಕೆಲಸ ಇಂತಹ ಹೀನವಾದ ಕೆಲಸವನ್ನು ಅಧಿಕಾರಿಗಳು ಯಾವರೀತಿ ಮಾಡುತ್ತಾರೆ ? ನಿಮ್ಮ ಪ್ರಚೋದನೆ ಇಲ್ಲದೆ, ನಿಮ್ಮ ಎನ್‌ಕರೇಜ್‌ಮೆಂಟ್ ಇಲ್ಲದೆ ಅಥವಾ ನಿಮ್ಮ ಕೈವಾಡ ಇಲ್ಲದೆ ಮಾಡುವುದಕ್ಕೆ ಸಾಧ್ಯವೇ ಇಲ್ಲ ? ಆದರೂ ಕೂಡ ಎಲ್ಲ ಕಡೆ ಇವರು ನಾನು ನಿರಪರಾಧಿ ಎಂದು ಹೇಳಿಕೊಳ್ಳುತ್ತಾರೆ. ಅದಕ್ಕೇ ನಾನು ಎಷ್ಟು ನಾಲಿಗೆ ಎಂದು ಹೇಳಬೇಕಾಗುತ್ತದೆ ? ಕಾನೂನು ಹೀಗಿದೆ, ಆದರೆ ಇವರು ಇಂಟರ್‌ಪ್ರಿಟ್ ಮಾಡುವುದು ಈ ರೀತಿಯಾಗಿದೆ. ಕ್ಯಾಬಿನೆಟ್ ಮಂತ್ರಿ ಬಿಟ್ಟಿಲ್ಲ, ವಿರೋಧ ಪಕ್ಷದ ನಾಯಕರನ್ನು ಬಿಟ್ಟಿಲ್ಲ. ಮತ್ತೆ ಇನ್ನೊಂದು ಹೇಳಿಕೆ ಕೊಡುತ್ತಾರೆ, ಏನೆಂದರೆ ನಾನು ಮಾಡಬೇಕಾಗಿದ್ದರೆ, ರಘುಪತಿ ನನಗೆ ಲಾಯಲಿಸ್ಟ್, ಅವರದ್ದು ಮಾಡುತ್ತಿದ್ದೇನೆ, ಕೆ. ಹೆಚ್. ಪಾಟೀಲರು ನಮ್ಮ ಗೆಳೆಯರು, ಕೆ. ಹೆಚ್. ರಂಗನಾಥ್ ಅವರು ನನ್ನ ಗೆಳೆಯರು ಅವರದ್ದು ಮಾಡುತ್ತಿದ್ದೇನೆ ಛೇ, ಛೇ, ಈ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ. ಏಕೆ ಮಾಡಿದ್ದಾರೆಂದರೆ, ಕೆ. ಹೆಚ್. ಪಾಟೀಲರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು, ಅದಕ್ಕೋಸ್ಕರ ಮಾಡಿದ್ದಾರೆ. ಇಲ್ಲಿ ಗೆಳೆಯರು ಎನ್ನತಕ್ಕಂಥ ಪ್ರಶ್ನೆ ಅಲ್ಲ. ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರಿಂದ ಅವರ ಮನೆಯಲ್ಲಿ ಏನು ಮಾಹಿತಿ ಸಿಗುತ್ತದೆ, ಅವರಿಗೆ ಯಾರ್ಯಾರು ಫೋನ್ ಮಾಡುತ್ತಾರೆ, ಯಾವರೀತಿಯಾಗಿ ಪಕ್ಷವನ್ನು ಆರ್ಗನೈಸ್ ಮಾಡುತ್ತಾರೆ, ಅದನ್ನು ತಿಳಿದುಕೊಳ್ಳಬೇಕು, ಕದ್ದು ಕೇಳಬೇಕು ಎಂಬ ಸರ್ಕಾರದ ಕಳ್ಳಕಿವಿ ಏನಿತ್ತು, ಅದು ಈ ಪ್ರಯತ್ನ ಮಾಡಿತು. ರಂಗನಾಥ್ ಅವರದ್ದೂ ಆಗಿದೆ. ಅವರೂ ಕಾಂಗ್ರೆಸ್ ಪ್ರೆಸಿಡೆಂಟ್ ಆಗಿದ್ದರು, ಅದಕ್ಕಾಗಿ ಕೇಳಿದರು ಬಂಗಾರಪ್ಪನವರು ಮತ್ತು ನಾಗರತ್ನಮ್ಮನವರು, ಮೊಯ್ಲಿ ಯವರು ಹೀಗೆ ಅನೇಕ ಜನರದ್ದು ಆಗಿದೆ. ಪೊಲಿಟಿಕಲಿ ಯಾರ್ಯಾರು ಇನ್‌ವಾಲ್ವ್ ಇದ್ದರು, ಆಕ್ಟೀವ್ ಇದ್ದರು ಅವರೆಲ್ಲರ ಫೋನ್‌ನ್ನು ಟ್ಯಾಪ್ ಮಾಡತಕ್ಕಂಥ ಒಂದು ಕೆಲಸವನ್ನು ಇವರು ಮಾಡುತ್ತಾ ಇದ್ದರು. ಆದ್ದರಿಂದ ನಾವು ಹೇಳಬೇಕಾಗುತ್ತದೆ. ಎಷ್ಟರಮಟ್ಟಿಗೆ ಇವರು ಪ್ರಾಮಾಣಿಕರಿದ್ದರು, ಇವರ ಹೇಳಿಕೆಯಲ್ಲಾಗಲೀ, ಇವರ ನಡವಳಿಕೆಗಳಲ್ಲಾಗಲಿ ಎಷ್ಟರಮಟ್ಟಿಗೆ ಇವರು ಪ್ರಾಮಾಣಿಕರಿದ್ದರು ಎಂದು. ಇನ್ನೊಂದು ಕಡೆ ಹೇಳುತ್ತಾರೆ, ಇಡೀ ಪ್ರಪಂಚದ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಅವರೊಬ್ಬರೇ ಚಾಂಪಿಯನ್ ಎಂದು ಹೇಳತಕ್ಕ ಮನುಷ್ಯ, ಹಾಗೂ ವ್ಯಕ್ತಿ ಸ್ವಾತಂತ್ರ್ಯ ಮತ್ತು ಪತ್ರಿಕಾ

ಸ್ವಾತಂತ್ರ್ಯದ ರಕ್ಷಣೆ ಮಾಡುತ್ತೇನೆ ಎಂದು ಹೇಳತಕ್ಕಂಥವರು ಪತ್ರಕರ್ತ ಶ್ರೀಮಾನ್ ಲಂಕೇಶ್ ರವರ ಟೆಲಿಫೋನನ್ನೂ ಕೂಡಾ ಟ್ಯಾಪ್ ಮಾಡಿದರು. ಹಿಂದೆ ಅವರ ಟೆಲಿಫೋನನ್ನು ಟ್ಯಾಪ್ ಮಾಡಲಿಲ್ಲ, ಕಾಂಗ್ರೆಸ್‌ನ್ನು ಅವರು ಬೈಯುವಾಗ ಇವರಿಗೆ ಅವರು ಬೇಕಾಗಿದ್ದರು. ಆದರೆ ಈಗ ಇವರಿಗೆ ಸಂಬಂಧಪಟ್ಟ ರೇವಜಿತು ಪ್ರಕರಣ ಬಾಟ್ಲಿಂಗ್ ಪ್ರಕಾರ, ಬಿ.ಡಿ.ಎ.ದು ಹೀಗೆ ಒಂದಾದ ಮೇಲೊಂದು ಬಂದಾಗ, ಈ ವ್ಯಕ್ತಿ ಏತಕ್ಕೋ ನನ್ನ ಮೇಲೆ ಪ್ರಹಾರ ಮಾಡುತ್ತಿದ್ದಾನೆ ಎಂದು ಹೇಳಿ ಅಲ್ಲೂ ಕೂಡಾ ಫೋನ್ ಟ್ಯಾಪ್ ಮಾಡಿದರು. ಹೀಗೆ ಯಾರು ಯಾರು ಅವರ ರಾಜಕೀಯ ಬೆಳವಣಿಗೆಗೆ ಅಡ್ಡಿ ಬಂದರು, ಅವರಿಗೆಲ್ಲಾ ಮಟ್ಟ ಹಾಕುವುದಕ್ಕೆ ಇದನ್ನು ಒಂದು ಹತ್ಯಾರದ ತರಹ ಉಪಯೋಗ ಮಾಡಿದರು. ಇಷ್ಟೇ ಅಲ್ಲ, ಇವರು ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಕೆಲವು ಹೆಣ್ಣುಮಕ್ಕಳ ಟೆಲಿಫೋನನ್ನೂ ಟ್ಯಾಪ್ ಮಾಡಿದರು. ತಮಗೆ ಅದು ಗೊತ್ತಿದೆ. 317 ಹೆಸರುಗಳಿವೆ, ನಾನು ಅದನ್ನು ಓದುತ್ತಾ ಕುಳಿತುಕೊಳ್ಳುವುದಿಲ್ಲ, ತಾವು ವಿವರವಾಗಿ ಪ್ರಸ್ತಾಪ ಮಾಡುವುದಕ್ಕೆ ಪರ್ಮಿಷನ್ ಕೊಡುತ್ತೀರಲ್ಲ ಆವಾಗ ಹೇಳುತ್ತೇನೆ.

ಅಧ್ಯಕ್ಷರು.—ಕೊಡುತ್ತೀರಲ್ಲ ಎಂದು ಹೇಳಬೇಡಿ, ಕೊಟ್ಟರೆ ಎಂದು ಹೇಳಿರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಕೊಡುತ್ತೀರಿ ಎಂದು ನಮಗೆ ಖಾತ್ರಿ ಇದೆ. ಈ 317 ಹೆಸರುಗಳಲ್ಲಿ ಕೆಲವು ಹೆಣ್ಣುಮಕ್ಕಳ ಹೆಸರುಗಳೂ ಕೂಡ ಇದೆ. ಅವರ ಟೆಲಿಫೋನ್‌ಗಳನ್ನೂ ಕೂಡ ಟ್ಯಾಪ್ ಮಾಡಿರುತ್ತಾರೆ. ಯಾರು ಯಾರು ಎಲ್ಲೆಲ್ಲಿ ಹೋಗುತ್ತಾರೆ, ಅವರಿಗೆ ಏನೇನು ಬೇಕು, ಅವರ ಆಕ್ಟಿವಿಟೀಸ್ ಏನು ನಡೆದಿದೆ ಎಂಬ ದೃಷ್ಟಿಯಿಂದ ಅವರುಗಳ ಟೆಲಿಫೋನನ್ನೂ ಕೂಡಾ ಟ್ಯಾಪ್ ಮಾಡಿರುತ್ತಾರೆ. ಯಾರಿಗೂ ಕೂಡಾ ಇವರು ಬಿಟ್ಟಿಲ್ಲ. ಲೆಜಿಸ್ಲೇಟರ್ಸ್‌ಗೆ ಬಿಟ್ಟಿಲ್ಲ, ವಿರೋಧ ಪಕ್ಷದ ನಾಯಕರಿಗೆ ಬಿಟ್ಟಿಲ್ಲ, ಮಂತ್ರಿಗಳಿಗೆ ಬಿಟ್ಟಿಲ್ಲ, ಇವರ ಗೆಳೆಯರಿಗೂ ಕೂಡಾ ಬಿಟ್ಟಿಲ್ಲ. ಇವರ ಬೆಳವಣಿಗೆಗೆ

ಎಲ್ಲೆಲ್ಲಿ ಅವಶ್ಯಕತೆ ಇದೆ, ಪಕ್ಷದ ಬೆಳವಣಿಗೆಗಾಗಲೀ, ರಾಜಕಾರಣಕ್ಕಾಗಲೀ ಮತ್ತು ಇವರಿಗೆ ವೈಯಕ್ತಿಕವಾಗಿ ಬೆಳೆಯಬೇಕೆಂಬ ಇಚ್ಛೆ ಇತ್ತು, ಈ ದೇಶದ ಪ್ರಧಾನ ಮಂತ್ರಿಯಾಗಬೇಕೆಂದು ಏನು ಪ್ರಯತ್ನ ಮಾಡುತ್ತಿದ್ದರು, ಅದಕ್ಕೆ ಇವೆಲ್ಲಾ ಪ್ರಯತ್ನ ಮಾಡಿದರು. ನಾನು ಅಲ್ಲಿಗೆ ಆ ಜಾಗಕ್ಕೆ ಬೇಗ ಹೋಗಿ ಮುಟ್ಟಬೇಕೆಂದು ಇದೆಲ್ಲಾ ಆತುರಾತುರವಾಗಿ ಈ ಕೆಲಸ ಮಾಡಿದ್ದಾರೆ. ಇನ್ನೊಂದು ಸಮರ್ಥನೆಯನ್ನು ಅವರು ಕೆಲವು ಕಡೆ ಮಾಡಿರುತ್ತಾರೆ, ನಾನು ಅದನ್ನು ಅರ್ಥಕ್ಕೆ ಬಿಟ್ಟಿದ್ದೆ. ಏನೆಂದರೆ, ವೀರೇಂದ್ರ ಪಾಟೀಲರು ಮಾಡಿದರು, ಗುಂಡೂರಾವ್ ಅವರು ಮಾಡಿದರು ಎಂದು ಹೇಳಿದರು. ಹಾಗಿದ್ದರೆ ಆ ಕಾಲಕ್ಕೆ ಆಗಿದ್ದನ್ನು ಕೂಡಾ ಬರೆಯಲಿ, ಯಾವ ಯಾವ ರಾಜಕಾರಣಿಗಳ ಟೆಲಿಫೋನ್ ಟ್ಯಾಪ್ ಮಾಡಿದ್ದಾರೆ ಅದನ್ನೂ ಹೇಳಲಿ. ಅದನ್ನು ಹೇಳಿದರೆ ನಾವೇನೂ ತಪ್ಪು ತಿಳಿದುಕೊಳ್ಳುವುದಿಲ್ಲ. ಇದನ್ನು ೫ನೇ ಜನವರಿ ೧೯೮೫ಕ್ಕೆ ಪ್ರಾರಂಭ ಮಾಡಿದ್ದಾರೆ. ಅದಕ್ಕಿಂತ ಹಿಂದೆ ರಾಜಕಾರಣಿಗಳ ಹೆಸರು ಇರಲಿಲ್ಲ. ಬರೀ ಕ್ರಿಮಿನಲ್ಸ್ ಹೆಸರು ಇದ್ದವು. ಶಾಂತಿಭಂಗ ಮಾಡುತ್ತಾರೆ, ಗೂಂಡಾ ಎಲಿಮೆಂಟ್ಸ್ ಹೆಸರುಗಳು ಇದ್ದವು. ಆದರೆ ಯಾವಾಗ ೧೯೮೫ರ ಎಲೆಕ್ಷನ್ ಪ್ರಾರಂಭ ಆಯಿತಲ್ಲ, ಆಗ ಇದು ಪ್ರಾರಂಭವಾಯಿತು. ಆಗ ಎಲ್ಲಾ ಪೊಲಿಟೀಷಿಯನ್ಸ್ ಫೋನ್‌ಗಳನ್ನು ಟ್ಯಾಪ್ ಮಾಡತಕ್ಕ ಕೆಲಸವನ್ನು ಇವರು ಮಾಡಿದರು. ಇದು ಏನು ತೋರಿಸುತ್ತದೆ ಎಂದರೆ He has not only violated the Personal Liberty, but also violated the personal privacy. ನಾನು ಯಾರಿಗಾದರೂ ಮಾತನಾಡಬಹುದು, ಗುಟ್ಟಾಗಿ ಮಾತನಾಡಬಹುದು ನನ್ನ ಪ್ರೈವೆಸಿಯನ್ನು ಕೂಡಾ he has violated. He has violated Article 91 of the Constitution, Article 21 of the Constitution. ನಿಜವಾಗಲೂ ಅವರಿಗೆ ಕಿಂಚಿತ್ತಾದರೂ ಗೌರವ ಇದ್ದಿದ್ದರೆ ಅವರು ಈ ಮನೆಯ ಸದಸ್ಯರಾಗಿಯೇ ಇರಬಾರದು. ಈ ಮನೆಯ ಸದಸ್ಯರ ಗೌರವವನ್ನು ಅವರು ಕುಂದಿಸಿದ್ದಾರೆ. ಈ ಮನೆಯ ಸದಸ್ಯರ ಗೌರವವನ್ನು ಕುಂದಿಸಿ ಅವರ ಪರ್ಸನಲ್ ಲಿಬರ್ಟಿ ಮತ್ತು ಪರ್ಸನಲ್ ಪ್ರೈವೆಸಿಯನ್ನೂ ಕೂಡಾ ತೆಗೆದಿರತಕ್ಕದ್ದು, ಮತ್ತು ಅವರ ಮರ್ಯಾದೆ ತೆಗೆಯತಕ್ಕ ಕೆಲಸ ಕೂಡ ಮಾಡಿದ್ದಾರೆ. ಮತ್ತು ಅಷ್ಟೇ ಅಲ್ಲ ಇಷ್ಟು ಸಾಕಾಗುವುದಿಲ್ಲ ಎಂದು ಹೇಳಿ, ಕಾನ್‌ವರ್ಸೇಷನ್‌ನ್ನು ಪಬ್ಲಿಸಿಟಿ ಮಾಡತಕ್ಕ ಕೆಲಸ ಮಾಡಿರುತ್ತಾರೆ. ಎಂದರೆ ಎಷ್ಟು ಕೆಳಮಟ್ಟಕ್ಕೆ ಅವರ ರಾಜಕಾರಣ ಹೋಗಿದೆ ಎಂಬುದು ಇದರಿಂದ ತಮಗೆ ಗೊತ್ತಾಗುತ್ತದೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತೇನೆ, ಇಂಡಿಯನ್ ಪೀನಲ್ ಕೋಡ್ ಪ್ರಕಾರ ಸೆಕ್ಷನ್ ೧೬೬ ಕೆಳಗೆ ಅವರನ್ನು ಪ್ರಾಸಿಕ್ಯೂಟ್ ಮಾಡಬೇಕು. ಸುಮೋಮೋಟೋ ಆಗಿ ಪ್ರಾಸಿಕ್ಯೂಟ್ ಮಾಡಬೇಕು.

Sec- 166 of IPC states :

166. Public Servant disobeying law, with intent to cause injury to any person.

> 'Whoever, being a public servant, knowingly disobeys any direction of the law as to the way in which he is to conduct himself as such public servant intending to cause, to knowing it to be likely that he will, by such disobedience cause injury to any person, shall be punished with simple imprisonment for a term which may extend to one year, or with fine or with both'...

ನಮಗೆ ಸಂವಿಧಾನ ಪ್ರಕಾರ ಕೊಟ್ಟಿರತಕ್ಕಂಥ ಫ್ರಿ ಆಫ್ ಸ್ಪೀಚ್, freedom of expressicn, perronal liberty... ಇವೆಲ್ಲವನ್ನೂ ಕೂಡ ಮೊಟಕುಗೊಳಿಸತಕ್ಕಂಥ ಒಂದು ಕೆಲಸವನ್ನು ಅವರು ಮಾಡಿರುವುದರಿಂದ ಅವರಿಗೆ ಈ ಮೇಲಿನ ಐ.ಪಿ.ಸಿ. ೧೬೬ರ ಕಲಂ ಪ್ರಕಾರ ಪ್ರಾಸಿಕ್ಯೂಟ್ ಮಾಡಬೇಕು ಇದಕ್ಕಿಂತ ದೊಡ್ಡ ಶಿಕ್ಷೆಯನ್ನು ಕೊಡುವುದಕ್ಕೆ ಹೋಗುವುದು ಬೇಡ. ಇಷ್ಟೇ ಸಾಕು. ತಾವು ಅವರನ್ನು ಪ್ರಾಸಿಕ್ಯೂಟ್ ಮಾಡಿ ಕ್ರಿಮಿನಲ್ ಕೇಸ್ ಹಾಕಿದರೆ ಸಾಕು. ಮತ್ತೆ...

ಶ್ರೀ ಡಿ.ಟಿ. ಜಯಕುಮಾರ್.—ಈ ಬಗ್ಗೆ ನೀವು ಕೋರ್ಟಿಗೆ ಹೋಗಿ ಅಲ್ಲಿ ವಾದ ಮಾಡಿ. ಇಲ್ಲಿ ಏತಕ್ಕೆ...

(ಗೊಂದಲ)

ಅಧ್ಯಕ್ಷರು.—ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ತಾವು ಡಿಟೈಲ್ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ ? ಪ್ರಿಲಿಮಿನರಿ ಚರ್ಚೆ ಇದು ಅವಶ್ಯಕತೆ ಇಲ್ಲ. ನೀವು ಸೆಂಟ್ರಲ್ ಗೌರ್ನ್‌ಮೆಂಟ್‌ನ್ನು ಏನು ಮಾಡುತ್ತೀರಿ...

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ. ಇದರ ಮೇಲೆ ಗಂಭೀರವಾದ ಚರ್ಚೆ ನಡೆಯುತ್ತಿದೆ. ಮಾನ್ಯ ಸದಸ್ಯರು ಅನೇಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಉತ್ತರಕೊಡುವರೆಂದು ನಾನು ನಿರೀಕ್ಷೆ ಮಾಡಿದ್ದೇನೆ ಆದರೆ ಇದರ ಮಧ್ಯೆ ಮಧ್ಯೆ ನಮ್ಮ ಸ್ನೇಹಿತರು ಈ ರೀತಿ ಮಾತನಾಡುವುದರಿಂದ ಅದರ ಗಂಭೀರತೆ ಹೋಗುತ್ತದೆ ಮತ್ತು ಸೀರಿಯಸ್‌ನೆಸ್ ಸಹ ಹೋಗುತ್ತದೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಉತ್ತರ ಕೊಡುವುದಕ್ಕೂ ಆಗುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್.—ಅಧ್ಯಕ್ಷರು ಚರ್ಚೆಗೆ ಇನ್ನೂ ಅವಕಾಶ ಕೊಟ್ಟಿಲ್ಲ. ಆದರೂ...

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಈ ರೀತಿ ಗಲಾಟೆ ಮಾಡುವುದು ಸರಿಯಲ್ಲ. ನಮ್ಮ ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರು ಶ್ರೀ ಡಿ.ಟಿ. ಜಯಕುಮಾರ್ ಪಕ್ಕ ಬಂದು ಕುಳಿತುಕೊಂಡ ಮೇಲೆ ಗಲಾಟೆ ಶುರುವಾಯಿತು.

(ಗೊಂದಲ)

ಅಧ್ಯಕ್ಷರು.—ಇಬ್ಬರು ಕುಮಾರರು ಸಹ ಸುಮ್ಮನೆ ಇರಿ

ಶ್ರೀ ಬಿ.ಎಸ್. ಯಡಿಯೂರಪ್ಪ.—ಇಷ್ಟು ಗಂಭೀರವಾಗಿ ಚರ್ಚೆ ನಡೆಯುತ್ತಿದೆ...

(ಗೊಂದಲ)

ಅಧ್ಯಕ್ಷರು.—ಆ ಕಡೆಯ ಕುಮಾರರು ಈ ಕಡೆಯ ಕುಮಾರರು ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಡಿ. ಟಿ. ಜಯಕುಮಾರ್.— ಮಾನ್ಯ ಅಧ್ಯಕ್ಷರೇ, ಡಿ.ಐ.ಜಿ. ಕಾರ್ತಿಕೇಯನ್‌ರವರು ಕಾಂಗ್ರೆಸ್ ಎಂಎಲ್‌ಎ ಗಳ ಹಣ ಬರಹ ಬರೆದಿದ್ದರು. ಅದು ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಬಿ ಎಸ್. ಯಡಿಯೂರಪ್ಪ.—ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ಆ ಕಡೆಯ ಮತ್ತು ಈ ಕಡೆಯ ಕುಮಾರರಿಗೆ ಇದೊಂದು ಹವ್ಯಾಸ ಆಗಿದೆ.

(ಗೊಂದಲ)

ಶ್ರೀ ಯು. ಭೂಪತಿ.—ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಐ.ಪಿ.ಸಿ. ರೆಫರ್ ಮಾಡುತ್ತಿದ್ದಾರೆ. ಅವರು ಬಹಳ ಚೆನ್ನಾಗಿ ವಾದ ಮಾಡುತ್ತಿದ್ದರು...

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ,

ಶ್ರೀ ಯು. ಭೂಪತಿ.—ಮಾನ್ಯ ಡಿ.ಟಿ. ಜಯಕುಮಾರ್‌ರವರ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಶ್ರೀರಾಮಕೃಷ್ಣ ಹೆಗಡೆಯವರನ್ನು ಪ್ರಾಸಿಕ್ಯೂಟ್ ಮಾಡಲಿ. ಮಲ್ಲಿಕಾರ್ಜುನ ಖರ್ಗೆಯವರನ್ನು ವಾದ ಮಾಡುವುದಕ್ಕೆ ಕೋರ್ಟಿಗೆ ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು.—ಆಯಿತು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಆರ್ಗ್ಯುಮೆಂಟ್ಸ್ ಮಾಡುತ್ತಿದ್ದೆ. ಬಹುಶಃ ಈ ರೀತಿ ಆದರೆ ಲಿಂಕ್ ತಪ್ಪಿಹೋಗುತ್ತದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ. ಈ ರೀತಿ ಮಧ್ಯೆ ಮಧ್ಯೆ ಇಂಟರ್‌ಫಿಯರೆನ್ಸ್ ಮಾಡಿದರೆ ವಿಷಯದ ಗಂಭೀರತೆ ಹೊರಟು ಹೋಗಿ ಬಿಡುತ್ತದೆ. ಅವರು ಏನಾದರು ಹೇಳುವುದಿದ್ದರೆ ಆಮೇಲೆ ಹೇಳಲಿ.

ಅಧ್ಯಕ್ಷರು.— ಯಾರೂ ಮಧ್ಯೆ ಮಾತನಾಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ಪ್ರಕಾರ ನಮಗೆ ಕೆಲವು ಹಕ್ಕುಗಳನ್ನು ಕೊಟ್ಟಿದ್ದಾರೆ. Article 19, states :

All citizens shall have the right :-

a) to freedom of speech and expression;

b) to assemble peacebly and without arms;

c) to form associations or unions;

d) to move freely throughout the territo y of India;

e) to reside and settle in any part of the territoiy of India; and.

g) to practise any profession, or to carry on any occupation, trade or business.

ಹೀಗೆ ರೈಟ್ ಆಫ್ ಫ್ರೀಡಮ್‌ನಲ್ಲಿ ಎಲ್ಲಾ ನಾಗರೀಕರುಗಳಿಗೆ ಕೆಲವು ಮೂಲಭೂತವಾದ ಹಕ್ಕುಗಳನ್ನು ಕೊಟ್ಟಿದ್ದಾರೆ. ಈ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಬೇಕು, ಅದಕ್ಕೆ ಕೊಡಲಿ ಪೆಟ್ಟು ಹಾಕಬೇಕೆಂದು ಸರ್ಕಾರ ಪ್ರಯತ್ನ ಮಾಡಿದರೆ, ಸರ್ಕಾರದ ಅಧಿಕಾರದಲ್ಲಿರತಕ್ಕ ಮುಖ್ಯಮಂತ್ರಿಗಳೇ ಈ ಕೆಲಸವನ್ನು ಮಾಡಿದರೆ ನಾವು ಯಾರಿಗೆ ಹೇಳಬೇಕು ? ಹೊಲದ ರಕ್ಷಣೆಗೆ ಬೇಲಿಯನ್ನು ಹಾಕುತ್ತಾರೆ. ಆದರೆ ಬೇಲಿಯೇ ಎದ್ದು ಹೊಲವನ್ನು ಮೇಯ್ದರೆ ಯಾರಿಗೆ ಹೇಳಬೇಕು ? ಅವರು ಎಲ್ಲಾ ಜನರನ್ನು ರಕ್ಷಣೆ ಮಾಡತಕ್ಕವರು. ನಮ್ಮ ಹಕ್ಕುಗಳನ್ನು ಕಾಪಾಡತಕ್ಕ ಮಹತ್ತರ ಜವಾಬ್ದಾರಿ ಮುಖ್ಯಮಂತ್ರಿಗಳ ಮೇಲಿರುತ್ತದೆ. ಅವರೇ ವಿರೋಧ ಪಕ್ಷದ ನಾಯಕರ ಫೋನ್ ಟ್ಯಾಪ್ ಮಾಡುವುದು, ಇನ್‌ನೋಸೆಂಟ್ ಹೆಣ್ಣು ಮಕ್ಕಳ ಫೋನ್ ಟ್ಯಾಪ್ ಮಾಡುವುದು, ಅವರ ಲಾಯಲಿಸ್ಟ್‌ಗಳ ಫೋನ್‌ಗಳನ್ನೇ ಟ್ಯಾಪ್ ಮಾಡುವುದಾದರೆ ಹೇಗೆ? ನಾಗರೀಕರ ಹಕ್ಕು ರಕ್ಷಣೆ ಮಾಡುವ ಬಗ್ಗೆ ಫ್ರೀಡಮ್ ಆಫ್ ಸ್ಪೀಚ್‌ನ ಸೆಕ್ಷನ್ ೧೯ ಸಬ್ ಕ್ಲಾಸ್ ೧ (ಎ)ಯನ್ನು ಭಂಗ ಮಾಡುವುದನ್ನು ಅದಕ್ಕೆ ಕೊಡಲಿ ಪೆಟ್ಟು ಹಾಕುವುದನ್ನು ಅವರು ಮಾಡಿದ್ದಾರೆ. According to Article 21 of the Contsitution of India, 'No person shall be deprived of his life or personal liberty except according to procedure established by law. ಹೀಗೆ ಪರ್ಸನಲ್ ಲಿಬರ್ಟಿಗೆ ಸ್ವಲ್ಪ ಮಟ್ಟಿಗೆ ರಿಸ್ಟ್ರಿಕ್ಷನ್ ಹಾಕಬೇಕಾದರೂ ಅದಕ್ಕೆ ಒಂದು ಪ್ರೊಸೀಜರ್ ಇದೆ. That procedure must be

established by Low. ಟೆಲಿಗ್ರ್ಯಾಫ್ ಆಕ್ಟ್ ಸೆಕ್ಷನ್ ೫ ಸಬ್ ಕ್ಲಾಸ್ ೨ ಪ್ರಕಾರ ಯಾರು ಎಕನಾಮಿಕ್ ಅಫೆಂಡರ್ಸ್‌ಗಳು ಇದ್ದಾರೋ, ಯಾರು ಪೀಸ್ (ಶಾಂತಿ) ಬ್ರೇಕ್ ಮಾಡುತ್ತಾರೋ, ಯಾರು ಆನ್‌ಸೋಶಿಯಲ್ ಎಲಿಮೆಂಟ್ಸ್ ಇದ್ದಾರೋ ಅಂಥವರುಗಳಿಗೆ ಮಾತ್ರ ಈ ಕಾನೂನನ್ನು ಉಪಯೋಗ ಮಾಡಬೇಕೆಂದು ಇದೆ. ಆದರೆ ಇವರು ಆರ್ಟಿಕಲ್ ೨೧ನ್ನು ವಯಲೇಟ್ ಮಾಡಿದ್ದಾರೆ, ಆರ್ಟಿಕಲ್ ೧೯ನ್ನು ವಯಲೇಟ್ ಮಾಡಿದ್ದಾರೆ. ಈ ರೀತಿಯಾಗಿ ಲೆಜಿಸ್ಲೇಟರ್ಸ್‌ಗಳಿಗೆ ಹೀನ ಪ್ರಿವಿಲೇಜ್ ಕೊಟ್ಟ ಹಾಗೆ ಆಗಿದೆ. ನಮ್ಮನ್ನು ಹೀನ ದೃಷ್ಟಿಯಲ್ಲಿ ನೋಡತಕ್ಕ ಕೆಲಸ ಮಾಡಿದ್ದಾರೆ. ಇದು ನಿಜಕ್ಕೂ ನಾವೆಲ್ಲರೂ ತಲೆ ತಗ್ಗಿಸತಕ್ಕಂಥ ಕೆಲಸವನ್ನು ಅವರು ಮಾಡಿದ್ದಾರೆ. ಮತ್ತೆ ಇವರು ಡಿಫೆಂಡ್ ಮಾಡತಕ್ಕಂಥಾದ್ದು ಎಂದರೆ, ಈ ರೀತಿ ಎಲ್ಲಾ ಕಡೆ ಆಗಿದೆ, ಅದಕ್ಕೆ ನಾವು ಮಾಡಿದ್ದೇವೆಂದು. ಹೇಳುತ್ತಾರೆ.

೨-೦೦ ಪಿ. ಎಂ.

ಹಿಂದೆ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾಯರ ಕಾಲದಲ್ಲಿ ಆಗಿದೆ ಎಂದು ಹೇಳಿದ್ದಾರೆ. ಅವರ ಕಾಲದಲ್ಲಿ ಭದ್ರಾವತಿಯಲ್ಲಿ ಯಾರೋ ಸಮಾಜಘಾತುಕ ವ್ಯಕ್ತಿಗಳು ಸಮಾಜದಲ್ಲಿ ಶಾಂತಿಭಂಗ ಮಾಡುತ್ತಿದ್ದರು ಎಂದು ಅವರ ಹೆಸರನ್ನು ಕೊಟ್ಟಿದ್ದಿರಬಹುದು: ಆದರೆ ಅದೇ ಕಾಲದಲ್ಲಿ ವಿರೋಧ ಪಕ್ಷದಲ್ಲಿದ್ದ ಮಾನ್ಯ ಬೊಮ್ಮಾಯಿಯವರ, ಮಾನ್ಯ ದೇವೇಗೌಡರ ಹೆಸರನ್ನು ಕೊಟ್ಟಿರಲಿಲ್ಲ ಮತ್ತು ಇತರ ಯಾವ ಮಂತ್ರಿಗಳ ಹೆಸರನ್ನು ಕೊಟ್ಟಿರಲಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳು ಆಗಿದ್ದಾಗ ತಮ್ಮ ಕಾಲದಲ್ಲಿ ಇಂಥ ಪ್ರಕರಣ ಆಗಿದ್ದಿರಲಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ನನ್ನ ಮಂತ್ರಿಮಂಡಲದಲ್ಲಿದ್ದವರು, ಇಂಥ ಮಾತನ್ನು ಹೇಳಬಾರದಿತ್ತು ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ನಾವು ಈ ವಿಚಾರವಾಗಿ ಹೇಳತಕ್ಕಂಥಾದ್ದು ಏನೆಂದರೆ. ಯಾವ ಮುಖ್ಯ ಮಂತ್ರಿಗಳು ಕೂಡ ರಾಜ್ಯದಲ್ಲಿ ಇದುವರೆಗೆ ಹೀಗೆ ಮಾಡಿರಲಿಲ್ಲ, ಇವರು ಮಾಡಿದ್ದಾರೆ. ಅಷ್ಟೇ ಅಲ್ಲದೆ, ನನಗೆ ಗೊತ್ತಿಲ್ಲದೆ ಡಿ.ಐ.ಜಿ.ಯವರು ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಡಿ.ಐ.ಜಿ.ಯವರು ತಾವಾಗಿಯೇ ಏನೂ ಮಾಡುವುದಿಲ್ಲ, ಅವರು ಮುಖ್ಯ ಕಾರ್ಯದರ್ಶಿಯವರ ಆದೇಶದ ಪ್ರಕಾರ ಮಾಡುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಆಗ ಮುಖ್ಯ ಕಾರ್ಯದರ್ಶಿಯವರಾಗಿದ್ದ ಶ್ರೀ ಟಿ. ಆರ್. ಸತೀಶ್‌ಚಂದ್ರನ್‌ರವರು ಒಂದು ಲೆಟರ್ ಕೊಟ್ಟಿದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಈ ರೀತಿ ಇದೆ:-

"In excencise of the powers conferred by sub-section 2 of section the Indian Telegraph Act 1885 ofthe Central Act the Government of Karnataka hereby specifically authorises the D.I.G. (Intelligence) to excercise power under the said sub-section in the interest of public safety. By order and in the name of the Governor of Karnataka, T. R. Satish Chandran, Chief Secretary to Government of Karnataka. Top Secret. Karnataka Government Secretariat Vidhana Soudha, Bangalore, June 26th 1986...

ಹಾಗಾದರೆ ಇಂಥ ಆದೇಶ ಕೊಡಲಿಕ್ಕೆ ನಾಗರತ್ನಮ್ಮನವರು, ಬಂಗಾರಪ್ಪನವರು, ದೇವೇಗೌಡರು ಮುಂತಾಗಿ ರಾಜ್ಯದಲ್ಲಿ ಏನಾದರು ಗಲಾಟೆ ಮಾಡಿಸುತ್ತಾ ಇದ್ದರೋ ಹೇಗೆ? This is the order issued by the same Government under the nose of the Chief Minister and the Chief Secretary ie., the top man of the beaurocracy. ಹಾಗಾದರೆ ನನಗೆ ಗೊತ್ತಿಲ್ಲ ಎಂದು ಹೇಗೆ ಹೇಳುತ್ತೀರಿ ? Why do you plead innocency, If you have issued the order please say boldly that I have issued this order under the Act. ಅದನ್ನು ಬಿಟ್ಟು ನನಗೆ ಆ ವಿಷಯ ಗೊತ್ತಿಲ್ಲ, ನಾನು ನೋಡಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಮಾಡಿದ್ದಾರೆ. ರುಟೀನ್ ಕೋರ್ಸ್‌ನಲ್ಲಿ ಅವರು ಮಾಡುತ್ತಾರೆ ಎಂದು ಹೇಳುತ್ತಿದ್ದಾರೆ. ಇಷ್ಟೊತ್ತು ಸರಕಾರ ಒಂದು ಆದೇಶವನ್ನು ಹೊರಡಿಸಬೇಕಾದರೆ, ಇಂಥಹ ಒಂದು

ಮಹತ್ತರವಾದ ಪಾತ್ರವನ್ನು ಇದರಲ್ಲಿ ವಹಿಸಬೇಕಾದರೆ ಯಾವ ಅಧಿಕಾರಿಯೂ ಕೂಡ ಮುಖ್ಯ ಮಂತ್ರಿಯವರನ್ನು, ಗೃಹ ಇಲಾಖಾ ಮಂತ್ರಿಗಳನ್ನು ಕೇಳದೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈ ಮಂತ್ರಿಗಳ ಮೇಲೆ ಅವರಿಗೆ ಇರುವ ಗೌರವದಿಂದ ಮತ್ತು ಇವರು ಇಂಥ ಕೆಲಸಗಳನ್ನು ಹೇಳುತ್ತಾರೆ ಎನ್ನುವ ಸಂಶಯ ಇರುವುದರಿಂದ, ಅವರು ತಮ್ಮ ಸ್ಥಾನವನ್ನು ಕಾನೂನು ಪ್ರಕಾರವಾಗಿಯೇ ಇಟ್ಟು ಕೊಳ್ಳಲು ಮಂತ್ರಿಗಳಿಂದ ಸಿಗ್ನೇಚರ್ ತೆಗೆದುಕೊಳ್ಳುತ್ತಾರೆ, ಅಥವಾ ಓರಲ್ ಇನ್‌ಸ್ಟ್ರಕ್ಷನ್ಸ್ ತೆಗೆದು ಕೊಳ್ಳುತ್ತಾರೆ. ಸಂಬಂಧಪಟ್ಟ ಕಾಗದ ಪತ್ರಗಳ ಮೇಲೆ ಕಿರು ಸಹಿಯನ್ನಾದರೂ ತೆಗೆದುಕೊಂಡು ಇಟ್ಟುಕೊಳ್ಳುತ್ತಾರೆ. ಇದೆಲ್ಲಾ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದ್ದರೂ ಕೂಡ ಈ ಪ್ರಕರಣದಲ್ಲಿ ಅವರು ಸತ್ಯಕ್ಕೆ ದೂರವಾದಂಥ ನುಡಿಗಳನ್ನು ನುಡಿದಿದ್ದಾರೆ. ಇಂಥ ಯಾವುದೇ ಆದೇಶಗಳನ್ನು ಹೊರಡಿಸಬೇಕಾದರೂ ಮಾನ್ಯ ರಾಜ್ಯಪಾಲರವರಿಗೆ ಇನ್‌ಫಾರ್ಮ್ ಮಾಡಬೇಕಾಗುತ್ತದೆ. According to article 166 and 167. ಯಾವುದೇ ತರಹದ ಸರಕಾರದ ಆದೇಶ ಇದ್ದರೂ ಕೂಡ ಅದನ್ನು ಸಂಪೂರ್ಣವಾಗಿ ರಾಜ್ಯಪಾಲರ ಗಮನಕ್ಕೆ ತಂದು ಹೊರಡಿಸಬೇಕೆಂದು ನಿಯಮ ಇದೆ. ಮತ್ತು ಎಲ್ಲಾ ಸರಕಾರಿ ಆದೇಶಗಳನ್ನು ರಾಜ್ಯಪಾಲರ ಹೆಸರಿನಲ್ಲಿ ಇಶ್ಯು ಮಾಡುತ್ತಾರೆ. ಹೀಗೆ ಒಂದಲ್ಲ, ಹಲವಾರು ವಿಷಯಗಳಲ್ಲಿ ಹಲವಾರು ರೀತಿಯಲ್ಲಿ ಸಂವಿಧಾನಬದ್ಧವಾದ ಹಕ್ಕನ್ನು ವ್ಯಾಲೆಟ್ ಮಾಡಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಂವಿಧಾನದ ಪ್ರಕಾರ ಯಾವುದೇ ಕಾರ್ಯದರ್ಶಿಗಳು ಮುಖ್ಯಮಂತ್ರಿಗಳ, ಅಥವಾ ಸಂಬಂಧಪಟ್ಟ ಮಂತ್ರಿಗಳ ಸಮ್ಮತಿ ಇಲ್ಲದೆ ಆರ್ಡರ್ ಹೊರಡಿಸುವುದಕ್ಕೆ ಸಾಧ್ಯವೇ ಇಲ್ಲ. ಮತ್ತು ಸಂಬಂಧಪಟ್ಟ ಹೆಡ್ ಆಫ್ ಡಿಪಾರ್ಟ್‌ಮೆಂಟ್‌ನವರ ನೋಟೀಸ್‌ಗೆ ವಿಷಯವನ್ನು ತರಲೇಬೇಕಾಗುತ್ತದೆ.

Article 166 of the Constitution says thus. Conduct of busine s of the Government of a State–(1) All Executive action of thes Government of a State shall be expressed to be taken in the name of the Governor.

2) Orders and other instruments made and executed in the name of the Governor shall be authenticated in such manner as may be speoiafed in rules to be made by the Governor, and the validity of an order or instrument which is so authenticated shall not be called. in question on the ground that it is not an order or instrument made or executed by the Governor.

3) The Governor shall make rules for more Convenient transca tion of the business of the Government of the state and for the allocation among ministers of the said business in so far as it is not a business with respeot to which the Governor is by or under this Constitution required to act in his discretion.

ಅಂದರೆ ೧೬೭ನೇ ಸೆಕ್ಷನ್ ಪ್ರಕಾರ ಗವರ್ನರ್‌ಗೆ ಇನ್‌ಫಾರ್ಮ್ ಮಾಡಬೇಕೆಂದು ಇರುತ್ತದೆ. ಈಗ ಅದನ್ನು ಡಿಐಜಿ ಮಾಡಿದ್ದಾರೆಂದೋ, ಚೀಫ್ ಸೆಕ್ರೆಟರಿ ಮಾಡಿದ್ದಾರೆಂದೋ ಯಾರೋ ಅಧಿಕಾರಿ ಗಳ ತಲೆ ಮೇಲೆ ಹಾಕುವುದು, ಆ ಮೂಲಕ ಕೈತೊಳೆದು ಕೊಳ್ಳುವುದು ಬೇಡ ಇದು ಪರ್ಪಸಾಗೇ ಆಗಿದ್ದು, ಡೆಲಿಬರೇಟಾಗಿಯೇ ಮಾಡಿದ್ದು. Intentionally Purposefully and deliberately it has been done. Deliberately to serve my own purpose ಅನ್ನಿ, ನಾವು ಒಪ್ಪಿಕೊಳ್ಳೋಣ. ಅದು ಬಿಟ್ಟು ಅವರು ಮಾಡಿರಬೇಕು, ನನಗೆ ಗೊತ್ತೇ ಇರಲಿಲ್ಲ ಅನ್ನುವುದು ಬೇಡ. Every circular and every Government order will be issued with the knowledge of the concerned minister ಅದಕ್ಕೇ ಈ ಕೆಲಸ ಮುಖ್ಯ ಮಂತ್ರಿಗಳಿಗೆ ಗೊತ್ತಿತ್ತು. ಗೊತ್ತಿದ್ದೂ ಗೊತ್ತಿಲ್ಲ ಎಂದು ರೆಸಿಗ್ನೇಷನ್ ಕೊಡುವಾಗ ಹೇಳಿ ತಪ್ಪು ದಾರಿಗೆ ಜನರನ್ನು ಎಳೆಯುವ ಪ್ರಯತ್ನ ಮಾಡಿದ್ದಾರೆ. ಇವರು ಎಲ್ಲೀ ವರೆಗೆ ಹೋಗಿದ್ದಾರೆಂದರೆ, ನನ್ನ ಟೆಲಿಫೋನನ್ನೂ ಟ್ಯಾಪ್ ಮಾಡಲಾಗುತ್ತಿದೆ. ನಾನು ಯಾರಿಗೆ

ಹೇಳಲಿ ಎನ್ನುತ್ತಾರೆ. ಆದರೆ ಇದುವರೆಗೂ ಅವರ ಫೋನ್ ಟ್ಯಾಪಾಗುತ್ತಿರುವುದನ್ನು ಯಾರೂ ಎಕ್ಸ್‌ಪೋಸ್ ಮಾಡಿಲ್ಲ. ಇವರೇ ತಂದು ತೋರಿಸಿದ್ದರೆ ಚೆನ್ನಾಗಿತ್ತು. ನಾವೂ ನೋಡಲಿಲ್ಲ. ಪಾರ್ಲಿಮೆಂಟ್‌ನಲ್ಲಿ ಕೂಡ ಯಾರೂ ತೋರಿಸಲಿಲ್ಲ. ಪ್ರೈಮ್‌ಮಿನಿಸ್ಟ್ರು ಸ್ಪಷ್ಟವಾಗಿ ಹೇಳಿದ್ದಾರೆ, ನಾವು ಯಾವುದೇ ಪೊಲಿಟಿಶಿಯನ್ನಿನ ಫೋನ್ ಟ್ಯಾಪಿಂಗ್ ಮಾಡುತ್ತಿಲ್ಲ ಎಂದು ತಮಗೂ ಇದು ಗೊತ್ತಿದೆ. ಆದರೂ ಕೂಡ ಡಿಫೆಂಡ್ ಮಾಡಿಕೊಳ್ಳುವುದಕ್ಕೆ he says, ನಾನೊಬ್ಬನೇ ತಪ್ಪು ಮಾಡಿಲ್ಲ, ಎಷ್ಟೋ ಜನ ತಪ್ಪು ಮಾಡಿದ್ದಾರೆ ಎನ್ನುತ್ತಾರೆ. ಇಂಥವರಿಗೆ ಏನು ಹೆಸರು ಕೊಡುತ್ತೀರಿ ? ಇವರು ಎರಡು ಸಾಲಿಗೆ ಇರುವವರು ಎಂದರೆ ಆ ಕಡೆಯವರು ರೊಚ್ಚಿ ಗೇಳುತ್ತಾರೆ. ಇರಲಿ. ಇಷ್ಟಕ್ಕೇ ಹೆಗಡೆಯವರು ನಿಲ್ಲಲಿಲ್ಲ. ಮುಂದೆ ಎಲ್ಲಿಯವರೆಗೂ ಇವರು ಹೋದರು ಎಂದರೆ ಇದನ್ನು ಮುಚ್ಚಿ ಹಾಕುವ ಉದ್ದೇಶದಿಂದ ಯಾರೋ ಅಧಿಕಾರಿಗಳು ಮಾಡಿದ್ದನ್ನು ನಾನು ಹೊತ್ತು ಕೊಂಡಿದ್ದೇನೆ ಎಂದರು. ಇವರು ಎಂಥವರು ಅಂತ ಗೊತ್ತಿಲ್ಲವೇ, ಹಿಂದೆ ಬಾಟ್ಲಿಂಗ್ ಕೇಸ್‌ನಲ್ಲಿ ಹೈಕೋರ್ಟಿನಲ್ಲಿ ಸ್ಟ್ರಿಕ್ಚರ್ಸ್ ಇವರ ವಿರುದ್ಧ ಪಾಸಾಗಿದೆ. ಸುಪ್ರೀಮ್ ಕೋರ್ಟ್‌ನಲ್ಲೂ ಅದನ್ನೇ ಎತ್ತಿ ಹಿಡಿಯಲಾಯಿತು ಇವರಿಗೆ ನಿಜವಾಗಿಯೂ ನೈತಿಕ ಹೊಣೆಗಾರಿಕೆ ಇದ್ದಿದ್ದರೆ ಆವಾಗಲೇ ಇವರು ರಾಜೀನಾಮೆ ಕೊಟ್ಟು ಹೋಗಬೇಕಾಗಿತ್ತು. ಅದೇನೋ ಹೇಳ್ತಾರಲ್ಲ ಊರ್ಗೆ ಸಾಕಾಗೈತೆ. ಗೌಡನ್ಗೆ ಬೇಡಾಗೈತೆ ಅಂತ ಗಾದೆ, ಹಾಗೆ ಇವರು ಮಾಡಿಕೊಂಡು ಹೋದರು. ಇವರ ಏನು ಬುನಿಯಾದ್ ಇತ್ತು, ಅದು ಕಿತ್ತುಕೊಂಡು ಹೋಯಿತು. ಕಿತ್ತುಕೊಂಡ ಮೇಲೆ ಸಾಕು ಎಂದು ಒಂದು ನೆಪ ಬೇಕು ರಿಸಿಗ್ನೇಷನ್ ಕೊಟ್ಟರು. ಆ ಮೇಲೆ ಹೇಳಿದರು ನಾನು ಇನ್ನೊಸೆಂಟ್ ಇದ್ದೀನಿ, ಹಾಗೆ ಇದ್ದೀನಿ, ಹೀಗೆ ಇದ್ದೀನಿ ಎಂದು ಹೇಳಿದರು. ಇವೊತ್ತಿನ ದಿವಸ ನಾನು ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ ಇದರ ಚರ್ಚೆಗೆ ತಾವು ಪರ್ಮಿಷನ್ ಕೊಡಬೇಕು ಇನ್ನೂ ಕೆಲವು ಡಾಕ್ಯುಮೆಂಟ್ಸ್ ಇವೆ ಇವನ್ನು ಕೂಡ ಪ್ರಸ್ತಾಪ ಮಾಡಬೇಕು ಪರ್ಮಿಷನ್ ಹೇಗೂ ಕೊಡುತ್ತೀರಿ ಯಾಕೆಂದರೆ ಇದು ಬಹಳ ಡಿಟೇಲ್ಡ್ ಡಿಸ್ಕಷನ್.

ಅಧ್ಯಕ್ಷರು.—ಸೆಕ್ಷನ್ ಎಲ್ಲಾ ಬೇಡ.

ಶ್ರೀ ಮಲ್ಲಿಕಾರ್ಜುನ.ಎಂ. ಖರ್ಗೆ.—ನಮಗೆ ರಕ್ಷಣೆ ಬೇಕು ನಮ್ಮ ಹಕ್ಕನ್ನು ರಕ್ಷಣೆ ಮಾಡತಕ್ಕ ವ್ಯವಸ್ಥೆ ಬೇಕು.

ಅಧ್ಯಕ್ಷರು.—ಪರ್ಮಿಷನ್ ಕೊಡಿ ಎಂದು ರಿಕ್ವೆಸ್ಟ್ ಮಾಡಿ, ಜಡ್ಜ್‌ಮೆಂಟ್ ನಿಮ್ಮ ಕಡೆ ಕೊಡುತ್ತೇನೆ ಎಂದು ನಾನು ಹೇಳುವುದಿಲ್ಲ ಯಾವ ಕೋರ್ಟಿನಲ್ಲಿಯೂ ಜಡ್ಜ್‌ಮೆಂಟ್ ಯಾವ ಕಡೆ ಎಂದು ಮೊದಲೇ ಹೇಳುವುದಿಲ್ಲ.

ಶ್ರೀ ಆರ್. ಧರ್ಮಸಿಂಗ್.—ಅಧ್ಯಕ್ಷರು ತಲೆ ಅಲ್ಲಾಡಿಸುವುದನ್ನು ನೋಡಿದರೆ ಅವರು ಪರ್ಮಿಷನ್ ಕೊಟ್ಟಂತೆ ಕಾಣುತ್ತದೆ.

ಅಧ್ಯಕ್ಷರು.—ಪರ್ಮಿಷನ್ ಕೊಡಿ ಎಂದು ಕೇಳಿ, ಕೊಟ್ಟೇ ಕೊಡಿ ಎಂದು ಹೇಳಬೇಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದು ನನ್ನ ಒಬ್ಬನದೇ ಅಭಿಪ್ರಾಯ ಅಲ್ಲ. ಆ ಕಡೆಯ ಸದಸ್ಯರದ್ದೂ ಸಹ ಇದೇ ರೀತಿಯ ಭಾವನೆ ಇದೆ. ವೈಜನಾಥ ಪಾಟೀಲ್ ಅವರೂ ಸಹ ಈ ಬಗ್ಗೆ ಓಪನ್ ಸ್ಟೇಟ್‌ಮೆಂಟ್ ಕೊಟ್ಟರು. ಏನೆಂದು ಕೊಟ್ಟರು, ಇದು ನಿಕ್ಸನ್ ವಾಟರ್‌ಗೇಟ್ ಪ್ರಕರಣದಂತೆ ಕರ್ನಾಟಕದಲ್ಲಿ ಆಗಿದೆ. ಎಂದು ಅದು ಪ್ರೆಸ್‌ನಲ್ಲಿಯೂ ಬಂದಿದೆ, ಅದನ್ನೂ ಇವರು ಮಾಡಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಕರ್ನಾಟಕದ ವಾಟರ್‌ಗೇಟ್ ಪ್ರಕರಣ,

ಅಧ್ಯಕ್ಷರು.—ಯಡಿಯೂರಪ್ಪನವರೇ, ನಿಮ್ಮ ಪಾಳಿಗೆ ಬಂದಾಗ ಹೇಳಿ. ಧರ್ಮಸಿಂಗ್‌ರವರೇ ನಿಮ್ಮ ಸರದಿಗೆ ಬಂದಾಗ ಹೇಳಿ. ಈಗ ಕುಳಿತುಕೊಳ್ಳಿ.

ಶ್ರೀ ಕುಮಾರ್‌ಗೌಡ ಎ. ಪಾಟೀಲ್.—ನಿಕ್‌ಸನ್, ಎಲ್ಲಾ ಬಿಲ್ಡಿಂಗ್‌ನಲ್ಲಿ ಮಾಡಿದ್ದಾರೆ,

ಅಧ್ಯಕ್ಷರು.—ಕುಮಾರ್‌ರವರೇ ಕುಳಿತುಕೊಳ್ಳಿ,

ಶ್ರೀ ಬಿ. ಎ. ಉಮರಬ್ಬ.—ಕರ್ನಾಟಕದ ಮೂಲೆ ಮೂಲೆಯಲ್ಲಿ ಮಾಡಿದ್ದಾರೆ,

ಅಧ್ಯಕ್ಷರು.—ಉಮರಬ್ಬನವರೇ ಕುಳಿತುಕೊಳ್ಳಿ, ಖಾರ್ಗೆಯವರೇ ನೀವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಒಬ್ಬನೇ ಅಲ್ಲ ಹೇಳುತ್ತಿರುವುದು. ಎಲ್ಲಾ ಸದಸ್ಯರೂ ಹೇಳಿದ್ದಾರೆ. ಈಗ ಡಿಸಿಡೆಂಟ್ ಆದರೂ ಕಷ್ಟ. ಅಪೋಸಿಷನ್‌ನಲ್ಲಿ ಆದರೂ ಕಷ್ಟ. ಅಲ್ಲಿ ಕೆಲವು ಮಿನಿಸ್ಟರ್ಸ್ ರಕ್ಷಣೆ ಕೊಡುತ್ತಾರೆ. ಇಲ್ಲಿ ಸತ್ಯವಾಗಿದ್ದನ್ನು, ನ್ಯಾಯವಾದುದ್ದನ್ನು ಪ್ರತಿಪಾದನೆ ಮಾಡಿದರೂ ಕೂಡ ನಾಳೆ ಇದಕ್ಕೆ ರಕ್ಷಣೆ ಇಲ್ಲ, ಸ್ವಾತಂತ್ರ್ಯ ಇಲ್ಲ. ವ್ಯಕ್ತಿ ಸ್ವಾತಂತ್ರ್ಯ ಇಲ್ಲ. ಪರ್ಸನಲ್ ಲಿಬರ್ಟಿ ಇಲ್ಲ ಫ್ರೀಡಂ ಆಫ್ ಸ್ಪೀಚ್ ಇಲ್ಲ. ನಿಮ್ಮ ಹುಳುಕನ್ನು ಹೊರ ತೆಗೆದರೆ ನಾಳೆ ಈ ರೀತಿ ಮಾಡತಕ್ಕವರು. ಆದಕ್ಕೆ ಮಾನ್ಯ ವೈಜನಾಥ ಪಾಟೀಲ್ ಹೇಳಿದ ಹಾಗೆ ಇದು ಒಂದು ವಾಟರ್‌ಗೇಟ್. ಇದು ಎಲ್ಲರ ಪ್ರಶ್ನೆ. ರಾಜೀನಾಮೆ ಕೊಟ್ಟು ಸರ್ಕಾರವನ್ನು ಉಳಿಸಿದ್ದೇನೆ. ಬೊಮ್ಮಾಯಿ ಯವರನ್ನು ನನ್ನ ಸಕ್ಸೆಸರ್ ಮಾಡಿ ಹೋಗಿದ್ದೇನೆ ಎಂದು ಅವರಿಗೆ ಸಮಾಧಾನ ಆಗಿದ್ದರೆ ಕರ್ನಾಟಕದ ಜನತೆಗೆ ಸಮಾಧಾನ ಇಲ್ಲ. ಅವರು ಮಾಡಿದಂತಹ ಕೆಲಸ ಯಾವಾಗ ಸಮಾಧಾನ ಆಗುತ್ತದೆ ಎಂದರೆ, ಇಂಡಿಯನ್ ಪೀನಲ್ ಕೋಡ್ ೧೬೬ರ ಪ್ರಕಾರ ನೀವು ಅವರನ್ನು ಪ್ರಾಸಿಕ್ಯೂಟ್ ಮಾಡಿದರೆ ಮಾತ್ರ ಆಗುತ್ತದೆ. ಪ್ರಾಸಿಕ್ಯೂಟ್ ಮಾಡುವುದರ ಜೊತೆಗೆ ಅವರು ಈ ಸದನದಲ್ಲಿ ಕ್ಷಮಾಪಣೆ ಕೇಳಬೇಕು. ಇವೊತ್ತು ಅವರು ಯಾವ ಮಟ್ಟಕ್ಕೆ ಇಳಿದಿದ್ದಾರೆ ಎಂದು ನೋಡಿದರೆ ನಿಜಕ್ಕೂ ತಮ್ಮ ಸ್ವಂತಹ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ತಾವು ಈಗಾಗಲೇ ಒಪ್ಪಿರಬಹುದೆಂದು ಭಾವಿಸಿದ್ದೇನೆ. ಅನೇಕ ಪಾಯಿಂಟ್ಸ್‌ಗಳನ್ನು ಹೇಳಿದ್ದೇನೆ. ಆದುದರಿಂದ ತಮ್ಮಲ್ಲಿ ದಯವಿಟ್ಟು ಮನವಿ ಮಾಡಿಕೊಳ್ಳುತ್ತೇನೆ, ಎರಡೂ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ಇದರ ಚರ್ಚೆಗೆ ಅವಕಾಶ ಮಾಡಿಕೊಡಿ. ಇದರಲ್ಲಿ ಎಲ್ಲಾ ಲೆಜಿಸ್ಲೇಟರ್ಸ್ ಪ್ರಶ್ನೆ ಇದೆ. ಅನೇಕ ಇನ್ನೋಸೆಂಟ್ ಹೆಣ್ಣು ಮಕ್ಕಳ ಪ್ರಶ್ನೆ ಇನ್‌ವಾಲ್ವ್ ಆಗಿವೆ. ವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ ಇದೆ. ರಾಜ್ಯಾಂಗವನ್ನು ವಾಯ್‌ಲೇಟ್ ಮಾಡಿದ ಪ್ರಶ್ನೆ ಇದೆ. ಟೆಲಿಗ್ರಾಫಿಕ್ ಆಕ್ಟ್ ಅನ್ನು ವಾಯ್‌ಲೇಟ್ ಮಾಡಿದ ಪ್ರಶ್ನೆ ಇದೆ, ಸರ್ಕಾರದವರು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದು ಭಾವಿಸುತ್ತೇನೆ. ದಯವಿಟ್ಟು ತಾವು ಇದರ ಚರ್ಚೆಗೆ ಪರ್ಮಿಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ತಾವು ಸ್ವಲ್ಪ ಸಮಾಧಾನವಾಗಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪಾಟೀಲ್‌ರವರಿಗೆ ಅವಕಾಶ ಕೊಡಿ. ಆದರೆ ನಮ್ಮ ಪಕ್ಷದಿಂದ ಇದನ್ನು ಮೂವ್ ಮಾಡಿದ ಮೇಲೆ ಕಾಂಗ್ರೆಸ್‌ನ ಇಬ್ಬರು ಸದಸ್ಯರು ಮಾತನಾಡಿರುವುದರಿಂದ ನನಗೂ ಅವಕಾಶ ಕೊಡಬೇಕು. ಪಾಟೀಲ್‌ರವರು ಹಿರಿಯ ಸದಸ್ಯರು, ಅವರಿಗೆ ಅವಕಾಶ ಕೊಡಿ ಆದಕ್ಕಲ್ಲ ..

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಸನ್ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಅತ್ಯವಶ್ಯವಾದ ನೀತಿ ನೆಲೆಗಟ್ಟನ್ನು ಎತ್ತಿ ಹಿಡಿಯಲು ಹಾಗೂ ಬಹಳ ಔದಾರ್ಯದಿಂದ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ ಮತ್ತು ಇದಕ್ಕೆ ಮಂಜೂರಿಯನ್ನು ಕೊಟ್ಟಿದ್ದೀರಿ, ಎಂದು ಆಸೆ ಮಾಡುತ್ತೇನೆ. ಶ್ರೀಮಾನ್ ಖರ್ಗೆಯವರು ಸಾಕಷ್ಟು ವಿಷಯಗಳನ್ನು ವಿಶೇಷವಾಗಿ, ಕಾನೂನು ಬದ್ಧವಾಗಿ ಹೇಳಿದ್ದಾರೆ. ಮೊಟ್ಟ ಮೊದಲನೆಯದಾಗಿ ನಾನೂ ಒಬ್ಬ ಈ ಟೆಲಿಫೋನ್ ಟ್ಯಾಪಿಂಗ್ ಲಿಸ್ಟ್‌ಗೆ ಸೇರಿರುವಂತಹ ವ್ಯಕ್ತಿ. ಟ್ಯಾಪಿಂಗ್‌ಗೆ ಸೇರಿರುವ ವ್ಯಕ್ತಿಯಾಗಿರುವುದರಿಂದ ನನಗೆ ವ್ಯಸನ ಇಲ್ಲ. ಅನೇಕ ಸಂದರ್ಭಗಳಲ್ಲಿ ರಾಜಕೀಯ ಜೀವನದಲ್ಲಿ ಹೀಗೆ ಆಗುತ್ತದೆ. ಆದುದರಿಂದ ನಾನು ಕೇಳುವುದು ಇಷ್ಟೇ. ರಾಜಕೀಯ ಜೀವನದಲ್ಲಿ ಒಬ್ಬರದೊಬ್ಬರ ಮಾತು ಕೇಳುವುದಾಗಲೀ ಅಥವಾ ಅಲ್ಲಿ ನಡೆಯುತ್ತಿರುವುದನ್ನು ಪತ್ರಿಕೆಗಳಲ್ಲಿ ಪ್ರಕಟಣೆಗೊಳಿಸಿ ಅಪಮಾನಗೊಳಿಸುವಂತಹ ರೀತಿಯಲ್ಲಿ ಕೆಲಸವನ್ನು ಯಾವ ಮುತ್ಸದ್ದಿ ರಾಜಕಾರಣಿಯೂ ಮಾಡುವುದಿಲ್ಲ. ಈ ವಿಚಾರವಾಗಿ ನಿಜವಾಗಿ ನನಗೆ ಬಹಳ ವ್ಯಸನವಾಗುತ್ತಿದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅವರು ಹೇಳುತ್ತಾ ಏನು ಹೇಳಿದರು ಎಂದರೆ, ಅವರು ಹೇಳದೇ ಇರುವುದಕ್ಕಿಂತ ಹೆಚ್ಚು ನನಗೆ ಕೆಡುಕು ಮಾಡುವ ರೀತಿಯಲ್ಲಿ ಹೇಳಿದರು. ಅವರು ಏನು ಹೇಳಿದರು ಎಂದರೆ, ನಾನು ಕದ್ದು ಕೇಳುವ ವಿಚಾರಕ್ಕೆ ಹೋಗುವ ಆಗಿದ್ದರೆ ನನ್ನ ಮಿನಿಸ್ಟ್ರಿಯಲ್ಲಿರುವ ರಘುಪತಿಯವರದ್ದನ್ನು ಕೇಳುತ್ತಿದ್ದೆನಾ ನನ್ನ ಸ್ನೇಹಿತರಾದ ಕೆ. ಎಚ್. ಪಾಟೀಲ್ ಅವರದ್ದನ್ನು ಕೇಳುತ್ತಿದ್ದೆನಾ ಎಂದು ಹೇಳಿದರು. ಅವರಿಗೆ ಕೆ. ಎಚ್. ಪಾಟೀಲರು ಸ್ನೇಹಿತರು ನಿಜ. ಆದರೆ ರಾಜಕೀಯವಾಗಿ ವಿರೋಧಿಗಳು. ನನ್ನ ವಿರೋಧಾಭಾಸವನ್ನು ಸ್ನೇಹಿತರ ತವಕ ಉಪಯೋಗ ಮಾಡುವುದಕ್ಕೆ ಅವರಿಗೂ ಸಾಧ್ಯ

ಇಲ್ಲ, ನನಗೂ ಕೂಡಾ ಮಾಡುವುದಕ್ಕೆ ಸಾಧ್ಯ ಇಲ್ಲ. ಅವರ ಮನೆತನದ ಬಗ್ಗೆ ನನಗೆ ಗೌರವ ಇದೆ. ಅವರು ಎಸಗಿರುವ ಈ ಹೀನಾಯಮಾನ ಕೃತಿಯನ್ನು ನೋಡಿದರೆ ಆ ಮನುಷ್ಯ ಅವರ ಮನೆತನಕ್ಕೇ ಒಂದು ದ್ರೋಹ ಬಗೆದಿದ್ದಾರೆ ಎಂದು ಹೇಳುವಂಥ ವ್ಯಕ್ತಿತ್ವವನ್ನು ನಾನು ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯ ಯಾವಾಗಲೂ ಒಂದು ಉಚ್ಚವಾದ ಪರಂಪರೆಯನ್ನು ಕಾಪಾಡಿಕೊಂಡು ಬಂದಂಥ ರಾಜ್ಯ. ಉಳಿದ ರಾಜ್ಯಗಳೊಡನೆ ಈ ನಮ್ಮ ರಾಜ್ಯವನ್ನು ತುಲನೆ ಮಾಡುವುದಕ್ಕೆ ಹೋಗಬಾರದು. ಈ ಸಲಹೆಯನ್ನು ಅನೇಕ ಸಲ ಮಾನ್ಯ ಬೊಮ್ಮಾಯಿಯವರಿಗೂ ಹೇಳಿದ್ದೇನೆ. ಈ ರಾಜ್ಯವನ್ನು ಪಂಜಾಬ್, ಮಹಾರಾಷ್ಟ್ರ, ಬಿಹಾರದ ಜೊತೆಯಲ್ಲಿ ಹೋಲಿಸಲಿಕ್ಕೆ ಹೋಗಬೇಡಿ. ಇಲ್ಲಿಯ ಜನ ಬಹಳ ಸತ್ಯವಂತರು, ನ್ಯಾಯವಂತರು, ಪ್ರೀತಿಯುತವಾದ ಆಡಳಿತವನ್ನು ಅಪೇಕ್ಷೆ ಮಾಡುವಂಥ ಜನ. ನಮ್ಮ ಅಧಿಕಾರಿಗಳು ಕೂಡಾ ಅಷ್ಟೆ, ನಿಷ್ಠಾವಂತರು. ಈ ಅಧಿಕಾರಿಗಳನ್ನಾಗಲೀ, ಜನತೆಯನ್ನಾಗಲೀ ಈ ನಡುವೆ ಸರ್ಕಾರದಲ್ಲಿರತಕ್ಕಂಥ ಜನ ಏನು ಇದ್ದಾರೆ, ಅವರನ್ನು ಕೆಡಿಸುವ ಕಾರ್ಯವನ್ನು ಮಾಡಬೇಡಿ. ಕನಿಷ್ಟ ಇದಕ್ಕಿಂತ ಚಲೋ ಮಾಡುವುದಕ್ಕೆ ಆಗದಿದ್ದರೂ ಇದ್ದ ಹೆಸರನ್ನಾದರೂ ಕೆಡಿಸುವುದು ಬೇಡ. ಆ ಇರುವ ಹೆಸರನ್ನೇ ಮುಂದುವರೆಸುವ ರೀತಿಯಲ್ಲಿ ಮಾಡಿ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಯಾರ್ಯಾರ ಮಾತುಗಳನ್ನು ಇವರು ಈ ರೀತಿ ಕೇಳಿದ್ದಾರೆ, ಅದನ್ನು ನೋಡಿದಾಗ ನನಗೆ ಒಂದು ಮಾತು ನೆನಪಿಗೆ ಬರುತ್ತದೆ. ಈ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಏನಾದರೂ ಅಕಲ್ಪಿತ ಆಗಿದೆಯೋ ಎಂದು ವಿಚಾರ ಮಾಡಿದರೆ ಆ ರೀತಿ ಆದಂತೆ ಕಾಣುವುದಿಲ್ಲ. ಏಕೆಂದರೆ ಇದಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಇಬ್ಬರು. ಸತೀಶ್‌ಚಂದ್ರನ್ ಮತ್ತು ರಘುರಾಮನ್. ಸತೀಶ್‌ಚಂದ್ರನ್ ಅವರು ಚೀಫ್ ಸೆಕ್ರೆಟರಿಯಾಗಿದ್ದಾಗ ಒಳ್ಳೆಯ ಹೆಸರನ್ನು ಇಟ್ಟುಕೊಂಡಿದ್ದರು. ರಘುರಾಮನ್ ಅವರು ಸಹಾ ಉತ್ತಮ ದರ್ಜೆಯ ಪೋಲೀಸ್ ಅಧಿಕಾರಿಗಳು ಎಂದು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅವರು ತಾವೇ ಈ ರೀತಿಯ ಇಂಥ ಅವಹೇಳನ ಕೆಲಸವನ್ನು ಎಂದೂ ಮಾಡುವುದಕ್ಕೆ ಸಾಧ್ಯ ಇಲ್ಲ. ಆ ರೀತಿ ಮಾಡಿದ್ದರೆ ಈ ಸರ್ಕಾರದವರು ಖಂಡಿತವಾಗಿ ಅವರನ್ನು ಖಾಡಿಸಿ ಅವರ ಬಗ್ಗೆ ಹೇಳಿಕೆಯನ್ನು ಹೊರಡಿಸಬೇಕಾಗಿತ್ತು. ಶ್ರೀಮಾನ್ ಸತೀಶ್‌ಚಂದ್ರನ್ ಅವರನ್ನು ರಿಟೈರ್ಡ್ ಆದ ಮೇಲೂ ಇನ್ನೂ ಭದ್ರಾವತಿ ಕಾರ್ಖಾನೆಯ ಅಧಿಕಾರಿಗಳನ್ನಾಗಿ ರಾಮಕೃಷ್ಣ ಹೆಗಡೆಯವರು ಮುಂದುವರೆಸಿದ್ದಾರೆ. ಅದು ನಿಜವೋ ಏನೋ ಗೊತ್ತಿಲ್ಲ. ನಮಗೆ ಬಂದ ವರದಿಯ ಪ್ರಕಾರ ಅವರನ್ನು ಮುಂದುವರೆಸಿದ್ದಾರೆ ಎಂದು ಗೊತ್ತಾಗಿದೆ. ಹಾಗಾದರೆ ಇವರ ಮತ್ತು ಅವರ ನಡುವೆ ಯಾವ ತೆರಹದ ಒಳಅರ್ಥಗಳು ಇದ್ದವು ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಈ ದೃಷ್ಟಿಯಿಂದ ಆರ್ಡರ್ ಉಂಟು ಎಂದು ಸಂದೇಹ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಹೇಳಿ. ಅವರು ರಾಜ್ಯದ ಉತ್ತಮ ಅಧಿಕಾರಿ ಎಂದು ಎಲ್ಲರ ಅಭಿಪ್ರಾಯವೂ ಇದೆ. Any extraneous matter should not be brought here.

ಶ್ರೀ ಕೆ. ಎಚ್. ಪಾಟೀಲ್.—ಅವರು ಕೆಟ್ಟವರು ಎಂದು ನಾನು ಹೇಳಲಿಲ್ಲ.

Sri S. R. Bommai.—My only appeal is to tell about the subject before us only. ಅವರ ಆಜ್ಞೆಯ ಬಗ್ಗೆ ಮಾತನಾಡಿ. ಅವರನ್ನು ಚೇರ್ಮನ್ ಆಗಿ ಮುಂದುವರೆಸಿರತಕ್ಕಂಥದ್ದರ ಬಗ್ಗೆ ಬೇಡ.

ಶ್ರೀ ಕೆ. ಎಚ್. ಪಾಟೀಲ್.—ಅವರನ್ನು ಉತ್ತಮ ಅಧಿಕಾರಿಗಳೆಂದೇ ನಾನು ಹೇಳಿದ್ದೇನೆ.

Sri S. R. Bommai.—Let us not talk about his continuing as Chairman and other things. ಇದಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ಹೇಳಿ, ಚೇರ್ಮನ್ ಆಗಿ ಅವರನ್ನು ಮುಂದುವರೆಸಿರುವ ಬಗ್ಗೆ ಅವರಲ್ಲಿ ಮೆರಿಟ್ ಇದೆ. ಆ ವಿಚಾರ ಇಲ್ಲಿ ಏತಕ್ಕೆ ?

ಶ್ರೀ ಕೆ. ಎಚ್. ಪಾಟೀಲ್.—ಏತಕ್ಕೆ ಎಂದರೆ ಹೆಗಡೆಯವರಿಗೆ ಏನೂ ಗೊತ್ತಿಲ್ಲದೇನೆ ಸತೀಶ್‌ಚಂದ್ರನ್ ಅವರೇ ಆರ್ಡರ್ ಮಾಡಿರಬೇಕಾದರೆ ಸತೀಶ್‌ಚಂದ್ರನ್ ಅವರು ಒಂದು ಸಲವೂ ಉತ್ತರವನ್ನು ಕೊಡದೇ ಇಲ್ಲಿಯತನಕವೂ ಸುಮ್ಮನಿರಬೇಕಾದರೆ ಏನು ಕಾರಣ ? ಅವರು ಇವತ್ತಿನ ದಿನ ನನ್ನ ಹಾಗೆ ಪ್ರಜೆ, ಅವರು ಅಧಿಕಾರಿಗಳು ಅಲ್ಲ, ನಿಮ್ಮ ನೌಕರರೂ ಅಲ್ಲ, ಆ ರೀತಿ ಆಗಿದ್ದರೆ ಸ್ಪಷ್ಟ

ವಾದ ಹೇಳಿಕೆಯನ್ನು ಅವರು ಕೊಡಬಹುದಾಗಿತ್ತು. ಅಧಿಕಾರಿಗಳ ಮೇಲೆ ಇದನ್ನು ಹಾಕಬೇಡಿ. ನೀವು ಹೇಳಿದ್ದನ್ನು ನಾವೆಲ್ಲ ಕೇಳಿದ್ದೇವೆ ಎಂದು ಹೇಳಬಹುದಾಗಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.— ಯಾರು ಈ ಮನೆಯ ಸದಸ್ಯರಲ್ಲವೋ, ಅಂಥವರ ಬಗ್ಗೆ ಮಾತನಾಡಬೇಕಾದರೆ ನಾವು ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಅವರು ಮುಖ್ಯ ಕಾರ್ಯದರ್ಶಿಗಳಾಗಿ ಮಾಡಿದ ಆಜ್ಞೆಯ ಬಗ್ಗೆ ಮಾತ್ರ ಹೇಳಿ. ಇವತ್ತು ಇರತಕ್ಕಂಥ ವಿಚಾರವೇ ಅದು. ಬೇರೆ ವಿಚಾರವನ್ನು ಹೇಳಿದರೆ ಅವರು ಇಲ್ಲಿ ಬಂದು ಡಿಫೆಂಡ್ ಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ. ಅದು ಸರಿಯಾದುದು ಅಲ್ಲ ಅದು ನಿಯಮಕ್ಕನುಗುಣವಾಗಿಯೂ ಇರುವುದಿಲ್ಲ.

† ಶ್ರೀ ಕೆ. ಹೆಚ್. ಪಾಟೀಲ್.— ನಾನು ಅವರ ಬಗ್ಗೆ ಏನು ಹೇಳಲಿಲ್ಲ ಅವರನ್ನು ಉತ್ತಮ ಅಧಿಕಾರಿಗಳೆಂದೇ ಪ್ರಾರಂಭ ಮಾಡಿದ್ದೇನೆ. ಇವತ್ತೂ ಅದೇ ಅಭಿಪ್ರಾಯ ಇದೆ. ಆದರೆ ರಿಟೈರ್ಡ್ ಆದ ಅಧಿಕಾರಿಗಳನ್ನು ಯಾವುದೇ ರೀತಿಯಾದಂಥ ನೌಕರಿಯಲ್ಲಿಯೂ ತೆಗೆದುಕೊಳ್ಳಬಾರದು ಎಂದು ಆಜ್ಞೆ ಇದ್ದಾಗ್ಯೂ ಸಹಾ ಈತನಕ ಐದು ಹತ್ತು ಸಾವಿರ ರೂಪಾಯಿಗಳ ಪಗಾರವನ್ನು ಕೊಟ್ಟು ಅವರನ್ನು ಮುಂದುವರೆಸತಕ್ಕಂಥದ್ದರ ಔಚಿತ್ಯವಾದರೂ ಏನು? ಇದರ ಸಲುವಾಗಿ ಅದಕ್ಕೂ ಇದಕ್ಕೂ ಏನಾದರೂ ತಾಳಮೇಳ ಆಗುತ್ತದೆಯೇ ಎಂದು ಹೇಳುತ್ತೇನೆ. ಹಾಗೆ ಕೂಡುವುದಕ್ಕೂ ಟೊಂಗೆ ಮುರಿಯುವುದಕ್ಕೂ ತಾಳಿ ಆಗುವುದಿಲ್ಲ, ಜನರಮೇಲೆ ಸಂದೇಹ ಆಗುವುದಿಲ್ಲವೇ? ಜನರಿಗೆ ನಾವು ಹೇಳಬೇಕಲ್ಲವೇ, ಹೇಳದಿದ್ದರೆ ತಪ್ಪಾಗುತ್ತದೆ ಬೊಮ್ಮಾಯಿಯವರೇ ? ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ, ನೀವು ಆ ರಾಡಿಗೆ ಬೀಳಬೇಡಿ, ನೀವು ಸುಸೂತ್ರವಾಗಿ ಇರಬೇಕೆಂದು ಆ ದೃಷ್ಟಿಯಿಂದ ನಿಮಗೆ ಈ ಮಾತು ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಒಳ್ಳೆಯ ಅಧಿಕಾರಿಗಳನ್ನು ಅವರು ರಿಟೈರ್ಡ್ ಆದ ಮೇಲೆ ನೇಮಿಸತಕ್ಕಂಥ ಪರಂಪರೆ ಅನೇಕ ರಾಜ್ಯಗಳಲ್ಲಿದೆ. ಕೇಂದ್ರದಲ್ಲಿ ಸಹ ರಿಟೈರ್ಡ್ ಆದಂತಹ ಉತ್ತಮ ಅಧಿಕಾರಿಗಳನ್ನು ಪುನಃ ನೇಮಿಸತಕ್ಕಂಥ ಪರಿಪಾಠ ಇದೆ. ಅವರ ಜಾಣ್ಮೆ ಅವರ ಅನುಭವದ ದೃಷ್ಟಿಯಿಂದ ಮಾಡುತ್ತಿದ್ದೇವೆ, ಅದು ಬೇರೆ ವಿಚಾರ.

ಶ್ರೀ ಕೆ. ಹೆಚ್. ಪಾಟೀಲ್.— ಎಷ್ಟು ಜನರನ್ನು ನಿಮ್ಮ ಅಧಿಕಾರದ ಅವಧಿಯೊಳಗೆ ಈ ರೀತಿ ಮಾಡುತ್ತೀರಿ ಎಂಬುದನ್ನು ನಾನು ನೋಡುತ್ತೇನೆ. ಅದು ಏನೇ ಇರಲಿ. ನನಗೆ ಸಂದೇಹ ಉಂಟಾಗಿದೆ. ಆ ಸಂದೇಹವನ್ನು ನಿವಾರಣೆ ಮಾಡುವ ಭಾರ ಮಾನ್ಯ ಬೊಮ್ಮಾಯಿಯವರಿಗೆ ಇದೆ. ಸತೀಷ್ ಚಂದ್ರನ್ ಅವರು ಆಜ್ಞೆ ಹೊರಡಿಸಿದ್ದಾರೆ. ಅವರು ಸರ್ಕಾರದಿಂದ ಈ ಆಜ್ಞೆ ಹೊರಡಿಸಿದ್ದಾರೆ. ಆರ್ಡರ್ ಅನ್ನು ಗವರ್ನಮೆಂಟ್‌ನವರು ಹೊರಡಿಸಿದ್ದಾರೆ, ಅದರ ಜವಾಬ್ದಾರಿ ಸರ್ಕಾರ ಹೊರುತ್ತದೆಂದು ಹೇಳಿದರೆ ಸತೀಷ್ ಚಂದ್ರನ್ ಅವರು ದೋಷ ಮುಕ್ತರಾಗುತ್ತಾರೆ ? I authorise so and so ಎಂದು ಹೇಳುತ್ತಾರೆ. ಆ ಆರ್ಡರ್‌ನ ಹಿನ್ನೆಲೆ ಏನು ಎನ್ನುವುದನ್ನು ವಿಚಾರ ಮಾಡಬೇಕು. ನೀವು ಆರ್ಡರ್ ಮಾಡಿದ್ದೀರಿ ಅದರ ಹಿನ್ನೆಲೆ ಏನು ಇದೆ ಅಂದರೆ ನೀವು ಅಥೋರೈಸೇಷನ್ ಮಾಡಿದರೆ ಯಾವುದರ ಸಲುವಾಗಿ ಮಾಡಿದಿರಿ. ಕೇವಲ ಬ್ಲಾಕ್ ಮಾರ್ಕೆಟೀರ್ಸ್ ಬಗ್ಗೆ, ತಿಳಿದುಕೊಂಡಿದ್ದರೆ, ದೇಶದ್ರೋಹಿಗಳ ವಿಚಾರ ತಿಳಿದುಕೊಳ್ಳುವುದಕ್ಕೆ ಪ್ರತಿಬಂಧಕ ಹಾಕಿದ್ದರೆ ಇಂತಹ ಒಂದು ಪ್ರತಿಬಂಧಕವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಟೆಲಿಫೋನ್ ಟ್ಯಾಪ್ ಮಾಡಿದ್ದರೆ ಸರಿಯಾಗಿತ್ತು. ಶ್ರೀಮಾನ್ ರಘುರಾಮನ್ ಉತ್ತಮ ಅಧಿಕಾರಿಗಳು ನಿಜ. ಇವೊತ್ತು ಅಂತಹ ಉತ್ತಮ ಅಧಿಕಾರಿಗಳನ್ನು ಪೇಚಿಗೆ ಸಿಕ್ಕಿಸುವಂತ ಕೆಲಸ ಮಾಡಿದ್ದೀರಿ. ನಮ್ಮ ಸರ್ಕಾರದ ದೌರ್ಬಲ್ಯದಿಂದ ಅಧಿಕಾರದಲ್ಲಿರುವ ಅವರು ಇಂತಹ ಹೇಯವಾದ ಕೆಲಸವನ್ನು ಮಾಡಬೇಕಾಗಿದೆ. ಇವೊತ್ತು ಅದಕ್ಕಾಗಿ ಅವರು ಪೇಚಿಗೆ ಸಿಕ್ಕಿಕೊಳ್ಳಬೇಕಾಗಿದೆ ಎನ್ನುವ ಮಾತನ್ನು ಬಹಳ ವಿಷಾದದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನಗೆ ಖಾತ್ರಿಯಾಗಿದೆ. ನನ್ನ ಟೆಲಿಫೋನ್ ಸಹಿತ ರಘು ರಾಮನ್ ಅವರು ಟ್ಯಾಪ್ ಮಾಡಿದ್ದಾರೆ ಅಂದರೆ ಸೂರ್ಯ ಪಶ್ಚಿಮಕ್ಕೆ ಮೂಡಿದಂತೆ ಎಂದು ಅನಿಸುತ್ತದೆ ನಿಮ್ಮ ಕೈವಾಡ ಇಲ್ಲದೆ, ಕರಾಳ ಕಾರಸ್ಥಾನ ಇಲ್ಲದೆ ನಿಜವಾಗಿಯೂ ಇಂತಹ ಹೇಯ ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ. ನಮ್ಮ ಕರ್ನಾಟಕದಲ್ಲಿ ಉತ್ತಮವಾದ ಪೋಲೀಸ್ ಅಧಿಕಾರಿಗಳು ಇದ್ದಾರೆ. ನಾವು ರಾಜಕಾರಣಿಗಳು ಅಡ್ಡ ಹಾದಿ ಹಿಡಿಸಿದರೆ ಮಾತ್ರ ಅಡ್ಡ ಹೋಗಿ ಅವರು ತಪ್ಪು ದಾರಿಗೆ ಹೋಗುತ್ತಾರೆ, ಅವರನ್ನು ಅಡ್ಡ ಹಾದಿ ಹಿಡಿಸುವುದು ನಾವು. ಇಂತಹ ತಪ್ಪು ದಾರಿ ಹಿಡಿಸುವಂತಹ ಕೆಲಸವನ್ನು ಮಾನ್ಯ ಬೊಮ್ಮಾಯಿಯವರು ಮಾಡಬಾರದು ಎಂದು ನನ್ನ ಕಳಕಳಿಯ ಪ್ರಾರ್ಥನೆ. ಮೊದಲಿನಿಂದ ಇಲ್ಲಿಯವರೆಗೆ ಅನೇಕ ಪತ್ರಿಕೆಗಳಲ್ಲಿ ಪ್ರಕಟಣೆಗಳು

ಬಂದಿವೆ. ಒಂದು ಮಾತನ್ನು ಮಾತ್ರ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ. ಯಾವುದೇ ಸಂದರ್ಭದಲ್ಲಿ ವರದಿಯನ್ನು ಗವರ್ನರ್‌ಗೆ ಒಪ್ಪಿಸಬೇಕಾದರೆ ಅಂಡರ್ ಆರ್ಟಿಕಲ್ 6 ರ ಕೆಳಗಡೆ ತಾವು ವರದಿಯನ್ನು ಒಪ್ಪಿಸಬೇಕಾದುದು ನ್ಯಾಯಬದ್ಧ. ನೀವು ನನ್ನ ತರಹ ಸಾಮಾನ್ಯ ರೀತಿಯ ರಾಜಕಾರಣಿ ಅಲ್ಲ. ತಾವು ಮೇಧಾವಿಗಳು. ಹೌದು. ವಕೀಲರೂ ಹೌದು. ವಿರೋಧ ಪಕ್ಷದ ನಾಯಕರೂ ಸಹ ಆಗಿದ್ದವರು. ಸುದೈವದಿಂದ ಮಾನ್ಯ ಮುಖ್ಯಮಂತ್ರಿಗಳ ಪದವಿಯನ್ನು ಈಗ ತೆಗೆದುಕೊಂಡಿದ್ದೀರಿ. ನೀವು ಸಕಲವನ್ನೂ ಬಲ್ಲವರು. ತಾವು ಗವರ್ನರ್‌ರವರಿಗೆ ವರದಿ ಕಳಿಸಬೇಕಾದರೆ ನೋಡುತ್ತೇನೆ, ಕಳಿಸುವುದಾದರೆ ಕಳಿಸುತ್ತೇನೆ, ಇಲ್ಲದಿದ್ದರೆ ಇಲ್ಲವೆಂದು ಹೇಳಿದರೆ ಏನು ಅರ್ಥ. ನಿಮ್ಮ ಮನಸ್ಸು ಯಾವ ರೀತಿ ಇದೆ. ಇದರಲ್ಲಿ ದೋಷ ಇದೆಯೆಂದು ನಿಮಗೆ ತಿಳಿಯುವುದಿಲ್ಲವೇ ? ನಾನು ಗವರ್ನರ್‌ಗೆ ವರದಿಯನ್ನು ಕಳಿಸುತ್ತೇನೆ, ಯಾಕೆ ಇಟ್ಟುಕೊಳ್ಳಬೇಕು ಎಂದು ಹೇಳಬೇಕು. ನೀವು ವರದಿಯನ್ನು ಕಳಿಸದೇ ಇರುವುದರಿಂದ ಇವೊತ್ತಿನ ದಿವಸ ಈ ಘಟನೆಯಲ್ಲಿ ಸ್ವಲ್ಪವಾದರೂ ಭಾಗಿಯಾಗಿದ್ದೀರಿ ಎನ್ನುವುದು. ಇದಕ್ಕಾಗಿ ಕೇವಲ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಟ್ಟಿದ್ದಾರೆಂದರೆ ಆಗುವುದಿಲ್ಲ. ತಮ್ಮದೂ ಒಂದು ಅಂಶ ಇದರಲ್ಲಿ ಇರುತ್ತದೆ. ಇವೊತ್ತು Cabinet has got joint responsibility, they cann't avoid their responsibility ರಾಮಕೃಷ್ಣ ಹೆಗಡೆಯವರು ತಪ್ಪಿತಸ್ಥರು ಇದ್ದರೆ ಆ ತಪ್ಪನ್ನು ತಾವು ಹೊರಬೇಕಾಗಿಲ್ಲ. ಕ್ಯಾಬಿನೆಟ್ ರಚನೆ ಆಗಿದ್ದರೆ ಆ ಮಾತು ಬೇರೆ. ಅದು ರಚನೆ ಆಗುವವರೆಗೆ ನೀವು ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಅದು ಧರ್ಮವೋ ಅಥವಾ ಧರ್ಮವಲ್ಲವೋ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಹೆಗಡೆಯವರು ಕೊಟ್ಟಂತಹ ಹೇಳಿಕೆಯನ್ನು ನೋಡಿದರೆ, ಕಾಗದ ಪತ್ರಗಳನ್ನು ಬಿಟ್ಟುಬಿಡೋಣ, ಪತ್ರಿಕೆಯಲ್ಲಿ ಅವರು ಏನು ಹೇಳಿದ್ದಾರೆ ಎಂದರೆ, ನಾನು ತಪ್ಪಿತಸ್ಥ ಎನ್ನುವ ಮಾತು ಅವರಿಂದ ಎಲ್ಲೂ ಬಂದಿಲ್ಲ, ತಪ್ಪು ನಾನೊಬ್ಬನೇ ಮಾಡಿಲ್ಲ, ರಾಜೀವ್ ಗಾಂಧೀಯವರೂ ಮಾಡಿದ್ದಾರೆ,ಅವರು ರಾಜೀನಾಮೆ ಕೊಡಲಿ ಎಂದು. ಅವರ ರಾಜೀನಾಮೆ ಕೇಳಿದ್ದೆವು, ಅವರು ಎನ್‌ಕ್ವೈರಿ ಮಾಡಬೇಕೆಂದು ಹೇಳಿದ್ದೆವು ಅವರು ಮಾಡಲಿಲ್ಲ, ಆದುದರಿಂದ ತಾವು ರಾಜೀನಾಮೆ ಕೊಡಲಿಕ್ಕೆ ಕಾರಣವೆಂದು ಹೇಳಿದರು. ಹಾಗಾದರೆ ನೀವು ಎನ್‌ಕ್ವೈರಿ ಮಾಡಿ. ನೀವು ಎನ್‌ಕ್ವೈರಿ ಯಾವುದೂ ಮಾಡಿಲ್ಲ. ಇವೊತ್ತು ಪಬ್ಲಿಕ್ ಎನ್‌ಕ್ವೈರಿಗೆ ಆರ್ಡರ್ ಮಾಡಿ. ಗಟ್ಟಿರೆ ಪ್ರಕಾರ ಒಮ್ಮೆಲೆ ಜೈಲಿಗೆ ಹೋಗಬೇಡಿರಿ. ಮೊದಲು ಎನ್‌ಕ್ವೈರಿ ಮಾಡಿ ತಪ್ಪಿತಸ್ಥ ಎಂದು ಕಂಡು ಬಂದರೆ ಹೋಗಿ, ಇಲ್ಲದಿದ್ದರೆ ತಲೆಯ ಮೇಲೆ ಮೆಣಸಿನಕಾಯಿಯನ್ನು ಹೇರಿಕೊಳ್ಳಿ ಎಂದು ನಮಗೆ ಹೇಳಿ.

ಆದರೆ ನಿಜವಾಗಿ ವಿಚಾರ ಮಾಡಿದರೆ ಶ್ರೀ ರಾಮಕೃಷ್ಣ ಹೆಗಡೆಯವರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ರಾಮಕೃಷ್ಣ ಹೆಗಡೆಯವರನ್ನು ಸ್ವಾಮಿ ಸ್ವಾಮಿ ಎಂದು ಹೇಳುವಂತಹ ಕೆಲವು ಜನರು ಅವರ ಪಕ್ಷದಲ್ಲಿದ್ದಾರೆ. ಅಂತಹವರ ಮಾತಿಗೆ ನಾನು ಹೆಚ್ಚು ಮಹತ್ವ ಕೊಡುವುದಿಲ್ಲ. ಆದರೆ ರಾಮಕೃಷ್ಣ ಹೆಗಡೆಯವರು ಈ ಸದನದ ಸದಸ್ಯರಾಗಿದ್ದಾರೆ ಆದ್ದರಿಂದ ಅವರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಈ ರೀತಿ ನಡೆದಿರುವುದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಇತರೇ ಕಾಂಗ್ರೆಸ್ ಪಕ್ಷದ ಆಡಳಿತವಿರುವ ರಾಜ್ಯಗಳಲ್ಲಿಯೂ ಸಹ ಇದೇ ರೀತಿ ನಡೆದಿದೆ ಎಂದು ಅವರೇ ಸ್ವತಃ ಹೇಳಿದ್ದಾರೆ. ಆದರೆ ತಪ್ಪು ಮಾಡಿದರೆ ಇವರು ಸಹ ತಪ್ಪು ಮಾಡಬೇಕೇ ? ಒಂದು ವೇಳೆ ಅವರು ಈ ರೀತಿ ಮಾಡುತ್ತಿದ್ದರೆ, ಅದನ್ನು ಬಯಲಿಗೆಳೆದು ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನ ಮಾಡುತ್ತಿದ್ದರೆ, ಅದನ್ನು ಬಯಲಿಗೆಳೆದು ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನ ಮಾಡಬಹುದಾಗಿತ್ತು, ಅದನ್ನು ಬಿಟ್ಟು ನಾನೊಬ್ಬನೇ ಇಂತಹ ತಪ್ಪು ಮಾಡಿಲ್ಲ, ಬೇರೆಯವರು ಸಹ ಮಾಡಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ವಕೀಲರಾಗಿ ಕಳವು ಮಾಡಿದಂಥ ಎಷ್ಟೋ ಮಂದಿಯನ್ನು ಹಿಡಿದು ಶಿಕ್ಷೆ ವಿಧಿಸಿದ್ದಾರೆ;

ಶ್ರೀ ಎಸ್. ಆರ್. ಬೊಮ್ಮಾಯಿ.—ಶಿಕ್ಷೆ ವಿಧಿಸುವುದು ನಾನಲ್ಲ; ನ್ಯಾಯಾಧೀಶರು

ಶ್ರೀ ಕೆ. ಎಚ್. ಪಾಟೀಲ್.—ಇವೊತ್ತಿನದಿವಸ ಮರ್ಡರ್‌ಗಳನ್ನು ಮಾಡಿದವರ ಪೈಕಿ ಎಷ್ಟೋ ಮಂದಿ ಸಿಕ್ಕಿಹಾಕಿಕೊಳ್ಳದೆ ಬಿಡುಗಡೆ ಆಗಿದ್ದಾರೆ. ಆದರೆ ನಿರಪರಾಧಿಗಳು ಸಿಕ್ಕಿ ಹಾಕಿಕೊಂಡಿದ್ದಾರೆ. ಈಗ ಮುಖ್ಯಮಂತ್ರಿಗಳು ಒಂದು ಪವಿತ್ರವಾದಂಥ ಸ್ಥಾನದಲ್ಲಿ ಕುಳಿತಿದ್ದಾರೆ. ಆದ್ದರಿಂದ ತಾವು ಈ ಬಗ್ಗೆ ನಿಷ್ಪಕ್ಷಪಾತದಿಂದ ವಿಚಾರ ಮಾಡಬೇಕು. ನನ್ನ ಸ್ನೇಹಿತರಾದಂಥ ಶ್ರೀ ರಾಮಕೃಷ್ಣ ಹೆಗಡೆ

ಅವರಿಗೆ ಈ ಪ್ರಕರಣದಲ್ಲಿ ಶಿಕ್ಷೆಯಾಗಬೇಕು ಎಂದು ನಾನು ಇಚ್ಛೆಪಡುವುದಿಲ್ಲ. ಮುಖ್ಯವಾಗಿ ಅವರು ಇದರಲ್ಲಿ ತಪ್ಪಿತಸ್ಥರಲ್ಲ ಎಂಬುದು ಜನತೆಗೆ ಮನದಟ್ಟಾಗಬೇಕು. ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ಆಗುವುದಿಲ್ಲ ತಾವು ಇದರಲ್ಲಿ ತಪ್ಪಿತಸ್ಥರಲ್ಲವೆಂಬುದನ್ನು ಜನತೆಗೆ ತೋರಿಸಿ ಕೊಡಬೇಕು. ಈ ಒಂದು ದೃಷ್ಟಿಯಿಂದ ತಾವು ಇದರ ಬಗ್ಗೆ ತನಿಖೆಗೆ ಆಜ್ಞೆ ಮಾಡಬೇಕು ಮಾನ್ಯ ರಾಮಕೃಷ್ಣ ಹೆಗಡೆಯವರು ಸಹ ಇದರ ಬಗ್ಗೆ ತನಿಖೆ ಆಗಲಿ ಎಂದು ಹೇಳಿದ್ದಾರೆ. ರಾಜೀವ್‌ಗಾಂಧಿ ಅವರು ಇದರ ಬಗ್ಗೆ ತನಿಖೆಗೆ ಆರ್ಡರ್ ಮಾಡದಿದ್ದ ಕಾರಣದಿಂದ ತಾವು ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟೆ ಎಂಬುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ, ಆದ್ದರಿಂದ ನೀವು ಏತಕ್ಕೆ ತನಿಖೆಗೆ ಆರ್ಡರ್ ಹೊರಡಿಸಬಾರದು ? ದಯಮಾಡಿ ತಾವು ತನಿಖೆಗೆ ಒಪ್ಪಿಕೊಳ್ಳಿ. ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ನಡೆಯಲಿ. ತನಿಖೆಯ ಮೂಲಕ ಇದರಲ್ಲಿ ರಾಮಕೃಷ್ಣ ಹೆಗಡೆಯವರ ಹಂಗು ಇತ್ತೇ ಅಥವಾ ಬೇರೆ ಯಾರ ಹಂಗು ಇದರೊಳಗೆ ಇತ್ತು ಎಂಬುದು ಹೊರಬರಲಿ. ರಘು ರಾಮನ್ ಅವರು ಶ್ರೀ ಸತೀಶ್‌ಚಂದ್ರನ್ ಅವರ ಪ್ರೇರೇಪಣೆಯಿಂದ ಈ ಕೆಲಸ ಮಾಡಿದರೋ ಅಥವಾ ಬೇರೆ ಯಾರ ಪ್ರೇರೇಪಣೆಯಿಂದ ಈ ಕೆಲಸ ಮಾಡಿದರೆಂಬುದು ತನಿಖೆಯಿಂದ ಹೊರಬರಲಿ. ರಘು ರಾಮನ್ ಅವರ ಬಗ್ಗೆ ನಾನು ಸಂದೇಹ ಪಡುವುದಿಲ್ಲ. ಆದರೆ ತನಿಖೆಯಿಂದ ಮಾತ್ರ ನಮಗೆ ನಿಜ ಸಂಗತಿ ಏನೆಂಬುದು ತಿಳಿದುಬರುತ್ತದೆ. ಈ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕೊಟ್ಟು ನೆನ್ನೆ ದಿವಸ ಪೂರ್ವಭಾವಿಯಾಗಿ ಪ್ರಸ್ತಾಪ ಮಾಡುತ್ತಿದ್ದ ಸಮಯದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚೆ ನಡೆಯಲಿ ಎಂದು ಹೇಳಿದರು ಅಂದರೆ ಇದರಲ್ಲಿ ಏನೋ ತಪ್ಪಿದೆ ಎಂಬುದು ನಿಮ್ಮ ಮನಸ್ಸಿಗೆ ಬಂತು. ಆದ್ದರಿಂದ ಚರ್ಚೆ ಆಗಲಿ ಎಂಬ ಮಾತು ನಿಮ್ಮ ಬಾಯಿಂದ ಬಂತು. ಇದೇ ಕಾರಣದಿಂದ ಇದರ ಚರ್ಚೆಗೆ ತಾವು ಒಪ್ಪಿಕೊಂಡಿದ್ದು ಬಹಳ ಸಂತೋಷ. ಇಂಥಾದ್ದು ನಡೆಯ ಬಾರದಾಗಿತ್ತು. ಒಂದು ಮಾತನ್ನು ತಾವೆಲ್ಲರೂ ಒಪ್ಪುತ್ತೀರಿ. ಏನೆಂದರೆ ಒಂದೇ ಪಕ್ಷದ ಮೂಲಕ ಈ ಸಭೆಯನ್ನು ನಡೆಸುವುದಕ್ಕಾಗುವುದಿಲ್ಲ. ಈ ಸದನದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಎಂದು ಇವೆ. ಆಡಳಿತ ಪಕ್ಷದವರು ಮಾಡಿರತಕ್ಕಂಥ ತಪ್ಪುಗಳನ್ನು ನೋಡಿಕೊಂಡು ವಿರೋಧಪಕ್ಷದಲ್ಲಿರುವ ನಾವುಗಳು ಅದನ್ನು ಬಯಲಿಗೆಳೆಯುತ್ತೇವೆ. ನಂತರ ನೀವು ನಿಮ್ಮ ತಪ್ಪುಗಳನ್ನು ತಿದ್ದಿಕೊಂಡು ಹಾಗೂ ಸರಿಪಡಿಸಿಕೊಂಡು ಆಡಳಿತ ನಡೆಸುವುದು ನಿಮ್ಮ ಕರ್ತವ್ಯ. ನಾವು ಹೇಳುವವರಾಗಿದ್ದರೆ ನೀವು ಕೇಳುವವರಾಗಿದ್ದೀರಿ. ಜನತೆಗೆ ಯಾವುದೇ ರೀತಿಯಿಂದ ಲೋಪವಾಗದಂತೆ ಸರ್ಕಾರದ ಕಾರ್ಯಕ್ರಮಗಳು ನಡೆಯಬೇಕಾಗುತ್ತದೆ. ಏನಾದರೂ ಲೋಪವಾದರೆ ಜನರಿಗೆ ದ್ರೋಹ ಮಾಡಿದಂತೆ ಆಗುತ್ತದೆ. ಆಗ ನಾವು ನೀವು ಸೇರಿಕೊಂಡು ಜನರಿಗೆ ದ್ರೋಹ ಮಾಡಿದಂತೆ ಆಗುತ್ತದೆ. ಈ ಅಂಶವನ್ನು ತಾವು ಮರೆಯಬಾರದು. ಆದ್ದರಿಂದ ಈ ನಿಲುವಳಿ ಸೂಚನೆಯ ಮೇಲಿನ ಚರ್ಚೆಗೆ ತಾವು ಒಪ್ಪಿಕೊಳ್ಳುವುದಕ್ಕೆ ಮೊದಲೇ ಸರ್ಕಾರದವರು ಇದರ ಬಗ್ಗೆ ತನಿಖೆಗೆ ಒಪ್ಪಿಕೊಂಡರೆ ಅವರ ಕೀರ್ತಿ ಇನ್ನೂ ಹೆಚ್ಚುತ್ತದೆ. ಈ ಬಗ್ಗೆ ಮಾನ್ಯ ರಾಮಕೃಷ್ಣಹೆಗಡೆಯವರು ಏನು ಹೇಳಿದ್ದಾರೆಂಬುದನ್ನು ಆ ಕಡೆಯವರೂ ಕೇಳಿದ್ದಾರೆ, ಈ ಕಡೆಯವರೂ ಸಹ ಕೇಳಿದ್ದಾರೆ. ಆದ್ದರಿಂದ ತನಿಖೆಗೆ ತಾವು ಒಪ್ಪಿಕೊಳ್ಳಬೇಕು. ಇದರಲ್ಲಿ ಯಾರೋ ಒಬ್ಬ ಕಾರಕೂನನ ತಪ್ಪಿದೆಯೋ ಅಥವಾ ಇದರ ಹಿನ್ನೆಲೆಯಲ್ಲಿ ಬೇರೆ ಯಾರಾದರೂ ಇದ್ದಾರೆಯೋ ಎಂಬುದನ್ನು ಕಂಡುಹಿಡಿಯುವ ಸಲುವಾಗಿ ತನಿಖೆಗೆ ತಾವು ಒಪ್ಪಿಕೊಳ್ಳಬೇಕ . ತನಿಖೆಯಿಂದ ಮಾತ್ರ ನಿಜಸಂಗತಿ ಹೊರಬರುತ್ತದೆ.

೨-೩೦ ಪಿ. ಎಂ.

ಮಾನ್ಯ ಸಭಾಧ್ಯಕ್ಷರೆ, ಇವತ್ತು ಈ ಟೆಲಿಫೋನ್ ಟ್ಯಾಪಿಂಗ್ ವಿಷಯ ಎಷ್ಟು ಪ್ರಖರತೆಯನ್ನು ಹೊಂದಿತ್ತು ಅಂದರೆ ಇದು ಕೇವಲ ಕರ್ನಾಟಕದ ಸಮಸ್ಯೆಯಾಗಿ ಉಳಿಯ ಲಿಲ್ಲ, ಇಡೀ ರಾಷ್ಟ್ರಾದ್ಯಂತ ಎಲ್ಲರೂ ಕರ್ನಾಟಕದಲ್ಲಿ ಫೋನ್ ಟ್ಯಾಪಿಂಗ್ ನಡೆದಿದೆಯೋ ಎಂದು ನಾವು ಹೋದ ಕಡೆಯಲ್ಲೆಲ್ಲಾ ಕೇಳುತ್ತಾರೆ ? ನಾವು ಮೊನ್ನೆ ಕಮಿಟಿಯ ಮೂಲಕ ಪ್ರವಾಸ ಹೋಗಿದ್ದೆವು, ನಾನು ಪಂಜಾಬಿಗೆ ಹೋಗಿದ್ದೆ, ಒರಿಸ್ಸಾಗೆ ಹೋಗಿದ್ದೆ. ಬಿಹಾರಕ್ಕೆ ಹೋಗಿದ್ದೆ. ಎಲ್ಲಾ ಕಡೆಗೂ ಇದೇ ಮಾತು ಬಂತು. ಇದು ತುಂಬ ಬಯಲಾಗಿದೆ, ಪ್ರಚಾರ ಸಾಕಷ್ಟು ಆಗಿಬಿಟ್ಟಿದೆ. ಈ ವಿಷಯದ ಪ್ರಚಾರಕ್ಕೆ ಒಳಗಾಗದೇ ಇರತಕ್ಕಂಥ ಪತ್ರಿಕೆಗಳೇ ಇಲ್ಲ. ಪತ್ರಿಕೆಗಳಲ್ಲಿ ಹೆಚ್ಚು ಪುರಸ್ಕಾರ ಇದಕ್ಕೆ ಸಿಕ್ಕಿತು. ಮಾನ್ಯ ರಾಮಕೃಷ್ಣ ಹೆಗಡೆಯವರು ಬೇರೆ ಯಾವುದೋ ಕಾರಣದಿಂದ ರಾಜೀನಾಮೆ ಕೊಟ್ಟಿದ್ದರೆ ತೀರಿ ಹೋಗುತ್ತಿತ್ತು.

ಆದರೆ ಅವರು ಏನು ಹೇಳಿದರು ಅಂದರೆ. ಇದರ ನೈತಿಕ ಹೊಣೆಯನ್ನು ನಾನು ಹೊತ್ತು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು. ನೈತಿಕ ಹೊಣೆಯನ್ನು ಅವರು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾಗಿ ಹೊತ್ತಿದ್ದರೆ ಆ ಮುಖ್ಯ ಮಂತ್ರಿಗಳನ್ನು ಅವಲಂಬಿಸಿರತಕ್ಕ ಮಂತ್ರಿಗಳಿದ್ದಾರಲ್ಲ ಅವರು ನೈತಿಕ ಹೊಣೆಯಿಂದ ಕಾನ್‌ಸ್ಟಿಟ್ಯೂಷನ್ ಪ್ರಕಾರ ದೂರು ಇಡಲಿಕ್ಕೆ ಆಗುತ್ತದೆಯೋ ತಾವು ಹೇಳಿ ಅಧ್ಯಕ್ಷರೆ. ಒಂದು ವೇಳೆ ನೈತಿಕ ಹೊಣೆಯನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಹೊತ್ತಿದ್ದರೆ, ಅವರಿಗೆ ಅದನ್ನು ಹೊರಿಸಲಿಕ್ಕೆ ನೀವು ಬಿಟ್ಟಿದ್ದರೆ ನೀವೆಲ್ಲರೂ ಅಪರಾಧಿಗಳು, ಆ ನೈತಿಕ ಅಪರಾಧವನ್ನು ನೀವೆಲ್ಲರೂ ಹೊರಬೇಕು, ಪತ್ರಿಕೆಗಳಿಗೆ ಹೇಳಬೇಕು. ಜನರ ಮುಂದೆ ಹೋಗೋಣ, ಇನ್ನೊಮ್ಮೆ ಚುನಾವಣೆ ಮಾಡೋಣ, ಚುನಾವಣೆಯಲ್ಲಿ ಇದೆಲ್ಲಾ ಹೇಳೋಣ, ಟ್ಯಾಪ್ ಮಾಡಿದ್ದು ನಾವಲ್ಲ. ಅಧಿಕಾರಿಗಳು ಮಾಡಿದ್ದಾರೆ, ಅಧಿಕಾರಿಗಳು ನಮ್ಮ ಮಾತು ಕೇಳಲಿಲ್ಲ. ನಮ್ಮ ಕೈ ಮೀರುವಂಥ ಅಧಿಕಾರಿಗಳು ನಮ್ಮ ರಾಜ್ಯದಲ್ಲಿದ್ದಾರೆ, ಅದಕ್ಕಾಗಿ ನಾವು ಇವತ್ತಿನ ದಿವಸ ನಿಮ್ಮ ಮುಂದೆ ಬಂದಿದ್ದೇವೆ ಎಂದು ಹೇಳಿ ಇನ್ನೊಮ್ಮೆ ಜನರಿಂದ ಆದೇಶವನ್ನು ಪಡೆದಿದ್ದರೆ ನಿಜವಾಗಿ ಸರಿಹೋಗುತ್ತಿತ್ತು. ಅಂತಹ ರೀತಿಯಲ್ಲಿ ನಿಮ್ಮ ವ್ಯವಸ್ಥೆ ನಡೆಯಬೇಕು. ಸಂಸತ್ತಿನಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂತು. ಸಂಸತ್ತಿನಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಾಗಲೂ ಸಹಿತ ಆ ಕರ್ನಾಟಕ ಸರ್ಕಾರದಿಂದಲೇ ಫೋನ್ ಕದ್ದು ಕೇಳಲು ಆಜ್ಞೆ '' ಎನ್ನುವಂಥ ಮಾತನ್ನು ನಿಮ್ಮ ಪಕ್ಷದ ಸದಸ್ಯರು ಹೇಳಿದರು ನಮ್ಮ ಪಕ್ಷದವರು ಏನೂ ಹೇಳಲಿಲ್ಲ, ನಮ್ಮ ಪಕ್ಷದ ಸದಸ್ಯರಿಗೆ ತಿಳಿಯಲಿಲ್ಲ. ಶ್ರೀಮಾನ್ ನಂಜೇಗೌಡರು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಏನೆಂದು ಕೊಟ್ಟರು ಅಂದರೆ ಈಗಿರುವಂಥ ಮುಖ್ಯ ಮಂತ್ರಿಗಳು ಮಾಡಿದ್ದು ತಪ್ಪು ಎಂದು. ಪಾಪ ಈ ಮುಖ್ಯ ಮಂತ್ರಿಗಳು, ನನ್ನಿಂದ ಏನೂ ಆಗಿಲ್ಲ ಎಂದು ಹೇಳಿದರು. ನಂತರ ನನಗೇನೂ ಸಂಬಂಧವಿಲ್ಲ ಎಂದು ದಾತಾರ್‌ರವರು ಹೇಳಿದರು. ಈ ವಿಷಯ ಹೊರಬಿತ್ತು. ಒಳಗೆ ಇದ್ದದ್ದು ಏನಪ್ಪ ಅಂದರೆ ಸತೀಶ್‌ಚಂದ್ರ ಅವರ ಹೆಸರು ಬಂತು, ದಾತಾರ್ ಅವರ ಮೇಲೆ ನಾನೂ ಅಂದಿದ್ದೆ, ದಾತಾರ್ ಅವರು ಮೊನ್ನೆ ಮೊನ್ನೆ ಬಂದಿದ್ದಾರೆ ಈಗ ಇಂತಹ ಸ್ಟೇಟ್‌ಮೆಂಟ್ ಏಕೆ ಮಾಡಿದರು ಎಂದು. ಇನ್ನಷ್ಟು ದಿವಸ ಅವರು ಮುಂದುವರಿಯಲಿ. ಅವರನ್ನು ಮುಂದುವರಿಸಲಿಕ್ಕೆ ಇಚ್ಛೆ ಇದ್ದಿಲ್ಲ ಎಂದು ಕೆಲವರು ಮಾತನಾಡುತ್ತಿದ್ದರು, ಅದರ ಸಲುವಾಗಿ ಏನಾದರೂ ಮಾಡಿದ್ದಾರೆ ಅಂತ ನಾನು ತಿಳಿದುಕೊಂಡಿದ್ದೆ. ಆದರೆ ಹಿಂದೆ ಸ್ಟೇಟ್‌ಮೆಂಟ್ ಬಂತು, ಇದು ನನ್ನದಲ್ಲ ಎಂದು. ಅವರು ಊರಿಗೆ ಹೋದರು. ಊರಿಗೆ ಹೋಗಿ ತಿರುಗಿ ಬರುವುದರಲ್ಲಿ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಟ್ಟರು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಅಧಿಕಾರಿಗಳು ನಮ್ಮ ಕೈಯಲ್ಲಿದ್ದಾರೆ, ಇವತ್ತು ಮಾನ್ಯ ಬೊಮ್ಮಾಯಿಯವರೂ ಸಹಿತ ನಾವೆಲ್ಲರೂ ಅಭಿಮಾನ ಪಡಬೇಕು. ನಾನ್ ಅಫಿಷಿಯಲ್ಸ್ ಎಲ್ಲರೂ ಅಭಿಮಾನ ಪಡಬೇಕು. ಅವರು ನಮ್ಮ ಪ್ರತಿನಿಧಿಗಳು. ಅವರ ಕೈಯನ್ನು ಬಲಪಡಿಸುವುದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ಇವತ್ತು ನಾನು ಹೇಳುತ್ತಾ ಇದ್ದೇನೆ. ಅಧಿಕಾರಿಗಳಲ್ಲಿ ನಮ್ಮ ಮಾತನ್ನು ಕೇಳುವಂಥವರು ಹಾಗೂ ನಮ್ಮ ಮಾತನ್ನು ನಡೆಸತಕ್ಕವರು ಇದ್ದಾರೆ. ಹಾಗೇನಾದರೂ ಅಧಿಕಾರಸ್ಥರು ಮಾಡಿದರೆ ಅದರ ಹೊಣೆಯನ್ನು ಯಾರು ಹೊರಬೇಕು ? ತಾವು ಇತಿಹಾಸವನ್ನು ಬಲ್ಲವರು. ನಮ್ಮ ರಾಷ್ಟ್ರದಲ್ಲಿ ಮೊಟ್ಟ ಮೊದಲು ಸ್ವಾತಂತ್ರ್ಯ ಸಿಕ್ಕಾಗ ಸರ್ದಾರ್‌ವಲ್ಲಭಾಯ್ ಪಟೇಲರು ಮತ್ತು ನೆಹರೂರವರು ಈ ಐಸಿಎಸ್ ಆಫೀಸರ್ಸ್ ಏನಿದ್ದಾರೆ ಅವರೆಲ್ಲರ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಕೇಳಿದರು. ಆಗ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನ ಹೊರೆ ಹೊರೆ ತಂದಿಟ್ಟರು, ಅವನ್ನು ಇಲ್ಲಿ ಇಡಿರಿ ನೀವು ಹೋಗಿರಿ ಎಂದು ಹೇಳಿದರು. ಅವರು ನಾವು ಹೋಗುವುದಿಲ್ಲ ವಿ ವಿಲ್ ಟೇಕ್ ದೆಂ ಆರ್ ಬರ್ನ್ ಎಂದು ಹೇಳಿದರು. ವಲ್ಲಭಾಯ್ ಪಟೇಲರೂ ಇದು ಆಗುವುದಿಲ್ಲ ಎಂದು ಹೇಳಿದರು. ಆಗ ಆಫೀಸರ್ಸ್ ಬ್ರಿಟಿಷ್ ವೈಸ್ರಾಯ್ ಹತ್ತಿರ ಹೋಗಿ ನಮಗೆ ಹೀಗೆ ಕುತ್ತು ಬಂದಿದೆ, ನಾವೆಲ್ಲರೂ ರಾಜೀನಾಮೆ ಕೊಡುತ್ತೇವೆ ಎಂದು ಹೇಳಿದರು, ಏಕೆ ಎಂದು ಕೇಳಿದಾಗ. ನಾವು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆದಿರುತ್ತೇವೆ, ಇವರುಗಳದ್ದೂ ಬರೆದಿರುತ್ತೇವೆ, ಆದುದರಿಂದ ಇವರ ಕೈಯೊಳಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಆಗ ವಲ್ಲಭಾಯ್ ಪಟೇಲರನ್ನು ಮಹಾತ್ಮ ಗಾಂಧೀಜಿಯವರು ಕರೆಸಿ ಸಂವಿಧಾನದ ಕಕ್ಷೆಯೊಳಗೆ ಇದನ್ನು ಬಗೆಹರಿಸಬೇಕಾಗುತ್ತದೆ. ಈ ರೀತಿ ಹಠ ಮಾಡುವುದು ಸರಿಯಲ್ಲ ಎಂದು ಹೇಳಿದಾಗ ಆ ಫೈಲ್ ಅಷ್ಟೂ ಹೊರಗೆ ಬಂತು. ಇದು ಇತಿಹಾಸ ನಿಮಗೆ ಇದರ ಬಗ್ಗೆ ಅರಿವು ಇಲ್ಲದಿಲ್ಲ. ಗೊತ್ತಿದದ್ದೇ. ಎಂ. ಎನ್. ರಾಯರವರ ಶಿಷ್ಯರು ಎಂದು ಹೇಳಿಕೊಳ್ಳುವಂಥ ಬೊಮ್ಮಾಯಿಯವರಿಗೆ ಒಳಗೊಂದು,

ಹೊರಗೊಂದು ಎಂದೂ ಇರಬಾರದು. ನಾನು ಸ್ಪಷ್ಟವಾಗಿ ನಿಮಗೆ ಹೇಳುತ್ತಾ ಇದ್ದೇನೆ. ನೀವು ಸಿಟ್ಟಾದರೂ ಅಡ್ಡಿಯಿಲ್ಲ, ಯಾವುದೇ ರೀತಿಯಿಂದ ದ್ವೇಷ ಮಾಡಿದರೂ ಅಡ್ಡಿಯಿಲ್ಲ, ನಾನು ನಿಮಗೆ ನಿಚ್ಚಳವಾದಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ಒಳಗೊಂದು ಹೊರಗೊಂದು ಮಾಡಬೇಡಿ. ಇವತ್ತು ನಿಮ್ಮ ಹೃದಯವನ್ನು ನೀವು ಪರೀಕ್ಷೆಮಾಡಿ ನೋಡಿಕೊಳ್ಳಿ. ನಿಮ್ಮ ಹೃದಯದೊಳಗೆ ನಿಜವಾಗಿಯೂ ಇದು ತಪ್ಪು ಆಗಿದ್ದರೆ ಆ ತಪ್ಪಿಗೆ ಶಾಸನ ಮಾಡಬೇಕು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಒಮ್ಮೊಮ್ಮೆ ರಾಜಕೀಯದೊಳಗೆ ತಪ್ಪುಗಳಾಗುತ್ತವೆ. ಆ ತಪ್ಪಿಗೆ ಶಾಸನ ಯಾವುದು, ಕ್ಷಮೆ ಕೇಳುವುದು, ರಾಜೀನಾಮೆ ಕೊಡುವುದಿಲ್ಲ ಮುಖ್ಯ ಮಂತ್ರಿ ಸ್ಥಾನ ಬಿಟ್ಟು ಓಡಿ ಹೋಗುವುದಲ್ಲ, ಅದು ಶಿಕ್ಷೆಯಲ್ಲ. ಯೋಗ್ಯವಾದಂಥ ಶಿಕ್ಷೆ ಅಂದರೆ ನನ್ನಿಂದ ತಪ್ಪಾಗಿದೆ ನಾನು ನಿಮ್ಮೆಲ್ಲರ ಕ್ಷಮೆ ಕೇಳುತ್ತೇನೆ ಎಂದು ಹೇಳುವುದು ಮುಖ್ಯವಾದಂಥ ಶಿಕ್ಷೆ ಎಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಯಾವುದಾದರೂ ಒಂದು ತಪ್ಪು ಮನುಷ್ಯನ ಮನಸ್ಸಿಗೆ ಬಂದನಂತರ ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತದ ರೂಪದಲ್ಲಿ ಅವನಿಗೆ ತಕ್ಕ ಶಿಕ್ಷೆ ಆಯಿತು ಎಂಬುದಾಗಿ ತಿಳಿಯಬೇಕೆಂದು ಹೇಳಿದ್ದಾರೆ. ಮೊನ್ನೆ ರಾಮಾಯಣ ನೋಡಿದ್ದೀರಲ್ಲ, ಅದರಲ್ಲಿ ಸೀತಾದೇವಿ "ಮನುಷ್ಯನಿಗೆ ಪ್ರಾಯಶ್ಚಿತ್ತವೇ ಪರಮ ಶಿಕ್ಷೆ" ಎಂದು ಹೇಳಿದ್ದಾರೆ.

ಆದ್ದರಿಂದ ಆ ರೀತಿಯ ಪ್ರಾಯಶ್ಚಿತ್ತವನ್ನು ಮಂತ್ರಿಮಂಡಲದಲ್ಲಿ ಎಷ್ಟು ಮಂದಿ ಇದ್ದರು ಅವರೆಲ್ಲರೂ ಸಹ ನಮಗೆ ಪ್ರಾಯಶ್ಚಿತವಾಗಿದೆ, ನಮಗೆ ಪ್ರಾಯಶ್ಚಿತವಾಗಿದೆಯೆಂದು ದೇವೇಗೌಡರು ಮೊದಲುಗೊಂಡು ಎಲ್ಲರೂ ಹೇಳಬೇಕು. ಏಕೆಂದರೆ ಟೆಲಿಫೋನ್ ಕದ್ದು ಕೇಳುವಾಗ ದೇವೇಗೌಡರು ಒಳಗೆ ಇದ್ದರು. ಹೀಗಿರುವಾಗ ನೀವು ಯಾವುದೇ ರೀತಿಯಿಂದ ಹಠಮಾರಿತನಕ್ಕೆ ಹೋಗಬೇಡಿ. ಈ ಬಗ್ಗೆ ನಿರ್ದಿಷ್ಟ ನಿಯಮಗಳನ್ನು ಜಾರಿಗೆ ತಂದು, ಜನರಿಗೆ ಮಾರ್ಗದರ್ಶನ ಮಾಡಬೇಕೆಂದು ಕೇಳಿಕೊಂಡು, ತಾವು ಇದರ ಬಗ್ಗೆ ಚರ್ಚೆಮಾಡಲು ಪರವಾನಗಿ ಕೊಟ್ಟಮೇಲೆ ಇನ್ನೂ ಹೆಚ್ಚಿನ ವಿವರಗಳನ್ನು ಹೇಳುತ್ತೇನೆಂದು ತಿಳಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಟೆಲಿಫೋನ್ ಹಗರಣ, ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳಿದಂತಹ ಪ್ರಸಂಗ ನಮ್ಮ ರಾಜ್ಯಕ್ಕೆ ಬಂದಿರುವುದು ನಿಜವಾಗಿಯೂ ನಾವೆಲ್ಲರೂ ತಲೆತಗಿಸುವ ವಿಚಾರವಾಗಿದೆ. ಇದು ಬರೀ ರಾಮಕೃಷ್ಣ ಹೆಗಡೆಯವರ ಸಮಸ್ಯೆಯಲ್ಲ, ಆ ಕಡೆ ಇರತಕ್ಕ ಸದಸ್ಯರುಗಳ ಸಮಸ್ಯೆ ಅಲ್ಲ. ಇದು ಎಲ್ಲರ ಸಮಸ್ಯೆಯಾಗಿದೆ. ನನಗೆ ತಿಳಿದಮಟ್ಟಿಗೆ ಚರಿತ್ರೆಯಲ್ಲಿ ಮೊದಲಬಾರಿಗೆ ಹೀಗೆ ಒಬ್ಬ ಮುಖ್ಯಮಂತ್ರಿಗಳು ಟೆಲಿಫೋನ್ ಟ್ಯಾಪಿಂಗ್‌ನಲ್ಲಿ ಭಾಗಿಯಾಗಿ ಮಾರಲ್ ರೆಸ್ಪಾನ್ಸಿಬಿಲಿಟಿ ಮೇಲೆ, ನೈತಿಕ ಹೊಣೆಯನ್ನು ಹೊತ್ತು, ಈ ರೀತಿ ರಾಜಿನಾಮೆ ಕೊಟ್ಟಿರುವುದು ನಮ್ಮ ದೇಶದ ಚರಿತ್ರೆಯಲ್ಲಿಯೇ ಇದು ಮೊದಲು, ನೈತಿಕ ಹೊಣೆಯನ್ನು ಹೊತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅರಿಯಾಲೂರು ರೈಲ್ವೆ ಆಕ್ಸಿಡೆಂಟ್ ಆದಾಗ ರಾಜೀನಾಮೆ ಕೊಟ್ಟಿದ್ದರು. ಅದೇ ರೀತಿ ಅನೇಕ ಜನ ಮಹನೀಯರು, ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಮೊದಲಬಾರಿಗೆ ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳಿ, ಅದಕ್ಕೆ ನೈತಿಕ ಹೊಣೆ ಹೊತ್ತು ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಟ್ಟಿದ್ದರಿಂದ ಇದಕ್ಕೆ ಇಷ್ಟೊಂದು ಮಹತ್ವ ಬಂದಿದೆ ಅವರು ನೈತಿಕ ಹೊಣೆ ಹೊತ್ತು, ರಾಜೀನಾಮೆ ಕೊಟ್ಟಿದ್ದಾರೆ, ಅದೆಲ್ಲಾ ಆಗಿ ಹೋಯಿತು, ಮತ್ತೆ ಇದನ್ನು ಚರ್ವಿತಚರ್ವಣವಾಗಿ ಏತಕ್ಕೆ ಚರ್ಚೆಮಾಡಬೇಕೆಂದು ಒಂದು ವಾದ ಇದೆ. ಇನ್ನೊಂದು ವಾದ, ಇದು ಚರ್ಚೆಯಾಗಲೇ ಬೇಕು. ಇದು ಅವರದ್ದೇ ಹೊಣೆ, ಶಿಕ್ಷೆ ಅನುಭವಿಸಲೇ ಬೇಕೆಂದು ಇದೆ, ಇದರ ಬಗ್ಗೆ ಮಾತನಾಡಬೇಕು, ಚರ್ಚೆ ಮಾಡಬೇಕು ಎಂಬ ಬಗ್ಗೆ ವಾದವಿವಾದ ಇದೆ. ಇದನ್ನು ಬರೀ ರಾಮಕೃಷ್ಣ ಹೆಗಡೆಯವರ ದೃಷ್ಟಿಯಿಂದ ನಾವು ನೋಡುತ್ತಿಲ್ಲ. ಮುಂದೆ ಯಾವಾಗಲೂ ಟೆಲಿಫೋನ್ ಕದ್ದು ಕೇಳುವಂತಾದ್ದು ಆಗಕೂಡದು. ಇದರ ಹಿಂದೆ ಯಾರಿದ್ದಾರೆ? ಹೇಗೆ ಆಯಿತು? ಹೊಣೆಗಾರಿಕೆ ಯಾರದ್ದು ಇದೆ, ಇದರ ಹಿಂದೆ ಯಾರೇ ಇರಲಿ, ಅವರು ಶಿಕ್ಷೆ ಅನುಭವಿಸಲೇಬೇಕು. ಅಷ್ಟು ಮಾತ್ರವಲ್ಲದೆ, ಇದು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ, ಇಡೀ ರಾಷ್ಟ್ರಾದ್ಯಂತ ಈ ವಿಷಯ ಜನಜನಿತವಾಗಿದೆ. ಅಂತರರಾಷ್ಟ್ರೀಯವಾಗಿಯೂ ಇದು ಪ್ರಸ್ತಾಪವಾಗಿದೆ. ಎಲ್ಲಾ ಪತ್ರಿಕೆಗಳಲ್ಲೂ ಈ ವಿಚಾರ ಬಂದಿದೆ. ಇದರ ಬಗ್ಗೆ ಸಾಮಾನ್ಯವಾಗಿ ಎಲ್ಲರೂ ಟೀಕೆ ಮಾಡಿದ್ದಾರೆ. ಇದರಲ್ಲಿ ಕೆಲವು ಮುಖ್ಯವಾದ ಸಮಸ್ಯೆಗಳೂ ಬರುತ್ತವೆ. ಮೊದಲನೆಯದು ಫೋನ್ ಟ್ಯಾಪಿಂಗ್ ಆಗಿರುವುದು ನಿಜ. ಇದರ ಬಗ್ಗೆ ನಿರ್ವಿವಾದ ಅಭಿಪ್ರಾಯ ಇದೆ. ಮತ್ತೆ ಇದಕ್ಕೆ ಜವಾಬ್ದಾರರು ಯಾರು ಎನ್ನುವುದನ್ನು ಕಂಡುಹಿಡಿಯಬೇಕು. ಎರಡನೆಯ ಪ್ರಶ್ನೆ ಇದರಲ್ಲಿ ರಾಜ್ಯಸರ್ಕಾರದ

ಪಾತ್ರ ಏನು ಎಂಬುದು, ಕೇಂದ್ರಸರ್ಕಾರದ ಪಾತ್ರ ಇದರಲ್ಲಿ ಏನಾದರೂ ಇವೆಯೋ ? ಇದ್ದರೆ ಅದು ಏನು ? ಅವುಗಳ ಸಂಬಂಧದ ಬಗ್ಗೆ, ಕಾನೂನು ವಿಷಯದಲ್ಲಿ ಏನಾದರೂ ಸಮಸ್ಯೆಗಳು ಇವೆಯೋ ? ಸಂವಿಧಾನದ ವಿಷಯದಲ್ಲಿ ಏನಾದರೂ ಸಮಸ್ಯೆ ಇದೆಯೋ ಎಂಬುದು ಕೂಡ ಮುಖ್ಯವಾದ ಪ್ರಶ್ನೆ. ಇನ್ನು ಮೂರನೆಯದಾಗಿ ಸಂವಿಧಾನಕ್ಕೆ ಅನುಗುಣವಾಗಿ ೧೯(೧) ೧೯(೨) ವಿಧಿಗಳು ಏನಿವೆ ಅದಕ್ಕೆ ಅನುಗುಣವಾಗಿ ನಮ್ಮ ಹಕ್ಕುಗಳು ಏನಿವೆ, ಆ ನಮ್ಮ ಹಕ್ಕುಗಳಿಗೆ ಎಷ್ಟು ದೂರ ಚ್ಯುತಿ ಬಂದಿದೆ, ಅವುಗಳನ್ನು ಹೇಗೆ ರಕ್ಷಣೆ ಮಾಡಬೇಕಾಗಿತ್ತು ಎನ್ನುವ ಪ್ರಶ್ನೆ ಕೂಡಾ ಇಲ್ಲಿ ಉದ್ಭವವಾಗುತ್ತದೆ. ಇನ್ನು ನಾಲ್ಕನೆಯ ಪ್ರಶ್ನೆ ಅಂದರೆ, ಇದರಲ್ಲಿ ಹಕ್ಕಿನ ಪ್ರಶ್ನೆ ಅಂದರೆ ಪ್ರೈವಸಿ ಆಫ್ ದಿ ಸಿಟಿಜನ್, ಎಂಬುದಕ್ಕೆ ಕನ್ನಡದಲ್ಲಿ ಸರಿಯಾದ ಪದ ಸಿಕ್ಕಲಿಲ್ಲ. ಲೀಗಲ್ ಲಾಂಗ್ವೇಜ್‌ನಲ್ಲಿ ಪ್ರೈವಸಿ ಆಫ್ ದಿ ಸಿಟಿಜನ್ ಎಷ್ಟು ದೂರ ಆಕ್ರಮಣ ಆಗಿದೆ. ನಾಗರೀಕನ ಪ್ರೈವಸಿ ಆಕ್ರಮಣ ಆಗುವುದು ಸರಿಯೋ ? ಸಂವಿಧಾನ ರೂಪವಾಗಿ ಹಕ್ಕು ಇದೆಯೋ, ನೈತಿಕದಾದ ಬೆಲೆ ಇವೆಯೋ, ಕಾನೂನು ಬೆಲೆ ಇದೆಯೋ, ಎಷ್ಟು ದೂರ ಇದೆ, ಎಷ್ಟು ದೂರ ಇಲ್ಲ, ಈ ಮುಖ್ಯವಾದ ಅಂಶಗಳು ಇದರಲ್ಲಿ ಅಡಕವಾಗಿದೆ. ಇವೊತ್ತು ಫೋನ್ ಕದ್ದು ಕೇಳಿರುವ ಬಗ್ಗೆ ಯೋಚನೆ ಮಾಡಬೇಕಾದ್ದು ಬಾದಿದೆ. ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ಈಗ ಒಂದೊಂದಾಗಿ ತೆಗೆದುಕೊಳ್ಳೋಣ. ನಾನಾದರೂ ಸಹ ಹೇಗಾದರೂ ಮಾಡಿ ಅವರ ತಲೆಯ ಮೇಲೆ ಗೂಬೆ ಕೂರಿಸಬೇಕೆಂದು ಹೇಳುವುದಿಲ್ಲ. ಮಾನ್ಯ ಪಾಟೀಲರು ಹೇಳಿದ ಹಾಗೆ ಎಲ್ಲರೂ ತಪ್ಪು ಮಾಡುತ್ತಾರೆ, ಎಲ್ಲ ಮನುಷ್ಯರು ತಪ್ಪು ಮಾಡಿದವರಿಗೆ ಹೊಡೆದು ಹಾಕುವುದಿಲ್ಲ. ಕುರಿ ಹಳ್ಳಕ್ಕೆ ಬಿದ್ದರೆ ಆಳಿಗೆ ಒಂದೊಂದು ಕಲ್ಲು ಎಂದು ಹೇಳುತ್ತಾರೆ. ಆ ರೀತಿಯಲ್ಲಿ ನಾನು ಮಾತನಾಡಲಿಕ್ಕೆ ತಯಾರಿಲ್ಲ, ಆ ರೀತಿಯಲ್ಲಿ ಹೊಡೆಯಲಿಕ್ಕೆ ಆಗುವುದಿಲ್ಲ. ಮೂಲಭೂತ ಸಮಸ್ಯೆಗಳ ಬಗ್ಗೆ ಬಹಳ ಆಳವಾಗಿ ಯೋಚನೆ ಮಾಡಬೇಕು ಎಂಬುದು ನನ್ನ ಅಭಿಪ್ರಾಯ ನಂತರ ಅದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದು ನನ್ನ ಅಭಿಪ್ರಾಯ. ಈ ಪ್ರಶ್ನೆಗಳ ಬಗ್ಗೆ. ಕಾರ್ಯಕ್ರಮಗಳ ಬಗ್ಗೆ ಹೇಳುವುದಕ್ಕಿಂತಲೂ ಮುಂಚೆ ಮೊದಲನೆಯದು ನಿಜಾಂಶ ಏನು, ಸತ್ಯಾಂಶ ಏನು, ಸತ್ಯಕ್ಕೆ ದೂರವಾದುದು ಏನು ಎಂಬುದು ಮೊದಲು ಬರುತ್ತದೆ. ಇದರ ಬಗ್ಗೆ ಮಾನ್ಯ ಖರ್ಗೆಯವರು ಇದು ೧೯೮೫ನೇ ಇಸವಿಯಲ್ಲಿ ಆರಂಭವಾಯಿತು ಎಂದು ಹೇಳಿದರು. ನಿಜಾಂಶ ಏನು ಅಂದರೆ ೧೯೮೫ನೇ ಇಸವಿಯಲ್ಲಿ ಕೆಲವು ವಿಷಯಗಳ ಬಗ್ಗೆ ಅವರು ಹೇಳಿದ ಹಾಗೆ ಆಗಿರಬಹುದೋ ಏನೋ ಆದರೆ ಅದು ಬಹಿರಂಗವಾಗಿ ಬರಲಿಲ್ಲ. ಬಹಿರಂಗವಾಗಿ ಪತ್ರಿಕೆಯಲ್ಲಿ ಬಂದದ್ದು ಯಾವಾಗ ಅಂದರೆ ಅಜಿತ್‌ಸಿಂಗ್ ಮತ್ತು ದೇವೇಗೌಡರ ಮಧ್ಯೆ ಕಾನ್‌ವರ್ಸೇಷನ್ ಆದದ್ದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಯಾವಾಗ ಬಂತು ಅಲ್ಲಿಂದ ಇದು ಶುರುವಾಯಿತು. ಮೂಲಭೂತವಾಗಿ ಇದಕ್ಕೆ ಹಿಂದೆಯೂ ಕೂಡ ಇಂಥಾದ್ದು ನಡೆದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೂಪನಾರ್ ಮತ್ತು ಬಂಗಾರಪ್ಪನವರು ಮಾತನಾಡಿದ್ದು ಸಹ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಬಂಗಾರಪ್ಪನವರು, ಶಿವಮೂರ್ತಿಯವರು ಮಾತನಾಡಿದ್ದು ಸಹ ಬಂದಿದೆ.

SRI N. M. ADYANTHAYA.—Offence is an offence; whether it is done in private or in public.

SRI M. S. KRISHNAN.—I am not questioning it. Offence is an offence. ಮೂಪನಾರ್ ಮತ್ತು ಬಂಗಾರಪ್ಪನವರ ನಡುವೆ ನಡೆದ ಸಂಭಾಷಣೆ ಏನು ನಡೆದಿದೆ ಆ ಸಂಭಾಷಣೆ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ. ಈ ರೀತಿ ಟ್ಯಾಪ್ ಮಾಡಿದ್ದು ಸರಿಯಾದುದು ಅಲ್ಲ, ಇದಕ್ಕೆ ಒಂದು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನೊಂದು ವಿಷಯ ಅಂದರೆ, ನಮ್ಮ ಶಿವಮೂರ್ತಿಯವರು ನಮ್ಮ ಬಂಗಾರಪ್ಪನವರು ಫೋನಿನಲ್ಲಿ ಸಂಭಾಷಣೆ ಮಾಡಿದ ವಿವರದ ಕಾಪಿ ನನ್ನ ಹತ್ತಿರ ಇದೆ. ಅದನ್ನು ನಾನು ಓದಲಿಕ್ಕೆ ಹೋಗುವುದಿಲ್ಲ. ಈಗ ಓದುವುದು ಅಪ್ರಕೃತ. ಅದನ್ನು ಓದುವುದರಿಂದ ಪರಿಸ್ಥಿತಿ ಇನ್ನೂ ಕೆರಳುವ ಪರಿಸ್ಥಿತಿ ಬರುತ್ತದೆ. ಈಗ ಇದು ಏತಕ್ಕೆ ಬಂತು ಎಂದರೆ ಯಾವಾಗ ಜನತಾ ಪಕ್ಷದಲ್ಲಿ ಒಡಕು, ಭಿನ್ನಾಭಿಪ್ರಾಯಗಳು ಕಾಡುಬಂದವೋ ಆಗ ಈ ಪರಿಸ್ಥಿತಿ ಬಂದಿದೆ. ನಾವು ಈಗ ಸೀದಾ ಮಾತನಾಡೋಣ. ಈಗಲೂ ಭಿನ್ನಾಭಿಪ್ರಾಯಗಳು ಇಲ್ಲವೆಂದು ನಾನೂ ಹೇಳುವುದಿಲ್ಲ, ಆ ಕಡೆಯವರೂ ಹೇಳುವುದಿಲ್ಲ, ಈ ಕಡೆಯವರೂ ಹೇಳುವುದಿಲ್ಲ, ಇದು ಜನಜನಿತ

ವಾಗಿದೆ. ಇದೇ ಕಾರಣಕ್ಕೆ ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಟ್ಟರು, ಮಾನ್ಯ ಬೊಮ್ಮಾಯಿಯವರು ಭಿನ್ನಾಭಿಪ್ರಾಯ ಇಲ್ಲ ಎಂದು ಹೇಳುತ್ತಾರೆ, ಅದು ಸಮಂಜಸವಾದುದು ಅಲ್ಲ, ಅದು ವಾಸ್ತವಾಂಶಕ್ಕೆ ದೂರವಾದುದು. ನಿಮ್ಮ ನಿಮ್ಮಲ್ಲಿ ಭಿನ್ನಾಭಿಪ್ರಾಯ ಇದೆ. ಇರಕೂಡದು ಅಂತ ನಾನು ಹೇಳುವುದಿಲ್ಲ. ಪಕ್ಷ ಅಂದಮೇಲೆ ಭಿನ್ನಾಭಿ ಪ್ರಾಯಗಳು ಇದ್ದೇ ಇರುತ್ತವೆ. ಈ ಭಿನ್ನಾಭಿಪ್ರಾಯ ಯಾವಾಗ ಹೊರಗೆ ಸ್ಫೋಟ ಆಯಿತು ಎಂದರೆ ಅಜಿತ್ ಸಿಂಗ್ ಮತ್ತು ಮಾನ್ಯ ದೇವೇಗೌಡರ ಕಾನ್‌ವರ್ಸೇಷನ್‌ನ ಪ್ರಶ್ನೆ ಬಂದಾಗ ಇದು ಹೊರಗೆ ಬಂತು. ಇದು ಏನು ತೋರಿಸುತ್ತ ದೆಂದರೆ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಇದು ಪಬ್ಲಿಷ್ ಆಯಿತು. ಆಗ ಮಾನ್ಯ ರಾಮಕೃಷ್ಣ ಹೆಗಡೆ ಯವರು ಏನು ಹೇಳಿದರು ಎಂದರೆ ಇದನ್ನು ನಾವು ಮಾಡಿಯೇ ಇಲ್ಲ. ನಮಗೂ ಇದಕ್ಕೂ ಸಂಬಂ ಧವೇ ಇಲ್ಲ ಅಂತ. ಆಗ ನಾನು ಅಂದುಕೊಂಡೆ, ಹಾಗಾದರೆ ಇದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಹೇಗೆ ಪಬ್ಲಿಷ್ ಆಯಿತು ಅಂತ ಇದನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದರು. ಸ್ವಾಮಿ ನನಗೆ ತಿಳಿದಂತೆ ಕೇಂದ್ರ ಸರ್ಕಾರಕ್ಕೂ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ಗೂ ಅಷ್ಟೊಂದು ಸಂಬಂಧವಾಗಲಿ. ಸಂಪರ್ಕವಾಗಲಿ ಇಲ್ಲ. ಸ್ನೇಹ ಸಂಬಂಧವೂ ಇಲ್ಲ, ವಿಶ್ವಾಸವಂತೂ ಮೊದಲೇ ಇಲ್ಲ. ಇವರಿಬ್ಬರಿಗೂ ಎಣ್ಣೆ–ಸೀಗೇಕಾಯಿಯ ತರಹ ಇದೆ. ಹಾಗಾದರೆ ಕೇಂದ್ರಸರ್ಕಾರದವರು ಮಾಡಿದ್ದಾರೆಂದು ಅವರು ಹೇಳಿದ್ದನ್ನು ಇವರು ಪಬ್ಲಿಷ್ ಮಾಡಿದರು ಎಂಬು ದನ್ನು ಒಪ್ಪಿಕೊಳ್ಳುವುದಕ್ಕೆ ಹೇಗೆ ಸಾಧ್ಯ ? ನಾನು ಸ್ವಲ್ಪ ಯೋಚನೆ ಮಾಡಿದೆ. ಹೋಗಲಿ ಇದಾದಮೇಲೆ ಅದನ್ನಾದರೂ ಹಾಗೆಯೇ ಇಟ್ಟುಕೊಂಡರು, ಆದರೆ ಅದೂ ಇಲ್ಲ. ಅನಂತರ ಆಗಸ್ಟ್ ೯ನೇ ತಾರೀಖು ಎಂದು ಕಾಣುತ್ತದೆ, ಅದು ಟೈಂಸ್ ಆಫ್ ಇಂಡಿಯಾದಲ್ಲಿ ಬಂತು. ಅವರಲ್ಲಿ ಡಿ. ಐ. ಜಿ. ರಘುರಾಂರವರು ಮಾಡಿಸಿದ್ದು, ಕರ್ನಾಟಕದ ಸರ್ಕಾರ ಇದನ್ನು ಹೊರಡಿಸಿದ್ದು ಅಂತ ಬಂತು. ಯಾವಾಗ ಹೀಗೆ ಬರಲಿ ಎಂದು ಆಗ ಏನು ಮಾಡಿದರು, ಅದರಿಂದ ಇವರು ಹೆಚ್ಚಿತ್ತು ಹಾದು ರೊಟೀನ್ ಆಗಿ ಎಲ್ಲ ಕಡೆಯಲ್ಲೂ ನಡೆಯುತ್ತಿದೆಯೆಂದು ಹೇಳಿ ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು. ರೊಟೀನ್ ಆಗಿ ನಡೆಯುತ್ತಿದೆ ಎಂಬುದನ್ನು ಯಾರೂ ಹೇಳ ಬೇಕಾಗಿಲ್ಲ. ಯಂತ್ರ ತನ್ನಷ್ಟಕ್ಕೆ ತಾನೆ ನಡೆದುಕೊಂಡು ಹೋಗುತ್ತಿರುತ್ತದೆ. ಆದರೆ ಇದರ ಹಿಂದಿನ ನಿಜಾಂಶ ಏನು ? ಇದು ಯಾವಾಗಲೂ ನಡೆದುಕೊಂಡು ಬಂದಿದೆಯೇ ? ನಮ್ಮ ಕರ್ನಾಟಕ ರಾಜ್ಯ ದಲ್ಲಿ ಹಿಂದಿನಿಂದ ನಡೆದುಕೊಂಡು ಬಂದಿರತಕ್ಕದ್ದು ನಮಗೆ ಗೊತ್ತಿಲ್ಲ. ಹಾಗಾದರೆ ಇದು ರೊಟೀನ್ ಆಗಿ ನಡೆದುಕೊಂಡು ಬಂದಿದೆಯೆಂದು ಏಕೆ ಹೇಳುತ್ತಿದ್ದಾರೆಂದರೆ ಇವರು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ, ಜಾರಿಕೊಳ್ಳುವುದಕ್ಕೆ. ಅಂಥ ಒಂದು ಮಾತು ಇದಾಗಿದೆ. ಇದರ ಜೊತೆ ಯಲ್ಲಿ ೫೧ ಜನರ ಹೆಸರು ಯಾವಾಗ ಬಂತೋ ಆಗ ಇದನ್ನು ಡಿ.ಐ.ಜಿ. ರಘುರಾಮ್‌ರವರು ಮಾಡಿ ದ್ದಾರೆ, ಚೀಫ್ ಸೆಕ್ರೆಟರಿಯವರು ಇದಕ್ಕೆ ಆರ್ಡರ್ ಕೊಟ್ಟರು ಅಂತ ಆಯಿತು. ಹಾಗಾದರೆ ಚೀಫ್ ಸೆಕ್ರೆಟರಿ ಎಂದರೆ ಹಿಂದೆ ಇದ್ದವರೋ ಅಥವಾ ಈಗಿರತಕ್ಕವರೋ ಎನ್ನುವ ಬಗ್ಗೆ ಚರ್ವಿತಚರ್ವಣ ಆದಾಗ "ಇಲ್ಲ, ನಾನಲ್ಲ. ನಾನು ಯಾವತ್ತೂ ಇಂಥಾದ್ದನ್ನು ಮಾಡಿಲ್ಲ, ಇದನ್ನು ಮಾಡಿದ್ದರೆ ಹಿಂದೆ ಇದ್ದ ವರು ಇರಬಹುದೆಂದು ಈಗಿನ ಚೀಫ್ ಸೆಕ್ರೆಟರಿ ಯವರಾದ ಶ್ರೀ ದಾತಾರ್‌ರವರು ಹೇಳಿದರು. ಹಿಂದಿನ ಚೀಫ್ ಸೆಕ್ರೆಟರಿಯವರೇ ಆಜ್ಞೆ ಮಾಡಿದ್ದಾರೆಂದು ನಾನು ಇಟ್ಟುಕೊಂಡರೂ ಕೂಡ ನಮ್ಮ ಮಾನ್ಯ ಸ್ನೇಹಿತರು ಹೇಳಿದಹಾಗೆ ಆಗಿನ ಮುಖ್ಯ ಮಂತ್ರಿಗಳಿಗೆ ಇದು ಗೊತ್ತಿಲ್ಲದೇ ಆಗಿರುತ್ತದೆಯೆ ಎಂಬುದು ಇಲ್ಲಿನ ಮುಖ್ಯ ಪ್ರಶ್ನೆ. ಆಗಿನ ಮುಖ್ಯ ಮಂತ್ರಿಗಳಿಗೆ ಇದು ಗೊತ್ತಿಲ್ಲದೇ ತನ್ನಷ್ಟಕ್ಕೆತಾನೇ ಉದ್ಭವ ಆಯಿತೇ ? ಇಂಡಿಯನ್ ಟೆಲಿಗ್ರಾಫಿಕ್ ಆ್ಯಕ್ಟ್‌ನ ಸೆಕ್ಷನ್ ೫ರ ಪ್ರಕಾರ ಚೀಫ್ ಸೆಕ್ರೆಟರಿಯವರು ಇದನ್ನು ಮಾಡುವುದಕ್ಕೆ ಹಕ್ಕು ಇದೆಯೇ ? ಸಂವಿಧಾನದ ಪ್ರಕಾರ ಚೀಫ್ ಸೆಕ್ರೆಟರಿಯವರು ಇದನ್ನು ಮಾಡು ವುದಕ್ಕೆ ಹಕ್ಕಿಲ್ಲ. ಹಾಗಾದರೆ ಈ ಹಕ್ಕನ್ನು ಯಾರು ಪಡೆದುಕೊಂಡಿರುತ್ತಾರೆ ? ನಮ್ಮ ರಾಜ್ಯದ ಹೊಣೆಗಾರಿಕೆಯನ್ನು ಹೊತ್ತವರು ಎಂದರೆ ನಮ್ಮ ಮುಖ್ಯ ಮಂತ್ರಿಗಳು. ಅವರಿಗೆ ತಿಳಿಯದಂತೆ ಇಂಥಾದ್ದು ನಡೆಯುವುದಕ್ಕೆ ಸಾಧ್ಯವೇ ಇಲ್ಲ ಅವರ ನೋಟಿಂಗ್ ಏನು ಇದೆ. ಅದನ್ನು ಹಾಕಿದ್ದಾರೋ, ಇಲ್ಲವೋ ಎಂಬುದನ್ನು ನೋಡಬೇಕು. ಇದು ಏನಾಗುತ್ತದೆಂದರೆ ಕೆಲವು ಸಂದರ್ಭಗಳಲ್ಲಿ ಮಾನ್ಯ ಮಂತ್ರಿಗಳು ಹೇಳುತ್ತಾರೆ ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡುತ್ತಾರೆ. ಇದು ನಮಗೂ ಕೂಡ ಗೊತ್ತಿದೆ. ಆಮೇಲೆ ಆ ಅಧಿಕಾರಿಗಳು ಸಿಕ್ಕಿಹಾಕಿಕೊಳ್ಳುತ್ತಾರೆ. ಆದರೆ ಈಗಿನ ಅಧಿಕಾರಿಗಳು ಇಂಥಾದ್ದರಲ್ಲಿ ಬಹಳ ಹುಷಾರಾಗಿರುತ್ತಾರೆ. ಮಂತ್ರಿಗಳು ಏನಾದರೂ ಇಂಥಾದ್ದನ್ನು ಮಾಡಿ ಎಂದರೆ,

ಆಗ ಅಧಿಕಾರಿಗಳು ಏನು ಮಾಡುತ್ತಾರೆಂದರೆ ಇಂಥವರು ಇಂಥಿಂಥಾದ್ದನ್ನು ಮಾಡಿ ಎಂದು ನಮಗೆ ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟರೆ, ಆದ್ದರಿಂದ ನಾವು ಇದನ್ನು ಮಾಡಿದ್ದೇವೆಂದು ಬರೆದುಕೊಳ್ಳುತ್ತಾರೆ. ಉದಾಹರಣೆಗೆ ಮಾನ್ಯ ಜಾಲಪ್ಪನವರ ಕೇಸ್‌ನಲ್ಲಿ, ಇನ್ನೂ ಬೇರೆ ಕೇಸುಗಳಲ್ಲಿ ನಾನು ನೋಡಿದ್ದೇನೆ. ಆ ನೋಟಿಂಗ್ಸ್‌ನ್ನು ನಾನು ನೋಡಿದ್ದೇನೆ. ನೋಟಿಂಗ್ ಬಗ್ಗೆ ಈಗಿನ ಅಧಿಕಾರಿಗಳು ಬಹಳ ಹುಷಾರಾಗಿರುತ್ತಾರೆ. ಆದರೆ ಮೂಲಭೂತವಾದ ಜವಾಬ್ದಾರಿಯಿಂದ, ಹೊಣೆಗಾರಿಕೆಯಿಂದ ಜಾರಿಕೊಳ್ಳತಕ್ಕ ರೀತಿಯಲ್ಲಿ ಹಿಂದೆ ಇದ್ದಂಥ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಹೇಳುತ್ತಿರುವುದು ಸರಿಯಾದುದಲ್ಲ. ಮೊದಲು ಹೇಳಿದರು, ಇದನ್ನು ನಾವು ಮಾಡಿದ್ದಲ್ಲ ಅಂತ, ನಂತರ ಹೇಳಿದರು ಇದು ಕೇಂದ್ರ ಸರ್ಕಾರದ್ದು ಇರಬಹುದು ಎಂದು. ಅನಂತರ ನೋಡಿದರೆ ಇದರಲ್ಲಿ ನಮ್ಮದೂ ಇರಬಹುದು ಎನ್ನತಕ್ಕ ರೀತಿಯಲ್ಲಿ ಹೇಳಿದರು. ಇದು ನಮ್ಮ ರಾಜ್ಯದಲ್ಲೂ ನಡೆದಿದೆ ಎಂದು ಹೇಳಿದರು. ಅನಂತರ ಕಡೆಯಲ್ಲಿ ಏನು ಹೇಳಿದರೆಂದರೆ ನೈತಿಕ ಜವಾಬ್ದಾರಿಯನ್ನು ಹೊತ್ತುಕೊಂಡು ನಾವು ರಾಜೀನಾಮೆಯನ್ನು ಕೊಡುತ್ತಿದ್ದೇನೆ ಎಂದು ಹೇಳಿದರು. ನಿಜವಾಗಿಯೂ ಹೇಳುವುದಾದರೆ ನೈತಿಕ ಜವಾಬ್ದಾರಿ ಇಲ್ಲ, ಮೌಲ್ಯಾಧಾರಿತ ರಾಜಕಾರಣವಿಲ್ಲ, ಮೂಲಭೂತವಾಗಿ ತಾನೇ ತನ್ನ ಮೇಲೆ ಇದನ್ನು ಹಾಕಿಕೊಂಡಿದ್ದಾರೆ. ಇದಕ್ಕೆ ಯಾರೂ ಏನೂ ಮಾಡುವುದಕ್ಕೆ ಬರುವುದಿಲ್ಲ. ಇದಕ್ಕೆ ಬೇರೆ ದಾರಿಯೇ ಇರಲಿಲ್ಲ. ಹೆಗಡೆಯವರು ತಮ್ಮ ರಾಜೀನಾಮೆಯನ್ನು ಕೊಡುವುದನ್ನು ಬಿಟ್ಟರೆ ಅವರಿಗೆ ಬೇರೆ ದಾರಿಯೇ ಇರಲಿಲ್ಲ. ಇದು ಬಹಳ ಸ್ಪಷ್ಟವಾಗಿದೆ. ಮೌಲ್ಯಾಧಾರಿತ ರಾಜಕಾರಣ ಇದ್ದಿದ್ದರೆ ಅವರು ಏನು ಮಾಡಬಹುದಿತ್ತು ಎಂದರೆ, ಅವರೇ ಆರ್ಡರ್ ಮಾಡಬಹುದಿತ್ತು. ಇದನ್ನು ಯಾರು ಮಾಡಿದ್ದಾರೆ ಎಂದು ನಾನು ಎನ್‌ಕ್ವೈರಿ ಮಾಡುತ್ತೇನೆ, ಏಕೆಂದರೆ ನಾನೇ ಮುಖ್ಯ ಮಂತ್ರಿಯಾಗಿರುವುದರಿಂದ ಎಂದು ಅವರು ಹೇಳಬಹುದಾಗಿತ್ತು.

ಆದರೆ ಅವರು ಏನು ಹೇಳಿದರೆಂದರೆ ಕೇಂದ್ರ ಸರ್ಕಾರದವರ ಹತ್ತಿರ ಎನ್‌ಕ್ವೈರಿ ಬಗ್ಗೆ ಮಾತನಾಡುತ್ತೇನೆಂದು ಹೇಳಿದರು. ಕೇಂದ್ರ ಸರ್ಕಾರದವರ ಮೇಲೆ ಮಾತನಾಡಲಿ ಎಲ್ಲಾ ಮೇಲೂ ಮಾಡಲಿ entire gamut ಈವತ್ತಿನ ದಿವಸ ಎಲ್ಲ ಹೊರ ಬರಲಿ ಎಂದು ಹೇಳಿದರು. ನಾನು ಹೇಳುವದೇನೆಂದರೆ ಅದರಲ್ಲಿ ಸ್ವಲ್ಪ ಮಟ್ಟಿಗೆ ಇದೆ ಎಂದು ಹೇಳುವುದಿಲ್ಲ. ಮಾಡುವುದಾದರೆ ಮಾಡಲಿ, ಆದರೆ ಮೊದಲು ನಿಮ್ಮ ಜವಾಬ್ದಾರಿ ಏನು ಎನ್ನುವುದನ್ನು ತಿಳಿದುಕೊಂಡು ಮಾಡಿ. ಎಲ್ಲವನ್ನು ಕೇಂದ್ರ ಸರ್ಕಾರದವರ ಮೇಲೆ ಹಾಕುವುದು ಸರಿಯಾದುದಲ್ಲ, ಕೇಂದ್ರ ಸರ್ಕಾರದ ಹೊಣೆ ರಾಜ್ಯ ಸರ್ಕಾರದ ಹೊಣೆ ಬಗ್ಗೆ ತಾವು ಹೇಳಬೇಕಾದರೆ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ್ದು ಏನೂ ಹೊಣೆ ಇಲ್ಲವೆಂದು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಕೇಂದ್ರ ಸರ್ಕಾರಕ್ಕೂ ಇದೆ ರಾಜ್ಯ ಸರ್ಕಾರಕ್ಕೂ ಹೊಣೆ ಇದೆ. ಕೇಂದ್ರ ಸರ್ಕಾರ ಎಂದು ಹೇಳಿದಾಕ್ಷಣ ಆ ಕಡೆಯವರು ಕೋಪ ಮಾಡಿಕೊಳ್ಳಬೇಕಾಗಿಲ್ಲ. ನಿಜಾಂಶ ಏನು ಎಂದರೆ ಜವಾಹರ ಲಾಲ್ ನೆಹರೂರವರ ಕಾಲದಿಂದ ಇಲ್ಲಿಯವರೆಗೆ ಈ ರೀತಿ ಟೆಲಿಫೋನ್ ಟ್ಯಾಪಿಂಗ್ ಆಗಿದೆ. ಏತಕ್ಕೆಂದರೆ ಇಂಡಿಯನ್ ಟೆಲಿಫೋನ್ ಆಕ್ಟ್‌ನ ಸೆಕ್ಷನ್ 5ರ ಪ್ರಕಾರ ಈ ರೀತಿ ಮಾಡಲು ಹಕ್ಕು ಇದೆ. ಆ ಹಕ್ಕನ್ನು ದುರುಪಯೋಗಪಡಿಸಿಕೊಂಡು ಟೆಲಿಫೋನ್ ಟ್ಯಾಪ್ ಹಕ್ಕು ಮಾಡಲಿಕ್ಕೆ ಇದೆ. ಈ ರೀತಿ ಹಕ್ಕು ಉಪಯೋಗ ಮಾಡಿಕೊಂಡು ಅವರು ಮಾಡಿದ್ದಾರೆ. ಯಾರು ಯಾರು ಮಾಡಿದ್ದಾರೆ, ಏನೇನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ, ಆದರೆ ಮಾಡಿದ್ದಾರೆನ್ನುವುದು ಗೊತ್ತು. ಅಂದರೆ ಹೊಣೆಗಾರಿಕೆ ಇಲ್ಲವೇ ಇಲ್ಲ ಟೆಲಿಫೋನ್ ಟ್ಯಾಪ್ಪಿಂಗ್ ನಾವು ಮಾಡೇ ಇಲ್ಲ ಹಿಂದೆ ಮಾಡಿಲ್ಲ ಮುಂದೆ ಮಾಡುವುದಿಲ್ಲವೆಂದು ಹೇಳಿ ಬಿಟ್ಟರೆ ಅದು ಸಮಂಜಸವೂ ಅಲ್ಲ. ? ಏತಕ್ಕೆಂದರೆ ಪ್ರೈಮಿನಿಸ್ಟರ್ ರಾಜೀವ್ ಗಾಂಧಿಯವರು ಪಾರ್ಲಿಮೆಂಟ್‌ನಲ್ಲಿ ಮಾತನಾಡುವಾಗ ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ನಾವು ಯಾವ ರಾಜಕಾರಣಿಯವರದು ಮಾಡಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ನೋಡಿಲ್ಲ. ಫೈಲ್ ನೋಡಿಲ್ಲ. ಯಾವ ರಾಜಕಾರಣ ಮಾಡುವುದಕ್ಕೆ ಯಾರದೂ ಮಾಡಿಲ್ಲವೆನ್ನುವ ಪ್ರಶ್ನೆ ಇವತ್ತಿನ ದಿವಸ ಬಂದಿಲ್ಲ. ನಾನು ಒಪ್ಪಿ ಒಪ್ಪಿ I can't say that there is no tapping at all ಫೋನ್ ಟ್ಯಾಪಿಂಗ್ ಮಾಡಿಲ್ಲವೆಂದು ಕೇಂದ್ರ ಸರ್ಕಾರದವರೂ ಹೇಳಿದೆ. ನೀವು ಹೇಳಿದ್ದೀರಿ. ಅದು ಹೊರಗಡೆಯೂ ಬಂದಿದೆ, ಹಾಗಾದರೆ ಇಲ್ಲಿ ಹೇಗೆ 50 ಜನರ ಹೆಸರು ಹೊರಗಡೆ ಬಂದು ಬಿಟ್ಟಿತು ? ಈ ರೀತಿ ಹೊರಗಡೆ ಬರಲು ಇಷ್ಟೇ ಇರುವಂತ ವಿಷಯ. ಆದ್ದರಿಂದ ಇದಕ್ಕಿಂತ ಮುಖ್ಯವಾದುದು ಏನೆಂದರೆ ಫೋನ್ ಟ್ಯಾಪಿಂಗ್ ಆಗಿದೆ ಎಂದು. ಅವರು ಒಪ್ಪಿಕೊಳ್ಳುತ್ತಾರೆ, ಏಕೆಂದರೆ ಭೂಪೇಶಗುಪ್ತ ಹಿಂದೆ ಇದ್ದಂತ ಪಾರ್ಲಿಮೆಂಟ್ ಸದಸ್ಯರು ಅನಂತರ ಅಟಲ್‌ಬಿಹಾರಿವಾಜ

ಪೇಯಿಯವರ ಎರಡು ಕೇಸ್‌ನಲ್ಲಿ ತೀರ್ಮಾನವಾಗಿದೆ. ಪ್ರಿವಿಲೈಜ್ ಹಕ್ಕು ಅವರು ಇವತ್ತು ಹೇಳಿದರು. ಆದರೆ ಈ ಹಿಂದೆಯೇ ಭೂಪೇಷಗುಪ್ತರವರು ನಮ್ಮದು ಫೋನ್ ಟ್ಯಾಪಿಂಗ್ ಆಗುತ್ತಿದೆ ನೀವು ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದ್ದರು. ಆದರೆ ಇಲ್ಲಿ ಟ್ಯಾಪ್ ಆಗೇ ಇಲ್ಲವೆಂದು ಹೇಳಿದರು ಆದರೆ ಅದೇ ಸಮಯದಲ್ಲಿ ಆಗ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು ಹೇಳಿದರು. ಇಂಡಿಯನ್ ಟೆಲಿಫೋನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆಂದು ಹೇಳಿದರು. ಅಂದರೆ ಅದರ ಅರ್ಥ ಏನೋ ಇದ್ದರೂ ಇರಬಹುದು, ತಪ್ಪು ಇದೆ, ತಿದ್ದುಪಡಿ ತರಬೇಕು, ತಿದ್ದುಪಡಿ ತಂದು ಮೂಲಭೂತ ಹಕ್ಕು ಏನು ಇದೆ ಆ ಹಕ್ಕಿನಲ್ಲಿ ನಾವು ಮೊಟಕು ಮಾಡದ ರೀತಿಯಲ್ಲಿ ರಕ್ಷಣೆ ಕೊಡುತ್ತೇವೆ ಅದೇ ಸಮಯಕ್ಕೆ ದೇಶದ ಸುಭದ್ರತೆಗೆ, ದೇಶದ ಸಮಗ್ರತೆಗೆ ಅಥವಾ ದೇಶವು ಅಪಾಯ ಸ್ಥಿತಿಗೆ ಬಂದರೆ, ಗಂಡಾಂತರ ಪರಿಸ್ಥಿತಿಗೆ ಬಂದರೆ ಅದನ್ನು ಎದುರಿಸುವುದಕ್ಕೆ ಸಹಾಯವಾಗುವಂಥ ರೀತಿಯಲ್ಲಿ ಇಂಡಿಯನ್ ಟೆಲಿಫೋನ್ ಆಕ್ಟ್ ಮತ್ತು ಪೋಸ್ಟಲ್ ಆಕ್ಟ್ ಎರಡಕ್ಕೂ ನಾವು ಅಮೆಂಡ್‌ಮೆಂಟ್ ತರುತ್ತೇವೆಂದು ಆಗಿನ ಪ್ರಧಾನಿಯವರೇ ಹೇಳಿದ್ದರು. ಅನಂತರ ರಾಜೀವ್ ಗಾಂಧಿಯವರು ಇದನ್ನೇ ಉಚ್ಚರಿಸಿದಾರೆ. ಆದರೆ ಇನ್ನೂ ಅವರು ಮಾಡಲಿಲ್ಲ, ಇದು ತೀರ್ಮಾನವಾಗಬೇಕು. ಬದಲಾವಣೆಯಾಗಬೇಕು. ಆದರೆ ನಮಗಾದರೂ ಅನಿಸುತ್ತದೆ. ಇದರಲ್ಲಿ ಅವರೂ ಜವಾಬ್ದಾರರು, ಅವರು ಸುಮ್ಮನೆ ಕುಳಿತುಕೊಳ್ಳುವಂತೆ ಇಲ್ಲ. ಈ ವಿಷಯದಲ್ಲಿ ಅವರೂ ಕೂಡ ರಾಜಕೀಯ ಮಾಡುವಂತೆ ಇವರೂ ಕೂಡ ರಾಜಕೀಯ ಮಾಡಿದ್ದಾರೆ. ಇಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನವರು ೧೦ನೇ ತಾರೀಖು ಅಜೀತ್ ಸಿಂಗ್‌ರ ಮತ್ತು ದೇವೇಗೌಡರ ಸಂಭಾಷಣೆಯನ್ನು ಪಬ್ಲಿಷ್ ಮಾಡಿದರು. ಆವಾಗ ಇಲ್ಲಿ ಬಂದರೆ ಕೇಂದ್ರ ಸರ್ಕಾರದವರಿಂದಲೇ ಆಗಿರುವುದು ಎಂದು ಹೇಳಿದಕ್ಕೆ ಅವರು ಏನು ಮಾಡಿಬಿಟ್ಟರು, ಟೈಮ್ಸ್ ಆಫ್ ಇಂಡಿಯಾದಲ್ಲಿ ಹುಡುಕಿ, ಟೈಮ್ ಆಫ್ ಇಂಡಿಯಾದಲ್ಲಿ ಡಿ. ಐ. ಜಿ. ರಘುರಾಮನ್‌ರವರು ಕೇಳಿ ಕೊಂಡಿದ್ದಾರೆ, ಇಂಥವರು ಟೆಲಿಫೋನ್ ಟ್ಯಾಪಿಂಗಿಗೆ ಪರ್ಮಿಷನ್ ಕೇಳಿಕೊಂಡಿದ್ದಾರೆಂದು ಅದನ್ನು ಅವರು ಪಬ್ಲಿಷ್ ಮಾಡಿದರು. ಅದು ಯಾರು ಪಬ್ಲಿಷ್ ಮಾಡಿದರು, ಇದು ಯಾರು ಪಬ್ಲಿಷ್ ಮಾಡಿದರು ಎನ್ನುವುದು ಸ್ಪಷ್ಟವಾಗಿದೆ. ಇದು ಪಬ್ಲಿಷ್ ಮಾಡಿರುವವರು ಈ ಕಡೆಯವರೇ, ಅಂದರೆ ಇಲ್ಲಿರುವವರೇ, ಇವರ ಮಧ್ಯೆ ಯಾರು ಯಾರಿಗೆ ಭಿನ್ನಾಭಿಪ್ರಾಯ ಇತ್ತೋ ಅವರೇ ಪಬ್ಲಿಷ್ ಮಾಡಿರುವುದು ಎನ್ನುವುದು ಸ್ಪಷ್ಟವಾಗಿದೆ. ಪಬ್ಲಿಷ್ ಮಾಡಿರುವವರು ಯಾರು ? ಅದು ಈ ಕಡೆಯವರೇ ಎನ್ನುವುದೂ ಸಹ ಸ್ಪಷ್ಟವಾಗಿದೆ, ಏತಕ್ಕೆಂದರೆ ಇದನ್ನು ಅವರು ಡಿಫೆಂಡ್ ಮಾಡಿಕೊಳ್ಳಬೇಕು. ಅಂದರೆ ನಾವು ಇಲ್ಲಿ ಒಬ್ಬರು ಮಾತ್ರ ಟ್ಯಾಪಿಂಗ್ ಮಾಡಿರುವುದು, ಇನ್ನೊಬ್ಬರು ಮಾಡಿಲ್ಲವೆಂದರೆ ನಿಜವಾದ ವಾಸ್ತವಾಂಶ ನೋಡಿದರೆ ಮತ್ತು ಇದರ ಹಿಸ್ಟರಿ ನೋಡಿದರೆ ಬಹಳ ಸ್ಪಷ್ಟವಾಗುತ್ತದೆ.

ಆ ದೃಷ್ಟಿಯಿಂದ ನನಗನ್ನಿಸುತ್ತದೆ, ಈ ಸಂಬಂಧಗಳು ಇದೇ ರೀತಿ ಹೋದರೆ ಇನ್ನೂ ಕೆಟ್ಟು ಹೋಗುತ್ತವೆ. ಈ ಸಂಬಂಧಗಳನ್ನು ಬೇರೆ ರೀತಿಯಲ್ಲಿ ತೆಗೆದುಕೊಂಡು ಬರುವಂಥ ಜವಾಬ್ದಾರಿ ತಮ್ಮ ಮೇಲಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅಷ್ಟೇ ಅಲ್ಲದೆ, ಇದರಲ್ಲಿ ಮೊದಲೇ ಹೇಳಿದ ಹಾಗೆ ಒಂದು ಪ್ರಶ್ನೆ ಇದೆ ಆ ಬಗ್ಗೆ ಮೂಲಭೂತವಾಗಿ ಖರ್ಗೆಯವರು ಹೇಳಿದ್ದಾರೆ, ನಾನು ಸ್ವಲ್ಪ ಹೇಳಬೇಕಾಗಿದೆ ಇದರಲ್ಲಿ ಒಂದು ಪ್ರಶ್ನೆ ಏನೆಂದರೆ, ಇವರು ಸಂವಿಧಾನಕ್ಕೆ ವಿರುದ್ಧವಾದಂತಹ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಆರ್ಟಿಕಲ್ ೧೯ (೧ಎ) ಮತ್ತು (೨)ನ್ನು ಓದ ಬಯಸುತ್ತೇನೆ.

'19 (a) : All citizens shall have the right to freedom of speech and expression ;

19 (2) : Nothing in sub-clause (a) of clause (1) shall affect the operation of any existing law, or prevent the State from making any law, in so far as such law imposes reasonable restrictions on the exercise of the right conferred by the said sub-clause in the interests of the

> sovereignity and integrity of India the security of the State. friendly relations with foreign States, public order, decency or morality, or in relation to contempt of court, defamation or incitement to an offence."

Another one is Article 21 :

> "No person shall be deprived of his life or personal liberty except according to procedure established by law."

Under the Indian Telegraph Act, it is not just enough if you publish the names. What is necessary is that you should give reasons for it in writing. That is most important. What it says is this. This in Section 5 of the Indian Telegraph Act :

> "On the occurance of any public emergency or in the interest of public safety. Central Government or State Government or any officer specially authorised in this behalf by the Central or a State Government. may. if satisfied that it is necessary and expedient so to do, take temporary possession for so long as the public emergency exists or the interest of public to take such action of any telegraph established. maintained or owned by any person licenced under this Act."

This does not apply here. Now see Section 5 (2) ;

> "On the occurance of any public emergency or in the interest of public safety. the Central Government or a State Government or any officer specially authorised in this behalf by the Central Government or a State Government, may, if satisfied that it is necessary and expedient so do in the interest of sovereignety and integrity of India the security of the State. friendly relations with foreign States or public order or for preventing incitement to the commission of offence. for reasons to be recorded in writing by order. direct that any message or class of messages of any persons or class of persons relating to any particular subject brought for transmission by or trans mitted or received by any telegraph, shall not be transmitted or shall be intercepted or detained or shall be disclosed to the Government making the order or an officer thereof mentioned in the order."

This is the position. It says there should be a public emergency. According to the notes of the Act it self Section 5 (1), if properly construed, does not confor unguided, unbridded power on the Central Government or the State Government or the specialiy authorised

officer to take possession of any telagraph. Firstly, the occurance of a public emergency is a sine qua non for the exercise of power under this Section. There was no public emergency here. Where was the public emergency ? So the question of taking over the telegraph or tapping does not arise at all. Still it has been done. "Secondly, as a priliminary step to the exercise of this section the Government or the authority concerned must record its salisfaction as to the existance of such an emergency. Further, the existance of the emergency is a prerequiste for the exercise of power under section, must be a public emergency and not any other kind of emergency". This is 1978 Supreme Court judgement. This is a reported judgement on the basis of the Section 5 of the Telegraph Act. That means there should be a public emergency and it cannot be any other emergency. There should be a public emergency. ಪಬ್ಲಿಕ್ ಎಮರ್ಜನ್ಸಿ ಕೂಡ ಸ್ಪಷ್ಟವಾಗಿ ಆಗಿರಬೇಕು. ಈ ರೀತಿ ಮಾಡುತ್ತಿದ್ದಾರೆಂದು ಸ್ಪಷ್ಟವಾಗಿ ಬರೆದಿರಬೇಕು.

೩-೦೦ ಪಿ. ಎಂ.

ಅದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಮೂರನ್ನೂ ಇವರು ಎಕ್ಸರ್‌ಸೈಸ್ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದು ಪತ್ರಿಕೆಯಲ್ಲಿ ಬಂದಿಲ್ಲ, ಆ ಹೆಸರುಗಳನ್ನು ನೋಡಿದರೆ they have not exercised their mind. There is no written order, nothing. If there is one citing reasons, they should have given it. ಇದುವರೆಗೂ ಅದನ್ನು ಕೊಟ್ಟಿಲ್ಲ. ಕೊಟ್ಟಿದ್ದರೆ ಪಾರ್ಲಿಮೆಂಟ್‌ನಲ್ಲಾದರೂ ಹೇಳುತ್ತಿದ್ದರು. ಅದು ಕೂಡ ಬಂದಿಲ್ಲ.

SRI S. BANGARAPPA.—It is subject to the satisfaction of the authorities.

SRI M. S. KRISHNAN.—Supposing our officer here, who has asked for telephone tapping, he must be satisfied in writing about public emergency existing.

SRI R. V. DESHPANDE.—Even the Telegraph Department should be satisfied.

SRI M. S. KRISHNAN.—That is anoter aspect. If he had been satisfied it must be in writing. If must have gone not only to the State Government but to the Governor also according to Article 166. ಇದು ಕೂಡ ಯಾರಿಗೂ ಗೊತ್ತಿಲ್ಲ.

ಶ್ರೀ ಎಂ. ರಘುಪತಿ.—ಕೃಷ್ಣನ್ ಅವರೇ, ತಾವು ಈಲ್ಡ್ ಆಗುವುದಾದರೆ......

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ರಘುಪತಿ ಅವರ ಜಾಗದಲ್ಲಿಲ್ಲ. ಅವರ ಜಾಗದಲ್ಲಿ ಹೋಗಿ ಮಾತನಾಡಬೇಕು.

ಉಪಾಧ್ಯಕ್ಷರು.—ನಾನು ಪರ್ಮಿಟ್ ಮಾಡಿದ್ದೇನೆ ಬಿಡಿ. ತಾವು ಮಾತನಾಡಿ.

ಶ್ರೀ ಎಂ. ರಘುಪತಿ.—ಈ ಸದನಕ್ಕೆ ಒಂದು ತಿಳುವಳಿಕೆಯನ್ನು ಕೊಟ್ಟರೆ ಒಳ್ಳೆಯದು ಎಂದು ಮಾನ್ಯ ಕೃಷ್ಣನ್ ಅವರನ್ನು ಕೇಳಿಕೊಳ್ಳುತ್ತೇನೆ. ಅದೇನೆಂದರೆ ಸ್ಟೇಟ್ ಗೌರ್ನಮೆಂಟಿನವರು ಟೆಲಿಫೋನ್

ಟ್ಯಾಪ್ ಮಾಡುತ್ತಾರೆ. ಟೆಲಿಫೋನ್ ಟ್ಯಾಪ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಟೆಲಿಕಮ್ಯುನಿಕೇಷನ್ ಡಿಪಾರ್ಟ್‌ಮೆಂಟಿಗೆ ಬರವಣಿಗೆಯಲ್ಲಿ ಕೊಡುತ್ತಾರೆ, ಟೆಲಿಕಮ್ಯುನಿಕೇಷನ್ಸ್ ಡಿಪಾರ್ಟ್‌ಮೆಂಟಿನವರು ಇದರಲ್ಲಿ ಪೊಲಿಟಿಷಿಯನ್ಸ್ ಹೆಸರಿದೆ, ಇದು ರೂಲ್ಸಿಗೆ ವಿರುದ್ಧವಾದುದು, ಆದ್ದರಿಂದ ಪರ್ಮಿಷನ್ ಕೊಡುವುದಿಲ್ಲ ಎಂದು ಏತಕ್ಕೆ ಹೇಳಬಾರದಾಗಿತ್ತು ? ಅವರು ಏತಕ್ಕೆ ಹೇಳಲಿಲ್ಲ ? ಇಷ್ಟೇ ನಾನು ತಮ್ಮನ್ನು ಕೇಳುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ದಯವಿಟ್ಟು ಇದರ ಸೆಕ್ಷನ್ಸ್ ಸರಿಯಾಗಿ ಓದಿ. ಓದಿದ ಮೇಲೆ ಈ ಪ್ರಶ್ನೆ ಕೇಳಿದರೆ ಒಳ್ಳೆಯದು.

SRI R. V. DHESHPANDE.—Central or State, can't the Telephone Department say 'on'.

SRI M. VEERAPPA MOILY.—They can't.

SRI R. V. DHESHPANDE.—They can say.

ಶ್ರೀ ಎಂ. ರಘುಪತಿ.—ಅವರು ರೆಫ್ಯೂಸ್ ಮಾಡಬಹುದಾಗಿತ್ತಲ್ಲ.

ಶ್ರೀ ಎಸ್. ಬಂಗಾರಪ್ಪ.—ರಘುಪತಿಯವರೇ, ಆ ರೀತಿ ಇಲ್ಲ.

ಶ್ರೀ ಎಂ. ರಘುಪತಿ.—ನಾನು ಕೃಷ್ಣನ್ ಅವರನ್ನು ಕೇಳುತ್ತೇನೆ. ಸ್ಟೇಟ್ ಗೌರ್ನಮೆಂಟಿನವರು ಎನ್‌ಕ್ವೈರಿ ಮಾಡಿ ಎಂದು ತಾವು ಹೇಳಿದಿರಲ್ಲ, ಟೆಲಿಕಮ್ಯುನಿಕೇಷನ್ ಇಲಾಖೆ ಸೆಂಟ್ರಲ್ ಗೌರ್ನಮೆಂಟ್ ಕೈಯಲ್ಲಿರುವುದರಿಂದ ನಾವು ಕೋ-ಆಪರೇಟ್ ಮಾಡುವುದಿಲ್ಲ ಎಂದು ಅವರು ರೆಫ್ಯೂಸ್ ಮಾಡಿದರೆ ಏನು ಮಾಡುವುದು ?

ಶ್ರೀ ಎಸ್. ಬಂಗಾರಪ್ಪ.—ಟೆಲಿಫೋನ್ ಕೂಡ ಟೆಲಿಗ್ರಾಫ್ ಆಕ್ಟ್ ಕೆಳಗೆ ಬರುತ್ತದೆ. ಮಾನ್ಯ ರಘುಪತಿಯವರು ಯಾವ ಸೆಕ್ಷನ್ಸ್ ಓದಿದ್ದಾರೋ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ 5(2) ಸೆಕ್ಷನ್ ಕೆಳಗೆ ಇದು ಬರುತ್ತದೆ. ಇದರಲ್ಲಿ Central Government *sou moiu*, ಹೇಗಿದೆ ಹಾಗೆಯೇ State Government also *sou motu*, without the permission without applying for the permission from Telecommunications Department, they can immediately start tapping the telephones. ಹೀಗಿರುವುದರಿಂದ ಪರ್ಮಿಷನ್ ತೆಗೆದುಕೊಳ್ಳತಕ್ಕ ಪ್ರಶ್ನೆ ಬರುವುದಿಲ್ಲ. ಪರ್ಮಿಷನ್ ಕೊಡಬೇಕು ಅಂತ ಎಲ್ಲಿದೆ ತೆಗೆದು ತೋರಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ರಘುಪತಿಯವರು ಈಗ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಈ ಪ್ರಶ್ನೆ ಅರ್ಥ ಇಷ್ಟೆ. ಅದೇನೆಂದರೆ, ಕೇಂದ್ರ ಸರ್ಕಾರದ ಟೆಲಿಗ್ರಾಫಿಕ್ ಡಿಪಾರ್ಟ್‌ಮೆಂಟ್‌ನವರಿಗೆ ಬರೆದುಕೊಂಡರೂ ಕೂಡ ಅವರು ಕೊಡುವುದಕ್ಕಾಗುವುದಿಲ್ಲ ಅಂತ ಹೇಳಬಹುದಾಗಿತ್ತಲ್ಲ ಅಂತ ಅವರು ಕೇಳಿದ್ದಾರೆ. ಅದಕ್ಕೆ ಪ್ರಾವಿಜನ್ ಇದೆಯೇ ? ಅದಕ್ಕೆ ಪ್ರಾವಿಜನ್ ಇಲ್ಲ, ಇದರಲ್ಲಿ ಏನಾಗಿದೆ ಎಂದರೆ ಈ ರೀತಿಯ ಅಧಿಕಾರವನ್ನು ಯಾರು ಕೇಳುತ್ತಾರೋ ಅವರು ಅಂತಹ ಎಮರ್ಜೆನ್ಸಿ ಇದೆಯೇ ಹಾಗೂ ಪಬ್ಲಿಕ್ ಎಮರ್ಜೆನ್ಸಿ ಇದೆಯೇ ಎಂಬುದನ್ನು ಯೋಚನೆ ಮಾಡಿ ಆರ್ಡರ್ ಮಾಡಿ ಕೇಳಬೇಕು.

SRI R. V. DHESHPANDE.—Do you say it is mandatory ?

SRI M. S. KRISHNAN.—It is obligatory according to me.

SRI R. V. DHESHPANDE.—Suppose illegal order is passed, why the department should take note of it ? If it is contrary to law, they can refuse.

SRI M. VEERAPPA MOILY.—How could it be ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾರೂ ಸಹ ಅಧಿಕಾರದಲ್ಲಿರುವಂತಹ ಜನ ಹೇಳುವಂತಹದ್ದನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುವ ಧೈರ್ಯ

ಎಷ್ಟು ಅಧಿಕಾರಿಗಳಲ್ಲಿದೆ ? ಆ ರೀತಿ ಮಾಡುವುದಕ್ಕಾಗುವುದಿಲ್ಲ. ಇವತ್ತು ಈ ಒಂದು ಪ್ರಕರಣಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ಈ ಸರ್ಕಾರವೇ ತೆಗೆದುಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಹೀಗಿರುವಾಗ ಅವರು ಮೊದಲು ಯೋಚನೆ ಮಾಡಬೇಕಾಗಿತ್ತು.

ಶ್ರೀ ಆರ್. ಎನ್. ನಾಯಕ್.—ಪಾರ್ಲಿಮೆಂಟ್‌ನಲ್ಲಿ ನಿಮ್ಮ ಜನರು ಇದ್ದರೂ, ಅವರು ಏಕೆ ಅಲ್ಲಿ ಕೇಳಲಿಲ್ಲ. ಇಲ್ಲಿಂದ ಒಬ್ಬರನ್ನು ಆರಿಸಿ ಕಳುಹಿಸಿದ್ದೀರಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಕಳುಹಿಸಿದ್ದೇವೆ. ಈಗಾಗಲೇ ಅವರು ಕೇಳಿದ್ದಾರೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನೀವಾದರೂ ಅಲ್ಲಿಗೆ ಹೋಗಿ.

ಶ್ರೀ ವೇದಾಂತ ಹೆಮ್ಮಿಗೆ.—ಕೇಂದ್ರ ಸರ್ಕಾರದ ಪಿತೂರಿಯೂ ಇದರಲ್ಲಿದೆ.

ಶ್ರೀ ಎಂ. ರಘುಪತಿ.—ನಾನು ಇಷ್ಟೇ ಹೇಳುವುದು, ಎಮರ್ಜೆನ್ಸಿ ಇದ್ದರೆ ಮಾತ್ರ ಮಾಡುವಂತಹ ಕೆಲಸ ಇದು. ಇಲ್ಲಿ ಅಂತಹ ಎಮರ್ಜೆನ್ಸಿ ಇಲ್ಲ, ಇದರಿಂದ ರಾಜ್ಯ ಸರ್ಕಾರದವರು ಇದನ್ನು ಏಕೆ ಉಪಯೋಗಿಸಿದರು ಎಂಬುದಾಗಿ ಕೇಂದ್ರ ಸರ್ಕಾರದವರೇ ನೇರವಾಗಿ ಇದನ್ನು ರಿಜೆಕ್ಟ್ ಮಾಡಬಹುದಾಗಿತ್ತು. ಆ ಒಂದು ಪಾಯಿಂಟ್‌ನ್ನೂ ಕೂಡ ತಾವು ಗಮನದಲ್ಲಿಡಬೇಕು.

ಶ್ರೀ ಕೆ. ಬಿ. ಶಾಣಪ್ಪ.—ನೀವು ಮೊದಲು ಕೇಳಿದ್ದು ಏಕೆ ಅಂತ ನಾವು ಕೇಳುತ್ತಿದ್ದೇವೆ.

ಶ್ರೀ ಎಂ. ರಘುಪತಿ.—ಶ್ರೀಮಾನ್ ಯಡಿಯೂರಪ್ಪನವರು ಯಾವ ಅಧಿಕಾರಿಗಳೂ ಸಹ ಅಧಿಕಾರದಲ್ಲಿರುವಂತಹ ಜನರ ಮಾತನ್ನು ಕೇಳದೇ ಇರುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ ಟೆಲಿಕಮ್ಯುನಿಕೇಷನ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಯಾರು ಇದ್ದಾರೆ, ಅವರು ಜನರಲ್ ಮ್ಯಾನೇಜರ್ ಹಾಗೂ ಇನ್ನಿತರೆ ಅಧಿಕಾರಿಗಳು ರಾಜ್ಯ ಸರ್ಕಾರದ ಕೈಕೆಳಗೆ ಕೆಲಸ ಮಾಡುತ್ತಿಲ್ಲ. ಕೇಂದ್ರ ಸರ್ಕಾರದ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಅರ್ಥ ಮಾಡಿಕೊಂಡ ಹಾಗೆ......

ಶ್ರೀ ಬಿ. ಎ. ಉಮರಬ್ಬ.—ಈ ಚರ್ಚೆ ಪ್ರಾರಂಭವಾಗುವಾಗ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಯಾರು ಸದನದಲ್ಲಿ ಇಲ್ಲವೋ ಅಂತಹವರ ಬಗ್ಗೆ ಆಪಾದನೆಗಳನ್ನು ಮಾಡುವಂತಹ ಟೀಕೆಗಳನ್ನು ಮಾಡುವಂತಹದ್ದು ಸಮಂಜಸವಾದುದಲ್ಲ ಅಂತ ಹೇಳಿದರು. ಅದು ನಮಗೆ ಅಲ್ಲವೋ ಅಲ್ಲ ಅವರ ಪಾರ್ಟಿಯ ಶ್ರೀಮಾನ್ ರಘುಪತಿಯವರಿಗೆ ಹೇಳಿದರೋ ಅಂತ ಕೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದೇನೆಂದರೆ, ಮಾನ್ಯ ರಘುಪತಿಯವರಿಗೆ ಉತ್ತರ ಕೊಡುವುದಕ್ಕಲ್ಲ ನಾನು ನಿಂತು ಮಾತನಾಡುತ್ತಿರುವುದು. ನಾನು ಅರ್ಥ ಮಾಡಿಕೊಂಡಿರುವ ಸೆಕ್ಷನ್ ಪ್ರಕಾರ ಮೂಲಭೂತವಾಗಿ ಯಾವ ಸರ್ಕಾರ ಯಾವೊಬ್ಬ ಅಧಿಕಾರಿಗೆ ಒಂದು ಅಧಿಕಾರವನ್ನು ಅಂದರೆ ಟೆಲಿಫೋನ್ ಟ್ಯಾಪಿಂಗ್‌ಗೆ ಕೊಟ್ಟಿದ್ದಾರೋ ಆ ರೀತಿಯಾಗಿ ನಮ್ಮಲ್ಲಿ ಪಬ್ಲಿಕ್ ಎಮರ್ಜೆನ್ಸಿ ಇತ್ತೆ ಎಂಬುದನ್ನು ಯೋಚನೆ ಮಾಡಬೇಕಾಗಿತ್ತು. ಯಾವ ಕಾರಣಕ್ಕೋಸ್ಕರ ಮಾಡಬೇಕು ಎಂಬುದನ್ನು ಯೋಚನೆ ಮಾಡಿ ಹೇಳಬೇಕಾಗಿತ್ತು. ಈ ರೀತಿ ಕೊಟ್ಟಿರುವಂತಹ ಅಧಿಕಾರವನ್ನು ರದ್ದು ಮಾಡುವಂತಹ ಅಧಿಕಾರ ಟೆಲಿಫೋನ್ ಇಲಾಖೆಗೆ ಇಲ್ಲ. ರೂಲ್ ಮೇಕಿಂಗ್ ಬಾಡಿಗೆ ಆ ಒಂದು ಅಧಿಕಾರ ಈ ರೂಲ್ಸ್‌ನಲ್ಲಿ ಇಲ್ಲ. ಈ ಅಧಿಕಾರಿ ಅವರಿಗೆ ಹೇಳಿದಾಗ, ಅದಕ್ಕೆ ಮುಂಚೆ ಯೋಚನೆ ಮಾಡಿ ಹೇಳಬೇಕಾಗುತ್ತದೆ. ಇದು ತಪ್ಪು ಅಂತ ಅಂದರೆ, ಕೇಂದ್ರ ಸರ್ಕಾರಕ್ಕೆ ಗೊತ್ತಾದಾಗ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬಹುದೇ. ವಿನಃ ಕೆಳಮಟ್ಟದಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆದರೆ ನೀವು ಹೇಳಬಹುದು, ನಮಗೆ ಆ ರೀತಿ ಮಾಡುವುದಕ್ಕೆ ಅಧಿಕಾರ ಇದೆ, ಮಾಡುತ್ತೇವೆ ಎಂದು. ಬೇರೆಯವರಿಗೆ ಅಧಿಕಾರ ಇರಬಹುದು. ನನಗನ್ನಿಸಿದ ಹಾಗೆ ನಾವು ಆ ರೀತಿಯ ಹಕ್ಕು ಇಲ್ಲ ಅಂತ ಹೇಳುವುದಿಲ್ಲ. ಈ ಸರ್ಕಾರಕ್ಕೆ, ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಟೆಲಿಫೋನ್ ಟ್ಯಾಪ್ ಮಾಡುವುದಕ್ಕೆ ಅಧಿಕಾರ ಇದೆ. ಅದೇ ರೀತಿ ಕೇಂದ್ರ

ಸರ್ಕಾರಕ್ಕೂ ಹಕ್ಕಿದೆ. ಆದರೆ ಇದು ಹಕ್ಕಿನ ಪ್ರಶ್ನೆ ಅಲ್ಲ. ಅದನ್ನು ಯಾವ ರೀತಿ ಉಪಯೋಗಿಸುತ್ತಾರೆ ಎನ್ನುವುದು ಪ್ರಶ್ನೆ. ಜ್ಯುಡಿಷಿಯಸ್ಸಾಗಿ ಮಾಡುತ್ತಾರಾ ? In accordance with the rule and acts ಉಪಯೋಗಿಸುತ್ತಾರಾ ? In conformity with the Constitution ಉಪಯೋಗಿಸುತ್ತಾರಾ ? ಅಥವಾ ಅದನ್ನು ವಯಲೇಟ್ ಮಾಡುವ ರೀತಿಯಲ್ಲಿ ಮಾಡುತ್ತಾರಾ ಎಂಬುದು ಇಲ್ಲಿರುವ ಪ್ರಶ್ನೆ. ನನಗೆ ಏನು ಕಾಣುತ್ತದೆ ಎಂದರೆ. ಈ ಆಕ್ಟ್‌ಗೆ ವಿರುದ್ಧವಾಗಿ ನಡೆಸಿಕೊಂಡಿದ್ದಾರೆಂದು ನನ್ನ ಭಾವನೆ. ಈ ಪ್ರಶ್ನೆ ಪಾರ್ಲಿಮೆಂಟ್‌ನಲ್ಲಿ ಬಂತು. ಅಲ್ಲಿ ಚರ್ಚೆಗೆ ಬಂದಾಗ ಮಧು ದಂಡವತೆಯವರು ಇದ್ದರು. ರಾಜೀವಗಾಂಧಿಯವರು ಏನು ಹೇಳಿದ್ದಾರೆ ಎಂದರೆ, ಇದು ೧೦-೮-೮೮ ರಂದು ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಏನು ಹೇಳುತ್ತಾರೆಂದರೆ.—

"Prime Minister: Let me finish what I was saying. What I will say is what has happend in Karnataka, as far as I believe, is outside the purview of the act, of the law. He could not have asked for the telephones of politicians to be tapped when he has asked for it to be done. Karnataka has violated the rules under the Act. We will definitely look into what has happened. Not only that, Sir, we will amend the rules to see that such violations cannot take place again.

MR. INDRAJIT GUPTA (CPI).—Who is violating the rules ?

Prime Minister: Sir, it is the Karnataka Government that is violating the rules.

Mr. Dandavate tried to say something, but could not be heard in the shouting and counter-shouting."

What I am trying to say is that if the contention of our friends is that the Centre is responsible, they should have raised it in the Parliament at that time. We cannot speak as to why they did not say. I do not know whether Hon. Member Sri Dandavate who was there has raised it. You would have told the Prime Minister 'You have no right to say like this. You have also violated the rules.' Unfortunately except Mr Jaipal Reddy in an earlier instance, none has said so. 'ಇಂಡಿಯನ್ ಟೆಲಿಫೋನ್ ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಿದ್ದಾರೆಂದು ನಿಮ್ಮ ಸದಸ್ಯರು ಕೇಳಬಹುದಾಗಿತ್ತು. ಆದರೂ ಕೇಳಲಿಲ್ಲ. ಅಂದೂ ಕೇಳಿಲ್ಲ. ಇದರಿಂದ ಏನು ಇನ್‌ಫರನ್ಸ್ ಬರುತ್ತದೆ ? ಅವರೂ ಕೂಡಾ ಒಪ್ಪಿಕೊಳ್ಳುತ್ತಾರೆ ನಿಮ್ಮ ಸದಸ್ಯರು ಅಲ್ಲಿ ಏಕೆ ಕೇಳಿಲ್ಲ ಎಂದರೆ ಏನು ಇನ್‌ಫರೆನ್ಸ್ ಬರುತ್ತದೆ ? ಇದರಲ್ಲಿ ರಾಜ್ಯ ಸರ್ಕಾರದ್ದೂ ನಿರ್ದಿಷ್ಟ ಜವಾಬ್ದಾರಿ ಇಲ್ಲ, ಕಾನೂನು ಪ್ರಕಾರ ಇದನ್ನು ನಿರ್ವಹಿಸಿಲ್ಲ ಎಂದು ಅವರೂ ಕೂಡಾ ಒಪ್ಪಿಕೊಳ್ಳುತ್ತಾರೆನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ತೀರ್ಮಾನಕ್ಕೆ ಬರುವುದರಿಂದ ಬಹಳ ತೊಂದರೆಗಳು ಬರುತ್ತವೆ. ಕೇಂದ್ರ ಸರ್ಕಾರ ಏನೂ ಮಾಡಿಲ್ಲ ಎಂದಲ್ಲ. ಅವರೂ ತಪ್ಪು ಮಾಡಿದ್ದಾರೆಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ರೀತಿ ಮಾಡಿದ್ದಾರೆಯೋ ಇಲ್ಲವೋ ಎಂಬುದು ಹೊರಗಡೆ ಬಂದಿಲ್ಲ, ಪಬ್ಲಿಷ್ ಆಗಿಲ್ಲ. ಪಬ್ಲಿಷ್ ಆಗಿದ್ದರೆ ಅವರ ಬಣ್ಣ ಕೂಡಾ ಬಯಲು ಆಗುತ್ತಿತ್ತು. ಇಲ್ಲಿ ಮೂಲಭೂತವಾದ ಪ್ರಶ್ನೆ, ಜವಾಬ್ದಾರಿ ಏನೆಂದರೆ State Government cannot amend the Indian

Telegraphs Act. The Indian Telegraphs Act can only be amended by the Centre. Even the Postal Act can only be amended by the Centre. Why is it that the Centre has not done it all these years even though Nehruji has pointed it out. When Prime Minister Indira Gandhi had said that it is to be amended even till to-day it is not amended. ಇಷ್ಟೆಲ್ಲಾ ಗಲಾಟೆ ಆದಮೇಲೆ, ರಾಮಕೃಷ್ಣ ಹೆಗ್ಡೆಯವರು ರಾಜೀನಾಮೆ ಕೊಟ್ಟು ಆವಮೇಲೆ ಪಾರ್ಲಿಮೆಂಟಿನಲ್ಲಿ ಬಂದು 'We have to amend it' ಎಂದು ಈಗ ನಾನು ಓದಿ ಹೇಳಿದಹಾಗೆ ಹೇಳುತ್ತಿದ್ದಾರೆ. I think that is not fair. The role of the Central Government in this is not fair. Telephone tapping, whether it is done by this government or that government is obnoxious, highly condemnable, opposed to all channels of justice and Constitutional rights. It violates my rights. It should not have been done, except unless you prove by a written order saying that he is dangeroue to community, society and he is opposed to sovereignty of India, etc.

ಶ್ರೀಮತಿ ನಾಗರತ್ನಮ್ಮನವರನ್ನು ತೆಗೆದುಕೊಂಡು ಹೋಗಿ ಇವರು ಡೇಂಜರಸ್ ಟು ಸೊಸೈಟಿ ಎಂದು ಹೇಳಿದರೆ ಅದು ನನಗೆ ಅರ್ಥವಾಗುವುದಿಲ್ಲ. ಮಾನ್ಯ ರಘುಪತಿಯವರನ್ನು ತೆಗೆದುಕೊಂಡು ಹೋಗಿ ಆ ರೀತಿ ಹೇಳಿದರೆ ಹೇಗೆ ? ಅವರು ಯೂತ್ ಮೂವ್‌ಮೆಂಟ್‌ನಲ್ಲಿ ಕೆಲಸ ಮಾಡಿದವರು. ಮಾನ್ಯ ದೇವೇಗೌಡರು ಹಾಗೆಂದು ಹೇಳುವುದು ಸರಿಯೆ ? ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟ ಮಾಡಿದವರು. ಇವರುಗಳ ಟೆಲಿಫೋನ್‌ಗಳನ್ನು ಟ್ಯಾಪ್ ಮಾಡಿಯೆಂದು ಯಾರು ಹೇಳುವ ಮಾತು ? ಇದು ಅರ್ಥವಾಗದ ಮಾ . ಖಂಡಿತವಾಗಿಯೂ ಇದು ಬಹಳ ಖಂಡನೀಯ. ಇನ್ನೊಂದು ಮುಖ್ಯವಾದ ವಿಷಯ. We need not be more caustic on phone tapping. It is not only my Constitutional right that is affected, according to Section 19(2) but also my privacy is affected. Privacy is also affected. ಏಕೆಂದರೆ ಪ್ರೈವಸಿ ಅಂದರೇನು ? ಹಾಗೆಂದರೆ ಅದರ ಅರ್ಥ ಕನ್ನಡದಲ್ಲಿ 'ವ್ಯಕ್ತಿಗತ ಗೌಪ್ಯ' ಎಂದು ಹೇಳಿದರು. ಆ ಪದವನ್ನು ಉಪಯೋಗಿಸಿದ್ದಾರೋ ಇಲ್ಲವೋ ಗೊತ್ತಿಲ್ಲ, ಅದರ ಬಗ್ಗೆ ಹೇಳುವುದಾದರೆ ಬಂಗಾರಪ್ಪನವರ ಮತ್ತು ಶಿವಮೂರ್ತಿಯವರ ಅವರ ನಡುವೆ ನಡೆದ ಸಂಭಾಷಣೆಯನ್ನು ನಾನು ಓದಿದ್ದೇನೆ. ಅದು ನನ್ನ ಹತ್ತಿರವಿದೆ, ನಿಮಗೆ ಬೇಕಾದರೆ ಕಳುಹಿಸಿ ಕೊಡುತ್ತೇನೆ ನೋಡಿ. It affects the privacy. ಅದು ನಿಮ್ಮ ಹತ್ತಿರ ಕೂಡ ಇರಬಹುದು. ಅದೇ ರೀತಿ ಮೂಪನಾರ್ ಮತ್ತು ಬಂಗಾರಪ್ಪ ನಡುವೆ ನಡೆದ ಫೋನ್ ಸಂಭಾಷಣೆ. How can Mr. Bangarappa function if this privacy is also not ensured ? ಬಂಗಾರಪ್ಪನವರನ್ನು ಬಿಡಿ, ನಾನೇ ಫೋನ್ ಮಾಡಿ ಇಂತಹವರು ಸರಿಯಿಲ್ಲ ಅವರು ಕೆಟ್ಟವರು ಎಂದು ಹೇಳುತ್ತೇನೆ. ನಾನು ಸಿಂಧ್ಯಾರವರ ಬಗ್ಗೆ ಹೇಳಿರುತ್ತೇನೆ, ಅವರು ಮಂತ್ರಿಗಳಾಗಿರುತ್ತಾರೆ. ಅವರು ನನ್ನ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ ? ಫೋನ್ ಟ್ಯಾಪ್ ಮಾಡಿದಾಗ ಎಲಾ ಕಳ್ಳ ಹೀಗೆ ಮಾಡುತ್ತಿದ್ದೀಯಾ. ನನ್ನ ಹತ್ತಿರ ಬಂದಾಗ ಸಿಹಿ ಸಿಹಿಯಾಗಿ ಮಾತನಾಡುತ್ತಾ ಈ ರೀತಿ ಮಾಡುತ್ತಿದ್ದೀಯಾ ಎಂದು ನಮಗೆ ಏನೇನು ತಕರಾರು ಕೊಡಬೇಕೋ, ಅದನ್ನೆಲ್ಲಾ ಕೊಡುವಂತಹ ಶಕ್ತಿ ಅವರಿಗಿರುತ್ತದೆ, ಅದನ್ನು ಉಪಯೋಗಿಸುತ್ತಾರೋ ಬಿಡುತ್ತಾರೋ ಅದು ಬೇರೆ ಸಮಾಚಾರ. ದುರದೃಷ್ಟ, ಇವತ್ತಿನ ದಿವಸ ಆ ರೀತಿ ಮಾಡಿದ್ದಾರೆ. Privacy is not a small thing. I am reading from a lecture given by Justice E. S. Venkataramaiah, who is now in Supreme Court in the Advocates Association. It is published in

the "Freedom of press from recent trends" It is a very enlightening one. It is as follows :

> "In fact, the expression 'privacy' could possible comprise so many aspects of human life. Thus there is the privacy of 'home' which may be safeguarded by conferring legal protection against invasion of the home. Invasion of the home may take place physically by entry or in other manner e.g., by secret electronic devices of survelliance. Privacy again may connote privacy of communications, violated by interception of communication, e.g., telephone tapping. Then, there is personal privacy infringed by taking unauthorised photographs. Again, there is marital privacy-privacy of the bedroom Sometimes, breach of confidence is also regarded as falling under the topic of privacy."

This question of privacy was gone into by what is known as the Younger Committee on privacy in the United Kingdom in 1972.

> "The Younger Committee on Privacy in the United Kingdom (1972) found it difficult to define the expression 'privacy.' It thought that the best way to ensure regard for privacy was to provide specific and effective sanction against clearly defined activities which unreasonably frustrate the individual in his search of privacy. The Committee enumerated some such activities and proposed legislation to create a new offence and a new tort of publishing information obtained by unlawful means. The Royal Commission on the Press agreed with the views of the Committee on Privacy and expected a draft bill for limiting the right of newspapers to publish documents given to them in confidence. In 1976 the Press Council of the United Kingdom issued guidelines to editors regarding the publication of stories about private lives of individuals :
>
> (i) The publication of information about the private lives or concerns of individuals without their consent is only acceptable if there is a legitimate public interest overriding the right of privacy.

You cannot just disregard it. The most important aspect is that it is overriding the right of privacy.

> (ii) It is the responsibility of editors to ensure that inquiries into matters affecting the private life or concerns of individuals are only undertaken where in the editor's opinion at the time a legitimate public

interest in such matters may arise. The right to privacy is however not involved if the individuals concerned have freely and clearly consented to the pursuit of inquiries and publication.

(iii) The public interest relied on as the justification for publication or inquiries which conflict with a claim to privacy must be a legitimate and proper public interest and not only synonymous with in the public interest. It should be recognised that entry into public life does not disqualify an individual from his right to privacy about his private affairs, save when the circumstances relating to the private life of an individual occupying a public position may be likely to affect the performance of his duties or public confidence in him or his office.

(iv) Invasion of privacy by deception, eavesdropping or tecenological methods which are not in themselves unlawful can however only be justified when it is in pursuit of information which ought to be published in the pnblic interest and there is no other reasonably practicable method of obtaining or confirming it."

When it is in pursuit of information which is not in publ i interest that is also defined under this constitution. This is a very important aspect. I think they have floundered here. There also they have floundered because you cannot say that information either of Smt. Nagarathnamma or Deve Gowda is coming under this category. That is why privacy is terribly affected. The next question is my right under the constitution is affected. My privacy is affected because of this phone tapping. What should be done is the question. ಶ್ರೀ ರಾಮಕೃಷ್ಣ ಹೆಗಡೆಯವರು ಜ್ಯೂಡಿಶಿಯಲ್ ಎನಕ್ವೈರಿ ಮಾಡಿ ಎಂದು ಕೇಂದ್ರದವರಿಗೆ ಹೇಳಿದ್ದಾರೆ. ಕೇಂದ್ರ ಹಾಗೂ ರಾಜ್ಯಗಳಿಗೆ ಅನ್ವಯಿಸುವ ಹಾಗೆ ಒಂದೇ ಸಲ ಮಾಡಿ ಎಂದು ಹೇಳಿದ್ದಾರೆ. ಶ್ರೀ ಖರ್ಗೆಯವರು ಐ.ಪಿ.ಸಿ. ಪ್ರಕಾರ ಹೆಗಡೆಯವರನ್ನು ಪ್ರಾಸಿಕ್ಯೂಟ್ ಮಾಡಿ ಎಂದು ಹೇಳಿದ್ದಾರೆ. ಮತ್ತೆ ಶ್ರೀ ಕೆ. ಹೆಚ್. ಪಾಟೀಲರು ಬೇರೆ ರೀತಿಯಲ್ಲಿ ಹೇಳಿದ್ದಾರೆ. ಇಲ್ಲಿ ಪ್ರಶ್ನೆ ಮೊದಲು ಬರುವುದು ಏನೆಂದರೆ ಈ ವಿಷಯ ಉದ್ಭವವಾಗಿರುವುದು ಎಲ್ಲಿಂದ ?

ನಾವು ಈ ಮನೆಯಲ್ಲಿ ಮಾತನಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ಇಲ್ಲಿ ಬಂದು ಇವತ್ತಿನ ದಿವಸ ಎಲ್ಲದರ ಬಗ್ಗೆಯೂ ತನಿಖೆ ಮಾಡಿ ಎಂದು ಹೇಳಿದರೆ, ಅದು ಇವತ್ತಿನದಿವಸ ಎಷ್ಟು ಸರಿಯಾಗುತ್ತದೋ ನನಗೆ ಗೊತ್ತಿಲ್ಲ. ಒಂದು ಹೇಳಬಹುದು, ತಪ್ಪಿಲ್ಲ, ನನ್ನ ಅಭಿಪ್ರಾಯದಲ್ಲಿ ಈ ಮನೆಯಲ್ಲಿ ಏನು ಮಾಡಬೇಕೋ ಅದನ್ನು ಯೋಚನೆ ಮಾಡೋಣ. ಆಮೇಲೆ ಕೇಂದ್ರ ಸರ್ಕಾರದ ಜೊತೆ ಮಾತನಾಡೋಣ. ಮೊದಲು ನನಗನಿಸುತ್ತದೆ, ಇಲ್ಲಿ ನನ್ನ ಅಭಿಪ್ರಾಯದಲ್ಲಿ ಹೌಸ್‌ಕಮಿಟಿ ಮಾಡೋಣ. ಇಲ್ಲವೇ ನೀವು ಜುಡಿಷಿಯಲ್ ಎನ್‌ಕ್ವೈರಿ ಮಾಡುತ್ತೀರಾ, ಮಾಡಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಬ್ಬರು ತಪ್ಪು ಮಾಡಿದ್ದಾರೆಂದು ಗೊತ್ತಾದರೂ ಕೂಡ, When there are provisions in the law to deal with the man who commits the offence, why should we not go ahead with those provisions of law ? ಹೌಸ್ ಕಮಿಟಿ ಮಾಡಿ, ಬೇರೆ ರೀತಿಯಿಂದ ಏನು ಯೋಚನೆ ಮಾಡಬೇಕೋ ಮಾಡಿ. ತಪ್ಪು ಮಾಡಿದ್ದಾರೆಂಬುದನ್ನು ಕಾನೂನು ಪ್ರಕಾರ ಯೋಚಿಸಿದ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಏಕೆ ಹಿಂದುಮುಂದು ನೋಡಬೇಕು. ಇದಕ್ಕೆ ಹೌಸ್ ಕಮಿಟಿಯವರು ಪನಿಷ್‌ಮೆಂಟ್ ಕೊಡುವುದಕ್ಕಾಗುತ್ತದೆಯೇ ?......

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದು ಇಷ್ಟೆ......

ಶ್ರೀ ಆರ್. ವಿ. ದೇಶಪಾಂಡೆ.—ಬೋಫೋರ್ಸ್ ಬಗ್ಗೆ ಯಾರೂ ಯೋಚನೆ ಮಾಡುತ್ತಾ ಇಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೇರವಾಗಿ ಏನು ಮಾಡಿದ್ದೀರಿ ಅದನ್ನು ನಾವು ಹೇಳುತ್ತಿದ್ದೇವೆ. ನಿಮ್ಮಲ್ಲಿ ತಾಕತ್ತು ಇದ್ದರೆ ಅಲ್ಲಿ ಹೋಗಿ ಮಾಡಿಸಿ. ಇಲ್ಲಿ ನಾವು ನಿಮ್ಮನ್ನು ಕೇಳುತ್ತಿದ್ದೇವೆ. ನಿಮಗೆ ತಾಕತ್ತು ಇದ್ದರೆ ಅಲ್ಲಿ ಹೋಗಿ ಮಾಡಿಸಿ, ನಾವು ಬೇಡ ಎನ್ನುವುದಿಲ್ಲ. We have got every right.

SRI R. V. DESHAPANDE.—Brute majority ಇದ್ದರೆ ಏನು ಬೇಕಾದರೂ ಮಾಡಬಹುದು. That is not the question.

SRI MALLIKARJUNA M. KHARGE.—There in Parliament you plead for anything. But here we have got every right to ask when you have committed an offence you should be prosecuted.

(*Interruption*)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮೊದಲು ಪ್ರಾಸಿಕ್ಯೂಟ್ ಮಾಡಬೇಕಾಗಿರುವುದು ಪ್ರೈಮ್ ಮಿನಿಸ್ಟರ್ ಅವರನ್ನು ಏಕೆಂದರೆ ನನ್ನ ಟೆಲಿಫೋನ್ ಕೂಡ ಟ್ಯಾಪ್ ಮಾಡಿದ್ದಾರೆಂದು ಪ್ರೆಸಿಡೆಂಟ್ ಆಫ್ ಇಂಡಿಯಾ ಹೇಳಿದ್ದಾರೆ. ಇದರ ಬಗ್ಗೆ ಯಾರೂ ಮಾತನಾಡುತ್ತಿಲ್ಲ......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮಲ್ಲಿ ಗಟ್ಸ್ ಇದ್ದರೆ ಮಾಡಿ ನೀವು ತಪ್ಪು ಮಾಡಿದನ್ನು ನಾವು ಚರ್ಚೆ ಮಾಡುತ್ತೇವೆ. ಪ್ರೆಸಿಡೆಂಟ್ ಆಫ್ ಇಂಡಿಯಾ ಎಂದು ಏನೇನು ಹೇಳುತ್ತೀರಿ ಅದು ಗೊತ್ತಿದೆ. ಇಂಡಿಯನ್ ಎಕ್ಸ್‌ಪ್ರೆಸ್, ಕನ್ನಡ ಪ್ರಭಾ ಪತ್ರಿಕೆಗಳಿಗೆ ಹೇಳಿದವರು ಯಾರು ಎಂದು ಮುಂದಿನ ದಿನವೇ ಗೊತ್ತಾಯಿತು.........

ಶ್ರೀ ಎಂ. ಎಸ್. ಕೃಷ್ಣನ್.—ನಾವು ಮಾತನಾಡಿದ್ದು ಇವತ್ತಿನ ದಿವಸ, not to defend the Central Government in its action or offend the action of the State Government or only defend them. ನನ್ನ ಅಭಿಪ್ರಾಯದಲ್ಲಿ ಇಬ್ಬರೂ ತಪ್ಪು ಮಾಡಿದ್ದಾರೆ. ಹಾಗಾದರೆ ಇಲ್ಲಿ ಕುಳಿತಿರುವವರು ನಾವು ಏನು ಮಾಡಬೇಕು. ಸೆಂಟ್ರಲ್ ಗವರ್ನಮೆಂಟ್ ಬಗ್ಗೆ ಬರೋಣ. ಅಷ್ಟರೊಳಗೆ ನಮ್ಮ ಸ್ನೇಹಿತರು.........

SRI MALLIKARJUNA M. KHARGE.—You are guilty. You prove that you are guilty.

SRI M. S. KRISHNAN.—Have I no right to say what I wish ? I think I have my right.

ಶ್ರೀ ಡಿ. ಟಿ. ಜಯಕುಮಾರ್.—ನಿಮ್ಮಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿ ಬಿಟ್ಟರೆ, ಈ ರೀತಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟಿರುವ ಉದಾಹರಣೆಯನ್ನು ಹೇಳುತ್ತೀರಾ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೆಗಡೆಯವರೂ ಕೂಡ ಕಾಂಗ್ರೆಸ್‌ನಲ್ಲಿ ಹುಟ್ಟಿ ಬೆಳೆದಿದ್ದಾರೆ ತಲೆ ಮಾತ್ರ ಬೆಳ್ಳಗಾಗಿದೆ......

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ನನ್ನದೇನೂ ಜಾಸ್ತಿ ಇಲ್ಲ, ಮುಗಿಸಿಬಿಡುತ್ತೇನೆ.

ಅಧ್ಯಕ್ಷರು.— ತಾವು ಮಾತನಾಡಿರಿ.

ಶ್ರೀ ಬಿ. ಎ. ಉಮರಬ್ಬ.—ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳು. ಮಾರ್ಕ್ಸ್‌ಕಾರ್ಡ್ ಹಗರಣದಲ್ಲಿ ಅವರು ರಾಜೀನಾಮೆ ಕೊಟ್ಟರು. ಜಯಕುಮಾರ್ ಅವರಿಗೆ ಇದು ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು.— ಉಮರಬ್ಬನವರೇ, ಸಾಕು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.— ಈ ಮನೆಯ ಕಮಿಟಿ ಏತಕ್ಕೆ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಎಂದರೆ, ಇನ್ನೂ ಕೂಡಾ ಇವತ್ತಿನ ದಿವಸ ಕೂಡಾ ಮಾನ್ಯ ಮಾಜಿ ಮುಖ್ಯಮಂತ್ರಿಗಳು ನಾನು ಮಾಡೇ ಇಲ್ಲ ಎಂದು ಹೇಳುತ್ತಿದ್ದಾರೆ. ಅವರು ಮಾಡಿದ್ದಾರೆ ಎಂದು ತೀರ್ಮಾನ ಮಾಡದೇ ಪ್ರಾಸಿಕ್ಯೂಟ್ ಮಾಡಬೇಕೇ, ಹೇಗೆ ಮಾಡುವುದು ಗೊತ್ತಿಲ್ಲ. ಮೊದಲನೆಯದು ಅವನು ಇಂಡಿಯನ್ ಟೆಲಿಗ್ರಾಫ್ ಆಕ್ಟನ್ನು ಉಲ್ಲಂಘನೆ ಮಾಡಿದ್ದಾರೆ ಎಂಬುದು ಒಂದು, ಮಾನ್ಯ ರಘುಪತಿಯವರು ಬೇರೆ ಒಂದು ಪ್ರಶ್ನೆ ಎತ್ತಿದ್ದಾರೆ. ಇದನ್ನೆಲ್ಲಾ ಯೋಚನೆ ಮಾಡುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಇಲ್ಲಿ ಕಾನೂನಿನ ವಿಷಯ ಮತ್ತು ರಾಜಕೀಯ ವಿಷಯ ಅಡಕವಾಗಿದೆ. ರಾಜಕೀಯ ಮತ್ತು ಕಾನೂನು ಎರಡೂ ಇರುವುದರಿಂದ ಈ ಮನೆಯ ಸಮಿತಿಯನ್ನು ಮಾಡಿದರೆ ಎಲ್ಲರೂ ವಿವರವಾಗಿ ನೋಡುವುದಕ್ಕೆ ಅವಕಾಶವಾಗುತ್ತದೆ. ಈ ಮನೆಯ ಸಮಿತಿ ಸ್ಪಷ್ಟವಾದ ಅಭಿಪ್ರಾಯ ಕೊಟ್ಟ ಮೇಲೆ, ಅದರ ಆಧಾರದ ಮೇಲೆ ಕಾನೂನು ದೃಷ್ಟಿಯಿಂದ ಆಕ್ಷನ್ ತೆಗೆದುಕೊಳ್ಳಬೇಕೇ, ಬೇಡವೇ, ರಾಮಕೃಷ್ಣ ಹೆಗಡೆಯವರ ಮೇಲೆ. ಹಿಂದಿನ ಚೀಫ್ ಸೆಕ್ರೆಟರಿಯವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೇ ಬೇಡವೇ ಎಂಬುದನ್ನು ಕಮಿಟಿ ಹೇಳುತ್ತದೆ. ಈ ದೃಷ್ಟಿಯಿಂದ ಕಮಿಟಿ ಮಾಡಬೇಕೆಂದು ನಾನು ಹೇಳಿದೆ. ಎರಡನೆಯದು ನಾನಾದರೂ ನಮ್ಮ ಕಾಂಗ್ರೆಸ್ ಮಿತ್ರರಲ್ಲಿ ಕೇಳಿಕೊಳ್ಳುವುದು ಎಂದರೆ, ಅವರಿಗೂ ಜವಾಬ್ದಾರಿ ಇದೆ. ಇದು ಬರೀ ನಮ್ಮ ರಾಜ್ಯದ ಪ್ರಶ್ನೆ ಅಲ್ಲ. ಇದು ರಾಷ್ಟ್ರದ ಪ್ರಶ್ನೆ ರಾಷ್ಟ್ರದಲ್ಲಿ ಹೀಗೆ ಆಗಿದೆ ಎಂದು ಪುಕಾರು ಬಂದಿದೆ. ಪಾರ್ಲಿಮೆಂಟ್‌ನಲ್ಲೂ ಕೂಡಾ ಇದರ ಬಗ್ಗೆ ಒಂದು ಸಮಿತಿ ಮಾಡಬೇಕೆಂದು ಕೇಳಿದ್ದಾರೆ.

ಶ್ರೀ ಪಿ.ಜಿ. ಆರ್. ಸಿಂಧ್ಯ.— ಅದಕ್ಕೆ ಅವರು ಒಪ್ಪುವುದಿಲ್ಲ.

ಶ್ರೀ ಎಂ ಎಸ್. ಕೃಷ್ಣನ್.— ಒಪ್ಪುವುದಿಲ್ಲ ಎಂದು ನಮಗೆ ಗೊತ್ತು.

ಶ್ರೀ ಆರ್. ಎನ್. ನಾಯಕ್.— ನಿಮಗೆ ಶಕ್ತಿ ಇದ್ದರೆ ಒಪ್ಪಿಸಬೇಕು. ಇಲ್ಲಿ ನೋಡಿ. ನಾವು ಹೇಗೆ ಒಪ್ಪಿಸುತ್ತೇವೆ. ನಿಮ್ಮ ಪಕ್ಷದವರಿಗೆ ತಾಕತ್ ಇದ್ದರೆ ಒಪ್ಪಿಸುತ್ತಾರೆ.

ಶ್ರೀ ಡಿ. ಟಿ. ಜಯಕುಮಾರ್ — ಅಲ್ಲಿ ನೀವೇ ಒಪ್ಪಿಸಿ.

(ಗೊಂದಲ)

ಅಧ್ಯಕ್ಷರು.— ನಾಯಕ್‌ರವರೇ, ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್, ನಾಯಕ್.— ಪಾರ್ಲಿಮೆಂಟ್ ವಿಚಾರ ಇಲ್ಲಿ ಮಾತನಾಡುತ್ತಾರೆ. ನೀವು ಏತಕ್ಕೆ ಅಲೋ ಮಾಡುತ್ತೀರಿ. ಈ ರೀತಿಯಾದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ ?

(ಗೊಂದಲ)

ಅಧ್ಯಕ್ಷರು.— ಈಗ ಬೇರೆ ಯಾರು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಎಂ. ಎಸ್. ಕೃಷ್ಣನ್‌ರವರು ಮಾತ್ರ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು.— ಗದ್ದಲ ಮಾಡುವುದು ಬೇಡ.

ಶ್ರೀ ಎಂ. ಎಸ್. ಕೃಷ್ಣನ್.— ಪಾರ್ಲಿಮೆಂಟ್‌ನಲ್ಲೂ ಸಹ ಇವತ್ತಿನ ದಿವಸ ಇದೇ ವಿಚಾರ ಚರ್ಚೆಯಾಗಿದೆ, ಇವತ್ತಿನ ದಿವಸ ಪಾರ್ಲಿಮೆಂಟ್‌ನಲ್ಲಿ ಅಲ್ಲಿನ ವಿರೋಧ ಪಕ್ಷದವರು ಬಹಳ ಸ್ಪಷ್ಟವಾಗಿ ಕೇಳಿಕೊಂಡಿದ್ದಾರೆ, ಪಾರ್ಲಿಮೆಂಟ್ ಕಮಿಟಿ ಮಾಡಿ ಎಂದು ಹೇಳಿದ್ದಾರೆ. ಪಾರ್ಲಿಮೆಂಟ್ ಕಮಿಟಿ ಮಾಡಿದರೆ it can get in to these aspects .... ಎಂದು ಚರ್ಚೆಯಾಗಿದೆ. What is there ... ಡೆಮಾಕ್ರಸಿ ಎಂದಮೇಲೆ ಅಲ್ಲೂ ಕೂಡಾ ಮಾಡಬಾರದು ಎಂದು ಏನೂ ಇಲ್ಲ. ಮಾಡಬೇಕೆಂದು ನನ್ನ ಅಭಿಪ್ರಾಯ ಚರ್ಚೆ ನಡೆಯಲಿ. ಯಾರು ಯಾರು ಏನೇನು ಮಾಡಿದ್ದಾರೆ ಎಂಬುದೆಲ್ಲಾ ಹೊರಕ್ಕೆ ಬರಲಿ. ಅದರಲ್ಲಿ ಏನು ತಪ್ಪು ? ಯಾವ ಮಂತ್ರಿ, ಯಾವ ಚೀಫ್ ಮಿನಿಸ್ಟರ್ ಏನೇನು ಮಾಡಿದ್ದಾರೆಂಬುದೆಲ್ಲಾ ಹೊರಬರಲಿ. ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಆರ್. ಎನ್. ನಾಯಕ್.— ನಿಮ್ಮ ಪಕ್ಷದವರು ಪಾರ್ಲಿಮೆಂಟ್‌ನಲ್ಲಿ ಬಹಳ ಜನ ಇದ್ದಾರೆ. ಅಲ್ಲಿ ಹೇಳಿರಿ. ಅವರು ಮಾಡುತ್ತಾರೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ಇಲ್ಲಿ ಏನು ಮಾಡಬೇಕೆಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು.— ಎಲ್ಲರೂ ಕುಳಿತುಕೊಳ್ಳಿರಿ, ನೀವು ಏನು ಮಾತನಾಡುತ್ತಿದ್ದೀರಿ.

೬-೩೦ ಪಿ. ಎಂ.

ಶ್ರೀ ಪಟಮಕ್ಕಿ ರತ್ನಾಕರ್.— ಕೃಷ್ಣನ್‌ರವರು ಮನ ಪೂರ್ವಕವಾಗಿ ಮಾತನಾಡುತ್ತಿದ್ದಾರೆಯೋ ಹೇಗೆ, ನಾನು ಅಷ್ಟು ಹೊತ್ತಿನಿಂದಲೂ ಅವರ ಭಾಷಣ ಕೇಳುತ್ತಿದ್ದೇನೆ.

ಶ್ರೀ ಯು. ಭೂಪತಿ.— ಅವರು ಮಾತನಾಡುವುದು ನಿಮಗೆ ಏನೂ ಅರ್ಥ ಆಗುವುದಿಲ್ಲ, ಕುಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಕೃಷ್ಣನ್‌ರವರು ಅವರಿಗೆ ಬೇಕಾದಹಾಗೆ ಮಾತನಾಡುತ್ತಾರೆ. ನಾಯಕ್‌ರವರು, ರತ್ನಾಕರ್‌ರವರು ಹೇಳಿದಹಾಗೆ ಕೃಷ್ಣನ್‌ರವರು ಮಾತನಾಡಬೇಕೆ ? ನಾವು ಹೇಳಿದ ಹಾಗೆ ಅವರು ಮಾತನಾಡುವುದು ಬೇಡ. ಅವರು ನಿಮ್ಮ ಜೊತೆಯಲ್ಲೇ ಇದ್ದವರು. ಅವರಿಗೆ ಬೇಕಾದಹಾಗೆ ಅವರು ಮಾತನಾಡುತ್ತಾರೆ.

ಶ್ರೀ ಪಟಮಕ್ಕಿ ರತ್ನಾಕರ್.— ಯಾವುದಾದರೂ ಒಂದು ಕಡೆ ರಾಯಭಾರಿ ಕೆಲಸ ಮಾಡಲಿ, ಎರಡೂಕಡೆ ರಾಯಭಾರಿ ಕೆಲಸ ಮಾಡಿದರೆ ಹೇಗೆ ?

ಶ್ರೀ ಯು. ಭೂಪತಿ.— ಪಾರ್ಲಿಮೆಂಟ್‌ನಲ್ಲಿ ಇಂದ್ರಜಿತ್‌ಗುಪ್ತ ಅವರೆಲ್ಲಾ ಇದರ ಬಗ್ಗೆ ಏನು ಹೇಳಿದ್ದಾರೆ ಎಂಬುದು ನಿಮಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ನಾನು ಹೇಗೆ ಮಾತನಾಡಬೇಕೆಂದು ಅವರಿಂದಲೂ ಕಲಿಯಬೇಕಾಗಿಲ್ಲ, ಇವರಿಂದಲೂ ಕಲಿಯಬೇಕಾಗಿಲ್ಲ. ನಾನು ಹೇಗೆ ಬೇಕೋ ಹಾಗೆ ಮಾತನಾಡುತ್ತೇನೆ. ನಾನು ಇಷ್ಟೊಂದು ಸ್ಪಷ್ಟವಾಗಿ ಹೇಳಿದಮೇಲೂ ಈ ರೀತಿ ಹೇಳಿದರೆ ಹೇಗೆ ?

ನಾನು ಹೇಗೆ ಮಾತನಾಡಬೇಕೆಂದು ನಿಮ್ಮಿಂದ ಕಲಿಯಬೇಕಾಗಿಲ್ಲ. ಅವರಿಂದ ಕೂಡ ಕಲಿಯಬೇಕಾಗಿಲ್ಲ. ನಾನು ಹೇಗೆ ಮಾತನಾಡಬೇಕೋ ಹಾಗೆ ಮಾತನಾಡುತ್ತೇನೆ. ತಾವು ಎಷ್ಟು ದೂರ

ಯೋಚನೆ ಮಾಡುತ್ತೀರೋ ಗೊತ್ತಿಲ್ಲ. ಹೌಸ್ ಕಮಿಟಿ ಮಾಡಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ ಪಾರ್ಲಿಮೆಂಟ್‌ನಲ್ಲಿ ಬೇಕಾದರೂ ಒಂದು ಕಮಿಟಿ ಮಾಡಲಿ. ಇದು ನಾನು ಮಾಡಿಲ್ಲವೆಂದು ಶ್ರೀ ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ, ಇದನ್ನು ಪತ್ತೆ ಮಾಡಲು ಒಂದು ಕಮಿಟಿ ಮಾಡಬೇಕು. ಅಥವಾ ಈ ಸದನದಲ್ಲಿ ಒಂದು ನಿರ್ಣಯ ಪಾಸ್ ಮಾಡಿದರೂ ಸಹ ಒಳ್ಳೆಯದೆ. ಅದಕ್ಕೆ ನಮ್ಮ ಸ್ನೇಹಿತರು ಕೋ ಆಪರೇಟ್ ಮಾಡಬೇಕೆಂದು ನಾನು ಹೇಳುತ್ತೇನೆ. ಅದು ಆಗುವುದಿಲ್ಲ ಎಂದು ನನಗೆ ಗೊತ್ತು...

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲ ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಎಂ.ರಘುಪತಿ.—ಒಂದು ನಿಮಿಷ.ನೀವು ರೆಜುಲೂಶನ್ ಮೂವ್ ಮಾಡಿದರೆ ನಾನು ಅದಕ್ಕೆ ಸಂಪೂರ್ಣ ಬೆಂಬಲ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಬಲ ಕೊಡುವ ವಿಚಾರ ಬೇರೆ. ರೆಜುಲೂಶನ್ ಪಾಸ್ ಮಾಡಿದರೆ ಒಳ್ಳೆಯದೆ. ಅದು ಆಗುವುದಿಲ್ಲ, ನನಗೆ ಗೊತ್ತಿದೆ. ಇನ್ನು ಇಂಡಿಯನ್ ಟೆಲಿಗ್ರಾಫ್ ಆಕ್ಟ್‌ಗೆ ಮತ್ತು ಪೋಸ್ಟಲ್ ಆಕ್ಟ್‌ಗೆ ಅಮೆಂಡ್‌ಮೆಂಟ್ಸ್ ತರುತ್ತೇವೆಂದು ಹೇಳಿದ್ದಾರೆ. ಅದು ಆದರೆ ಬಹಳ ಒಳ್ಳೆಯದು. ಅದು ಮಾಡದಿದ್ದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಪ್ರಜಾಪ್ರಭುತ್ವ ಉಳಿಯಬೇಕಾದರೆ ಅಮೆಂಡ್‌ಮೆಂಟ್ಸ್ ತರಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವ ಖಂಡಿತವಾಗಿ ಉಳಿಯುವುದಿಲ್ಲ. ಪ್ರಜಾಪ್ರಭುತ್ವ ಉಳಿಯಬೇಕೋ ಬೇಡವೋ, ತಾವೇ ತೀರ್ಮಾನ ಮಾಡಿ. ಮತ್ತು ಇಂಡಿಯನ್ ಟೆಲಿಗ್ರಾಫ್ ಆಕ್ಟ್‌ಗೆ ಮತ್ತು ಪೋಸ್ಟಲ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರುವಂತೆ ಒಂದು ರೆಜುಲೂಶನ್ ಪಾಸ್ ಮಾಡಬೇಕು. ಇದಕ್ಕೆ ನಮ್ಮ ಸ್ನೇಹಿತರು ಒತ್ತಾಯ ಮಾಡಬೇಕು. ನಾನು ಸಹ ಪ್ರಬಲವಾಗಿ ನಮ್ಮ ಪಕ್ಷದ ವತಿಯಿಂದ ಒತ್ತಾಯ ಮಾಡುತ್ತೇನೆ. ನಮ್ಮ ಮುಂದೆ ಇನ್ನು ಒಂದು ಪ್ರಿವಿಲೇಜ್ ಮೋಷನ್ ಇರುವುದರಿಂದ ಆಗ ನಾನು ಮಾತನಾಡುತ್ತೇನೆ, ಈಗ ಇಷ್ಟು ಮಾತ್ರ ಮಾತನಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ದಿನಾಂಕ ೯–೮–೮೮ರಂದು...

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ತಾವು ಹಿಂದೆ ಸ್ವಲ್ಪ ನೋಡಿ.

ಅಧ್ಯಕ್ಷರು.—ನೀವು ದಯಮಾಡಿ ಕುಳಿತುಕೊಳ್ಳಿ. ಶ್ರೀ ನಾಯಕ್‌ರವರಿಗೆ ಸ್ವಲ್ಪ ಹೇಳಿ ಖರ್ಗೆಯವರೇ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೇ, ಹಿಂದೆ ಎಲ್ಲಾ ಹುಡುಗರಿದ್ದೇವೆ. ನೀವು ಹೆಸರು ಕರೆಯುವಾಗ ನಮ್ಮ ಕಡೆ ಸ್ವಲ್ಪ ನೋಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನೋಡಿ, ನೀವು ಇನ್ಟ್ರಪ್ ಮಾಡಿದರೆ ಆ ಕಡೆ ಅವರು ಸಹ ಇನ್ಟ್ರಪ್ಟ್ ಮಾಡುತ್ತಾರೆ. ಅದಕ್ಕೆ ದಯಮಾಡಿ ತಾವು ಕುಳಿತುಕೊಳ್ಳಿ.

† ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ದಿನಾಂಕ ೯–೮–೮೮ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಪ್ರಕಟಣೆ ಬಂದಿದ್ದರಿಂದ ಕರ್ನಾಟಕ ರಾಜ್ಯದ ಇತಿಹಾಸವೇ ಬದಲಾಯಿಸಿತು.ನನ್ನ ಮಿತ್ರರಾದ ಖರ್ಗೆಯವರು ಮತ್ತು ಅನೇಕ ಜನರು ಈ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಹೇಳಿದ್ದಾರೆ. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. ಆದರೂ ಕೊನೆಗೆ ರಾಜೀನಾಮೆ ಕೊಟ್ಟರು He owned the moral responsibility and he resigned ಇದರ ಬಗ್ಗೆ ಯೋಚನೆ ಮಾಡುವಾಗ ನಿಜವಾಗಿಯೂ ಶ್ರೀ ರಾಮಕೃಷ್ಣ ಹೆಗಡೆಯವರ ಸ್ಟೇಟ್‌ಮೆಂಟ್ ನೋಡಿದರೆ ಅದಕ್ಕೆ ಆಧಾರವಿರಲಿಲ್ಲ ಈ ಟೆಲಿಫೋನ್ ಟ್ಯಾಪಿಂಗ್ ಆರ್ಡರ್‌ನ್ನು ಮಾನ್ಯ ಖರ್ಗೆಯವರು ಓದಿದರು. ನಾನು ಸಹ ಓದುತ್ತೇನೆ. ಸ್ವಲ್ಪವೇ ಇದೆ. ಇದು ಟಾಪ್ ಸೀಕ್ರೇಟ್ ಎಂದು ಹೇಳುತ್ತಾರೆ. ಆದರೆ ಇದು ಟಾಪ್ ಸಿಕ್ರೇಟ್ ಅಲ್ಲ. ಎಲ್ಲರ ಕೈಯಲ್ಲಿಯೂ ಇದು ಇದೆ.

"In exercise of the power conferred by section (2) of Section-5 of the Indian Telegraphs Act, 1885 (Central Act

XIII of 1985), Government of Karnataka hereby specifically authorise the Duputy Inspector General of Police (Intelligence), to exercise power under the said Section in the interest of public safety''. ಎಂದು ಇದೆ.

ಫೋನ್ ಟ್ಯಾಪಿಂಗ್ ಮಾಡುವುದಕ್ಕೆ ಹಿಂದಿನ ಚೀಫ್ ಸೆಕ್ರೆಟರಿ ಶ್ರೀ ಸತೀಶ್‌ಚಂದ್ರನ್ ಅವರು ಇದ್ದ ಕಾಲದಲ್ಲಿ ಆರ್ಡರ್ ಮಾಡಲಾಗಿತ್ತು. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರೇ ಚೀಫ್ ಮಿನಿಸ್ಟರ್ ಆಗಿದ್ದರು. ಅವರ ಕಾಲದಲ್ಲಿ ಈ ಆರ್ಡರ್ ಬಂತು ಎಂದು ನಾನು ಅಂದುಕೊಂಡಿರುವುದು. ಫೋನ್ ಟ್ಯಾಪಿಂಗ್ ಮಾಡುವುದಕ್ಕೆ ರಘುರಾಮನ್ ಎನ್ನುವ ಪೋಲೀಸ್ ಅಧಿಕಾರಿ ಸೂಚನೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಈ ರಘು ರಾಮನ್‌ರವರಿಗೆ ವೀರಪ್ಪ ಮೊಯ್ಲಿಯವರ ಮೇಲಾಗಲೀ, ಎಂ.ಎಸ್. ನಾರಯಣರಾಯರವರ ಮೇಲಾಗಲೀ, ದೇವೇಗೌಡರವರ ಮೇಲಾಗಲೀ ವೈಯಕ್ತಿಕವಾಗಿ ದ್ವೇಷ ಇರಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇದೊಂದು ಪೊಲಿಟಿಕಲ್ ಆ್ಯಕ್ಟ್ ಎಂದು ನನ್ನ ಇಂಟರ್‌ಪ್ರಿಟೇಷನ್. ಪೊಲಿಟಿಕಲ್ ಆ್ಯಕ್ಟಿವಿಟೀಸ್‌ನ್ನು ವಾಚ್ ಮಾಡುವುದಕ್ಕೆ ಇವರು ಟೆಲಿಫೋನ್‌ಗಳನ್ನು ಬಗೆ ಮಾಡಿದ್ದಾರೆ. ಹೋಮ್ ಮಿನಿಸ್ಟರ್‌ರವರ ಕನ್‌ಕರೆನ್ಸ್ ಇಲ್ಲದೆ ಟೆಲಿಫೋನ್‌ನ್ನು ಬಗೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ರಾಮಕೃಷ್ಣ ಹೆಗಡೆಯವರು ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಆದರೆ ಈ ಸಿಚುಯೇಷನ್‌ನ್ನು ಫೇಸ್ ಮಾಡುವುದಕ್ಕಾಗದೆ ಅವರು ರಾಜೀನಾಮೆಯನ್ನು ಕೊಟ್ಟರು. ಯಾವ ರೀತಿ ನಾಗರೀಕರ ಹಕ್ಕುಗಳನ್ನು ಇವರು ಮೊಟಕು ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಾಯಿತು. ೧೯೮೩ ರಿಂದ ೧೯೮೮ರವರೆಗೆ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ೪ ಪ್ರಕರಣಗಳಾಯಿತು. ಕಡೇ ಪ್ರಕರಣದಲ್ಲಿ ಅವರು ಸಿಕ್ಕಿಹಾಕಿಕೊಂಡು ಮಾಡಿದ ಕೆಲಸವನ್ನು ಒಪ್ಪಿಕೊಂಡು ರಾಜೀನಾಮೆಯನ್ನು ಕೊಟ್ಟರು. ಇದರ ಪೂರ್ಣ ಹೊಣೆಯನ್ನು ರಾಮಕೃಷ್ಣ ಹೆಗಡೆಯವರು ಹೊತ್ತುಕೊಳ್ಳಬೇಕು. ೧೯೮೭ರಲ್ಲಿ ಅವರೇ ಹೋಮ್ ಡಿಪಾರ್ಟ್‌ಮೆಂಟಿನ ಅಧಿಕಾರವನ್ನು ಹೊಂದಿದ್ದರು. ಆದ್ದರಿಂದ, ಅವರೇ ಫೋನ್‌ಗಳನ್ನು ಟ್ಯಾಪ್ ಮಾಡಿಸಿದ್ದರು ಎಂದು ಸ್ಪಷ್ಟವಾಗಿ ಹೇಳಬಹುದು. ಈಗ ಟೆಲಿಫೋನ್ ಬಗ್ಗಿಂಗ್ ನಿಂತು ಹೋಗಿದೆ ಎಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಟೆಲಿಫೋನ್‌ಗಳನ್ನು ಬಗ್ಗಿಂಗ್ ಮಾಡುವುದಕ್ಕೆ ಈಗಲೂ ಸರ್ಕಾರದ ಆರ್ಡರ್ ಇದೆ. ಇಂಟೆಲಿಜೆನ್ಸ್ ಆಫೀಸ್‌ನಲ್ಲಿ ಈಗಲೂ ಟೆಲಿಫೋನ್‌ಗಳನ್ನು ಬಗ್ ಮಾಡುತ್ತಿದ್ದಾರೆ, ಸಿ.ಪಿ.ಐ.ಎಂ. ಆಫೀಸ್‌ನ ಫೋನ್‌ನ್ನು ಬಗ್ಗಿಂಗ್ ಮಾಡುತ್ತಿದ್ದಾರೆ. ಬಿ.ಜೆ.ಪಿ. ಆಫೀಸ್‌ನ ಫೋನ್‌ಗಳನ್ನು ಬಗ್ಗಿಂಗ್ ಮಾಡುತ್ತಿದ್ದಾರೆ, ಜಮಾಯತ್ ಎ ಇಸ್ಲಾಮ್ ಆಫೀಸ್‌ನ ಫೋನ್‌ಗಳನ್ನು ಬಗ್ಗಿಂಗ್ ಮಾಡುತ್ತಿದ್ದಾರೆ, ಆರ್.ಎಸ್.ಎಸ್. ಆಫೀಸ್‌ನ ಫೋನ್‌ಗಳನ್ನು ಬಗ್ಗಿಂಗ್ ಮಾಡುತ್ತಿದ್ದಾರೆ. ಯಾರೋ ಕೆಲವರು ಪ್ರತಿಷ್ಠಿತ ವ್ಯಕ್ತಿಗಳ ಫೋನ್‌ಗಳನ್ನು ಬಗ್ಗಿಂಗ್ ಮಾಡಿದ್ದರಿಂದ ರಾಮಕೃಷ್ಣ ಹೆಗಡೆಯವರು ಸಿಕ್ಕಿಹಾಕಿಕೊಂಡು ಈ ವಿಷಯ ಬೆಳಕಿಗೆ ಬಂತೇ ಹೊರತು ಇಲ್ಲದಿದ್ದರೆ ಬೆಳಕಿಗೆ ಬರುತ್ತಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗಲೂ ಕೂಡ ಟೆಲಿಫೋನ್‌ಗಳನ್ನು ಬಗ್ ಮಾಡಲಾಗುತ್ತಿದೆ. ಬೇಕಾದರೆ ತಾವು ಸಿಕ್ರೇಟ್ ರೆಕಾರ್ಡ್‌ಗಳನ್ನು ತರಿಸಿ ನೋಡಿ. ಇಲ್ಲವೇ ಒಬ್ಬ ಹೈಕೋರ್ಟ್ ಜಡ್ಜನ್ನು ಇದರ ಎನ್‌ಕ್ವೈಯರಿ ಮಾಡುವುದಕ್ಕೆ ನೇಮಕ ಮಾಡಿ. ಆಗ ಎಲ್ಲಾ ವಿಷಯ ಗೊತ್ತಾಗುತ್ತದೆ. ನನ್ನ ಅನುಭವಕ್ಕೆ ಬಂದ ಹಾಗೆ ೧೯೭೪ನೇ ಇಸವಿಯಿಂದ ೧೯೮೭ನೇ ಇಸವಿಯವರೆಗೂ ನನಗೆ ಬರುವ ಲೆಟರ್ಸ್‌ಗಳನ್ನು ಪೋಲೀಸಿನವರು ತೆಗೆದುಕೊಂಡು ಎಲ್ಲಾ ಓದಿ ಎರಡು ದಿನ ಆದಮೇಲೆ ನನಗೆ ಕೊಡುತ್ತಿದ್ದರು, ನನಗೆ ಬರುವ ಪ್ರೈವೇಟ್ ಲೆಟರ್‌ಗಳನ್ನಾದರೂ ಕೊಡಿ ಎಂದರೆ ಅವುಗಳನ್ನೂ ಕೊಡುತ್ತಿರಲಿಲ್ಲ. ರಾಮಕೃಷ್ಣ ಹೆಗಡೆಯವರು ಕಾಂಗ್ರೆಸ್ ಸಂಸ್ಕೃತಿಯಿಂದಲೇ ಬಂದವರಾಗಿದ್ದರಿಂದ ಅವರೂ ಸಹ ಫೋನ್ ಬಗ್ ಮಾಡಿಸುವುದಕ್ಕೆ ಹೋಗಿ ಸಿಕ್ಕಿಹಾಕಿಕೊಂಡುಬಿಟ್ಟರು. ಈಗ ಫೋನ್‌ಗಳ ಬಗ್ಗಿಂಗ್ ನಡೆಯುತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇಂಟಲಿಜೆನ್ಸ್ ಆಫೀಸ್‌ನಲ್ಲಿ ಒಂದು ದೊಡ್ಡ ಹಾಲ್ ಇದೆ. ಇಲ್ಲಿ ಫೋನ್‌ಗಳನ್ನು ಬಗ್ ಮಾಡುವುದಕ್ಕೆ ಎಕ್ವಿಪ್‌ಮೆಂಟ್‌ಗಳನ್ನು ಇಟ್ಟಿದ್ದಾರೆ. ಫೋನ್ ಬಗ್ಗಿಂಗ್ ಈಗ ನಡೆಯುತ್ತಿಲ್ಲ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಬೊಮ್ಮಾಯಿಯವರು ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಏಕೆಂದರೆ ಅವರುಗಳು ಅಧಿಕಾರದಲ್ಲಿ ಮುಂದುವರಿಯಬೇಕಾಗಿದೆ. ಅವರ ಪಾರ್ಟಿಯಲ್ಲೇ ಯಾರಾದರು ಶತ್ರುಗಳಿದ್ದರೆ ಅವರ ಫೋನ್‌ಗಳನ್ನು ಬಗ್ ಮಾಡಲಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಅವರ ಅಸೋಸಿಯೇಟ್ ಮೆಂಬರ್ ಆಗಿರುವುದರಿಂದ ನಿಮ್ಮ ಫೋನ್‌ನ್ನು ಏಕೆ ಅವರು ಬಗ್ ಮಾಡುತ್ತಾರೆ ?

ಶ್ರೀ ಆರ್. ವೆಂಕಟರಾಮಯ್ಯ.—ನೀವು ಸ್ವಲ್ಪ ಹೊತ್ತು ಸುಮ್ಮನೆ ಇದ್ದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಅವರ ಅಸೋಸಿಯೇಟ್ ಮೆಂಬರ್ ಆಗಿರುವುದರಿಂದ ನಾನು ಹೇಳಿದೆ.

ಶ್ರೀ ಆರ್. ವೆಂಕಟರಾಮಯ್ಯ.—ನಮಗೆ ಕಾಂಗ್ರೆಸ್‌ನವರ ಆಶೀರ್ವಾದವೂ ಬೇಕಾಗಿಲ್ಲ, ಯಾರ ಆಶೀರ್ವಾದವೂ ಬೇಕಾಗಿಲ್ಲ. ನಮ್ಮ ಸ್ವಂತ ಬಲದಿಂದ ನಾವು ಬದುಕುತ್ತಿದ್ದೇವೆ. ನೀವು ಸ್ವಲ್ಪ ಹೊತ್ತು ಸುಮ್ಮನೆ ಇದ್ದರೆ ಒಳ್ಳೆಯದು. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಒಂದು ಪ್ರಿವಿಲೇಜ್ ಮೋಷನ್ ಕೂಡ ಕೊಟ್ಟಿದ್ದೇನೆ.
ಅದರಲ್ಲಿ ಹಕ್ಕುಚ್ಯುತಿ ಹೇಗೆ ಆಗುತ್ತದೆಂದು ನಾನು ತಮಗೆ ಕನ್‌ವಿನ್ಸ್ ಮಾಡಿ ಹೇಳುತ್ತಿದ್ದೇನೆ.

"......and each house collectively for the protection of its members, and the vindication of its own authority and dignity".

ನಮ್ಮ ಮೆಂಬರ್ಸ್ ಸುಮಾರು ೧೫ ಜನರಿದ್ದಾರೆ. ಅವರೆಲ್ಲ ಫೋನ್ ಟ್ಯಾಪ್ ಮಾಡಿದ್ದಾರೆ, irrespective of the political parties. ಮಾನ್ಯ ದೇವೇಗೌಡರ, ಎಂ. ಎಸ್. ನಾರಾಯಣ ರಾವ್‌ರವರ, ಬಂಗಾರಪ್ಪನವರ, ಮತ್ತಿತರರ ಫೋನ್ ಬಗ್ ಮಾಡುವ ಅವಶ್ಯಕತೆ ಇರಲಿಲ್ಲ ಎಂದು ಕಾಣುತ್ತದೆ. ಈ ಕೆಲಸವನ್ನು ಯಾರು ಮಾಡಿದ್ದಾರೋ ಗೊತ್ತಿಲ್ಲ. ನಮ್ಮ ಮಾನ್ಯ ರಘುಪತಿಯವರ ಫೋನ್ ಕೂಡ ಟ್ಯಾಪ್ ಆಗಿದೆ. ಅವರು ರಾಮಕೃಷ್ಣ ಹೆಗಡೆಯವರಿಗೆ ತುಂಬಾ ವಿಧೇಯರಾಗಿದ್ದವರು. ಅದನ್ನು ರಾಮಕೃಷ್ಣ ಹೆಗಡೆಯವರೇ ಒಪ್ಪಿಕೊಂಡಿದ್ದರು. ಇವರೆಲ್ಲರನ್ನೂ ಸೇರಿಸಿ ಶ್ರೀಮತಿ ನಾಗರತ್ನಮ್ಮನವರ ಫೋನ್ ಕೂಡ ಬಗ್ ಮಾಡಿದ್ದಾರೆ. ಈ ಒಂದು ಕೆಲಸ ಮಾಡುವ ಅವಶ್ಯಕತೆ ಏನಾದರೂ ಇತ್ತೇ ? ಇದನ್ನು ನೋಡಿದರೆ ಒಟ್ಟಿನಲ್ಲಿ ಕನ್‌ಫ್ಯೂಸ್ ಆದಂತೆ ಕಾಣುತ್ತದೆ.

"......The foundation upon which they rest is the maintenance of the dignity and independence of the House and of its Member".

ನಾನು ಹೇಳುವುದೇನೆಂದರೆ, ಈ ರೀತಿಯಲ್ಲಿ ಬಗ್ ಮಾಡಿದರೆ ನಮ್ಮ ಡಿಗ್ನಿಟಿ ಮತ್ತು ಏನೊಂದು ಸ್ವಾತಂತ್ರ್ಯ ನಮಗೆ ಸಿಕ್ಕಿದೆ. ಅದಕ್ಕೆ ಚ್ಯುತಿ ಮಾಡಿದ ಹಾಗೆ ಆಗುತ್ತದೆ. ತಾವು ಬಂಗಾರಪ್ಪ ಮತ್ತು ಮೂಪನಾರ್ ಕೇಸ್‌ನಲ್ಲಿ ಇರುವುದನ್ನು ಓದಿದರೆ, ಆಶ್ಚರ್ಯವಾಗುತ್ತದೆ. ಆ ಮೂಪನಾರ್ ಯಾರೋ ನನಗೆ ಗೊತ್ತಿಲ್ಲ. ಆದರೆ ಅದರಲ್ಲಿ ಹೈಕೋರ್ಟ್ ಜಡ್ಜ್ ಬಗ್ಗೆ ಕೂಡ ಕಾಮೆಂಟ್ಸ್ ಇದೆ. ಅದೇನೆ ಇದ್ದರೂ ಇಂತಹ ಒಂದು ಟ್ಯಾಪಿಂಗ್ ಕೆಲಸವನ್ನು ಯಾರೋ ಒಬ್ಬ ಪೋಲೀಸ್ ಅಧಿಕಾರಿ ಮಾಡಿಸಿರಬಹುದು, ಅದು ಯಾರು ಎಂದು ಇನ್ನೂ ಸ್ಪಷ್ಟವಾಗಿಲ್ಲ. ಒಟ್ಟಿನಲ್ಲಿ ವೀರಪ್ಪ ಮೊಯಿಲಿಯವರಿಂದ ಪ್ರಾರಂಭವಾಗಿ, ಶಿವಮೂರ್ತಿ–ಬಂಗಾರಪ್ಪ, ಮೂಪನಾರ್–ಬಂಗಾರಪ್ಪ, ಹೀಗೆಲ್ಲಾ ಆಗಿ ಈಗ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಆಗಿ ಅವರು ರಾಜ್ಯದ ಆಡಳಿತದಿಂದ ನಿರ್ಗಮಿಸುವಂತಹ ಒಂದು ಪರಿಸ್ಥಿತಿಯು ನಿರ್ಮಾಣವಾಯಿತು.

ಶ್ರೀ ಪಟಮಕ್ಕಿ ರತ್ನಾಕರ್.—ರಾಮಕೃಷ್ಣ ಹೆಗಡೆ ಅವರು ಹೋದರು, ಮಳೆ ಬಂತು.....

ಶ್ರೀ ಆರ್. ವೆಂಕಟರಾಮಯ್ಯ.—ಹಾಗಾದರೆ ರಾಜೀವ ಗಾಂಧೀಯವರಿಗೆ ಹೇಳಿ ಈಗ ನೀವು ಮಳೆ ನಿಲ್ಲಿಸಿ......

ಶ್ರೀ ಎಂ. ಶ್ರೀನಿವಾಸ್.—ನೀವು ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿ ಚುನಾವಣೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದ ಆರಿಸಿ ಬಂದಿದ್ದೀರಿ. ಜನತಾ ಪಕ್ಷದ ಸಹಾಯದಿಂದ ಬಂದವರು ನೀವು.......

ಶ್ರೀ ಆರ್. ವೆಂಕಟರಾಮಯ್ಯ.—ನಾವು ಸುಮಾರು ೮೦ ಕಡೆಗಳಲ್ಲಿ ಜನತಾಕ್ಕೆ ಸಪೋರ್ಟ್ ಮಾಡಿದ್ದರಿಂದ ನೀವುಗಳು ಆರಿಸಿ ಬಂದಿದ್ದೀರಿ. ಇದು ನಿಮಗೆ ನು ಗೊತ್ತು, ನೀವುಗಳು ಕಮ್ಯುನಿಸ್ಟ್ ಪಾರ್ಟಿಯಲ್ಲಿ ಏನೂ ಇಲ್ಲ ಎಂದು ಆಡಳಿತ ಪಕ್ಷವನ್ನು ಸೇರಿಕೊಂಡವರು. ಏತಕ್ಕೆ ಸುಮ್ಮನೆ ಮಾತನಾಡುತ್ತೀರಿ, ವರ್ಷದಲ್ಲಿ ಯಾವಾಗಾದರೊಮ್ಮೆ ನೀವು ಸದನಕ್ಕೆ ಬಂದು ಸದನದಲ್ಲಿ ಎಲ್ಲರಿಗೂ ಗೊತ್ತಾಗುವಂತೆ ಮಾತನಾಡುತ್ತಿದ್ದೀರಿ ?

ಅಧ್ಯಕ್ಷರು.—ಇದು ಪ್ರಿಮಿಲಿನರಿ ಅಷ್ಟೆ, ಫೈನಲ್ ಅಲ್ಲ. ಯಾವುದೇ ಸಂದರ್ಭದಲ್ಲೂ ಅಜರ್ನಮೆಂಟ್ ಮೋಷನ್ ಮೇಲೆ ೧೫ ನಿಮಿಷಕ್ಕಿಂತ ಜಾಸ್ತಿ ಸಮಯ ಕೊಡುವ ಹಾಗಿಲ್ಲ. ಆದರೆ ನೀವು ಈಗಾಗಲೇ ಅಷ್ಟು ಸಮಯ ಬಳಸಿಕೊಂಡಿದ್ದೀರಿ. In the rules, even for final ·ubmission, not exeeding 15 minutes should be allowed. I will read he rule :

> "No speech during the debats shall exceed with the permission of the Speaker 15 minutes in duration."

SRI R. VENKATARAMAIAH.—Mr. Madhu Limays has said :

> "When Ramakrishna Hegde alias T.T. (short for Telephone Tapper) Hegde was caught "with his pants down," as the phrase goes he was forced to resign as Chief Minister. But before leaving he tried to create an impression that he was not a guilty man but a martyr. accepting moral responsibility for telephone tapping although he had not orderded it......"

He further says :

> "However there are certain pre-conditions that have to be satisfied before telephones can be tapped. They are :
>
> a) the occurrence of a public emergency, or
>
> b) the endangering of public safety,
>
> c) the Government's or the authorised officer's being satisfied that interception is necessary or expedient,
>
> d) that the reasons for ordering the interception are to be recorded in writing."

ಇದು ಗವರ್ನಮೆಂಟ್ ಆರ್ಡರ್,

ಈಗತಾನೇ ನಾನು ಗವರ್ನಮೆಂಟ್ ಆರ್ಡರನ್ನೂ ಓದಿದ್ದೇನೆ. ಅದರಲ್ಲಿ ಯಾವ ಕಾರಣವೂ ಇಲ್ಲ ಸತೀಶ್ಚಂದ್ರನ್ ಅವರು ಆರ್ಡರ್ ಹೊರಡಿಸುವಂತಿಲ್ಲ. ಇದನ್ನು ಹೋಮ್ ಸೆಕ್ರೆಟರಿ ಮಾಡಬೇಕಾಗಿತ್ತು ಎಂದು ಹೇಳುತ್ತಾರೆ. ಯಾರಾದರೂ ಸರಿಯಾಗಿ ರೀಸನ್ಸ್ ಕೊಟ್ಟಿದ್ದರೆ ಒಪ್ಪಿಕೊಳ್ಳಬಹುದಿತ್ತು ಎಮರ್ಜೆನ್ಸಿಯೂ ಇಲ್ಲ, ಪಬ್ಲಿಕ್ ಸೇಫ್ಟಿ ಎಂಡೇಂಜರಾಗಿಯೂ ಇಲ್ಲ ಇವರು ಬರೀ ದೇವೇಗೌಡರ ಹತ್ತಿರ ಯಾರು ಹೋಗುತ್ತಾರೆ, ಯಾರು ಬರುತ್ತಾರೆ ಎಂದು ತಿಳಿದುಕೊಳ್ಳೋಕ್ಕೆ ಮಾಡಿದರೇ ಹೊರತು ಅಂದರೆ [illegible] ರಾಮಕೃಷ್ಣ ಹೆಗಡೆಯವರು [illegible] ಸೇಫ್ಟಿ [illegible] ಹೊರತು ಪಬ್ಲಿಕ್ ಸೇಫ್ಟಿ ನೋಡಲಿಲ್ಲ. ದೇವೇಗೌಡರದ್ದು ಒಬ್ಬರದೇ ಟೆಲಿಫೋನ್ ಟ್ಯಾಪಿಂಗ್ ಮಾಡಿದರೆ ಏನೆಂದು ಹೇಳುತ್ತಾರೋ ಎಂದು ಅಂತ ಬಂಗಾರಪ್ಪ, ಸುಬ್ಬಯ್ಯ ಹೀಗೆ ಎಲ್ಲರದ್ದೂ ಮಾಡಿಬಿಟ್ಟರು. The Telegraph Act itself detinces the limits. Has any eno or the Hegde has been suspected of stealing or defence secrets? selling it is tragic that those who have been victims of repression in the

part should sing a diffrent ture on their comig to power. ೧೯೭೭ರಲ್ಲಿ ಬಾಧೆ ಬಿದ್ದು ಜೆ. ಪಿ. ಯವರು ಕಷ್ಟಪಟ್ಟು ಸಾವಿರಾರು ಜನ ಪ್ರಾಣ ತೆತ್ತು ಪುನಃ ಚುನಾವಣೆ ನಡೆದು ಜನತಾ ಪಕ್ಷದ ಸರ್ಕಾರ ಸ್ಥಾಪನೆ ಆಯಿತು. ಆದೇ ಜನತಾ ಪಕ್ಷದ ಮುಖ್ಯ ಮಂತ್ರಿಗಳೇ ಟೆಲಿಫೋನ್ ಟ್ಯಾಪಿಂಗ್‌ಗೆ ಆರ್ಡರ್ ಮಾಡಿದರು. ಅದು ಮಾಡಬಾರದಾಗಿತ್ತು. ಇದು ತುಂಬಾ ಅನ್ಯಾಯ. ಆರ್ಟಿಕಲ್ ೧೯-೨೦-೨೧ ಆಫ್ ಕಾನ್ಸ್ಟಿಟ್ಯೂಷನ್‌ನಲ್ಲಿ ಕ್ಲಿಯರಾಗಿ ಹೇಳುತ್ತದೆ. ನಮಗೆ ಎಂಥೆಂಥಾ ಸ್ವಾತಂತ್ರ್ಯ ಬಂದಿದೆ......

I will read what Article 19 of the Constitution of India says.

> "Protection of certain rights regarding freedom of speech All citizens shall have the right of freedom of speech and expression to assemble peacefully and without arms to form associations, to move throughout the territory of India, to reside or settle in any part of.. ...." ಎಂದು ಹೇಳಿದ್ದಾರೆ

ಇದರ ಬಗ್ಗೆ ನಾನು ಹೇಳಬೇಕಾಗಿಲ್ಲ. ಶ್ರೀ ಜಿ ಕೆ. ಗೋಪಾಲನ್ ವರ್ಸಸ್ ಸ್ಟೇಟ್‌ನಲ್ಲಿ ದೊಡ್ಡ ರೂಲಿಂಗ್ ಬಂತು ಅದನ್ನು ವಯೊಲೇಟ್ ಮಾಡಿ ನಮ್ಮ ರೈಟ್ ಆಫ್ ಫ್ರೀಡಂ ಏನು ಇದೆ ಅದನ್ನು ಮೊಟಕು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಇದು ತುಂಬಾ ಅನ್ಯಾಯ, ಪ್ರೈವೆಸಿ ಕೂಡ ಹೋಗಿದೆ.

I will quote from "FREEDOM OF PRESS, SOME RECENT TRENDS" which says.

"XVI Privacy. The right of individuals to be free from highly offensive publicity concerning their private lives has two aspects.

1) Publicity which harms their reputation; and

2) Publicity which hurts their feelings by telling the public about their private lives without harming their reputation"

ಟೆಲಿಫೋನಿನಲ್ಲಿ ಗೌಪ್ಯವನ್ನು ಇಟ್ಟುಕೊಳ್ಳಬೇಕಾಗುತ್ತದೆ ಅದನ್ನು ಟ್ಯಾಪ್ ಮಾಡುವುದು ಮುಂತಾದ ಕೆಲಸವನ್ನು ಮಾಡಬಾರದು ಇದಕ್ಕೆ ಸಂಬಂಧಪಟ್ಟಂತೆ ಜ್ಯುಡಿಷಿಯಲ್ ಹೈಕೋರ್ಟ್ ಜಡ್ಜ್ ಅನ್ನು ಅಪಾಯಿಂಟ್ ಮಾಡಲಿ ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಕಾಗದ ಪತ್ರಗಳನ್ನು ಎಕ್ಸಾಮಿನ್ ಮಾಡಲಿ ಈಗ ಬೇರೆ ಇನ್ನೂ ಯಾರದ್ದಾದರೂ ಫೋನ್ ಅನ್ನು ಟ್ಯಾಪ್ ಮಾಡಲು ಆರ್ಡರ್ ಇದೆಯೋ ಅಥವಾ ಇಷ್ಟೇ ಇದೆಯೋ ಎಂದು ಗೊತ್ತಾಗುತ್ತದೆ. ಇದರ ಬಗ್ಗೆ ಎನ್‌ಕ್ವೈರಿ ಮಾಡಿ ನಮಗೆ ಪ್ರೊಟೆಕ್ಷನ್ ಕೊಡಬೇಕು ಮಾನ್ಯ ಹೆಗಡೆಯವರೇ ಕಾನೂನು ಉಲ್ಲಂಘನೆ ಮಾಡಿರಲೀ ಅಥವಾ ಬೇರೆಯವರೇ ಮಾಡಿರಲಿ ಅವರಿಗೆ ಶಿಕ್ಷೆಯಾಗಬೇಕು. ನಾನು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೇನೆ ಅದನ್ನು ಸೆಪರೇಟ್ ಆಗಿ ತೆಗೆದುಕೊಳ್ಳುವುದಿದ್ದರೆ ಪ್ರಿವಿಲೇಜ್ ಕಮಿಟಿಗೆ ಅದನ್ನು ರೆಫರ್ ಮಾಡಬೇಕು; ಇದಕ್ಕೆ ಹೈಕೋರ್ಟ್ ಜಡ್ಜ್ ಅನ್ನು ಅಪಾಯಿಂಟ್ ಮಾಡಿ. ಟಾಪ್ ಸೀಕ್ರೇಟ್ ಎಂದು ಹೇಳುತ್ತಾರೆ ಅದು ಅಷ್ಟೇ ಇದೆಯೋ ಅಥವಾ ಇನ್ನೂ ಜಾಸ್ತಿ ಇದೆಯೋ ಗೊತ್ತಿಲ್ಲ ಜಾಸ್ತಿ ಇದ್ದರೆ ಅದೂ ಕೂಡ ಹೊರಗೆ ಬರುತ್ತದೆ ಓಪನ್ ಸೀಕ್ರೇಟ್ ಆಗುತ್ತದೆ. ಇನ್ನು ಯಾವ ಮಹಾನುಭಾವರು ಇದರಲ್ಲಿ ಅಂದರೆ ಈ ಲಿಸ್ಟ್‌ನಲ್ಲಿದ್ದಾರೆ ಎಂಬುದು ಹೊರಕ್ಕೆ ಬರಲಿ ಅದು ಜನರಿಗೂ ಗೊತ್ತಾಗಲಿ ಈ ಇನ್‌ಸಿಡೆಂಟ್‌ಗೆ ಕಾರಣರಾದವರು ಜನತಾ ಸರಕಾರದ ಮುಖ್ಯ ಮಂತ್ರಿಗಳೇ ಇರಲೀ ಇಲ್ಲವೇ ಬೇರೆ ಯಾರೇ ಆಗಲೀ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) — ಮಾನ್ಯ ಅಧ್ಯಕ್ಷರೇ, ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳಿ ಟೇಪ್ ಮಾಡುತ್ತಿದ್ದರು ಎನ್ನುವ ಪ್ರಕರಣದ ಹಿನ್ನೆಲೆಯಲ್ಲಿ ಅನೇಕ ಪ್ರಮುಖವಾದ ವಿಷಯಗಳನ್ನು ಹಿರಿಯ ಸದಸ್ಯರುಗಳು ಈಗಾಗಲೇ ಸರಕಾರದ ಗಮನಕ್ಕೆ ತಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇಂದಿನ ಪರಿಸ್ಥಿತಿಯ

ವಿರುದ್ಧ ಹೋರಾಟ ಮಾಡಿ ವಾಕ್ ಸ್ವಾತಂತ್ರ್ಯದ ಬಗ್ಗೆ ಮಾತನಾಡಿ ಜನತೆಯ ಒಂದು ವಿಶ್ವಾಸವನ್ನು ಗಳಿಸಿ ಒಂಡು ಅಧಿಕಾರಕ್ಕೆ ಬಂದಂತಹ ಜನತಾ ಸರಕಾರ ಈ ಕೆಲಸವನ್ನು ಏನು ಮಾಡಿದರು ಅದು ಈ ದೇಶದ ರಾಜ್ಯದ ಜನತೆಯ ಮನಸ್ಸಿನಲ್ಲಿ ಒಂದು ರೀತಿಯ ಬೇಸರ ಸರಕಾರದ ನೀತಿಯ ಬಗ್ಗೆ ಸಾಕಷ್ಟು ಬೇಸರ ಬಂದು ಜನರು ಇವರಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವಂತಹ ಘಟನೆ ಇಲ್ಲಿ ನಡೆದಿದೆ ಎಂದರೆ ತಪ್ಪಾಗಲಾರದು. ಇದು ಒಂದು ತರಹ ಕರ್ನಾಟಕದ ವಾಟರ್‌ಗೇಟ್ ಪ್ರಕರಣವೆಂದು ಹೇಳಿದರೆ ತಪ್ಪಾಗುವುದಿಲ್ಲ. ಈಗಿರುವಂತಹ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರು ಹಿಂದೆ ಪ್ರಮುಖ ರಾಜಕಾರಣಿಗಳ ಟೆಲಿಫೋನ್ ಸಂಭಾಷಣೆಯನ್ನು ಟೇಪ್ ಮಾಡುತ್ತಿದ್ದರು ಅದು ಆಗ ನಡೆಯುತ್ತಿತ್ತು ಎಂದು ಒಪ್ಪಿಕೊಂಡು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ

"NO MORE TAPPING OF PHONES--DECCAN HERALD Dated 18-8-1988.

Karnataka Chief Minister, Sri S. R. Bommai, to-day declared that he would soon issue orders to Intelligence wing of the State Police to stop tapping forthwith the telephones of politicians and private citizens." ಎಂದು ಹೇಳಿಕೆ ನೀಡಿದ್ದಾರೆ ಅವರು ಮುಖ್ಯ ಮಂತ್ರಿಗಳಾದ ತಕ್ಷಣ ಈ ಆದೇಶವನ್ನು ಸರಕಾರದ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟರು ಎಂದು ಹೇಳಿದರೆ, ಪ್ರಮುಖ ರಾಜಕಾರಣಿಗಳ ಫೋನ್ ಟ್ಯಾಪಿಂಗ್ ನಡೆಯುತ್ತಿತ್ತು ಎಂದು ಅವರು ಒಪ್ಪಿಕೊಂಡ ಮೇಲೆ ಇದರ ಬಗ್ಗೆ ಯಾವುದೇ ತನಿಖೆ ಮಾಡುವಂತಹ ಅಗತ್ಯವಿಲ್ಲ. ಆದ್ದರಿಂದ ನಾನು ಸರಕಾರದವರನ್ನು ಒತ್ತಾಯ ಮಾಡುವುದೇನೆಂದರೆ ಹೆಗಡೆಯವರು ತಮ್ಮ ಅತೀ ಬುದ್ಧಿವಂತಿಕೆಯನ್ನು ಪ್ರದರ್ಶನ ಮಾಡುವುದಕ್ಕೆ ಹೋಗಿ, ಮಾನ್ಯ ದೇವೇಗೌಡರವರ ತಲೆ ಮೇಲೆ ಕಲ್ಲು ಹಾಕುವುದಕ್ಕೆ ಹೋಗಿ ಈಗ ತಮ್ಮ ತಲೆ ಮೇಲೆ ಕಲ್ಲು ಹಾಕಿಕೊಳ್ಳುವಂತಹ ಪ್ರಕರಣ ಇದಾಗಿದೆ ಒಬ್ಬ ಬುದ್ಧಿವಂತ ಚಾಣಾಕ್ಷ ರಾಜಕಾರಣಿ ಇಬ್ಬರು ಪರಸ್ಪರ ಮುಖಂಡದಲ್ಲಿ ಇದ್ದ ವೈಮನಸ್ಯದಲ್ಲಿ ಸಿಕ್ಕಿಕೊಂಡು ಇಂತಹ ಒಂದು ಪ್ರಕರಣದಲ್ಲಿ ಮುಖ್ಯ ಮಂತ್ರಿಯವರ ಸ್ಥಾನಕ್ಕೆ ಅವರು ರಾಜೀನಾಮೆ ಕೊಟ್ಟಿದ್ದು ದುರ್ದೈವದ ಸಂಗತಿ

೪-00 ಪಿ. ಎಂ.

ಇಂಥ ಒಂದು ಸಂದರ್ಭದಲ್ಲಿ ಕೇವಲ ಇದು ರಾಮಕೃಷ್ಣ ಹೆಗಡೆಯವರಾಗಲೀ, ಅಜಿತ್‌ಸಿಂಗ್ ಅವರಾಗಲೀ, ದೇವೇಗೌಡರಾಗಲೀ ಅವರಿಗೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆ ಇದಲ್ಲ. ಈ ರಾಜ್ಯದ ಜನತೆಯ ಮನಸ್ಸಿನಲ್ಲಿದ್ದ ಭಾವನೆಗಳಿಗೆ ವಿರುದ್ಧವಾಗಿ ಈ ಪ್ರಜಾಪ್ರಭುತ್ವದ ವ್ಯವಸ್ಥೆಗೆ ವಿರುದ್ಧವಾಗಿ ಈ ಸರ್ಕಾರದ ಯಂತ್ರವನ್ನು ದುರುಪಯೋಗ ಮಾಡಿಕೊಂಡಿರುವಂಥ ಈ ಪ್ರಕರಣ ಇದು ಸರ್ಕಾರದ ಒಂದು ನೀತಿ. ಅದಕ್ಕೋಸ್ಕರವಾಗಿ ನಾನು ಪ್ರಾರಂಭದಲ್ಲೇ ಒತ್ತಾಯ ಮಾಡುತ್ತಿರುವಂಥಾದ್ದು ಕೇವಲ ಇದು ಪ್ರಾಸಿಕ್ಯೂಷನ್ ಆಗಬೇಕೋ ಅಥವಾ ಇನ್ನೊಬ್ಬರ ಮೇಲೆ ಶಿಕ್ಷೆ ಆಗಬೇಕೋ ಎಂಬ ಸಮಸ್ಯೆ ಇದರಿಂದ ಬಗೆಹರಿಯುವುದಿಲ್ಲ. ಪ್ರಜಾಪ್ರಭುತ್ವದ ಹೆಸರಿನಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಿ ಜನತೆಗೆ ಮೋಸ ಮಾಡಿರುವಂಥ ಜನತಾ ಸರ್ಕಾರದ ಒಂದು ನೀತಿ ಇದು, ಇದನ್ನು ಪ್ರಕಟ ಮಾಡಿದ್ದಾರೆ ಇದು ಜನತೆಯ ವಿರೋಧ ನೀತಿಯಾಗಿದೆ, ಅದಕ್ಕೋಸ್ಕರ ನಾನು ಸರ್ಕಾರವನ್ನು ಅಗ್ರಹ ಮಾಡುವಂಥಾದ್ದು ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ಆಗುವುದಿಲ್ಲ, ಜನತಾ ಸರ್ಕಾರ ಇದಕ್ಕೋಸ್ಕರ ಕ್ಷಮಾಪಣೆಯನ್ನು ಕೇಳಿ ರಾಜೀನಾಮೆಯನ್ನು ಕೊಡಬೇಕು ಎಂದು ನಾನು ಒತ್ತಾಯ ಮಾಡಲಿಕ್ಕೆ ಇಚ್ಛೆಪಡುತ್ತೇನೆ ಇಲ್ಲಿ ಎರಡು ಮೂರು ಪ್ರಮುಖವಾದಂಥ ವಿಚಾರ ಇರುವಂಥಾದ್ದು, ಈ ಟೆಲಿಫೋನ್‌ನ್ನು ಕದ್ದು ಕೇಳುವಂಥ ಪ್ರಕರಣದ ಹಿನ್ನೆಲೆಯಲ್ಲಿ ಯಾವುದೋ ಒಬ್ಬ ಅಧಿಕಾರಿಯ ಕೈವಾಡ ಇದೆ, ಅಧಿಕಾರಿ ಹೀಗೆ ಮಾಡಿದ್ದಾರೆ ಎಂದು ಹೇಳುವಂಥ ಪ್ರಯತ್ನ ಈಗ ಆಗುತ್ತಿದೆ. ಈಗ ಟೆಲಿಫೋನ್ ಅಥಾರಿಟೀಸ್‌ಗಾಗಲೀ, ಪೋಲೀಸ್ ಅಧಿಕಾರಿಗಳಾಗಲೀ, ಚೀಫ್ ಸೆಕ್ರೆಟರಿಯಾಗಲೀ ಈ ಒಂದು ಕೆಲಸವನ್ನು ಮಾಡಿದ್ದಾರೆ ಎಂದರೆ ಸ್ಪಷ್ಟವಾಗಿ ಮೇಲುನೋಟಕ್ಕೆ ಕಾಣುವಂಥಾದ್ದು ಸರ್ಕಾರದ ಮುಖ್ಯಮಂತ್ರಿಗಳ ಪ್ರಮುಖರ ಒಂದು ಆದೇಶದ ಮೇರೆಗೆ ಇವರು ಈ ಕೆಲಸವನ್ನು ಮಾಡಿದ್ದಾರೆ, ಮುಖ್ಯಮಂತ್ರಿಗಳ ಆದೇಶದ ಮೇಲೆ

ಈ ಕೆಲಸವನ್ನು ಮಾಡಿದ್ದರೆ ಆವತ್ತು ಇದ್ದಂಥ ಒಂದು ಸೆಕ್ಷನ್ ೫ (೨) ಇಂಡಿಯನ್ ಟೆಲಿಫೋನ್ ಆ್ಯಕ್ಟ್ ೧೮೮೫ರ ಪ್ರಕಾರ ಇದನ್ನು ಮಾಡಿದ್ದಾರೆ ಎಂದರೆ ಅಜಿತ್‌ಸಿಂಗ್‌ರವರು ಮತ್ತೆ ಸನ್ಮಾನ್ಯ ದೇವೇಗೌಡರು ಈ ರೀತಿ ಟೆಲಿಫೋನ್ ಸಂಭಾಷಣೆ ಮಾಡುತ್ತಾ ಇದ್ದಂಥದ್ದು ಈ ಯಾವುದೋ ಒಂದು ಅಪರಾಧದ ರೀತಿಯಲ್ಲಿ ಕೆಲಸ ಮಾಡಿದ್ದಾರೆ ಎಂದು ಹೇಳಿ ಅಧಿಕಾರಿಗಳ ಮನಸ್ಸಿಗೆ ಸ್ಪಷ್ಟವಾಗಿ ಅವರ ಒಂದು ಟೆಲಿಫೋನ್ ಸಂಭಾಷಣೆಯನ್ನು ಇವರು ಕೇಳುವಂಥ ಪ್ರಯತ್ನವನ್ನು ಮಾಡುತ್ತಿದ್ದಿರಾ ? ನನಗನಿಸಿರುವಂಥಾದ್ದು ಟೆಲಿಫೋನ್ ಸಂಭಾಷಣೆಯ ಪ್ರಕರಣ ಇದೇನು ಹೊಸದಾಗಿ ಟ್ಯಾಪ್ ಮಾಡುವಂಥಾದ್ದು ಏನೂ ನಡೆಯುತ್ತಿಲ್ಲ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನನ್ನ ಟೆಲಿಫೋನನ್ನು, ಶಂಕರಮೂರ್ತಿಯವರ ಟೆಲಿಫೋನನ್ನು ಆವತ್ತಿನ ಕಾಂಗ್ರೆಸ್ ಸರ್ಕಾರ ಟ್ಯಾಪ್ ಮಾಡತಕ್ಕಂಥ ಸಂದರ್ಭದಲ್ಲಿ ಕೋರ್ಟ್‌ಗೆ ಹೋದಂಥ ಪ್ರಕರಣ ಉಂಟು. ಆದರೆ ಅವತ್ತಿನ ಆ ಒಂದು ಪ್ರಕರಣದ ಹಿನ್ನೆಲೆಯಲ್ಲಿ ಇವರು ರಾಜೀನಾಮೆಯನ್ನು ಕೊಟ್ಟರು ಎನ್ನುವುದಾದರೆ ಅದಕ್ಕೆ ಕಾರಣವೇನು ? ಕಾರಣವಿಷ್ಟೆ, ಅವರದೇ ಪಕ್ಷದಲ್ಲಿರತಕ್ಕಂಥ ಕೆಲವು ಮುಖಂಡರು ಅವರವರ ಕಾಲನ್ನು ಎಳೆಯುವಂಥ ಪ್ರಯತ್ನವನ್ನು ಮಾಡಿ ಇವತ್ತು ಅವರೇ ಇದನ್ನು ಬಹಿರಂಗ ಮಾಡಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುವಂಥ ಒಂದು ಸ್ಥಿತಿಗೆ ತಂದಿರುವಂಥ ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವಂಥಾದ್ದು ಏನೆಂದರೆ ಈ ಹಿನ್ನೆಲೆಯಲ್ಲಿ ನೈತಿಕ ಹೊಣೆಯನ್ನು ಹೊತ್ತು ತಮ್ಮ ಸರ್ಕಾರ ರಾಜೀನಾಮೆಯನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದು, ಇಲ್ಲಿ ಈ ಫೋನ್ ಕದ್ದು ಕೇಳಿದ ಪ್ರಕರಣದ ಹಿನ್ನೆಲೆಯಲ್ಲಿ ಸ್ವತ: ಈ ಪ್ರಾಸಿಕ್ಯೂಷನ್ ಕ್ರಮಕ್ಕೆ ಆದೇಶವನ್ನು ಕೊಡಬೇಕು ಎಂದು ಹೇಳಿ ರಾಮಕೃಷ್ಣ ಹೆಗಡೆಯವರೇ ಬೊಮ್ಮಾಯಿಯವರನ್ನು ಕೇಳಲಿ ಎಂದು ಹೇಳಿ ಅಜಿತ್‌ಸಿಂಗ್ ದಿನಾಂಕ. ೮–೯–೮೮ರಲ್ಲಿ ಬೆಂಗಳೂರಿಗೆ ಬಂದಂಥ ಸಂದರ್ಭದಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಕೊಟ್ಟಂಥ ಪತ್ರಿಕಾ ಹೇಳಿಕೆ ಇದೆ. ಸ್ವತ: ಅಜಿತ್‌ಸಿಂಗ್ ಅವರೇ ಇದರ ಬಗ್ಗೆ ಪ್ರಾಸಿಕ್ಯೂಷನ್ ಆಗಬೇಕು, ಬೊಮ್ಮಾಯಿಯವರೇ ತನಿಖೆಯನ್ನು ಮಾಡಲಿಕ್ಕೆ ರಾಮಕೃಷ್ಣ ಹೆಗಡೆಯವರು ಹೇಳಿ ಎಂದು ಅವರ ಪಕ್ಷದ ಮುಖಂಡರೇ ಇದನ್ನು ಹೇಳುವಂಥ ಪ್ರಯತ್ನವನ್ನು ಮಾಡಿದ್ದಾರೆ ಮತ್ತೆ ಸನ್ಮಾನ್ಯ ದೇವೇಗೌಡರು ಸಹಾ ಒಂದು ಮಾತನ್ನು ಹೇಳಿದ್ದಾರೆ. ನಾನು ಏನಾದರೂ ಈ ರೀತಿ ಜನ ವಿರೋಧಿ ಕೆಲಸ ಮಾಡುತ್ತಿದ್ದೇನೆಂದು ಈ ಸರ್ಕಾರಕ್ಕೆ ಅನಿಸಿದರೆ ಏನು ಮಾಡುತ್ತಿದ್ದೆ ಎಂಬ ಬಗ್ಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ೧೦–೮–೮೮ರಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ.—

"If the Chief Minister had doubts that the public safety was in danger because of me, why did he retain me in the Cabinet"

ಅದನ್ನು ಹೇಳುತ್ತಾ ಮುಂದೆ ಹೋಗಿ ಏನು ಹೇಳಿದ್ದಾರೆಂದರೆ, ಇದು ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ತನಿಖೆಯಾಗಬೇಕು ಎಂದು ಹೇಳಿದ್ದಾರೆ. ಜನಾರ್ಧನ ಪೂಜಾರಿಯವರು ಸಿಬಿಐ ತನಿಖೆಯಾಗಬೇಕು ಎಂದು ಹೇಳಿದ್ದಾರೆ. ದೇವೇಗೌಡರು ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ತನಿಖೆಯಾಗಬೇಕು ಎಂದು ಹೇಳಿದ್ದಾರೆ. ಸ್ವತ: ಪ್ರಧಾನಮಂತ್ರಿಗಳೇ ಪಾರ್ಲಿಮೆಂಟ್‌ನಲ್ಲಿ ಇದು ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಇದು ತನಿಖೆಯಾಗಬೇಕು ಎಂದು ಹೇಳಿದ್ದಾರೆ. ನಾನು ಈ ಬಗ್ಗೆ ಏನು ಹೇಳಬೇಕು ಎಂದು ಇಚ್ಛೆಪಟ್ಟಿರತಕ್ಕಂಥದ್ದು ಎಂದರೆ ಈ ರಾಷ್ಟ್ರದ ಎಲ್ಲಾ ಪ್ರಮುಖರು ಸಹಾ ಈ ಯಾವುದೇ ಒಂದು ಜವಾಬ್ದಾರಿಯನ್ನು ತಾವು ವಹಿಸಿಕೊಳ್ಳದೇ ಒಂದು ತನಿಖೆಯಾಗಬೇಕು ಎನ್ನುವ ಮಾತನ್ನು ಹೇಳುವಂಥ ಪ್ರಯತ್ನವನ್ನು ಮಾಡಿದ್ದಾರೆ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ೧೦–೮–೮೮ರಲ್ಲಿ ಹೇಳಿರುವ ಹೇಳಿಕೆಯು ಮುಖಪುಟದಲ್ಲಿ ದೊಡ್ಡ ದೊಡ್ಡ ಅಕ್ಷರದಲ್ಲಿ ಬಂದಿದೆ.

Hegde seeks judicial enquiry" 10.8.88

ಅದಕ್ಕೂ ನನಗೂ ಸಂಬಂಧ ಇಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಮುಂದೆ ಹೋಗುತ್ತಾ ಸಾರ್ವಜನಿಕ ಹಿತದೃಷ್ಟಿಯಿಂದ ಈ ಒಂದು ಮಾರಲ್ ರೆಸ್ಪಾನ್ಸಿಬಿಲಿಟಿ ತೆಗೆದುಕೊಂಡು ನಾನು ರಾಜೀನಾಮೆ ಕೊಟ್ಟಿದ್ದೇನೆಂದು ಹೇಳಿದ್ದಾರೆ. ರಾಜೀನಾಮೆಯನ್ನು ಅವರು

ಕೊಟ್ಟಿರತಕ್ಕಂಥಾದ್ದು ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಈ ಸಂದರ್ಭದಲ್ಲಿ ನಾನು ಒಂದೇ ಒಂದು ಮಾತು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಕಾಂಗ್ರೇಸ್‌ನ ಯಾವುದೇ ಮುಖಂಡರಿಗೆ ಇವೊತ್ತು ಫೋನ್ ಟ್ಯಾಪ್ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇಲ್ಲ. ಕಾರಣ ಏನು ಅಂದರೆ ಸ್ವಾತಂತ್ರ್ಯ ಬಂದ ನಂತರ ಅನೇಕ ರಾಜ್ಯಗಳಲ್ಲಿ ಇದು ನಡೆಯುತ್ತಿತ್ತು. ಆದರೆ ಅವರನ್ನು ದೂಷಣೆ ಮಾಡಿ, ಅವರ ಆಡಳಿತ ವೈಖರಿಯನ್ನು ಟೀಕೆ ಮಾಡಿ ಅಧಿಕಾರಕ್ಕೆ ಬಂದಂತಹ ಜನ ನೀವು ಈಗ ನೀವು ಅದೇ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ, ಎರಡನೆಯದಾಗಿ ಮಾನ್ಯ ಬೊಮ್ಮಾಯಿಯವರು ಹೇಳಿಕೆ ಕೊಡುವ ಸಂದರ್ಭದಲ್ಲಿ ಇನ್ನು ಮುಂದೆ ಯಾವುದೇ ಪಾಲಿಟೀಷಿಯನ್ ಅವರ ಫೋನ್ ಟ್ಯಾಪ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇದನ್ನು ವಿತ್ ಡ್ರಾ ಮಾಡುತ್ತಿದ್ದೇನೆ ಎಂದು ಹೇಳಿದರೆ ಇದು ಹಿಂದೆ ನಡೆಯುತ್ತಿತ್ತು ಎಂದು ಆಯಿತು. ಹಿಂದೆ ಇದ್ದ ಮುಖ್ಯಮಂತ್ರಿಗಳು ಯಾವುದೇ ಒಬ್ಬ ಪ್ರಮುಖ ರಾಜಕಾರಣಿಗಳ ಬಗ್ಗೆ ಫೋನ್ ಟ್ಯಾಪ್ ಮಾಡುವ ವ್ಯವಸ್ಥೆ ನಿಮ್ಮಲ್ಲಿ ಇತ್ತು ಹಾಗಾದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷದ ಮುಖಂಡ ಅಥವಾ ನಿಮ್ಮ ಜನತಾ ಪಾರ್ಟಿಯ ಮುಖಂಡ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಸಾಧ್ಯ ಇದೆಯೇ ? ಇದು ಅಧಿಕಾರದ ದುರುಪಯೋಗ ಅಲ್ಲವೇ ? ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡಿರಿ, ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿರಿ. ಪ್ರಜಾಪ್ರಭುತ್ವವನ್ನು ಕೊಲೆ ಮಾಡುವಂತಹ ಪ್ರಯತ್ನ ಇವೊತ್ತು ಜನತಾ ಸರ್ಕಾರದಿಂದ ನಡೆದಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿಯಾಗಿದೆ. ಇವೊತ್ತು ಸನ್ಮಾನ್ಯ ಮುಖ್ಯಮಂತ್ರಿಗಳಾದ ಬೊಮ್ಮಾಯಿಯವರು ಉತ್ತರ ಕೊಡುವ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡಬಹುದು, ಅದು ಏನೆಂದರೆ ಹೌದು ನೈತಿಕ ಹೊಣೆ ಇಟ್ಟುಕೊಂಡು ಹೆಗಡೆಯವರು ರಾಜೀನಾಮೆ ಕೊಟ್ಟರು, ಆದರೆ ನಿಮ್ಮ ಸರ್ಕಾರ ಅದೇ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಸರ್ಕಾರದವರೂ ಈ ಕೆಲಸ ಮಾಡುತ್ತಿರುವುದರಿಂದ ನೀವು ರಾಜೀನಾಮೆಗೆ ಒತ್ತಾಯ ತರುವಂತಹದ್ದು ಸ್ವಾಭಾವಿಕ. ನಾನು ಕೇಳತಕ್ಕಂಥದ್ದು ಯಾವ ರಾಜ್ಯದ ಜನ ಕಾಂಗ್ರೆಸ್ ಸರ್ಕಾರವನ್ನು ನೋಡಿ, ಅವರ ಆಡಳಿತ ವೈಖರಿಯನ್ನು ಅದೇ ರೀತಿ ಮುಂದುವರಿಸಬಾರದೆಂದು ತೀರ್ಮಾನ ಮಾಡಿ ನಿಮ್ಮನ್ನು ಅಧಿಕಾರಕ್ಕೆ ತರುವಂತಹ ಪ್ರಯತ್ನ ಮಾಡಿದರು. ಈಗ ಇದರ ಪರಿಣಾಮ ಏನು ಆಯಿತು ? ರಾಜಕಾರಣಿಗಳ ಬಗ್ಗೆ ಇಡೀ ದೇಶದಲ್ಲಿ ಹೇಸಿಗೆಯಿಂದ ಜನ ನೋಡುತ್ತಿರುವ ಈ ಸಂದರ್ಭದಲ್ಲಿ, ವಿರೋಧಿ ಪಕ್ಷಗಳು ಒಂದು ಒಳ್ಳೆಯ ಕೆಲಸ ಮಾಡಬಹುದು ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದರು ಅಂತಹ ನಂಬಿಕೆಗೆ, ವಿಶ್ವಾಸಕ್ಕೆ ದ್ರೋಹ ಮಾಡುವಂತಹ ಘಟನೆ ಇದು ಆಗಲಿಲ್ಲವೇ ? ಯಾವುದೇ ಒಬ್ಬ ಮುಖ್ಯಮಂತ್ರಿ ರಾಜೀನಾಮೆ ಕೊಟ್ಟ ಸಂದರ್ಭದಲ್ಲಿ ಅವರ ಮೇಲೆ ತನಿಖೆ ಮಾಡಿ ಶಿಕ್ಷೆ ಕೊಡಿಸುವುದು ಅಷ್ಟು ಮಹತ್ವವಾದ ವಿಷಯ ಅಲ್ಲ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ರೀತಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡತಕ್ಕಂತಹ ಪ್ರಯತ್ನ ಅಧಿಕಾರ ಸಿಕ್ಕಂತಹ ಜನ ಮಾಡುತ್ತಿದ್ದಾರೆ ಎಂಬುದಕ್ಕೆ ಇದೊಂದು ಜ್ವಲಂತ ಉದಾಹರಣೆ ಆಗಿದೆ. ಅದಕ್ಕೋಸ್ಕರ ನಾನು ಹೆಚ್ಚಿಗೆ ವಿವರಕ್ಕೆ ಹೋಗದೆ ಇವೊತ್ತಿನ ದಿವಸ ಈ ಘಟನೆಯ ಹಿನ್ನೆಲೆ ಏನಿದೆ, ಅದರ ಬಗ್ಗೆ ಹೇಳುತ್ತೇನೆ, ಯಾವ ಪಕ್ಷದ ಒಬ್ಬ ಮುಖಂಡ ಪಾರ್ಲಿಮೆಂಟ್‌ನಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಅನಿವಾರ್ಯವಾಗಿ ರಾಜೀನಾಮೆ ಕೊಡುವಂತಹ ಪರಿಸ್ಥಿತಿಯನ್ನು ತಂದಿಟ್ಟರೋ ಹಾಗೂ ಇವೊತ್ತಿನ ದಿವಸ ಬಹಿರಂಗ ಮಾಡಿ ಹೆಗಡೆಯವರು ರಾಜೀನಾಮೆ ಕೊಡುವ ಕೆಲಸ ಮಾಡಬೇಕಾದರೆ ಅದರ ಕ್ರೆಡಿಟ್ ಕರ್ನಾಟಕದಲ್ಲಿನ ಕಾಂಗ್ರೆಸ್ ಪಕ್ಷದ್ದಲ್ಲ. ಬಿ. ಜೆ. ಪಿ. ಯದು ಅಲ್ಲ ಅಥವಾ ಕಮ್ಯುನಿಸ್ಟ್ ಪಕ್ಷದವರ ಕೆಲಸವಲ್ಲ, ಈ ಕೆಲಸ ಅವರಿಗೂ ಬರುವುದಿಲ್ಲ. ಅವರ ಕಾಲು ಎಳೆಯುವಂತಹ ಪ್ರಯತ್ನವನ್ನು ಅವರೇ ಮಾಡಿದರು. ಆದರೆ ಒಂದು ಸಂತೋಷದ ಸಂಗತಿ ಅಂದರೆ ಯಾವ ಒಳ ಅವ್ಯವಹಾರಗಳು ನಡೆಯುತ್ತಿತ್ತು. ಯಾವ ರೀತಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದರು ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ, ಈ ಬಗ್ಗೆ ಮಾನ್ಯ ಬೊಮ್ಮಾಯಿಯವರು ಹೇಳಿರುವ ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ತಮ್ಮ ಹೇಳಿಕೆಯನ್ನು ಕೊಡುತ್ತಾ ಮುಂದುವರಿದು ಈ ಮಾತನ್ನು ಹೇಳಿದ್ದಾರೆ:—

"Karnataka Cheif Minister S. R, Bommai today declared that he would soon issue orders to stop forthwith

tapping of telephones of politicians and private citizens. ''

Addressing a press conference he made clear that the practice of tapping of telephones under Sec(2) of the Telegraphic Act would not be completely given up since it was useful in keeping a watch on the anti social elements and known criminals. ''

ಅಂದರೆ ಇದು ಮುಂದುವರೆಯುತ್ತದೆ, ಈ ರೀತಿ ಟ್ಯಾಪ್ ಮಾಡಿದ್ದು ಅಜಿತ್‌ಸಿಂಗ್ ಮಾತ್ರ, ದೇವೇಗೌಡರದ್ದು. ಆದರೆ ಇವರು ಆಂಟಿ ನ್ಯಾಷನಲ್ ಎಲಿಮೆಂಟ್ಸ್‌ಗಳೇ ? ಫೋನ್ ಟ್ಯಾಪ್ ಆಯಿತು. ನಿಮ್ಮ ಅಧಿಕಾರದಲ್ಲಿ ಕಾನೂನು ಚೌಕಟ್ಟಿನಲ್ಲಿ ಯಾವ ಅಧಿಕಾರ ಫೋನ್ ಟ್ಯಾಪ್ ಮಾಡಿದ್ದಾನೆ ಆತ ಕಾನೂನಿನ ಚೌಕಟ್ಟನ್ನು ಮೀರಿ ಹಿಂದಿನ ಮುಖ್ಯಮಂತ್ರಿಗಳ ಜೊತೆ ಶಾಮೀಲಾಗಿದ್ದಾನೆ, ಅವರ ಧೈರ್ಯ ಮಾಡಿ ಈ ಕೆಲಸ ಮಾಡಿದ್ದಾನೆ. ಆತ ಈ ಘಟನೆಗೆ ಹೊಣೆ ಆಗುತ್ತಾನೆ. ಆದರೆ ಅಧಿಕಾರದಲ್ಲಿರುವ ಜನ ಬಹಳ ಸುಲಭವಾಗಿ ಆರೋಪಗಳು ಸ್ಥಿರವಾದಾಗ ಅಥವಾ ಶಿಕ್ಷೆಗೆ ಒಳಪಡುವ ಸಂದರ್ಭ ಬಂದಾಗ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲ ಸಂಬಂಧಪಟ್ಟ ಮಂತ್ರಿಗಳೂ ಹಿಂದೆ ಸೇರಿಕೊಂಡು ಬಿಡುತ್ತಾರೆ, ಆಗ ಆ ಅಧಿಕಾರಿ ಮೇಲೆ ಆರೋಪ ಸ್ಥಿರವಾಗಿ ಆತ ಅಪರಾಧಿ ಎಂದು ಪರಿಗಣಿಸಲ್ಪಡುವುದು ಸ್ವಾಭಾವಿಕ. ಕಳೆದ ೪೧ ವರ್ಷಗಳಿಂದ ಭಾರತಕ್ಕೆ ಸ್ವಾತಂತ್ರ್ಯ ಬಂದ ಇತಿಹಾಸದಿಂದ ನಾವು ಇದನ್ನು ನೋಡುತ್ತಿದ್ದೇವೆ. ಈ ಒಂದು ಘಟನೆಯಿಂದ ಸರ್ಕಾರದಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳು ಸಹ ಅಧಿಕಾರದ ಮದದಲ್ಲಿ ಅನೇಕ ಜನ ಅಧಿಕಾರ ದುರುಪಯೋಗ ಮಾಡಿಕೊಂಡಿರುತ್ತಾರೆ. ಇಂತಹ ಅಧಿಕಾರ ದುರುಪಯೋಗದಲ್ಲೂ ಪ್ರಾಮಾಣಿಕವಾಗಿ ಯಾವ ಅಧಿಕಾರಿ ಧೈರ್ಯವಾಗಿ ತನ್ನ ಕೆಲಸವನ್ನು ನಿರ್ವಹಿಸಿಕೊಂಡು ಹೊರಬರುತ್ತಾನೆ, ಆತ ನಿಜಕ್ಕೂ ಒಳ್ಳೆಯ. ಅಧಿಕಾರಿ. ಇವೊತ್ತು ಏನಾದರೂ ಪ್ರಜಾಪ್ರಭುತ್ವ ಉಳಿದಿದ್ದರೆ ಇಂತಹ ಪ್ರಾಮಾಣಿಕ ಅಧಿಕಾರಿಗಳಿಂದ. ರಾಜಕಾರಣಿ ಎಲ್ಲವನ್ನೂ ಬಿಟ್ಟುಬಿಡತಕ್ಕಂಥ ಪ್ರಯತ್ನ ಮಾಡಿದ್ದಾರೆ, ಒಂದು ಘಟನೆ ಈಇದಕ್ಕೆ ಜ್ವಲಂತ ಉದಾಹರಣೆ. ಆದುದರಿಂದ ಇದನ್ನು ಲಘುವಾಗಿ ಪರಿಗಣಿಸುವ ಅಥವಾ ಗಮನಿಸುವ ಪ್ರಯತ್ನ ಅಲ್ಲ. ನನ್ನ ಮನಸ್ಸಿಗೆ ಬಹಳ ದುಃಖವಾಗುತ್ತಿದೆ. ರಾಮಕೃಷ್ಣ ಹೆಗಡೆಯವರನ್ನು ನಾವು ಎಷ್ಟೇ ಟೀಕೆ ಮಾಡಿದರೂ ಸಹ ಅವರು ರಾಷ್ಟ್ರದ ಒಂದು ರಾಜಕಾರಣದಲ್ಲಿ ಕೆಲಸ ಮಾಡಬೇಕಾದಂತಹ ಹಾಗೂ ಜವಾಬ್ದಾರಿಯುತವಾದಂತಹ ಕೆಲಸ ಮಾಡಬೇಕಾದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಷ್ಟ್ರದ ಜನರ ನಂಬಿಕೆ ಇಟ್ಟುಕೊಂಡು ಕೇವಲ ಕುರ್ಚಿ ಆಸೆಗಾಗಿ ತಮ್ಮ ಪಕ್ಷದ ಮುಖಂಡರ ಕಾಲು ಹಿಡಿಯುವಂತಹ ಒಂದು ಪ್ರಯತ್ನದಲ್ಲಿ ಇದ್ದರು ಎಂದರೆ ಎಷ್ಟು ಖೇದವೆನಿಸುತ್ತದೆ,

ಈ ರಾಷ್ಟ್ರದ ರಾಜಕಾರಣ ಮಾಡುವ ಅಪೇಕ್ಷೆ ನಿಮಗಿದ್ದರೆ. ಜನರು ಆ ರೀತಿ ಅಪೇಕ್ಷೆ ಮಾಡಿದ್ದರೆ ನೀವು ಮುಖ್ಯಮಂತ್ರಿಗಳ ಸ್ಥಾನ ಬಿಟ್ಟು ಆ ಕೆಲಸಕ್ಕೆ ಹೋಗಿ, ಒಳ್ಳೆಯ ರಾಜಕಾರಣಿ ಆಗಿ ಎಂದು ನಾನು ಅವರಿಗೆ ಹೇಳಿದ್ದೆ, ಆದರೆ ಮುಖ್ಯಮಂತ್ರಿಗಳಾಗಿರುವವರೆಗೆ ತಾವು ಒಬ್ಬ ಒಳ್ಳೆಯ ಆಡಳಿತಗಾರರಾಗಬೇಕೆಂದು ಸಹ ನಾನು ಅವರಿಗೆ ಹೇಳಿದ್ದೆ. ಆದರೆ ಅವರು ರಾಜೀನಾಮೆ ಕೊಡುವ ಸಂದರ್ಭದಲ್ಲಿ ಪರಿಸ್ಥಿತಿ ಏನಿತ್ತೋ ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇವೊತ್ತಿನ ಚರ್ಚೆಯಲ್ಲಿ ಮಾನ್ಯ ದೇವೇಗೌಡರು ಮಾತ್ರ ಮಾನ್ಯ ರಾಮಕೃಷ್ಣ ಹೆಗಡೆಯವರು ಭಾಗವಹಿಸಿ ಇದ್ದಂಥ ವಿಚಾರಗಳನ್ನು ಧೈರ್ಯವಾಗಿ ಹೇಳಬೇಕಾಗಿತ್ತು. ಮಾನ್ಯ ರಾಮಕೃಷ್ಣ ಹೆಗಡೆಯವರು ಇದರ ಚರ್ಚೆಯಲ್ಲಿ ಭಾಗವಹಿಸಿ ಈ ರೀತಿ ಮಾಡಿದ್ದು ತಪ್ಪು ಅದಕ್ಕಾಗಿ ನಾನು ರಾಜೀನಾಮೆ ಕೊಟ್ಟೆ, ಇದೇ ರೀತಿ ಬೇರೆ ಎಷ್ಟು ಜನರು ಮಾಡಿದ್ದಾರೆಂದು ಕೇಳಬಹುದಾಗಿತ್ತು. ಕಳೆದ ಎರಡು ತಿಂಗಳ ಹಿಂದಿನಿಂದ ನಮ್ಮ ರಾಜ್ಯದ ಆಡಳಿತ ಪಕ್ಷದಲ್ಲಿ ನಡೆದಂಥ ಘಟನೆಗಳ ಬಗ್ಗೆ ನಾನೂ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಇದೆಲ್ಲಾ ಅವರಿಗೇ ಬಿಟ್ಟ ವಿಚಾರ. ಕಳೆದ ಎರಡು ತಿಂಗಳುಗಳಿಂದ ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ನಾನಾ ರೀತಿಯ ಬೆಳವಣಿಗೆಗಳು ನಡೆಯುತ್ತಿವೆ ಆದರೆ ಬೇರೆಯವರ ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳುವಂತಹ ಪ್ರಕರಣದ ಬಗ್ಗೆ ಮಾತನಾಡುವಂತಹ ನೈತಿಕ ಹಕ್ಕು ಕಾಂಗ್ರೆಸ್ ಪಕ್ಷದ

ಸದಸ್ಯರಿಗೆ ಇಲ್ಲವೆಂದು ನಾನು ಹೇಳುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಇಂಥಾದ್ದು ಇಡೀ ದೇಶದಲ್ಲಿಯೇ ನಡೆಯುತ್ತಿದೆ. ಇವೊತ್ತಿನ ದಿವಸ...

(ಗೊಂದಲ)

ಅಧ್ಯಕ್ಷರು.— ಅವರು ಹೇಳುವುದನ್ನು ನೀವುಗಳು ಕೇಳಿ. ನೀವೆಲ್ಲರೂ ಈ ರೀತಿ ಎದ್ದು ನಿಂತರೆ ಹೇಗೆ? ಅವರಿಗೆ ಇಲ್ಲಿ ಮಾತನಾಡಲು ವಾಕ್‌ಸ್ವಾತಂತ್ರ್ಯವಿಲ್ಲವೇ? ನೀವು ಹೇಳುವುದನ್ನು ನೀವು ಹೇಳಿ, ಅವರು ಹೇಳುವುದನ್ನು ಅವರು ಹೇಳಲಿ. ಈಗ ಎಲ್ಲರೂ ಕುಳಿತು ಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಕಾಂಗ್ರೆಸ್ ಪಕ್ಷದ ಮಿತ್ರರ ಮನಸ್ಸಿಗೆ ನೋವು ಉಂಟು ಮಾಡಬೇಕೆಂದು ನಾನು ಈ ಮಾತನ್ನು ಹೇಳುತ್ತಿಲ್ಲ, ಆದರೆ ಬೇರೆಯವರು ಮಾಡಿದ ತಪ್ಪನ್ನೇ ಈಗ ಅಧಿಕಾರದಲ್ಲಿರುವಂತಹ ಜನತಾಪಕ್ಷದವರು ಸಹ ಮಾಡುತ್ತಿರುವ ಬಗ್ಗೆ ನನ್ನ ಮನಸ್ಸಿಗೆ ನೋವಾಗುತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸದಸ್ಯರು ನಮಗೆ ನೇರವಾಗಿ ಸಂಬಂಧಪಟ್ಟ ವಿಚಾರ ವನ್ನು ಇಲ್ಲಿ ಹೇಳಿದ್ದಾರೆ. ಅವರು ನೈತಿಕ ಹಕ್ಕಿನ ವಿಚಾರ ಹೇಳುತ್ತಿದ್ದಾರೆ. ರಾಜಕೀಯವಾಗಿ ಮಾತ ನಾಡಬೇಕೆಂಬ ಇಚ್ಛೆ ತಮಗಿದ್ದರೆ ತಾವು ಆ ರೀತಿ ಮಾತನಾಡಬಹುದು. ಆದರೆ ತಾವು ಮಾತನಾಡು ವಾಗ ಈ ಸರ್ಕಾರ ಅನೈತಿಕ ಕೆಲಸ ಮಾಡುತ್ತಿದೆ ಎಂದು ಒಂದು ಕಡೆ ಹೇಳಿ ಅದೇ ಸರ್ಕಾರಕ್ಕೆ ತಾವು ಯಾವ ಒಂದು ನೈತಿಕ ಹಿನ್ನೆಲೆಯಲ್ಲಿ ಬೆಂಬಲ ಕೊಟ್ಟಿದ್ದೀರಿ? ಅನೈತಿಕ ವ್ಯವಹಾರ ಮಾಡಿದ ಮಾಜಿ ಮುಖ್ಯಮಂತ್ರಿಗಳ ಬಗ್ಗೆ ನೀವು ಯಾವ ನೈತಿಕ ನೆಲೆಯಲ್ಲಿ ಟೀಕೆ ಮಾಡುತ್ತಿದ್ದೀರಿ? ಈ ರೀತಿ ಟೀಕೆ ಮಾಡಲು ನಿಮಗೆ ಯಾವ ನೈತಿಕ ಹಕ್ಕಿದೆ? ಇದರ ಬಗ್ಗೆ ಸಹ ತಾವು ಆಲೋಚನೆ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮಗೆ ಯಾವ ರೀತಿ ನೈತಿಕ ಹಕ್ಕಿದೆ ಎಂದರೆ, ಈ ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದ ಸಮಯದಲ್ಲಿ ಜನರ ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿಬಂತು. ಆ ಸಮಯದಲ್ಲಿ ಶ್ರೀ ಜಯಪ್ರಕಾಶ್‌ನಾರಾಯಣ್ ಅವರು ಜೈಲಿಗೆ ಹೋದರು. ಆ ಒಂದು ಸಂದರ್ಭ ದಲ್ಲಿ ಭಾರತ್‌ಮಾತಾಕೀ ಜೈ ಎಂದು ಘೋಷಣೆಯನ್ನು ಕೂಗಿ ತುರ್ತುಪರಿಸ್ಥಿತಿ ವಿರುದ್ಧ ಹೋರಾಟ ಮಾಡಿದಂಥ ಜನ ನಾವು.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಹಿರಿಯ ಸದಸ್ಯರಿದ್ದೀರಿ ಮತ್ತು ಒಂದು ಪಕ್ಷದ ಅಧ್ಯಕ್ಷ ರಾಗಿದ್ದೀರಿ. ಆದ್ದರಿಂದ ತಾವು ಮಾತನಾಡುವಾಗ ಯೋಚನೆ ಮಾಡಿ ಮಾತನಾಡುವುದು ಒಳ್ಳೆಯದು. ತಮಗೆ ಅನುಕೂಲವಾಗುವುದಿದ್ದರೆ ರಾಮಕೃಷ್ಣ ಹೆಗಡೆಯವರು ಆಗಬಹುದು, ತಮಗೆ ಅನುಕೂಲ ವಾಗದಿದ್ದರೆ ರಾಮಕೃಷ್ಣಹೆಗಡೆಯವರು ಬೇಡ ಎಂಬ ಅರ್ಥದಲ್ಲಿ ಮಾತನಾಡುವುದು ಸರಿಯಲ್ಲ. ಈ ರೀತಿ ತಾವು ಮಾತನಾಡಿದರೆ ಅದನ್ನು ಯಾರೂ ಸಹ ಮೆಚ್ಚಿಕೊಳ್ಳುವುದಿಲ್ಲ. ಮುಖ್ಯವಾಗಿ ಈಗ ಸಭೆಯ ಮುಂದೆ ಇರುವಂತಹ ಸೂಚನೆಗೆ ತಾವು ಸಪೋರ್ಟ್ ಮಾಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ರಾಜ್ಯದ ಜನರ ದೌರ್ಭಾಗ್ಯವೆಂದರೆ, ಚುನಾವಣೆ ಸಮಯದಲ್ಲಿ ಜನರು ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಮತ್ತೆ ಬರುವುದು ಬೇಡ ಎಂದು ಜನತಾ ಪಕ್ಷಕ್ಕೆ ಬೆಂಬಲ ಕೊಟ್ಟರು. ಆದರೆ ಇವರೂ ಸಹ ಯಾವ ರೀತಿ ನಡೆದುಕೊಂಡ ರೆಂಬುದು ಇಡೀ ರಾಜ್ಯದ ಜನತೆಗೆ ತಿಳಿಯಿತು ಮತ್ತು ಇಡೀ ದೇಶದ ಜನತೆಗೆ ತಿಳಿಯಿತು. ಈ ಪ್ರಕರಣದಲ್ಲಿ ಮಾತನಾಡಲು ನಿಮಗೆ ನೈತಿಕಹಕ್ಕಿಲ್ಲವೆಂದು ನಾನು ಏತಕ್ಕೆ ಹೇಳಿದೆ ಎಂದರೆ, ತುರ್ತು ಪರಿಸ್ಥಿತಿ ಇದ್ದ ಸಮಯದಲ್ಲಿ ಬೇರೆಯವರ ಟೆಲಿಫೋನ್ ಸಂಭಾಷಣೆಗಳನ್ನು ಕದ್ದು ಕೇಳುವಂತಹ ಪ್ರಕರಣಗಳು ಸಹಸ್ರಾರು ಸಂಖ್ಯೆಯಲ್ಲಿ ನಡೆಯಿತು. ಈಗಲೂ ಸಹ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಇರುವಂತಹ ರಾಜ್ಯಗಳಲ್ಲಿ ಇದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.— ಅವರ ಅಭಿಪ್ರಾಯ ಅವರು ಹೇಳಲಿ. ನೀವುಗಳು ಏತಕ್ಕೆ ಎದ್ದು ಎದ್ದು ನಿಲ್ಲುತ್ತೀರಿ? ತಾವುಗಳು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ೧೦-೮-೧೯೮೮ರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಪಾರ್ಲಿಮೆಂಟಿನಲ್ಲಿ ನಡೆದಿರತಕ್ಕಂಥ ಡಿಬೇಟ್ ಬಗ್ಗೆ ಇದರ ವಿವರಗಳು ಬಂದಿದೆ. ಪ್ರೈಮ್ ಮಿನಿಸ್ಟರ್ ಮತ್ತು ಹೋಂ ಮಿನಿಸ್ಟರ್ ಅವರುಗಳು ಈ ಕರ್ನಾಟಕ ರಾಜ್ಯದಲ್ಲಿ ನಡೆದಿರುವಂಥ ಫೋನ್ ಟ್ಯಾಪಿಂಗ್ ಪ್ರಕರಣಕ್ಕೆ ಇದೇ ರಾಜ್ಯ ಜವಾಬ್ದಾರಿ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ. ಪಾರ್ಲಿಮೆಂಟ್ ಬಗ್ಗೆ, ಪ್ರೈಂಮಿನಿಸ್ಟರ್ ಬಗ್ಗೆ ಯಾವುದೇ ರೀತಿ ಅವಹೇಳನ ಮಾಡಬಾರದು. ಆದರೆ ಸುಪ್ರೀಂ ಅಧಿಕಾರವಿರುವಂಥ ಆ ಅಧಿಕಾರದಲ್ಲಿ ಕುಳಿತಂಥ ಪ್ರೈಂ ಮಿನಿಸ್ಟರ್ ಅವರು ಕೇಂದ್ರದಲ್ಲಿ ಅವರದೇ ಆದ ಸರ್ಕಾರ ಇರುವಂಥ ಸಮಯದಲ್ಲಿ ಈ ಟೆಲಿಫೋನ್ ಎಕ್ಸ್‌ಚೇಂಜ್, ಟೆಲಿಫೋನ್ ಇಲಾಖೆ ಅವರ ಕೈಯಲ್ಲಿರುವಂಥ ಸಂದರ್ಭದಲ್ಲಿ ಈ ರೀತಿ ಯಾವುದೇ ರಾಜ್ಯದಲ್ಲಿ ಕಾನೂನುಬಾಹಿರವಾಗಿ ಫೋನ್ ಟ್ಯಾಪಿಂಗ್ ಆಗುತ್ತಿದೆ ಅಂದಾಗ ಈ ರಾಜ್ಯದಲ್ಲಿ ವಿರೋಧಪಕ್ಷದ ಸರ್ಕಾರ ಇರಬಹುದು, ನಾನು ವಿರೋಧಪಕ್ಷದ ಒಬ್ಬ ಶಾಸಕ ನಿಮ್ಮ ಕಾಂಗ್ರೆಸ್ ಶಾಸಕರು ಇಲ್ಲಿದ್ದಾರೆ. ಎಲ್ಲರ ರಕ್ಷಣೆ ಹೊರಬೇಕಾಗಿರುವಂಥ ಆ ಇಲಾಖೆಯಲ್ಲಿ ಕಾನೂನುಬಾಹಿರವಾದ ಚಟುವಟಿಕೆಗಳು ಆಗದೇ ಇರುವಂತೆ ನೋಡಿಕೊಳ್ಳಬೇಕಾದುದು ಈ ದೇಶದ ಒಬ್ಬ ಪ್ರಧಾನಿಯ ಕರ್ತವ್ಯ. ಅದು ಟೆಲಿಫೋನ್ ಎಕ್ಸ್‌ಚೇಂಜಿನಲ್ಲಿ ಆಯಿತು. ಕಾನೂನುಬಾಹಿರವಾಗಿ ಸರ್ಕಾರದ ಮುಖ್ಯ ಮಂತ್ರಿ ಅಧಿಕಾರಿಯಿಂದ ಇನ್‌ಫ್ಲುಯನ್ಸ್ ಮಾಡಿಸಿ ಫೋನ್ ಟ್ಯಾಪಿಂಗ್ ಆದರೂ ಸಹ ಟೆಲಿಫೋನ್ ಎಕ್ಸ್‌ಚೇಂಜಿನ ಅಧಿಕಾರಿಗಳು ಇದರಲ್ಲಿ ಶಾಮೀಲಾದರು ಎಂದು ಹೇಳುತ್ತಾರೆ. ಈ ರೀತಿಯಾದ ಘಟನೆಗಳು ಇಡೀ ದೇಶದಲ್ಲಿ ನಡೆಯುತ್ತಿದೆ. ಆದರೆ ಮಾನ್ಯ ಬೊಮ್ಮಾಯಿಯವರಿಗೆ ನಾನು ಹೇಳುವುದಕ್ಕೆ ಇಷ್ಟಪಡುವಂಥಾದ್ದು ಏನೆಂದರೆ, ನೀವು ನಿಮ್ಮ ಸ್ಟೇಟ್‌ಮೆಂಟನ್ನು ಕೊಡುವಂಥ ಸಂದರ್ಭದಲ್ಲಿ ದೇಶದ ರಕ್ಷಣೆಯ ಹಿತದೃಷ್ಟಿಯಿಂದ ಭ್ರಷ್ಟಾಚಾರಿಗಳು ಯಾರಿದ್ದಾರೆ ಕಳ್ಳಸಾಗಾಣಿಕೆದಾರರು ಯಾರಿದ್ದಾರೆ ಅಂತಹವರನ್ನು ನೋಡುವುದಕ್ಕೋಸ್ಕರ, ರಾಜ್ಯದ ಹಿತದೃಷ್ಟಿಯಿಂದ ಇದನ್ನು ಮುಂದುವರಿಸಬೇಕಾದುದು ಅನಿವಾರ್ಯ ಎಂದು ಹೇಳುವಂಥ ಸಂದರ್ಭದಲ್ಲಿ ಈ ಪೆಲ್ಟರನ್ನು ಉಪಯೋಗ ಮಾಡಿಕೊಂಡೇ ಅಜಿತ್‌ಸಿಂಗ್ ದೇವೇಗೌಡರ ಟೆಲಿಫೋನ್ ಟ್ಯಾಪ್ ಮಾಡಿದ್ದು ಈ ಪೆಲ್ಟರ್ ಉಪಯೋಗ ಮಾಡಿಕೊಂಡೇ ಬಂಗಾರಪ್ಪನವರ ಫೋನ್ ಟ್ಯಾಪ್ ಮಾಡಿದ್ದು ದೇವೇಗೌಡರು ಇರಬಹುದು, ಬಂಗಾರಪ್ಪನವರು ಇರಬಹುದು, ವೀರಪ್ಪಮೊಯ್ಲಿಯವರು ಇರಬಹುದು, ಮತ್ತೊಬ್ಬರದ್ದು ಇರಬಹುದು, ನನ್ನದು ಇರಬಹುದು, ಅಂದರೆ ಈ ರೀತಿ ರಾಜಕೀಯ ಮುಖಂಡರ ಟೆಲಿಫೋನ್ ಟ್ಯಾಪ್ ಆಗದ ರೀತಿ ರಕ್ಷಣೆ ಮಾಡುವುದಕ್ಕೆ ಈ ಕಾಲದಲ್ಲಿ ಏನಿದೆ? ಇದರಲ್ಲಿ ಅವಕಾಶವಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರೈಂ ಮಿನಿಸ್ಟರ್ ಸ್ಟೇಟ್‌ಮೆಂಟನ್ನು ನಾನು ವೆಲ್‌ಕಂ ಮಾಡಿದ್ದೇನೆ. ಅಮೆಂಡ್‌ಮೆಂಟ್ ಆಗಿಲ್ಲ ಎಂದು ಕೂಡ ಹೇಳಿದ್ದೇನೆ ಸ್ಟೇಟ್‌ಮೆಂಟ್ ಪೂರ ಓದಿ, ಅರ್ಧ ಓದಿದರೆ ನಿಮಗೆ ಅರ್ಥವಾಗುವುದಿಲ್ಲ. I have welcomed the Prime Ministers, statement. I want an amendment of the Act.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೊಮ್ಮಾಯಿಯವರೇ ನಾನು ಹೇಳುವುದಕ್ಕೆ ಹೊರಟಿರುವಂಥಾದ್ದು ಏನೆಂದರೆ. ಅಮೆಂಡ್‌ಮೆಂಟ್ ಆಗಲಿ. ಅಮೆಂಡ್‌ಮೆಂಟ್ ಏನು ಮಾಡಬೇಕೋ ಅದನ್ನು ಮಾಡಬಾರದು ಎಂದು ನಾನು ಹೇಳುವುದಿಲ್ಲ. ಸ್ಪಷ್ಟವಾಗಿ ಯಾರು ಯಾರದು ಟ್ಯಾಪ್ ಮಾಡಬೇಕು ಎಂದು ಅಮೆಂಡ್ ಮಾಡಬೇಕೋ ಅದನ್ನು ಮಾಡಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಕಾನೂನು ಮಾಡಿದಾಗ ಯಾರ ಮೇಲೆ ಜವಾಬ್ದಾರಿಯಿಂದ ಫೋನ್ ಟ್ಯಾಪಿಂಗ್ ಆಗಬೇಕು ಎಂದು ರಾಷ್ಟ್ರದ ಹಿತರಕ್ಷಣೆಯ ದೃಷ್ಟಿಯಿಂದ ಎಂದು ಸ್ಪಷ್ಟವಾಗಿದ್ದಾಗ, ಆ ಶಬ್ದಗಳ ಅರ್ಥವನ್ನು ದುರುಪಯೋಗ ಮಾಡಿಕೊಂಡಿರತಕ್ಕಂಥಾದ್ದು ನಿಮ್ಮ ಸರ್ಕಾರದ ಒಂದು ನೈತಿಕ ಹೊಣೆಯಾಗಲಿಲ್ಲವೇ? ಒಬ್ಬ ಮಂತ್ರಿ ಅಥವಾ ಒಬ್ಬ ಅಧಿಕಾರಿ ಈ ರೀತಿ ಮಾಡಿದಾಗ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವಂಥ ನೈತಿಕ ಹೊಣೆ ನಿಮ್ಮ ಸರ್ಕಾರದ್ದು ಇತ್ತು. ಮುಖ್ಯಮಂತ್ರಿಗಳು ಇದನ್ನು ದುರುಪಯೋಗ ಮಾಡುವಂಥ ಪ್ರಯತ್ನ ಮಾಡಿದರು. ಆದಕ್ಕೆ ನಾನು ಹೇಳಿದ್ದು, ಇವತ್ತಿನ ವ್ಯವಸ್ಥೆಯಲ್ಲಿ ಒಬ್ಬ ಮುಖ್ಯ ಮಂತ್ರಿ ಅಥವಾ ಒಬ್ಬ ಮಂತ್ರಿ ಹೇಳಿದ್ದರ ವಿರುದ್ಧ ಮಾತನಾಡುವಂಥ ಅಧಿಕಾರಿಗಳು ಎಷ್ಟು ಜನ ಇದ್ದಾರೆ ಎಂದು? ಅವರ ಮಾತನ್ನು ಕೇಳದಿದ್ದರೆ ಎಷ್ಟು ಜನ ಪ್ರಾಮಾಣಿಕವಾಗಿ ಉಳಿಯುವುದಕ್ಕೆ ಸಾಧ್ಯವಿದೆ? ಈ ರೀತಿ ಅಧಿಕಾರದಲ್ಲಿ ಉಳಿಯಬೇಕು ಎನ್ನುವುದಕ್ಕೋಸ್ಕರ ಏನು ಬೇಕಾದರೂ ಮಾಡುವುದಕ್ಕೆ ಸಿದ್ಧವಿರುವುದಕ್ಕೋಸ್ಕರ ಕಾನೂನುದಾಹ ಏನಿದೆ ಅದೇ ಈ ಅವ್ಯವಸ್ಥೆಗೆ ಕಾರಣವಾಗಿದೆ. ಅದಕ್ಕೋಸ್ಕರ

ಇದರ ನೈತಿಕಹೊಣೆ ಇತ್ತು ಕೇವಲ ರಾಮಕೃಷ್ಣ ಹೆಗಡೆಯವರು ರಾಜಿನಾಮೆ ಕೊಟ್ಟರೆ ಆಗುವುದಿಲ್ಲ. ಪ್ರಜಾಪ್ರಭುತ್ವ ಉಳಿಯುವುದಕ್ಕೋಸ್ಕರ ಜನತಾ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ, ಮುಂದೆ ವಿವರವಾಗಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುವುದು ಅಗತ್ಯವಿದೆ. ಇವತ್ತು ಸ್ವಾತಂತ್ರ್ಯದ ಹೆಸರಿನಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡಂಥ ಪ್ರಕರಣದ ಬಗ್ಗೆ ನಿಲುವಳಿ ಸೂಚನೆ ಮೂಲಕ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶಮಾಡಿಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಈ ಚರ್ಚೆಗೆ ೩ ತಾಸು ಆಗಿದೆ. ನಾವು ಅಡ್ಜರ್ನ್‌ಮೆಂಟ್ ಮೋಷನ್ ಎಂದು ತೆಗೆದುಕೊಂಡರೂ ಕೂಡ ೨ ತಾಸು ಚರ್ಚೆಗೆ ಅವಕಾಶ ಇದೆ. ನಾನು ೩ ತಾಸು ಅವಕಾಶ ಕೊಟ್ಟಿದ್ದೇನೆ. ಆದರೂ ಇನ್ನೂ ಮಾತನಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಅದಕ್ಕೆ ಇನ್ನು ಹತ್ತು ಹತ್ತು ಮಿನಿಟ್ ಮಾತನಾಡಿ. ಬಂಗಾರಪ್ಪನವರೇ ಈಗ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಹತ್ತತ್ತು ನಿಮಿಷ ಎಂದರೆ ಇವೆಲ್ಲಾ ನಡೆಯುವುದಿಲ್ಲ. ಇದು ಸಣ್ಣ ವಿಚಾರವಲ್ಲ. ಹತ್ತತ್ತು ನಿಮಿಷದಲ್ಲಿ ಆಗುವುದಿಲ್ಲ.

ಅಧ್ಯಕ್ಷರು.—ಇದು ಮಹತ್ವದ ವಿಚಾರ ಎಂದು ೩ ತಾಸು ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಹೀಗೆ ಕಂಡೀಷನ್ ಹಾಕಿ ದೊಡ್ಡ ದೊಡ್ಡ ಮಾತನ್ನು ಆಡಿ, ನಮ್ಮ ಹಕ್ಕುಗಳು ಈ ರೀತಿ ಮರ್ದನ ಆಗಿರಬೇಕಾದರೆ...

ಅಧ್ಯಕ್ಷರು.—ಅದಕ್ಕೋಸ್ಕರ ನಾನು ಹೇಳುವುದು ಈಗ ಪ್ರಿಲಿಮಿನರಿ ಸಬ್ಮಿಷನ್ ಅಂದರೆ ಫೈನಲ್ ಸಬ್ಮಿಷನ್ ಆದಹಾಗೆ ಆಯಿತು. ಅದಕ್ಕೆ ನಾನು ಹೇಳಿದ್ದು ೧೦ ಮಿನಿಟ್ ಮಾತನಾಡಿ ಎಂದು.

ಶ್ರೀ ಎಸ್. ಬಂಗಾರಪ್ಪ.—ತಾವೂ ಕೂಡ ಗಮನಿಸಬೇಕು ಇಲ್ಲಿ. ಹತ್ತತ್ತು ನಿಮಿಷ ತೆಗೆದುಕೊಂಡು ನಾವು ಮಾತನಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಮ್ಮದೂ ಜವಾಬ್ದಾರಿ ಇದೆ, ನಿಮಗೂ ಜವಾಬ್ದಾರಿ ಇದೆ ರೂಲ್ಸ್ ಬುಕ್ ಇದೆ. ನಿಯಮಗಳ ಪ್ರಕಾರ ೧೫ಮಿನಿಟ್‌ಗಿಂತ ಹೆಚ್ಚಿಗೆ ಅವಕಾಶ ಕೊಡಬಾರದು ಎಂದು ಇದೆ, ಆಮೇಲೆ ೩ ಮಂದಿಗಿಂತ ಹೆಚ್ಚಿಗೆ ಅವಕಾಶ ಕೊಡಬಾರದು ಎಂದು ಇದೆ. ಫೈನಲ್ ಡಿಸ್ಕಷನ್ ಆದರೂ ಕೂಡ ೨ ತಾಸಿಗಿಂತ ಹೆಚ್ಚಿಗೆಕೊಡಬಾರದು ಎಂದು ಇದೆ. ಈಗ ೨ ತಾಸಿಗಿಂತಲೂ ಹೆಚ್ಚಾಯಿತು, ೩ ತಾಸಿಗಿಂತಲೂ ಹೆಚ್ಚಾಗಿದೆ ೩ ತಾಸು ಮುಗಿದಿದೆ. ಅದಕ್ಕೋಸ್ಕರ ನಾನು ಹೇಳುತ್ತೇನೆ, ನೀವು ಸಹಕಾರ ಕೊಡಬೇಕು. ನಿಮಗೆ ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಹೇಳಿಕೊಡಬೇಕಾಗಿಲ್ಲ. You are an intelligent legislator. ಆದುದರಿಂದ ದಯಮಾಡಿ ಹತ್ತು ನಿಮಿಷದಲ್ಲಿ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ನಾವು ಸಹಕಾರ ಕೊಡುತ್ತೇವೆ, ತಾವೂ ಕೂಡ ನಮಗೆ ಸಹಕಾರ ಕೊಟ್ಟರೆ ಸಾಕು, ಅಷ್ಟೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೆ, ಕಾನೂನು ಪರಿಮಿತಿ ಮತ್ತು ವಿಷಯಗಳ ಸಂಗ್ರಹಣೆ ಈ ದೃಷ್ಟಿಯಿಂದ ಈ ಚರ್ಚೆ ಒಂದು ರೀತಿಯಲ್ಲಿ ಚೆನ್ನಾಗಿ ನಡೆದಿದೆ. ಇನ್ನೂ ನಡೆಯುತ್ತಿದೆ. ಇನ್ನೂ ನಡೆಯಬೇಕೆನ್ನುವುದು ನನ್ನ ಆಸೆ. ಈ ಪ್ರಸಂಗದಲ್ಲಿ ಒಂದೇ ಒಂದು ವಿಚಾರವನ್ನು ಮುಖ್ಯವಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವತ್ತು ಇಂಗ್ಲೆಂಡ್, ಅಮೆರಿಕಾ ಇಂಥ ದೇಶಗಳಲ್ಲಿ ಟೆಲಿಫೋನ್ ಬಗ್ಗಿಂಗ್ ಅಥವಾ ಟ್ಯಾಪಿಂಗ್ ಬಗ್ಗೆ ಕೆಲವು ತೀರ್ಪುಗಳು ಇರುವುದನ್ನು ನಾವು ಕೆಲವೊಮ್ಮೆ ನೋಡಿದ್ದೇವೆ. ಆದರೆ, ದುರಾದೃಷ್ಟವಶಾತ್ ಒಂದು ದೃಷ್ಟಿಯಿಂದ ಅದೃಷ್ಟವಶಾತ್ ಯಾವುದೇ ರೀತಿಯ ಟೆಲಿಫೋನ್ ಟ್ಯಾಪಿಂಗ್‌ಗೆ ಸಂಬಂಧಪಟ್ಟ ತೀರ್ಪುಗಳು ನಮ್ಮಲ್ಲಿ ಬಂದಿಲ್ಲ. ಹೈಕೋರ್ಟಿನಲ್ಲಾಗಲೀ. ಸುಪ್ರೀಂ ಕೋರ್ಟಿನಲ್ಲಾಗಲೀ ನನಗೆ ಕಾಣಿಸುತ್ತಿಲ್ಲ. ಅದು ಇದ್ದಿದ್ದರೆ ಒಂದು ರೀತಿಯ ಗೈಡ್‌ಲೈನಾದರೂ ನಮಗೆ ಆಗುತ್ತಿತ್ತು. ಅದೃಷ್ಟವಶಾತ್ ಇದನ್ನು ಕೋರ್ಟಿಗೆ ಕಳುಹಿಸಿ, ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಂಡರೆ ಅದೊಂದು ರೀತಿ ಇರುತ್ತಿತ್ತು. ಈಗ ಅಪರಾಧಿ ಸ್ಥಾನದಲ್ಲಿರುವವರಾದರೂ ಕೋರ್ಟಿಗೆ ಹೋಗಬಹುದು, ಅಥವಾ ಸರ್ಕಾರದವರಾದರೂ ಇದನ್ನು ಕೋರ್ಟಿಗೆ ತೆಗೆದುಕೊಂಡು ಹೋಗಬೇಕು. ಇದು ಹೈಕೋರ್ಟು ಅಥವಾ ಸುಪ್ರೀಂ ಕೋರ್ಟಿಗೆ ಹೋಗಿ ಅಲ್ಲಿಂದ ತೀರ್ಪು ಹೊರಗೆ ಬೀಳಲಿ ಎಂಬುದು ನನ್ನ ಆಸೆ. ಇವತ್ತು ಬೆಳವಣಿಗೆಯಾಗುತ್ತಿರುವುದು

ಸಹಜ. ಬೆಳವಣಿಗೆ ಆಗತಕ್ಕ ಸಮಾಜದಲ್ಲಿ ; ಬೆಳವಣಿಗೆಗೆ ಅನುಗುಣವಾಗಿ ತೀರ್ಪುಗಳು ಕೂಡ ಬದಲಾವಣೆ ಆದರೆ, ಅದು ಹೊಸದೇನೂ ಅಲ್ಲ. ಅದನ್ನು ಕೂಡ ನಾವು ಸ್ವೀಕಾರ ಮಾಡಬೇಕಾಗುತ್ತದೆ. ಕಾನೂನು ದೃಷ್ಟಿಯಿಂದ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇವತ್ತು ನಾವೆಲ್ಲರೂ ಪ್ರಜಾಪ್ರಭುತ್ವದಲ್ಲಿದ್ದೇವೆ. ಒಂದೊಂದು ರಾಷ್ಟ್ರದಲ್ಲಿ ರಾಜ್ಯಾಂಗ ಇಲ್ಲದೇ ಇರುವುದನ್ನು ಕೆಲಕಾಲ ನಾವು ನೋಡಿದ್ದೇವೆ. ನಮ್ಮ ಅದೃಷ್ಟ ನಮ್ಮ ರಾಷ್ಟ್ರದಲ್ಲಿ ೧೯೫೦ನೇ ಇಸವಿಯಿಂದಲೂ ಸತತವಾಗಿ ರಾಜ್ಯಾಂಗವನ್ನು ನಾವು ಇಟ್ಟುಕೊಂಡು ಬಂದಿದ್ದೇವೆ. ರಾಜ್ಯಾಂಗದಲ್ಲಿ ನ್ಯೂನತೆಗಳು ಬೇಕಾದಷ್ಟು ಇವೆ. ಆದರೆ, ರಾಜ್ಯಾಂಗವನ್ನು ಇಟ್ಟುಕೊಂಡು ರಿಪಬ್ಲಿಕ್ ಇಂಡಿಯಾ, ಇಂಡಿಯನ್ ರಿಪಬ್ಲಿಕ್, ಗಣರಾಜ್ಯದ ದೃಷ್ಟಿಯಿಂದ ಇಟ್ಟುಕೊಂಡಿದ್ದೇವೆಂದು ಹೇಳತಕ್ಕ ಮಾತು ಹೆಮ್ಮೆಯ ಮಾತು. ನೆರೆ ರಾಷ್ಟ್ರವಾದ ಪಾಕಿಸ್ಥಾನದಲ್ಲಿ ರಾಜ್ಯಾಂಗವನ್ನೇ ಸಂಪೂರ್ಣವಾಗಿ ತೆಗೆದುಹಾಕಿರುವುದನ್ನು ನಾವು ಅನೇಕ ಸಾರಿ ಕಂಡು ಅನುಭವಿಸಿದ್ದೇವೆ. ಇದೇ ರೀತಿ ಪ್ರಪಂಚದ ಹಲವಾರು ರಾಷ್ಟ್ರಗಳಲ್ಲಿ ಆಡಳಿತ ಕೊನೆಗೊಂಡು, ಸೇನಾಕ್ರಾಂತಿ, ಮತ್ತೊಂದು ಆಡಳಿತ ಬಂದಾಗ, ರಾಜ್ಯಾಂಗವನ್ನೇ ತೆಗೆದುಹಾಕಿ. ಹೊಸ ರಾಜ್ಯಾಂಗವನ್ನು ನೀಡಿರುವುದನ್ನು ಕಂಡಿದ್ದೇವೆ; ಕೇಳಿದ್ದೇವೆ. ನಮ್ಮ ರಾಜ್ಯಾಂಗದಲ್ಲಿರತಕ್ಕ ಹಕ್ಕುಗಳು ಒಬ್ಬ ವ್ಯಕ್ತಿಗೆ ಅವನು ಟಾಟಾ ಇರಲಿ, ಬಿರ್ಲಾ ಇರಲಿ, ಯಾರೇ ಇರಬಹುದು, ಅವರಲ್ಲಿ ನೂರಾರು ಕೋಟಿ ರೂಪಾಯಿ ಆಸ್ತಿ ಇರಬಹುದು ಮತದಾನದ ಹಕ್ಕಿನ ದೃಷ್ಟಿಯಿಂದ, ಹಕ್ಕುಬಾಧ್ಯತೆಗಳ ದೃಷ್ಟಿಯಿಂದ, ಮೂಲಭೂತ ಹಕ್ಕುಗಳ ದೃಷ್ಟಿಯಿಂದ ಒಬ್ಬ ವ್ಯಕ್ತಿಗೆ ಎಷ್ಟು ಹಕ್ಕುಗಳು ಇವೆಯೋ; ಅಷ್ಟೇ ಹಕ್ಕುಗಳು ಸಮಾಜದಲ್ಲಿರತಕ್ಕ ಅತೀ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಅಥವಾ ಶತ ಶತಮಾನಗಳಿಂದ ತುಳಿತಕ್ಕೆ ಸಿಕ್ಕಿರತಕ್ಕ, ಜರ್ಜರಿತವಾಗಿರತಕ್ಕ ವ್ಯಕ್ತಿಗೂ ಅಷ್ಟೇ ಮತದಾನದ ಹಕ್ಕು ಇದೆ ವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ತಮ್ಮ ಮನಸ್ಸಿನಲ್ಲಿರತಕ್ಕ ವಿಚಾರಗಳನ್ನು ಜನತೆಯ ಮುಂದೆ ಅಭಿವ್ಯಕ್ತ ಮಾಡತಕ್ಕ ಸುಸಂದರ್ಭ ಪಡೆಯುವುದರ ಜೊತೆಗೆ ಪ್ರತಿಯೊಬ್ಬರೂ ತಮ್ಮ ಮೂಲಭೂತ ಹಕ್ಕುಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಏರುಪೇರುಗಳು ಇರಬಹುದು.

ಮಾನ್ಯ ಸಭಾಧ್ಯಕ್ಷರೇ, ಒಂದು ವರ್ಗದ ಜನರು ಮೇಲಿದ್ದು, ಮತ್ತೊಂದು ವರ್ಗದ ಜನರು ಅತಿ ಕೀಳುಮಟ್ಟದಲ್ಲಿದ್ದಾರೆಂದು ತಿಳಿದರೂ ಕೂಡ ನಮ್ಮ ರಾಜ್ಯಾಂಗದಲ್ಲಿ ತೀರಾ ಕೆಳಗಡೆ ಇರತಕ್ಕ ವ್ಯಕ್ತಿ ಸಮಾಜದಲ್ಲಿ ಮೇಲೆ ಬರುವುದಕ್ಕೆ ಮೂಲಭೂತವಾಗಿ ಅವಕಾಶವಿದೆ ಎಂಬುದನ್ನು ನಾವು ಯಾರೂ ಕೂಡ ಮರೆಯತಕ್ಕದ್ದಲ್ಲ. ಯಾವನೇ ಒಬ್ಬ ವ್ಯಕ್ತಿ ಅವರು ರಾಜಕಾರಣಿ ಇರಬಹುದು, ವಿಜ್ಞಾನಿ ಇರಬಹುದು, ರೈತ ಕಾರ್ಮಿಕ ಇರಬಹುದು, ಸಾಹಿತಿ ಇರಬಹುದು, ಇನ್ನೂ ಬೇರೆಯವರು ಇರಬಹುದು, ನಾನು ಯಾವುದೇ ಒಂದು ಕ್ಷೇತ್ರಕ್ಕಾಗಲಿ, ವ್ಯಕ್ತಿಗಾಗಲಿ ಸೀಮಿತವಾಗಿ ಹೇಳುತ್ತಿಲ್ಲ. ಕೆಳಮಟ್ಟದಲ್ಲಿರುವ ವ್ಯಕ್ತಿ ಮೇಲೆ ಬರುವುದಕ್ಕೆ ಅವಕಾಶವಿದೆಯೆಂಬುದನ್ನು ನಾವು ಈ ದೇಶದಲ್ಲಿ ಪ್ರತ್ಯಕ್ಷವಾಗಿ ನೋಡಿದ್ದೇವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಾನ್ಸ್‌ಟೇಬಲ್ ಪದವಿಯಿಂದ ಹೆಡ್ ಕಾನ್ಸ್‌ಟೇಬಲ್ ಆದಂಥ ವ್ಯಕ್ತಿಯೊಬ್ಬ ಅದೇ ಇಲಾಖೆಗೆ ಹೋಂ ಮಿನಿಸ್ಟರ್ ಆಗಿರತಕ್ಕ ನಿದರ್ಶನವಿದೆ. ಬಿಹಾರದಲ್ಲಿ ರಾಮಾನಂದ ತಿವಾರಿ ಎನ್ನುವವರು ಒಬ್ಬರಿದ್ದರು. ಅವರು ಮೊದಲು ಪೋಲಿಸ್ ಕಾನ್ಸ್‌ಟೇಬಲ್ ಆಗಿದ್ದರು. ಕೊನೆಗೆ ಹೋಂ ಮಿನಿಸ್ಟರ್ ಆದರು. ಅದೇರೀತಿ ಕೇಂದ್ರ ಸರ್ಕಾರದಲ್ಲೂ ಕೆಲವರಿದ್ದಾರೆ. ಅಷ್ಟೇ ಅಲ್ಲ, ಈ ಸರ್ಕಾರದಲ್ಲೂ ಕೂಡ ಇದ್ದಾರೆ. ಈ ಸರ್ಕಾರದ ಸಣ್ಣ ಸಣ್ಣ ಹುದ್ದೆಯಲ್ಲಿದ್ದ ನೌಕರರು ದೊಡ್ಡ ದೊಡ್ಡ ಹುದ್ದೆಗೆ ಹೋಗಿದ್ದಾರೆ. ಸಣ್ಣ ಹುದ್ದೆಯಲ್ಲಿದ್ದ ಹೆಣ್ಣುಮಗಳೊಬ್ಬರು ಈ ರಾಜ್ಯದ ಸಚಿವೆಯಾಗಿದ್ದರು. ಇದೇ ರೀತಿ ಇನ್ನೂ ಆಗತಕ್ಕವರಿದ್ದಾರೆ. ಇಂಥ ಅನೇಕ ಉದಾಹರಣೆಗಳಿವೆ. ಈ ಪ್ರಜಾಪ್ರಭುತ್ವದಲ್ಲಿ ಕೆಳಗೆ ಇದ್ದವರು ಮೇಲೆ ಬರುವುದಕ್ಕೆ ಈ ರೀತಿಯಿಂದ ಅವಕಾಶವಿದೆ. ಯಾವನೇ ಒಬ್ಬ ವ್ಯಕ್ತಿ ತನ್ನ ಹಕ್ಕನ್ನು ಚಲಾವಣೆ ಮಾಡತಕ್ಕ ಸಂದರ್ಭದಲ್ಲಿ ಅದು ಅಬಾಧಿತವಾಗಿರಬೇಕು, ಅವಿಚ್ಛಿನ್ನವಾಗಿರಬೇಕು. ಯಾವುದೇ ಸಂದರ್ಭದಲ್ಲೂ ಕೂಡ ಒಬ್ಬ ವ್ಯಕ್ತಿಯ ಹಕ್ಕನ್ನು ಮೊಟಕು ಮಾಡತಕ್ಕ ಪ್ರಯತ್ನವನ್ನು ನಿರ್ಧಯವಾಗಿ ದಮನ ಮಾಡುವುದಕ್ಕೆ ಯಾರಾದರೂ ಕೈ ಹಾಕಿದರೆ ಯಾವ ಸದುದ್ದೇಶದಿಂದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಸಮರ್ಥ ನಾಯಕತ್ವದಲ್ಲಿ ಸ್ವಾತಂತ್ರ್ಯವನ್ನು ಪಡೆದಿದ್ದೇವೆ, ರಾಜ್ಯಾಂಗವನ್ನು ಪಡೆದಿದ್ದೇವೆ ಅದರ ಮುಖಕ್ಕೆ ಜಯಪ್ರಕಾಶ್ ನಾರಾಯಣ್‌ರವರೂ ಸೇರಿದಂತೆ ಅವರೆಲ್ಲರೂ ಮಸಿಯನ್ನು ಬಳಿಯತಕ್ಕ ಕೆಲಸವನ್ನು ಮಾಡಿದ್ದಾರೇನೋ ಎಂದೆನಿಸುತ್ತದೆ.

ಮಾನ್ಯ ಸಭಾಧ್ಯಕ್ಷರೇ, ಇದಕ್ಕೆ ಪೂರ್ವ ಪೀಠಿಕೆಯಾಗಿ ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಬಹಳಷ್ಟು ವಿಚಾರಗಳಿವೆ. ಆದರೆ ಅದರ ಬಗ್ಗೆ ನಾನು ನನ್ನ ಮಾತನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ಸೆಕ್ಷನ್ ೫ (೨) ಏನಿದೆ ಇದನ್ನು ನನ್ನ ಮಾನ್ಯ ಮಿತ್ರರನೇಕರು ಹೇಳಿದ್ದಾರೆ. ನಾನೂ ಮತ್ತೆ ಅದನ್ನೇ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಎಲ್ಲರೂ ಅದೇ ಸೆಕ್ಷನ್‌ನ್ನೇ ಹೇಳಬೇಕಾಗುತ್ತದೆ. ಆದ್ದರಿಂದ ನಾನಾವರೂ ಹೇಳುತ್ತೇನೆ, ತಪ್ಪಿತಸ್ಥರು ಯಾರೇ ಇರಲಿ ತಪ್ಪು ಮಾಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನು ಇದೆ ಇಂಡಿಯನ್ ಪೀನಲ್ ಕೋಡ್ ಇನ್ನೂ ಮುಂತಾದ ಕಾನೂನುಗಳಿವೆ, ಅವುಗಳನ್ನೆಲ್ಲಾ ಹುಡುಕಿದರೆ ಸಿಕ್ಕುತ್ತವೆ. ಈಗ ನಮ್ಮ ಮುಂದಿರತಕ್ಕದ್ದು ಎಂದರೆ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗಿರತಕ್ಕದ್ದು. ಏಕೆಂದರೆ ನಾವು ರಾಜಕೀಯ ವ್ಯಕ್ತಿಗಳು. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡುತ್ತೇನೆ. ನಾವು ಖಾಸಗಿ ವ್ಯಕ್ತಿಗಳಾಗಿದ್ದಿದ್ದರೆ ಬೇರೆ ರೀತಿ ಹೇಳಬಹುದಾಗಿತ್ತು. ಪಾರ್ಲಿಮೆಂಟ್ ಸದಸ್ಯರು ಆ ಪಕ್ಷದಲ್ಲಿರಬಹುದು, ಈ ಪಕ್ಷದಲ್ಲಿರಬಹುದು ಅಥವಾ ಬೇರೆ ಯಾವುದೇ ಪಕ್ಷದಲ್ಲಿರಬಹುದು. ಅಥವಾ ಈ ಸದನದಲ್ಲಿರುವ ನಾವುಗಳು ಇರಬಹುದು, ನಾನು ಸುಮಾರಾಗಿ ೧-೨ ಲಕ್ಷ ಜನರ ಪ್ರತಿನಿಧಿಗಳಾಗಿ ಇಲ್ಲಿ ಬಂದು ಕೆಲಸ ಮಾಡುತ್ತಿದ್ದೇನೆ. ಜನರ ವಿಚಾರವನ್ನು ತಿಳಿದು ನಾವುಹೇಳಬೇಕಾದರೆ ತಮಗೆ ಅಥವಾನಮಗೆ ಸರಿಕಂಡಂಥ ರೀತಿಯಲ್ಲಿ ಹೇಳಬೇಕು. ಅದಕ್ಕೆ ಗಮನ ಕೊಡಬೇಕು. ನಾನು ಮಾತನಾಡತಕ್ಕದ್ದು ಒಬ್ಬ ವ್ಯಕ್ತಿಗೆ ಅಪ್ರಾಯಮಾನವಾಗಿ ಕಂಡರೆ, ಇನ್ನೊಬ್ಬ ವ್ಯಕ್ತಿಗೆ ಅದು ಸರಿಕಾಣದೇ ಇರಬಹುದು. ಆದರೆ ಬಹಳ ಜನರ ಅಭಿಪ್ರಾಯ ಏನೆಂಬುದನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಬೇಕು. ಬಹಳ ಸಂದರ್ಭಗಳಲ್ಲಿ ಅಧಿಕಾರ ದೃಷ್ಟಿಯಿಂದ ಏರುಪೇರುಗಳು ಬರುತ್ತವೆ. ಅದನ್ನೆಲ್ಲಾ ಸ್ವಾಗತ ಮಾಡತಕ್ಕಂಥ ವಿಶಾಲ ಹೃದಯ ಯಾವ ವ್ಯಕ್ತಿಗೆ ಇರುವುದಿಲ್ಲ, ಅಂಥ ವ್ಯಕ್ತಿ ಸಾರ್ವಜನಿಕ ಜೀವನಕ್ಕೆ ಸರಿಹೊಂದಲಾರ ಎಂಬುದು ನನ್ನ ಅಭಿಪ್ರಾಯ.

೪-೩೦ ಪಿ. ಎಂ.

ಅಧಿಕಾರಕ್ಕೆ ಹೋಗಬೇಕು ಎನ್ನುವ ಉದ್ದೇಶ ಅಥವಾ ಅಧಿಕಾರ ಇದ್ದರೆ ಇಟ್ಟುಕೊಳ್ಳಬೇಕು ಎನ್ನುವಂಥ ಉದ್ದೇಶ ವ್ಯಕ್ತಿಗೆ ಇರಬೇಕು. ಆದರೆ ಯಾವ ದಾರಿಯಲ್ಲಿ ಯಾವ ರೀತಿನೀತಿಯಲ್ಲಿ ಅಧಿಕಾರವನ್ನು ಜೊತೆಯಲ್ಲಿ ಇಟ್ಟುಕೊಳ್ಳಬೇಕು ಎನ್ನುವ ವಿಚಾರದಲ್ಲಿ ವ್ಯಕ್ತಿ, ಪಕ್ಷ, ಗುಂಪು ಅದರ ಬಗ್ಗೆ ಸ್ಪಷ್ಟವಾಗಿ ವಿಚಾರ ಮಾಡಬೇಕಾಗುತ್ತದೆ ಇದು ಅನಿವಾರ್ಯ ಇಲ್ಲದಿದ್ದರೆ ಏನಾಗುತ್ತದೆಂದರೆ ಸಹಜವಾಗಿ ಅಧಿಕಾರದಲ್ಲಿರತಕ್ಕವರು, ಎಲ್ಲರಿಗೂ ನಾನು ಈ ಮಾತನ್ನು ಆಡುವುದಿಲ್ಲ, ನನಗೆ ಗೊತ್ತಿದೆ ಅಧಿಕಾರ ಅಂದರೆ ತಾವರೆ ಎಲೆ ಮೇಲೆ ಇರತಕ್ಕಂಥ ನೀರಿನ ರೀತಿಯಲ್ಲಿ ಇರತಕ್ಕಂಥ ಜನರನ್ನು ನಾವು ಕಂಡಿದ್ದೇವೆ. ತಾವರೆ ಎಲೆ ಮೇಲೆ ನೀರು ಇರುತ್ತದೆ, ಹನಿ ನೀರು ಇರುತ್ತದೆ, ಆದರೆ ಅದು ಎಲೆಗೆ ಅಂಟಿಕೊಳ್ಳುವುದಿಲ್ಲ. ಅದರ ಮೇಲೆ ಸ್ವಲ್ಪ ನೀರು ಸಹ ಇರುವುದು ಗೋಚರ ಆಗುವುದಿಲ್ಲ. ಆದರೆ ಕೆಲವರು ಇರುತ್ತಾರೆ. ನಾನು ಅಧಿಕಾರಕ್ಕೆ ಹೋದಮೇಲೆ ಗೋಡೆಗೆ ಗೂಟ ಹೊಡೆದುಕೊಂಡಹಾಗೆ ಇರಬೇಕು ಎನ್ನುವುದು. ಇದು ನಮ್ಮ ತಾತನ ಆಸ್ತಿ, ನಮ್ಮ ಅಪ್ಪನ ಆಸ್ತಿ ಅಂತ ಕೆಲವರು ಗೋಡೆಗೆ ಗೂಟ ಹೊಡೆದುಕೊಂಡುಬಿಟ್ಟಿದ್ದಾರೆ ಈಗ ಮುಖ್ಯಮಂತ್ರಿ ಗಿರಿಯಲ್ಲಿರುವ ಮಾನ್ಯ ಬೊಮ್ಮಾಯಿಯವರಿಗೆ ಈ ಮಾತನ್ನು ಹೇಳುತ್ತೇನೆ ಎಂದು ತಿಳಿಯಬಾರದು. ನಾನು ಇದನ್ನು ಜನರಲ್ ಆಗಿ ಎಲ್ಲರಿಗೂ ಹೇಳುತ್ತೇನೆ,

ಶ್ರೀ ಎಸ್. ಆರ್. ಬೊಮ್ಮಾಯಿ.— ನಾಳೆ ನೀವಾದಾಗ, ಇದು ನಿಮಗೂ ಅನ್ವಯವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಚಂದ್ರಶೇಖರ್ ಅವರು ಆದರೂ ಅಷ್ಟೆ, ದೇವೇಗೌಡರು ಆದರೂ ಅಷ್ಟೆ, ಈ ಅಧಿಕಾರವನ್ನು ಖಾಯಂ ಆಗಿ ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನಾನು ಏನಾದರೂ ಮಾಡಿ ಅಧಿಕಾರದ ಗೋಡೆ ನನ್ನದು, ಗೂಟ ನನ್ನದು. ನಾನು ಶಾಶ್ವತವಾಗಿ ಗೂಟ ಇಟ್ಟುಕೊಂಡು ಅದಕ್ಕೆ ಅಂಟಿಕೊಂಡಿರಬೇಕು ಎನ್ನುವ ದೃಷ್ಟಿಯಿಂದ ಕೆಲವರು ಏನಾದರೂ ಇದ್ದರೆ, ನಿಜ ಹೇಳಬೇಕೆಂದರೆ, ಯಾವ ಸದುದ್ದೇಶದಿಂದ ಸ್ವಾತಂತ್ರ್ಯವನ್ನು ಪಡೆಯತಕ್ಕಂಥ ಕಾಲದಲ್ಲಿ ಲಕ್ಷಾಂತರ ಜನರು ಸತ್ತರು ಯಾವ ಸದುದ್ದೇಶದಿಂದ, ಕಷ್ಟಕಾರ್ಪಣ್ಯದ ಜೊತೆಯಲ್ಲಿ ಮತದಾನದ ಪದ್ಧತಿ ಮುಖಾಂತರ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡಿದ್ದೇವೋ ಸುಮಾರಾಗಿ ಆ ಒಂದು ಗುರಿ

ಏನಿದೆ. ನಿಜವಾಗಿಯೂ ಅದಕ್ಕೆ ವಿರೋಧ ಮಾಡಿದ ಹಾಗೆ ಎಂದು ನಾನು ಈ ಮಾತನ್ನು ಆಡುತ್ತಿದ್ದೇನೆ. ಇವೊತ್ತು ಅಧಿಕಾರದಲ್ಲಿ ಯಾರೇ ಇರಬಹುದು, ನಾನು ಈ ಮಾತನ್ನು ಆಡಬೇಕಾದರೆ ನಮ್ಮ ರಾಜ್ಯಸರ್ಕಾರಕ್ಕೆ ಸೀಮಿತಗೊಳಿಸಿ ಮಾತನಾಡುತ್ತಿದ್ದೇನೆ. ಇವೊತ್ತು ಕೇಂದ್ರದಲ್ಲಿ ಏನಾದರೂ ಆದರೆ, ಬೇರೆ ರಾಜ್ಯದವರು ಕ್ಷಮಿಸಬೇಕು, ಅವರ ಬಗ್ಗೆ ಹೇಳತಕ್ಕ ಹಕ್ಕು ನಮಗೆ ಇಲ್ಲ, ಹೇಳತಕ್ಕ ಅವಶ್ಯಕತೆಯೂ ಇಲ್ಲ. ಹಾಗೇನಾದರೂ ಇದ್ದರೆ ಅಲ್ಲಿ ಹೋಗಿ ಹೇಳಲಿ, ನಿಮ್ಮ ಪಕ್ಷದವರು ಇದ್ದರೆ ಅಲ್ಲಿ ವಿಚಾರ ಪ್ರಸ್ತಾಪ ಮಾಡಿಸಿ. ಅಷ್ಟು ಇಲ್ಲಿ ಪ್ರಸ್ತಾಪ ಮಾಡಿಸುವಂತಾದ್ದು ಇದ್ದರೆ ಅಲ್ಲಿ ವಿಚಾರ ಪ್ರಸ್ತಾಪ ಮಾಡಿಸಲಿ ಹಿಂದೆ ಟೇಪ್‌ಹಗರಣ ಬಂದಾಗ ಪ್ರೊಫೆಸರ್ ಮಧುದಂಡವತೆಯವರು ಈ ವಿಚಾರವನ್ನು ಎತ್ತಿದರು. ಜುಡಿಷಿಯಲ್ ಎನ್‌ಕ್ವಯಿರಿ ಆಯಿತು, ರಿಪೋರ್ಟ್ ಬಂತು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಮಾತು ಕೇಳಿ ಪಾರ್ಲಿಮೆಂಟಿನಲ್ಲಿ ಎದ್ದುನಿಂತು ಹೇಳಿ, ನರಳಾಡಿಬಿಟ್ಟರು, ನಾನು ಈ ವಿಚಾರ ಎತ್ತಿದ್ದು ತಪ್ಪು ಎಂದು ಪಾರ್ಲಿಮೆಂಟಿನಲ್ಲಿ ಕ್ಷಮೆ ಕೇಳಿದರು. ನಿಜವಾಗಿಯೂ ಆ ವ್ಯಕ್ತಿಯ ದೊಡ್ಡಸ್ತನ ತೋರಿಸುತ್ತದೆ. ಅದಕ್ಕೆ ನಾನು ಗೌರವ ಕೊಡುತ್ತೇನೆ. ಆದರೆ ಕೆಲವೊಮ್ಮೆ ನಂಬಿಸಿ ಮಾಡತಕ್ಕ ಕೆಲಸ ಏನಿದೆ ಅದರ ಪರಿಣಾಮ ತಾನು ಉಳಿದುಕೊಳ್ಳುವುದಕ್ಕೆ ಮತ್ತೊಬ್ಬನ ಕತ್ತು ಹಾಳಾಗಿಹೋದರೂ ಪರವಾಯಿಲ್ಲ, ಹಾಗೇ ಆಯಿತು. ಮಾನ್ಯ ಮಧುದಂಡವತೆಯವರು ಯಾವಾಗಲೂ ಕ್ಷಮೆ ಕೇಳಿರಲಿಲ್ಲ. ಮಾನ್ಯ ಹೆಗಡೆಯವರ ದೃಷ್ಟಿ ಅವರ ಮೇಲೆ ಬಿದ್ದಮೇಲೆ ಕ್ಷಮೆ ಕೇಳಿದರು. ಆದ್ದರಿಂದ, ಕೆಲವು ವ್ಯಕ್ತಿಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ನಾನು ಹೇಳುತ್ತೇನೆ ಈಗ ನಾನು ಮಾತನಾಡತಕ್ಕದ್ದು ನನ್ನ ಹಕ್ಕು ತಾವು ಮಾತನಾಡತಕ್ಕದ್ದು ತಮ್ಮ ಹಕ್ಕು ನಾನು ಎಲ್ಲಿ ಹೋಗುತ್ತೇನೆ, ಎಲ್ಲಿ ಮಾತನಾಡುತ್ತೇನೆ ಏನು ಮಾಡುತ್ತೇನೆ ಇದನ್ನು ಕೇಳತಕ್ಕ ಪರಿಸ್ಥಿತಿಗೆ ಹೋದರೆ ಹೇಗೆ? ಆಗಿದ್ದಂಥ ಕೇಂದ್ರ ಸರ್ಕಾರ ಬ್ರಿಟೀಷ್‌ರಾಜ್ಯದಲ್ಲಿ ಏನು ಹಕ್ಕುಗಳು ಇದ್ದವೋ ಅದನ್ನು ಉಳಿಸಿಕೊಂಡಿದ್ದಾರೆ. ಮಾನ್ಯಸದಸ್ಯರಾದ ಹೆಗಡೆಯವರಂತವರನ್ನೇನಾದರೂ ಈ ದೇಶಕ್ಕೆ ಪ್ರಧಾನಿಯವರನ್ನಾಗಿ ಮಾಡಿದ್ದರೆ, ಹೇಗೆ? ಬರೀ ಮುಖ್ಯಮಂತ್ರಿಯಾಗಿಯೇ, ಅವರು ಈ ಪ್ರಕರಣದ ಬಗ್ಗೆ ಅಲ್ಲೋಲ ಕಲ್ಲೋಲ ಮಾಡಿ ರಾಜ್ಯಾದ್ಯಂತ ರಾದ್ಧಾಂತ ಮಾಡಿದ್ದಾರೆ. ಇವರನ್ನೇನಾದರೂ ಅಲ್ಲಿ ಕೂರಿಸಿಬಿಟ್ಟಿದ್ದರೆ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗುತ್ತಿತ್ತು ಎನ್ನುವ ವಿಚಾರ ಇಲ್ಲಿ ಯಾರೂ ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಮೌಲ್ಯಾಧಾರದ ರಾಜಕಾರಣವನ್ನು ಸುಮಾರಾಗಿ ಪೂರ್ತಿಯಾಗಿ ಹರಿದು, ಹರಿದು, ಪೂರ್ತಿ ಹಿಂಡಿ ಹಿಪ್ಪೆ ಮಾಡಿ ಬಿಸಾಕಿರತಕ್ಕದ್ದು, ಅದು ಏತಕ್ಕೂ ಬರುವ ಹಾಗೆ ಇಲ್ಲ. ಅವರು ಹೇಳಿರತಕ್ಕ ಮಾತು ಎಂತಹ ಮಾತು ವ್ಯಾಲ್ಯು ಬೇಸಡ್ ಪಾಲಿಟಿಕ್ಸ್, ಮೌಲ್ಯಾಧಾರದ ರಾಜಕಾರಣ ಅಂದರೆ ಅದೇನೂ ಸಣ್ಣ ವಿಚಾರವಲ್ಲ. ಅದರ ಬೆಲೆಯನ್ನು ಸಂಪೂರ್ಣವಾಗಿ ಹಾಳುಮಾಡಿ ಹರಾಜಿಗೆ ಇಟ್ಟಿರತಕ್ಕಂಥ ಹಿಂದಿನ ಮುಖ್ಯಮಂತ್ರಿ ಹೆಗಡೆಯವರು ಇದಕ್ಕೆ ತಪ್ಪು ದಂಡ ತೆರಬೇಕಾಗುತ್ತದೆ.

ಅವರು ಇಬ್ಬರಲ್ಲಿ ಯಾರು ಯಾರು ಅವರ ಬೆಂಬಲವನ್ನು ಕೊಟ್ಟಿರುತ್ತಾರೆ, ಅವರೆಲ್ಲರೂ ಕೈ ಎತ್ತಿದ್ದಾರೆ. ನಿಮ್ಮ ಪಕ್ಷದವರು ಮಾತ್ರವಲ್ಲ, ಹೊರಗಡೆಯವರು ಎತ್ತಿದ್ದಾರೆ. ಸ್ವಾಮಿ, ಪ್ರಜಾಪ್ರಭುತ್ವ ಎನ್ನತಕ್ಕಂಥ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಈವೊತ್ತು ನಿಮ್ಮ ಪಕ್ಷದವರೇ ಏತಕ್ಕೆ ಇದನ್ನು ಮಾಡಬೇಕು. ಮಾನ್ಯ ದೇವೇಗೌಡರಿಗೂ ಇವರಿಗೂ ಇರತಕ್ಕಂಥ ವ್ಯತ್ಯಾಸ ಇಡೀ ದೇಶಕ್ಕೆ ಗೊತ್ತಿದೆ. ಅದು ಪ್ರಪಂಚದ ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿದೆ. ಹಿಂದೆ ನಡೆದಂಥ ಸಭೆಯಲ್ಲಿ ಈ ವಿಚಾರ ಬಂದಿದೆ. ನಿಜ. ಹೀಗೆ ಆದ ತಕ್ಷಣದಿಂದ ಟೆಲಿಫೋನ್ ಕದ್ದು ಕೇಳಲು ಕುಳಿತುಕೊಂಡು, ನಾನು ವಿರೋಧಪಕ್ಷದ ನಾಯಕ ಎಂದು ಎಲ್ಲೂ ಕುಳಿತುಕೊಳ್ಳುವಂತಿಲ್ಲ. ನಾನು ಶ್ರೀಮತಿ ಎ.ಡಿ. ಕಮಲಮ್ಮ ಎನ್ನುವವರ ಪಟ್ಟಿಯಲ್ಲಿದ್ದೇನೆ. ಯಾರು ಈ ಎ.ಡಿ. ಕಮಲಮ್ಮ ಎನ್ನುವವರು ಎಂದು ಯೋಚನೆ ಮಾಡಿದಾಗ ಹಿಂದೆ ಇಂದಿರಾನಗರದಲ್ಲಿ ಅವರ ಮನೆಯಲ್ಲಿ ಬಾಡಿಗೆಗೆ ಇದ್ದೆ. ಅವರ ಹೆಸರು ಬಂದಾಗ ನನಗೆ ಗೊತ್ತಾಗಲಿಲ್ಲ. ಕಮಲಮ್ಮ ಅವರ ಟೆಲಿಫೋನ್‌ಅನ್ನು ಟ್ಯಾಪ್ ಮಾಡಿದ್ದಾರೆ ಏತಕ್ಕೆ ಸ್ವಾಮಿ ಎಂದು ಅವರು ಬೊಂಬಡ ಹೊಡೆಯುತಕ್ಕಂಥ ಪರಿಸ್ಥಿತಿ ಬಂದಿತು. ಈ ವಿಚಾರಗಳನ್ನೆಲ್ಲ ಹೇಳುವುದಕ್ಕೆ ಬರುವುದಿಲ್ಲ. ಇವತ್ತು ನಾನಾಗಲಿ, ರಾಮಕೃಷ್ಣ ಹೆಗಡೆಯವರಾಗಲಿ ಅವರಿಗೆ ಇರತಕ್ಕಂಥ ವ್ಯಕ್ತಿ ಸ್ವಾತಂತ್ರ್ಯ ಮತ್ತೊಂದನ್ನು ಟೆಸ್ಟ್ ಮಾಡಬಾರದು. ತಾವು ಮುಖ್ಯಮಂತ್ರಿಗಳು ತಮ್ಮ ಹಕ್ಕುಗಳ ವಿಚಾರ, ತಮ್ಮ ಅಧಿಕಾರಕ್ಕೆ ಸೀಮಿತಗೊಂಡಿರತಕ್ಕಂಥದ್ದಕ್ಕೆ ಕೇಳತಕ್ಕಂಥ ಹಕ್ಕೇ ವಿನಃ ಬೇರೆ ಏನನ್ನು ಕೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಬೊಮ್ಮಾಯಿಯವರು ಟಾಜ್ ಮಹಲ್ ಹೋಟಲ್‌ನಲ್ಲಿ ಖಾಯಮ್‌ಆಗಿ ಉಳಿದುಕೊಳ್ಳುತ್ತಾರೆಂದ ಪತ್ರಿಕೆಗಳಲ್ಲಿ ಬಂದಿದೆ. ಅದನ್ನೆಲ್ಲ ನಾವು ಕೇಳುವುದಕ್ಕೆ ಆಗುತ್ತದೆಯೇ ? ಏತಕ್ಕೆ ಏನು ಎಂದು ? ಇಲ್ಲಿ ಅವರು ಮುಖ್ಯ ಮಂತ್ರಿಗಳಾಗಿದ್ದರೂ

ಕರ್ನಾಟಕ ಭವನದಲ್ಲಿ ಉಳಿದುಕೊಳ್ಳುತ್ತಿರಲಿಲ್ಲ. ಬೇರೆ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು. ಅದನ್ನು ಹೇಳಲಿಕ್ಕೆ ಸಾಧ್ಯವೇ ? ಅದನ್ನು ಹೇಳಲಿಕ್ಕೆ ಸಂಬಂಧವಿರುವುದಿಲ್ಲ. ಬೆಂಗಳೂರಿನಲ್ಲೂ ಕೂಡ ಅವರು ಬೇರೆ ಬೇರೆ ಮನೆಗಳಿಗೆ ಹೋಗಿಬರತಕ್ಕಂಥದ್ದು ಇದೆ. ಅದನ್ನು ಹೇಳಲಿಕ್ಕೆ ಸಾಧ್ಯವಾಗುತ್ತದೆಯೇ ಅದನ್ನೆಲ್ಲ ಹೇಳಬಾರದು. ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇರತಕ್ಕಂಥ ವಿಚಾರ ಇಷ್ಟೇ. ಈವತ್ತು ಖಾಸಗಿಯಾಗಿರತಕ್ಕಂಥ ಜೀವನದ ವಿಚಾರವನ್ನು ತಾವು ಟ್ಯಾಪ್ ಮಾಡುವುದಕ್ಕೆ ಹೋಗಬಾರದು. ನಮ್ಮ ಮುಂದಿರತಕ್ಕಂಥ ಪ್ರಶ್ನೆ ಹಕ್ಕುಗಳು. ರಾಮಕೃಷ್ಣ ಹೆಗಡೆಯವರಿಗೆ ಖಾಸಗಿಯಾಗಿ ಏನು ಹಕ್ಕುಗಳು ಇವೆ ಅದನ್ನು ಕೇಳುವುದಕ್ಕೆ ಹೋಗಬಾರದು. ಅವರೂ ಕೂಡ ಹಿಂದೆ ಮಂತ್ರಿಗಳಾಗಿದ್ದರು. ಕಾಂಗ್ರೆಸ್ ಸರ್ಕಾರ ಇದ್ದಾಗ ಮಂತ್ರಿಗಳಾಗಿದ್ದರು. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದಾಗ ಇವರು ಮಂತ್ರಿಗಳಾಗಿದ್ದರು. ಮಾನ್ಯ ವೀರೇಂದ್ರಪಾಟೀಲರವರು ಮುಖ್ಯಮಂತ್ರಿಗಳಾಗಿದ್ದಾಗ ಇವರು ಮಿನಿಸ್ಟರಾಗಿದ್ದರು. ಇವರು ಎಕ್ಸೈಸ್ ಮಿನಿಸ್ಟರಾಗಿದ್ದರು, ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರಾಗಿದ್ದರು, ಡೆಪ್ಯುಟಿ ಮಿನಿಸ್ಟರಾಗಿದ್ದರು, ಫೈನಾನ್ಸ್ ಮಿನಿಸ್ಟರಾಗಿದ್ದರು ಹಾಗೂ ಕೋಆಪರೇಟೀವ್ ಮಿನಿಸ್ಟರಾಗಿದ್ದರೂ ಎಂದೂ ಕೂಡ ಕೇಳಿದ್ದೇನೆ. ನಾನು ೧೯೬೭ರಲ್ಲಿ ಶಾಸಕನಾಗಿಬಂದಾಗ ಹಣಕಾಸಿನ ಸಚಿವರಾಗಿ ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿದ್ದರು. ಆಗ ಅವರೇನಾದರು ಟೆಲಿಫೋನ್ ಟ್ಯಾಪ್ ಮಾಡಿದ್ದಾರೇ ? ಮಾನ್ಯ ದೆ ವೇಗೌಡರ ಹಾಗೂ ನಿಮ್ಮ ಪಕ್ಷದ ವಿಚಾರ ನನಗೇನು ಸಂಬಂಧ, ಅದನ್ನು ನೀವೆ ನಿವಾರಿಸಿಕೊಳ್ಳಿ, ‹ಚೇಳು ಹುಟ್ಟಬೇಕಾದರೆ ಹೇಗೆ ಹುಟ್ಟುತ್ತದೆಂಬುದು ನಿಮಗೆ ಗೊತ್ತಿಲ್ಲವೆಂದು ಹೇಳುತ್ತೇನೆ ಮರಿ ಹುಟ್ಟುತ್ತದೆ, ಅದು ಹೇಗೆ ಹುಟ್ಟುತ್ತದೆಂದರೆ ತಾಯಿ ಗರ್ಭವನ್ನೇ ಸೀಳಿಕೊಂಡು ಬರುತ್ತದೆ. ಆ ಕುಲಕ್ಕೆ ಸೇರಿದಂತವರು, ತಾನು ಉಳಿದುಕೊಳ್ಳಬೆ ಕಾದರೆ ತಾಯಿ ಉಳಿಯುವಂತಿಲ್ಲ, ಜನತಾ ಪಾರ್ಟಿಯು ಉಳಿಯುವಂತಿಲ್ಲ, ಪ್ರೊಫೇಸರ್ ಮಧುದಂಡವತೆಯವರೂ ಉಳಿಯುವಂತಿಲ್ಲ, ಯಾರೂ ಉಳಿಯುವಂತಿಲ್ಲ, ಮಾನ್ಯ ಬೊಮ್ಮಾಯಿಯವರೇ. ಇದನ್ನು ಸ್ವಲ್ಪ ತಾವು ಕೇಳಿದರೆ ಒಳ್ಳೆಯದು. ಚೇಳು ಹುಟ್ಟಬೇಕಾದರೆ ತಾಯಿಯ ಗರ್ಭವನ್ನು ಸೀಳಿಕೊಂಡು ಬರುತ್ತದೆ.ಅದೇ ಮನುಷ್ಯರು ಅಥವಾ ಬೇರೆ ಪ್ರಾಣಿಗಳು ಹುಟ್ಟಬೇಕಾದರೆ ತಾಯಿ ಉಳಿಯುತ್ತಾಳೆ. ಆದರೆ ಚೇಳಿನದ್ದು ಬೇರೆ. ಚೇಳಿನ ಮರಿ ಹೊರಬಂದಾಗ ತಾಯಿ ಚೇಳು ಸತ್ತುಹೋಗುತ್ತದೆ. ಮರಿ ಮಾತ್ರ ಉಳಿಯುತ್ತದೆ. ಹೆಗಡೆಯವರ ಚಿಂತನೆ ಇರತಕ್ಕ ರಾಜಕಾರಣ ಹೇಗೆಂದರೆ, ಚೇಳಿನ ಮರಿ ಇದ್ದಹಾಗೆ. ಇದೇ ಅವರ ಮೌಲ್ಯಾಧಾರಿತ ರಾಜಕಾರಣ ತಾನೇ ಮುಂದೆ ನಿಲ್ಲಬೇಕೆಂಬ ರಾಜಕಾರಣ ಸ್ವಾರ್ಥದ ಹಿರಿಯಾಸೆಯು ದೊಡ್ಡ ಗುರಿ. ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದುಕೊಂಡು ರಾಷ್ಟ್ರದ, ಮಹಾರಾಷ್ಟ್ರಗಳ ಬಗ್ಗೆ, ಪ್ರಪಂಚದ ಬಗ್ಗೆ ಮಾತನಾಡಿಕೊಂಡು ಇದ್ದವರು ಅವರ . ಸರ್ಕಾರದ ಬೊಕ್ಕಸದ ಹಣದಿಂದ ಎಷ್ಟೋ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದ್ದಾರೆ, ಇಷ್ಟೊಂದು ಹಣವನ್ನು ಏತಕ್ಕೆ ಹಾಳು ಮಾಡಿದಿರಿ ? ಮಕ್ಕಳಿಗೆ ಪುಸ್ತಕ ಕೊಡುವುದಕ್ಕಾಗಿಲ್ಲ, ಸುಮ್ಮನೆ ಯಾವುಯಾವುದೋ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ಹಣವನ್ನು ಕೊಳ್ಳೆ ಹೊಡೆದಿದ್ದಾರೆ. ಜುಡಿಶಿಯರಿ ಬಗ್ಗೆ ಕೂಡ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದರು. ಮೌಲ್ಯಾಧಾರಿತ ರಾಜಕಾರಣ ಯಾವ ಮಟ್ಟಕ್ಕೆ ಹೋಯಿತು ಎಂದರೆ ಪಾರ್ಲಿಮೆಂಟ್ ಸದಸ್ಯರಿಗೆ ಓದುವುದಕ್ಕೆ ಸಹ ಪುರುಸತ್ತು ಇರುವುದಿಲ್ಲ. ಅವರಿಗೆಲ್ಲ ಅನೇಕ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿಕೊಟ್ಟಿದ್ದಾರೆ. ಇವರು ಯಾವಾಗ ಪುಸ್ತಕ ಬರೆದರು ಎಂದು ಕೇಳುತ್ತೇನೆ ಟೆಲಿಫೋನ್ ಹಗರಣವನ್ನು ನೋಡುವುದಕ್ಕೆ ಸಹ ಇವರಿಗೆ ಟೈಂ ಸಿಕ್ಕಿಲ್ಲ, ಅಂಥದ್ದರಲ್ಲಿ ಇವರ. ಯಾವಾಗ ಪುಸ್ತಕ ಬರೆದರು ? ಪುಸ್ತಕ ಬರೆಯುವವರೆಲ್ಲ ಇವತ್ತು ಸುಸ್ತು ಹೊಡೆಯುತ್ತಿದ್ದಾರೆ? ಇವರು ಪುಸ್ತಕ ಬರೆದರಂತೆ.

ಶ್ರೀ ಎಸ್. ಆರ್. ಬೊಮ್ಮಾಯಿ — ಈಗ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಮಾತು, ಚರ್ಚೆ ಇರತಕ್ಕದ್ದು. ದಯವಿಟ್ಟು ಪುಸ್ತಕ ಬರೆದದ್ದರ ಬಗ್ಗೆ ಬೇಡ. Why do you question it

ಶ್ರೀ ಎಸ್. ಬಂಗಾರಪ್ಪ.— ಬೊಮ್ಮಾಯಿಯವರೆ, ತಾವು ಈಗ ಮುಖ್ಯಮಂತ್ರಿಗಳಾಗಿದ್ದೀರಿ. ತಾವು ಎಚ್ಚರಿಕೆ ವಹಿಸಿದರೆ ಒಳ್ಳೆಯದೆಂದು ಇದನ್ನೆಲ್ಲಾ ಹೇಳುತ್ತಿದ್ದೇನೆ. ತಾವು ಚೇಳಿನ ಕಥೆ ಮತ್ತು [illegible] ಈ [illegible] ನೆನಪಿನಲ್ಲಿಟ್ಟುಕೊಂಡರೆ ಸಾಕು,

SRI S.R. BOMMAI Thank you for your advice.

ಅಧ್ಯಕ್ಷರು.—ಬಂಗಾರಪ್ಪನವರೆ, ನೀವು ಈಗಾಗಲೇ ೨೨ ನಿಮಿಷಗಳನ್ನು ತೆಗೆದುಕೊಂಡಿದ್ದೀರಿ, ಬೇಗ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.—ಮಾರಣ್ಣನವರು ಮತ್ತು ನಾನು, ಶಿವಮೂರ್ತಿ ಮತ್ತು ನಾನು ಮಾತನಾಡಿದ್ದನ್ನು ಏಕೆ ಟ್ಯಾಪಿಂಗ್ ಮಾಡಿದಿರಿ ? ಟೆಲಿಫೋನ್‌ನಲ್ಲಿ ಸಂಭಾಷಣೆ ಮಾಡುವವರು ಬಹಳ ಮಂದಿ ಇದ್ದಾರೆಂದು ಕೇಳಿದ್ದೇವೆ. ದೇವೇಗೌಡರು ಒಂದು ಸಾರಿ ಸಂಭಾಷಣೆ ಮಾಡಿದರು ಎಂದು ಕೇಳಿದ್ದೇನೆ. ಟೆಲಿಫೋನ್ ಟ್ಯಾಪಿಂಗ್ ಅಂದರೆ ಬೇಕಾದಷ್ಟು ಇರಬಹುದು. ನಿಮ್ಮ ಟೆಲಿಫೋನ್ ಅನ್ನು ಯಾರು ಏನು ಮಾಡಿದ್ದಾರೋ ಯಾರಿಗೆ ಗೊತ್ತು ? ನನ್ನ ಹಕ್ಕನ್ನು ಸಂಪೂರ್ಣ ಮೊಟಕು ಮಾಡತಕ್ಕ ಹಕ್ಕು ರಾಜ್ಯ ಸರ್ಕಾರಕ್ಕೆ ಏತಕ್ಕೆ ಬಂತು ? My right is guaranteed under the constitution. Nobody can touch it. ಯಾರು ಹೇಳಿದರು ಇವರಿಗೆ ಇದನ್ನು ? ಮೌಲ್ಯಾಧಾರಿತ ರಾಜಕಾರಣವನ್ನು ಹೇಳತಕ್ಕವರೇ ಟೆಲಿಫೋನ್ ಟ್ಯಾಪಿಂಗ್ ಮಾಡಿದ್ದಾರಲ್ಲ, ಇದು ಸರಿಯೇ ? ನಾನು ಏನೋ ರಾಜಕಾರಣದ ವಿಚಾರದಲ್ಲಿ ಮಾತನಾಡುತ್ತೇನೆಂದು ಇಟ್ಟುಕೊಳ್ಳೋಣ. ನಾವು ಏನೋ ವಿಚಾರ ಇಟ್ಟುಕೊಳ್ಳುತ್ತೇವೆ, ಅದನ್ನು ಮಾತನಾಡುತ್ತೇವೆ. ಬಾಟ್ಲಿಂಗ್ ಕಾಂಟ್ರಾಕ್ಟ್ ವಿಚಾರದಲ್ಲಿ ಮಾತನಾಡುತ್ತೇವೆ, ಸ್ಪಿರಿಟ್, ಮದ್ಯ ಇತ್ಯಾದಿಗಳ ಬಗ್ಗೆ ಮಾಹಿತಿ ಬೇಕಾದಾಗ ನಾನು ಅಲ್ಲಿ ಇಲ್ಲಿ ಹೋಗಿ ಮಾಹಿತಿ ತರುವುದಕ್ಕಾಗುವುದಿಲ್ಲ. ಟೆಲಿಫೋನ್ ಮಾಡಿ ತರಿಸಿಕೊಳ್ಳುತ್ತೇನೆ. I will make use of my telephone. It is my right as member of this august House and as a representative of the people. I have got a right under framework of the democratic functioning.

ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ರಾಮಕೃಷ್ಣ ಹೆಗಡೆಯವರು ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಮಿನಿಸ್ಟರ್ ಆಗಿದ್ದರು. ಒಬ್ಬ ವ್ಯಕ್ತಿಯನ್ನು ಮಾನ್ಯತೆ ಮಾಡುವುದನ್ನು ಕಲಿತರೆ ನಮ್ಮ ಹಕ್ಕನ್ನು ಮಾನ್ಯತೆ ಮಾಡುವುದನ್ನು ಕಲಿಸಿದಂತಾಗುತ್ತದೆ ಎಂಬ ಮೂಲ ಪ್ರಜ್ಞೆ ಮೌಲ್ಯಾಧಾರಿತ ರಾಜಕಾರಣ ಮಾಡುವವರಿಗೆ ಇರಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಕೆಲಸಕ್ಕೆ ಕೈ ಹಾಕಿದ್ದಾರೆ ಕೇಂದ್ರದಲ್ಲಿ ಪ್ರಧಾನ ಮಂತ್ರಿಯವರು ಮತ್ತು ಕೇಂದ್ರದ ಗೃಹ ಸಚಿವರು ಯಾವುದೇ ಆರ್ಡರ್ ಕೊಟ್ಟಿಲ್ಲ ಎಂದು ಹೇಳಿದರು. ನಂತರ ಇವರು ಹೇಳಿದರು. ಅವರ ಹತ್ತಿರ ಈ ಬಗ್ಗೆ ಮೆಷಿನ್ಸ್ ಇದೆ ಎಂದು ಅಡಗೂಲಜ್ಜಿ ಕಥೆ ಹೇಳುವುದಕ್ಕೆ ಚೆನ್ನಾಗಿದ್ದಾರೆ ಅವರು. ಬರವಣಿಗೆಯಲ್ಲಿ ಆರ್ಡರ್ ಕೊಟ್ಟಿದ್ದರೆ ತಂದು ಕೊಡಿ ಬೊಮ್ಮಾಯಿಯವರ ಪರಿಸ್ಥಿತಿ ಹೇಗಾಗಿದೆ ಎಂದರೆ ಕೋತಿ ಮೊಸರನ್ನ ತಿಂದು ಮೇಕೆ ಬಾಯಿಗೆ ಒರೆಸಿದ ಹಾಗೆ ನಿಮ್ಮನ್ನು ಅಂದರೆ ಬೊಮ್ಮಾಯಿಯವರನ್ನು ಉತ್ತರ ಕೊಡುವ ಪರಿಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ಹೆಗಡೆಯವರು ಇವತ್ತು ಬರುತ್ತಾರೆ ಅಂದುಕೊಂಡಿದ್ದೆವು. ಆದರೆ ಬರಲಿಲ್ಲ. ಅವರು ಬಂದಿದ್ದರೆ ಚೆನ್ನಾಗಿತ್ತು. ಏಕೆಂದರೆ He is the person in the dock. ಪ್ರಜಾಪ್ರಭುತ್ವದ ಮುಖಕ್ಕೆ ಮಸಿ ಬಳಿದಂಥ ಒಬ್ಬ ಅಪರಾಧಿ ಸ್ಥಾನದಲ್ಲಿದ್ದಂಥ ವ್ಯಕ್ತಿ ಅವರು. ಮಹಾತ್ಮ ಗಾಂಧಿಯವರು, ಜಯಪ್ರಕಾಶ್ ನಾರಾಯಣ್‌ರಂಥ ಮಹಾ ನಾಯಕರ ಮುಖಕ್ಕೆ ಮಸಿ ಬಳಿಯುವ ಕೆಲಸ ರಾಮಕೃಷ್ಣ ಹೆಗಡೆಯವರು ಮಾಡಿದ್ದಾರೆ. ಇದು ಸಣ್ಣ ವಿಚಾರವಲ್ಲ. ಇವತ್ತು ಏನಾಗಿದೆ ? ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟ ಮೇಲೆ...

ಶ್ರೀ ಡಿ. ಜಿ. ಬಸವನಗೌಡ.— ನಿಮಗೆ ಇದು ಕೊನೆ ದಿವಸ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.— ಬೇರೆ ರಾಜ್ಯದಲ್ಲಿ ಟೆಲಿಫೋನ್ ಟ್ಯಾಪ್ ಮಾಡುತ್ತಿದ್ದಾರೆ ಎಂದು ಹೇಳಿದರು. ಬೇರೆ ರಾಜ್ಯದ ವಿಚಾರ ಇದ್ದರೆ ತರಿಸಿ ನಮ್ಮ ಮುಂದೆ ಇಡಲಿ, ನಮಗೆ ಹಕ್ಕಿದ್ದರೆ ಆ ವಿಚಾರವನ್ನೂ ಪರಿಶೀಲನೆ ಮಾಡೋಣ. ಇದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಹೇಳಿದರು. ಕೇಂದ್ರ ಸರ್ಕಾರದವರು ಅದನ್ನು ಮಾಡಬೇಕು ಎಂದು ಹೇಳಿದರು. ಅವರು ಏತಕ್ಕೆ ಮಾಡಬೇಕು ? Has he not taken the moral responsibility and resigned thereon? The only course open to the State Government is to prosecute him under the Telegraph Act. ಇವರೇ ರಾಜೀನಾಮೆ ಕೊಟ್ಟಿಲ್ಲವೆ ಈಗ?

ಅದು ಅಕ್ಸೆಪ್ಟ್ ಆಗಿಲ್ಲವೆ ? ಇನ್ನೇನಿದೆ? ಇದಕ್ಕೆ ಸಂಬಂಧಪಟ್ಟಂತೆ ರಿಲೆವೆಂಟ್ ಸೆಕ್ಷನ್ಸ್ ಇವೆ. ಅದನ್ನು ಓದಬೇಕು ಅಂದರೆ ಓದುತ್ತೇನೆ.

ಅಧ್ಯಕ್ಷರು.— ಆ ಸೆಕ್ಷನ್ಸ್ ಎಲ್ಲಾ ಹೇಳಿದ್ದಾರೆ.

SRI S. BANGARAPPA.— So, the only course open to the State Government is to prosecute him.

ಅಧ್ಯಕ್ಷರು.— ಇಂಡಿಯನ್ ಪೀನಲ್ ಕೋಡ್ ಬಗ್ಗೆ ಹೇಳಿದ್ದಾರೆ. ಆಗ ನೀವು ಇರಲಿಲ್ಲ.

SRI S. BANGARAPPA.— As an efficient advocate I know IPC. Therefore, what the hon. member Mr; Ramakrishna Hegde has done is, an offence under the Civil Liberties Act ಲಿಬರ್ಟಿಯನ್ನು ಸಂಪೂರ್ಣ ಹಾಳು ಮಾಡಿದ್ದಾರೆ. ಇದರಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಪ್ರಶ್ನೆಯೂ ಬರುವುದಿಲ್ಲ, ಏನೂ ಬರುವುದಿಲ್ಲ, ಇರತಕ್ಕ ದಾರಿ ಎಂದರೆ ಅವರ ಮೇಲೆ ಕೇಸ್ ಹಾಕತಕ್ಕದ್ದು. ಅವರು ಟೆಲಿಫೋನ್ ಟ್ಯಾಪಿಂಗ್ ಮಾಡಿರತಕ್ಕವರು. ಅವರು ಒಬ್ಬ ಟಿ. ಟಿ. He is Mr. TT. T.T. means Telephone Tapper. ಯಾರ ಯಾರ ಟೆಲಿಫೋನ್ ಟ್ಯಾಪ್ ಮಾಡಬಹುದು ಎಂಬ ಬಗ್ಗೆ ಒಂದು ಪಟ್ಟಿ ಇದೆ. Economic offenders, those who threaten the security of the nation. All these things are enumerated under the Act. ಇನ್ನೂ ಯಾರು ಯಾರೋ ಇದ್ದಾರೆ, ಆ ಪಟ್ಟಿಯನ್ನು ನಾನು ಓದುವುದಿಲ್ಲ. Are we coming under these categorits? I am posing this question. Or, Mr. Devegowda come under this category. or Mr. Ajit Singh? ನಾಗರತ್ನಮ್ಮನವರು, ಮೊಯಿಲಿಯವರು ಹಾಗೂ ನಾವು ಯಾರಾದರೂ ಬರುತ್ತೇವಾ ಇದರಲ್ಲಿ? ನಮ್ಮನ್ನು ಏನಂತ ತಿಳಿದುಕೊಂಡಿದ್ದಾರೆ? ಟೆಲಿಫೋನ್ ಟ್ಯಾಪ್ ಮಾಡಿದರೆ ಏನರ್ಥ? ನಾವೂ ಕೂಡ criminals smugglers, economic offenders, ಎಂಬ ಅರ್ಥ ಬರುವುದಿಲ್ಲವೇ? ಈ ಮಟ್ಟಕ್ಕೆ ನಮ್ಮನ್ನು ತಂದು ನಿಲ್ಲಿಸಿದರೆ, Am I indulging in threatening the security of the nation? The State Government should prosecute him in the Court of Law. He has got to be prosecuted.

ಅಧ್ಯಕ್ಷರು.— ನೆಕ್ಸ್ಟ್...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರು ನೆಕ್ಸ್ಟ್ ಪೇಜ್ ತೆಗೆದರು.

ಶ್ರೀ ಎಸ್. ಬಂಗಾರಪ್ಪ.— ನಾನು ಮಾತನಾಡುವಂತಹದ್ದು ಕೆಲವರಿಗೆ ಹಿಡಿಸದೇ ಇರಬಹುದು. ಏಕೆಂದರೆ ಏನು ಮಾಡುವುದಕ್ಕಾಗುತ್ತದೆ? It is one section of the press. ಇವರೆಲ್ಲಾ ಪ್ಲೀಸ್ ಮಾಡಿ ಮಾಡಿ, I am not commenting upon the entire section of the press. ನಾನು ಯಾವಾಗಲೂ ಪ್ರೆಸ್, ಮತ್ತೊಂದರ ಬಗ್ಗೆ ಕ್ರಿಟಿಸಿಸಂ ಬಂದರೆ, ಹೆಲ್ತಿ ಕಂಡಂ ಮಾಡತಕ್ಕ ವಿಚಾರ, ಪಬ್ಲಿಕೇಷನ್ ಇರಬಹುದು, ಬುಕ್ಸ್ ಇರಬಹುದು, ಪ್ರೆಸ್ ಇರಬಹುದು. ಮತ್ತೊಂದು ಇರಬಹುದು. ಆದರೆ ವ್ಯಾಲ್ಯೂಬೇಸ್ಡ್ ಪಾಲಿಟಿಕ್ಸ್ ಅಂತ ಇವನ್ನೆಲ್ಲಾ ತೂರಿಸಿ, ತೂರಿಸಿ ತೂರಿಸಿ ಏನು ಬೇಕೋ ಅದನ್ನು ಬಿಲ್ಡಪ್ ಮಾಡಿ ಜನ ಓಟು ಕೊಟ್ಟಿದ್ದು ಬೇರೆ. ಮಾಡತಕ್ಕ ಪರಿಸ್ಥಿತಿ ಬೇರೆ. ಈ ಮಟ್ಟಕ್ಕೆ ತೆಗೆದುಕೊಂಡು ಹೋದರು, ಆದರೂ ಒಂದು ಸೆಕ್ಷನ್ ಪ್ರೆಸ್‌ನವರು ಯಾರು ಈ ಸಮಾಜದಲ್ಲಿ ಘನತೆವೆತ್ತ ವಿಚಾರವಂತರು, ಇಂಟಲಿಜೆಂಟ್ಸ್, ಸೋ ಕಾಲ್ಡ್ ಇಂಟಲಿಜೆಂಟ್ಸ್ ಇನ್ ದಿ ಸೊಸೈಟಿ ಅಂತಹವರಿಗೆ ನಾನು ಹೇಳತಕ್ಕ ಮಾತು ಸರಿದೂಗದೇ ಇರಬಹುದು. ಏಕೆಂದರೆ ಅಂತಹವರಿಗೆ ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ಚಿಂತನೆ ಬೇಕಾಗುತ್ತದೆ. ನನಗೆಲ್ಲಾ ಗೊತ್ತಿದೆ, ಅದು. ಆದರೆ ನಾನು ಅವರಿಗೋಸ್ಕರ ಮಾತನಾಡುತ್ತಿಲ್ಲ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಭಾರಿ ದೊಡ್ಡ ಹೋರಾಟ ಮಾಡಿದ ಜನರೇನಲ್ಲ ಇವರು. ಅದರ ಬಗ್ಗೆ ಪ್ರಜಾಪ್ರಭುತ್ವದ ಚರಿತ್ರೆ ಸಾರಿ ಸಾರಿ ಹೇಳುತ್ತದೆ. ಮತ್ತೆ ಬ್ರಿಟಿಷ್ ರಾಜ್ಯ ಇದ್ದಾಗ, ಅವರಿಗೆ ಬೆಂಬಲ ಕೊಟ್ಟಂತಹ ಜನ ಇವರು. ಆಗಿನ ಸಂದರ್ಭವೂ ಹಾಗೇ ಇತ್ತು. ಆದರೆ ಈಗ ಇರತಕ್ಕ ಪರಿಸ್ಥಿತಿಯೇ ಬೇರೆ, ನಾವು

ಸಿವಿಲ್ ಲಿಬರ್ಟೀಸ್ ಬಗ್ಗೆ ಹಕ್ಕುಗಳ ಬಗ್ಗೆ ಈ ಟೆಲಿಫೋನ್ ಬಗ್ಗಿಂಗ್ ಬಗ್ಗೆ ಉದಾಹರಣೆಯನ್ನು ಕೊಟ್ಟು ಮಾತನಾಡಿದರೆ ಈ ಸಮಾಜದಲ್ಲಿರತಕ್ಕ ಸೋ-ಕಾಲ್ಡ್ ಇಂಟಲೆಜೆಂಟ್ಸ್ ಅವರಿಗೆ ಅಪೀಲ್ ಆಗದೇ ಇರಬಹುದು. ಆದರೆ ಒಂದು ಸಂತೋಷಪಡತಕ್ಕಂತಹ ಸಂಗತಿ ಎಂದರೆ ಸಾಹಿತಿ ಕಲಾವಿದರ ಬಳಗದವರು. ಇನ್ನೂ ಕೆಲವು ಸಂಘ ಸಂಸ್ಥೆಗಳವರು ಬೇರ ಬೇರೆಯವರು ಈ ವಿಚಾರವನ್ನು ಸಂಪೂರ್ಣವಾಗಿ ನೋಡಿದ್ದಾರೆ. ಯಾವ ವರ್ಗದ ಜನತೆ ಈ ಜನತಾ ಪಕ್ಷದ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದರೋ ಅವರೇ ಸಂಪೂರ್ಣವಾಗಿ ಈ ಸರ್ಕಾರದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರ ಟೆಲಿಫೋನ್ ಬಗ್ಗಿಂಗ್ ಕೆಲಸವನ್ನು ಸಂಪೂರ್ಣವಾಗಿ ಖಂಡಿಸಿದ್ದಾರೆ. ಅಷ್ಟೇ ಅಲ್ಲ ಈ ವಿಚಾರವನ್ನು ಜನರಿಗೆಲ್ಲಾ ಹೇಳಿ ಹೇಳಿ ಪತ್ರಿಕೆಗಳಿಗೆ ಸಹ ಕೆಲವು ಹೇಳಿಕೆಗಳನ್ನು ಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಅವರನ್ನು ನಿಜವಾಗಿಯೂ ನಾನು ಸ್ವಾಗತ ಮಾಡುತ್ತೇನೆ. ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಅವರು ಯಾರೇ ಇರಬಹುದು, ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದವರು. ಇದರಲ್ಲಿ ನನಗೆ ಗೊತ್ತಿದ್ದ ಹಾಗೆ this is nothing but an invasion on the private life of an individual-privacy of a person. ಇವರ ಬ್ರೈನ್ ಇನ್ನೂ ಬೇರೆ ವಿಚಾರದಲ್ಲಿ ಫರ್ಟೈಲ್ ಆಗಲಿಲ್ಲ. ಈ ದೇಶದಲ್ಲಿರತಕ್ಕ ಬಡವರು, ದೀನರು, ದಲಿತರು, ನೀತಿ ನ್ಯಾಯ ಇವುಗಳನ್ನು ಕಾಪಾಡುವ ವಿಚಾರದಲ್ಲಿ ಇವರ ಬ್ರೈನ್ ಫರ್ಟೈಲ್ ಆಗಲಿಲ್ಲ. ಆದರೆ ಇಂತಹ ವಿಚಾರದಲ್ಲಿ we see in this only the fertile brain. ನಿಜವಾಗಿಯೂ ಚಾಣಾಕ್ಷತನದಿಂದ ಬುದ್ಧಿವಂತಿಕೆಯಿಂದ ಹಾಗೂ ಅನುಭವದಿಂದ ಸರ್ಕಾರವನ್ನು ರಾಮಕೃಷ್ಣ ಹೆಗಡೆಯವರು ನಡೆಸುತ್ತಿದ್ದಾರೆ ಎಂಬುದಾಗಿ ಕೆಲವರು ಹೇಳುತ್ತಿದ್ದರು. ಆದರೆ ಅವರು ಮಾಡಿದ್ದೆಲ್ಲಾ ಇದೇ ಉದ್ಯೋಗ. ಫರ್ಟೈಲ್ ಬ್ರೈನ್ ಆ ಕಾಂಪೋಸ್ಟ್‌ನಲ್ಲಿ ಬರತಕ್ಕದ್ದೂ ಹೌದು. ಇವು ಯಾರಿಗೂ ಒಳ್ಳೆಯದಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. This is a free society. ನಾನು ಯಾವಾಗಲೂ ಈ ವಿಚಾರವನ್ನು ಹೇಳಲೇಬೇಕು. ಅಸರ್ಟ್ ಮಾಡಲೇಬೇಕಾಗುತ್ತದೆ. ನಮ್ಮ ಫ್ರೀ ಸೊಸೈಟಿಯಲ್ಲಿ you cannot put any bars other than those that are mentioned under the law. ಕಾನೂನು ಪ್ರಕಾರವಾಗಿ ಇರತಕ್ಕಂತಹ ಯಾವುದು ಏನು ಇದೆ, ಅದನ್ನು ಪಾಲನೆ ಮಾಡಲೇಬೇಕು. ನಾನು ಇಲ್ಲ ಅಂತ ಹೇಳುವುದಿಲ್ಲ. ಆದರೆ ಅಂತಹದ್ದನ್ನು ಫ್ರೀ ಸೊಸೈಟಿಯಲ್ಲಿ ತೆಗೆದುಕೊಂಡು ಬಂದು ಡಿಕ್ಟೇಟರ್ ಟೈಪ್, ಈಗ ಐ.ಟಿ. ಹೈಲ್ಯಾಂಡ್ ನಿಯರ್ ಅಮೇರಿಕಾ ಕ್ಷಿಪ್ರ ಕ್ರಾಂತಿಯಾಗಿ ಮೊನ್ನೆ ಒಬ್ಬ ಡಿಕ್ಟೇಟ ಬಂದಿದ್ದಾನೆ ಹಿಂದಿನ ಮಿಲ್ಟ್ರಿ ಕ್ಯಾಂಡಿಯನ್ನು ತೆಗೆದು ಹಾಕಿ ಇವನು ಬಂದಿದ್ದಾನೆ. ಅಲ್ಲಿ ಈಗ ಅವನು ಹೇಳಿದ ಹಾಗೆ ಅಲ್ಲಿ ನಡೆಯುತ್ತಿದೆ. ಪಾಕಿಸ್ತಾನದಲ್ಲೂ ಕೆಲವು ಸಾರಿ ನಡೆಯುತ್ತಿತ್ತು. ಇತ್ತೀಚಿನವರೆಗೂ ನಡೆಯುತ್ತಿತ್ತು. ಈಗಲೂ ನಡೆಯುತ್ತಿದೆ ಅಂತ ತಿಳಿದುಕೊಳ್ಳೋಣ But. in a democratic society like ours, in our state or in our country, ಅದು ಆಗುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಆ ಮೇಲೆ ಇವರು ಬೆಳಗಾಂನಲ್ಲಿ ಒಂದು ಸ್ಟೇಟ್‌ಮೆಂಟನ್ನು ರಾಮಕೃಷ್ಣ ಹೆಗಡೆಯವರು ಹೇಳಿರುವುದು ಪತ್ರಿಕೆಗಳಲ್ಲಿ ಬಂತು. ದೇವೇಗೌಡ ಹಾಗೂ ಅಜೀತ್‌ಸಿಂಗ್‌ರ ನಡುವೆ ನಡೆದಂತಹ ಟೆಲಿಫೋನ್ ಸಂಭಾಷಣೆ ಪತ್ರಿಕೆಯಲ್ಲಿ ಬಂದ ಸಂಬಂಧದಲ್ಲಿ ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ಎಂಬುದಾಗಿ ಕೆಲವು ಪ್ರೆಸ್ ಫ್ರೆಂಡ್ಸ್ ಕೇಳಿದಾಗ, ಅಷ್ಟೇ ಏಕೆ, ನನ್ನ ಟೆಲಿಫೋನ್ ಕೂಡ ಕದ್ದು ಕೇಳುತ್ತಿದ್ದಾರೆ ಎಂದು ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ. ಹಾಗಾದರೆ ಏನಾಯಿತು? ಇವರದ್ದನ್ನೂ ಕದ್ದು ಕೇಳತಕ್ಕ ಪಟ್ಟಿಯಲ್ಲಿ ತಮ್ಮ ಹೆಸರು ಏನು ಇತ್ತು ಆದನ್ನು ರಾಮಕೃಷ್ಣ ಹೆಗಡೆಯವರು ಆ ಪಟ್ಟಿಯಿಂದ ತೆಗೆಸಿಬಿಟ್ಟರು ಆದರೆ ದೇವೇಗೌಡರ ಹೆಸರನ್ನು ಅಲ್ಲೇ ಇಟ್ಟರು ಅವರು ತಮ್ಮಲ್ಲಿ ಇರತಕ್ಕ ಸಿವಿಲ್ ಲಿಬರ್ಟಿ ಫಂಡಮೆಂಟಲ್ ರೈಟ್ಸ್ ಏನು ಇತ್ತು ಆದನ್ನು ಕಾಪಾಡುವುದಕ್ಕೆ ತಮ್ಮ ಮುಖ್ಯ ಮಂತ್ರಿ ಪದವಿಯನ್ನು ಅಲ್ಲಿ ಪ್ರಯೋಗ ಮಾಡಿದರು ಆದರೆ ಅದೇ ಪದವಿಯನ್ನು ಇವರ ಮಂತ್ರಿಮಂಡಲದ ಸದಸ್ಯರನ್ನು, ಸದನದ ಸದಸ್ಯರನ್ನು ಖಾಸಗೀ ವ್ಯಕ್ತಿಗಳನ್ನು ಕಾಪಾಡುವುದಕ್ಕೆ ಸದುಪಯೋಗಪಡಿಸಿಕೊಳ್ಳಲಿಲ್ಲವೆಂದು ಹೇಳುತ್ತೇನೆ. ದೇವೇಗೌಡರ ಹೆಸರನ್ನು ಏಕೆ ತೆಗೆದುಹಾಕಲಿಲ್ಲ ? I am not holding any brief for ri Deve Gowda. Since he figures there in the Ministry and a very important person in the Ministry I am quoting. ಹಿಂದೆ ಬ್ಯಾಡಗಿ ಕ್ಷೇತ್ರದ ಶಾಸಕರಾದ ಬೀಳಗಿಯವರು ಮತ್ತು

ಅವರು ಮಕ್ಕಳ ಮೇಲೆ ದಾವಣಗೆರೆಯಲ್ಲಿನ ಬಸ್ ಸ್ಟ್ಯಾಂಡ್‌ನಲ್ಲಿ ಸಬ್‌ಇನ್‌ಸ್ಪೆಕ್ಟರ್ ಒಬ್ಬರು ಅಮಾನುಷವಾಗಿ ನಡೆದುಕೊಂಡಿದ್ದರ ಬಗ್ಗೆ ನಾವು ಇಲ್ಲಿ ಚರ್ಚೆಗೆ ತೆಗೆದುಕೊಂಡು ಬಂದೆವು. ಅವರು ನಿಮ್ಮ ಪಕ್ಷದ ಸದಸ್ಯರಾದರೂ ನಾವು ಪಕ್ಷಭೇದ ಮಾಡಲಿಲ್ಲ. ಇದು ಸದಸ್ಯರ ಹಕ್ಕಿನ ಪ್ರಶ್ನೆ. ಈ ವಿಷಯದ ಬಗ್ಗೆ ನಾವು ಧರಣಿ ಮಾಡಿದೆವು. ಇವತ್ತು ಅವರಿಗಾಗಿದ್ದು ನಾಳೆ ಇನ್ನೊಬ್ಬರಿಗೆ ಆಗಬಹುದು. ಅದೇ ರೀತಿ ನಾನು ಇಲ್ಲಿ ದೇವೇಗೌಡರ ಉದಾಹರಣೆಯನ್ನು ಕೊಟ್ಟು ಹೇಳುತ್ತಿದ್ದೇನೆ. ಒಮ್ಮೆ ನಮ್ಮ ಪಕ್ಷದ ಶಾಸಕರ ಅರೆಸ್ಟ್ ಆದಾಗ ನಿಮ್ಮಲ್ಲಿ ದುಃಖ ಪಡಲಿಲ್ಲ. ಅವರ ಬಗ್ಗೆ ಒಂದೂ ಮಾತನಾಡಲಿಲ್ಲ. ರಾಮಕೃಷ್ಣ ಹೆಗ್ಡೆಯವರ ಚಿಂತನ ಚಿಲುಮೆಯ ದಿಕ್ಕಿನಲ್ಲಿ ಹೋಗಿ ಹೋಗಿ ಒಂದು ಸಾರಿ ಬಿದ್ರಿ. ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಹಕ್ಕುಭಾದ್ಯತೆಗಳನ್ನು ಗಮನದಲ್ಲಿಟ್ಟುಕೊಂಡು, ಮೂಲಭೂತ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸ ಮಾಡಬೇಕಾಗುತ್ತದೆ. ನಾನು ಇಷ್ಟೇ ಹೇಳುತ್ತೇನೆ. ಇಲ್ಲಿ ಬೊಮ್ಮಾಯಿಯವರ ಸರ್ಕಾರ ಇದೆ. ಇವತ್ತು ಬೊಮ್ಮಾಯಿಯವರು ತಮ್ಮ ಹೇಳಿಕೆಯನ್ನು ಉತ್ತರ ರೂಪದಲ್ಲಿ ಕೊಡುವವರಿದ್ದಾರೆ. ನಾನು ಅದರಲ್ಲಿ ಏನು ನಿರೀಕ್ಷೆ ಮಾಡುತ್ತೇನೆ ? ತಾವು ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ, ಮಹಾತ್ಮ ಗಾಂಧಿಯವರ ಬಗ್ಗೆ, ಪ್ರಜಾಪ್ರಭುತ್ವದ ಬಗ್ಗೆ, ಮೌಲ್ಯಗಳ ಬಗ್ಗೆ ವ್ಯಾಖ್ಯಾನ ಮಾಡಿದ್ದೀರಿ. ನೀವು ಮಾಡಿ, ಬಹಳ ಸಂತೋಷ. ಬೇಡ ಎಂದು ನಾನು ಹೇಳುವುದಿಲ್ಲ. ಇವತ್ತು ಕೇಂದ್ರ ಸರ್ಕಾರದವರು ಮಾಡಿದ್ದಾರೆ ಎಂದು ನೀವು ಉತ್ತರ ಕೊಡುವುದು ಅಲ್ಲ. It is not an answer for this. You are the Leader of this House. You are not only the Chief Minister, but also the Leader of this august House. We expect many things from you. ನಮ್ಮ ಹಕ್ಕನ್ನು ಉಳಿಸತಕ್ಕ ವಿಚಾರದಲ್ಲಿ as the head of the Government here and as the Chief Minister of the State. ನಿಮ್ಮ ಕಾರ್ಯಕ್ರಮ ಏನು ಎಂಬುದನ್ನು ನಾವು ನಿರೀಕ್ಷೆ ಮಾಡುತ್ತೇವೆ. ಬರೀ ಈ ಕಡೆ ಕುಳಿತಿರತಕ್ಕ ಕಾಂಗ್ರೆಸ್‌ನವರು ಅಷ್ಟೇ ಅಲ್ಲ, ತಮ್ಮಲ್ಲಿ ಇರತಕ್ಕ ಅನೇಕರು ಇದನ್ನೇ ನಿರೀಕ್ಷೆ ಮಾಡುತ್ತಿದ್ದಾರೆ. ನೀವು ಹೀಗೆ ಸರಾಗವಾಗಿ ಹೋಗತಕ್ಕ ಕೆಲಸ ಮಾಡಿದರೆ we have to brand you as a person belonging to the class of Sri Ramakrishna Hegde. ಅವರ ಸಾಲಿಗೆ ಸೇರಿದಂಥವರೇ ಎನ್ನುವ ಪ್ರಶ್ನೆ ಬರುತ್ತದೆ. ತಾವು ಹೊಸ ಮುಖ್ಯಮಂತ್ರಿಗಳಾಗಿದ್ದೀರಿ. ಇದನ್ನು ನಾವು ಸ್ವಾಗತ ಮಾಡಿದ್ದೇವೆ. ನಿಮ್ಮದು ಏನು ತೀರ್ಮಾನ ಹೇಳಿ ? ಏನು ತೀರ್ಮಾನ ಎಂದರೆ 'I am looking into the matter' ಎಂದು ಅಲ್ಲ. ಎದೆ ಮಾತ್ರಕ್ಕೆ ನಾವು ಹೇಳಿದ್ದಕ್ಕೆಲ್ಲಾ ರುಜು ಹಾಕಿ ಎಂದು ಹೇಳುವುದಿಲ್ಲ. ನೀವೂ ಸ್ವಲ್ಪ ಆಡಳಿತದ ನರನಾಡಿಗಳನ್ನು ಬಲ್ಲವರಾಗಿದ್ದೀರಿ. ನಿಮ್ಮ ನರನಾಡಿ ಗಟ್ಟಿ ಇದೆ. ನೀವು ಅದನ್ನು ತೋರಿಸುವ ಸುಸಂದರ್ಭ ಇದು. ಇದನ್ನು ಮಿಸ್ ಮಾಡಿದರೆ you are missing the bus in your entire political career. ಈ ಸಂದರ್ಭವನ್ನು ನೀವು ಕಳೆದುಕೊಳ್ಳಬಾರದು.

ಶ್ರೀ ಆರ್. ವಿ. ದೇಶಪಾಂಡೆ.—ನಮ್ಮ ಮುಖ್ಯಮಂತ್ರಿಗಳಿಗೆ ಗೊತ್ತಿದೆ ಯಾವ ಬಸ್ ಹಿಡಿಯಬೇಕೆಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಸ್ ಸಿಕ್ಕಿದೆ, ಅದನ್ನು ಸರಿಯಾಗಿ ನಡೆಸಿಕೊಂಡು ಹೋಗಿ. ಆಕ್ಸಿಡೆಂಟ್ ಮಾಡಬೇಡಿ ಎಂದು ಹೇಳುತ್ತಿದ್ದೇವೆ.

ಅಧ್ಯಕ್ಷರು.—ನೀವು ಬ್ರೇಕ್ ಹಾಕಬೇಡಿ.

೫-೦೮ ಪಿ. ಎಂ.

ಶ್ರೀ ಎಸ್. ಬಂಗಾರಪ್ಪ.—ನೀವು ಆಡಳಿತ ಪಕ್ಷದ ಮುಖ್ಯಸ್ಥರಾಗಿದ್ದೀರಿ. ಹಿಂದೆ ಈಗಾಗಲೇ ನಾನು ಹೇಳಿದಹಾಗೆ ಟೈರ್ ಪಂಕ್ಚರ್ ಆಗಿ ಯಾತಕ್ಕೂ ಬರದೆ ಇರತಕ್ಕ ಬಸ್ಸಿನಲ್ಲಿ ಈಗಾಗಲೇ ದುಡಿದು ಹೋಗಿದ್ದಾರೆ. ಅದು ನಿಮಗೆ ಬೇಡ, ಅದು ಶ್ರೇಯಸ್ಸೂ ಅಲ್ಲ. ಒಳ್ಳೆಯ ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ನಾನು ಹೇಳುತ್ತೇನೆ ಅದನ್ನು ದೂಡವಿಡುವುದು ಬಹಳ ಒಳ್ಳೆಯದು. ಇನ್ನೊಂದು ಇಂತಹವರ ಮೇಲೆ ಕ್ರಮ ತೆಗೆದುಕೊಂಡರೆ ನಾಳೆ ಒಳ್ಳೆಯ ನೀತಿಯನ್ನು, ಪರಂಪರೆಯನ್ನು

ಮಾದರಿಯನ್ನು ನೀವು ಹಾಕಿಕೊಟ್ಟ ಹೆಸರು ಬರತಕ್ಕ ಸಂದರ್ಭವಿದೆ. ಆ ಸಂದರ್ಭವನ್ನು ನೆನಪು ಮಾಡಿಕೊಡುತ್ತೇನೆ. ಆ ಒಂದು ಸದಾವಕಾಶ ನಿಮಗೆ ಇದೆ. ಅದಕ್ಕೆ ತಮ್ಮ ಉತ್ತರ ಬೇಕಾಗುತ್ತದೆ, ಇದು ನಮ್ಮ ಒತ್ತಾಡ, ನಮ್ಮ ಬೇಡಿಕೆ. ನಮ್ಮ ಡಿಮ್ಯಾಂಡ್ ಏನೆಂದರೆ ಯಾರು ತಪ್ಪಿತಸ್ಥರಿದ್ದಾರೆ ಅವರು ಯಾರೇ ಇರಲಿ ಅದನ್ನು ಬರೆಯುವಾಗ ಯಾವ ಮುಖ್ಯ ಕಾರ್ಯದರ್ಶಿ ಇದ್ದರು ಯಾರೇ ಇರಬಹುದು ಈಗ ಮಾತ್ರೊಬ್ಬರು ಬಂದಿರಬಹುದು they may take coverage under one factor.. no, no. there was direction from the Government. therefore, we are taking shelter ... ಪೋಲೀಸ್ ಇಲಾಖೆಯಲ್ಲಿರಬಹುದು, ಮುಖ್ಯ ಕಾರ್ಯದರ್ಶಿ ಯಾರೇ ಇರಬಹುದು, ಆದರೆ ಹೆಡ್ ಆಫ್ ದಿ ಗೌರ್ನ್‌ಮೆಂಟ್ ಚೀಫ್‌ಮಿನಿಸ್ಟರ್. ಆಗ ರಾಮಕೃಷ್ಣ ಹೆಗಡೆಯವರು ಚೀಫ್ ಮಿನಿಸ್ಟರ್ ಆಗಿದ್ದರು. ಆದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಗಂಗಣ್ಣನವರಿಗೆ ಬಸ್ಸು ಹೊರಡುವುದು ೫ ಗಂಟೆಗೆ ಅಂತಾ ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮೌಲ್ಯಗಳು ಹೋಗಿ ಬಹಳ ಹೊತ್ತಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಹೆಗಡೆಯವರನ್ನು ಪ್ರಾಸಿಕ್ಯೂಟ್ ಮಾಡತಕ್ಕ ಅವರ ಮೇಲೆ ಕೇಸನ್ನು ಹಾಕತಕ್ಕ ತೀರ್ಮಾನವನ್ನು ಮಾಡಬೇಕೆಂಬ ಒತ್ತಡವನ್ನು ಈ ಸಂದರ್ಭದಲ್ಲಿ ಮಾಡುತ್ತಾ ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ವೀರಪ್ಪಮೊಯಿಲಿಯವರೇ, ತಾವು ೧೦ ನಿಮಿಷ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇವತ್ತು ಚರ್ಚೆ ಮುಗಿಯಲಿ, ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಎಸ್.ಆರ್. ಬೊಮ್ಮಾಯಿ,—ಯಾವುದೇ ಒಂದು ವಿಚಾರವಾಗಲಿ, ಅದು ಎಷ್ಟು ಹೊತ್ತಿಗೆ ಮುಗಿಯುತ್ತದೆಂಬುದು ಗೊತ್ತಾಗಬೇಕು. ಈ ವಿಚಾರ ಬೆಳಿಗ್ಗೆಯಿಂದ ಚರ್ಚೆಯಾಗುತ್ತಿದೆ, ಇದು ಎಷ್ಟು ಹೊತ್ತಿಗೆ ಕನ್‌ಕ್ಲೂಡ್ ಆಗಬೇಕು, ಎಷ್ಟು ಹೊತ್ತಿಗೆ ಉತ್ತರ ಕೊಡಬೇಕೆನ್ನುವುದು ನನಗೆ ಗೊತ್ತಾಗಬೇಕು ಇದರಲ್ಲಿ ಎಷ್ಟು ಜನ ಭಾಗವಹಿಸಬೇಕು ಸಮಯ ಎಷ್ಟೆಂಬುದನ್ನು ಗೊತ್ತುಪಡಿಸಬೇಕು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

MR. SPEAKER.—When the Speaker decides to hear members on question as to whether consent should be given to the notice of an Adjournment motion under Rule 59 or to the notice of question of Privilege under Rule 190 of the Rules of Procedure and Conduct of Business in the Legislative Assembly, not more than three members who are signatories to the notice, may make preliminary submissions. ಈಗಾಗಲೇ ನಾಲ್ಕು ಮಂದಿಗೆ ಅವಕಾಶ ಕೊಟ್ಟಿದ್ದೇನೆ ಈ ವಿಷಯದ ಬಗ್ಗೆ ಈಗಾಗಲೇ ಮೂರು ತಾಸು ಚರ್ಚೆಯಾಗಿದೆ ಮಾನ್ಯ ಬಂಗಾರಪ್ಪನವರು ೪೫ ನಿಮಿಷಗಳ ಕಾಲ ಮಾತನಾಡಿದ್ದಾರೆ ಈಗ ಮೂರು ಗಂಟೆ ೪೫ ನಿಮಿಷಗಳ ಕಾಲ ಚರ್ಚೆಯಾಗಿದೆ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಎರಡೂವರೆ ಗಂಟೆಗಳ ಕಾಲ ಅವಕಾಶವಿದೆ ಈಗ ನಾಲ್ಕು ತಾಸು ಆಗುತ್ತಾ ಬಂತು. ಮಾನ್ಯ ಸದಸ್ಯರುಗಳು ಸಾಕಷ್ಟು ಮಾತನಾಡಿದ್ದಾರೆ ಮಾನ್ಯ ಮೊಯಿಲಿಯವರು ೧೦ ನಿಮಿಷ ಮಾತನಾಡಲಿ, ಆಮೇಲೆ ಶ್ರೀನಿವಾಸ್‌ರವರು ೧೦ ನಿಮಿಷ ಮಾತನಾಡಿದ ಮೇಲೆ ಮಂತ್ರಿಗಳಿಂದ ಉತ್ತರ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಪ್ರಿವಿಲೇಜ್ ಮೋಷನ್ ಇದೆ.

ಅಧ್ಯಕ್ಷರು.—ಅದನ್ನು ಸಹ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಇದು ಎರಡು ಮೂರು ಜನರ ಪ್ರಶ್ನೆಯಲ್ಲ. ಇನ್ನೂ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ ಲೋಕಸಭೆಯಲ್ಲಿಯೂ

ಕೂಡ ಇಂತಹ ವಿಷಯಗಳು ಒಂದೇ ದಿವಸದಲ್ಲಿ ಮುಕ್ತಾಯವಾಗಿಲ್ಲ ಇದು ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಗೊತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವುದೇ ಅಡ್ಜರ್ನ್‌ಮೆಂಟ್ ಮೋಷನ್ ಆದರೂ ಸಹ ಅವತ್ತೇ ಮುಕ್ತಾಯವಾಗಬೇಕು.

ಶ್ರೀ ಎಸ್. ಬಂಗಾರಪ್ಪ.—ಕೆಲವು ಸಲ ಮೂರು ದಿವಸಗಳ ಕಾಲ ಚರ್ಚೆಯಾಗಿರುವ ಉದಾಹರಣೆಗಳಿವೆ. ಆದ್ದರಿಂದ ದಯಮಾಡಿ ಸೇರಿಯುವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದು ಒಳ್ಳೆಯದು.

(ಗೊಂದಲ)

ಅಧ್ಯಕ್ಷರು.—ಈಗಾಗಲೇ ಏಳು ಜನ ಮಾತನಾಡಿದ್ದಾರೆ ಆದರೂ ಇನ್ನಿಬ್ಬರಿಗೆ ಅವಕಾಶ ಕೊಟ್ಟಿದ್ದೇನೆ ಹತ್ತು ಹತ್ತು ನಿಮಿಷ ಅವರು ಮಾತನಾಡಲಿ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ ಆದಾದಮೇಲೆ ಪ್ರಿವಿಲೇಜ್ ಮೋಶನ್ ಅನ್ನು ತೆಗೆದುಕೊಳ್ಳೋಣ ಶ್ರೀ ಮೊಯಿಲಿಯವರೇ ನೀವು ಮಾತನಾಡಿ.

† ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ತಾವು ಪ್ರಾಥಮಿಕವಾಗಿ ಮಾತನಾಡಬೇಕೆಂದು ಹೇಳಿದ್ದರೂ ಸಹ ಇದನ್ನು ನಿಲುವಳಿ ಸೂಚನೆಯನ್ನಾಗಿ ತಾವು ಮಾರ್ಪಾಡು ಮಾಡಿದ್ದೀರಿ ಎನ್ನುವ ಭಾವನೆಯಲ್ಲಿ ನಾನು ಇದ್ದೇನೆ ಈ ವಿಚಾರವನ್ನು ನಾವು ಬರೇ ಸಾರ್ವಜನಿಕ ಹಿತದೃಷ್ಟಿಯಿಂದ ತಂದಿಲ್ಲ ಇಲ್ಲಿ ಈ ಸದನದಲ್ಲಿ ತಕ್ಕಂಥ ಸದಸ್ಯರ ಒಂದು ಹಕ್ಕನ್ನು ಮತ್ತು ಪ್ರಜಾಪ್ರಭುತ್ವಕ್ಕನುಸಾರವಾಗಿ ಅವರು ಕೆಲಸ ಮಾಡಬೇಕಾದಂಥ ವಿಚಾರದ ಬಗ್ಗೆ ಕೂಡ ಇಲ್ಲಿ ಪ್ರಶ್ನೆ ಹಾಕತಕ್ಕಂಥ ವಿಚಾರ ಬಂದಿದೆ. ಈಗ ತಮಗೆ ಗೊತ್ತಿರಬಹುದು, ಏನೆಂದರೆ ಸನ್ಮಾನ್ಯ ಸದಸ್ಯರಾದ ಶ್ರೀ ಬಂಗಾರಪ್ಪನವರು ಹೇಳಿದ ಪ್ರಕಾರ ಲೋಕಸಭೆಯಲ್ಲಿ ಅಡ್ಜರ್ನ್‌ಮೆಂಟ್ ಮೋಶನ್ ತೆಗೆದುಕೊಳ್ಳದಿದ್ದರೂ ಕೂಡ ಅದರ ಮೇಲೆ ೨-೩ ದಿವಸಗಳ ಕಾಲ ಫುಲ್‌ಫ್ಲೆಡ್ಜ್‌ಡ್ ಡಿಸ್‌ಕಶನ್ ಮಾಡಿದಂಥಾದ್ದು ಇದೆ ಈ ವಿಚಾರದ ಗಂಭೀರತೆ, ಘನತೆ ಮತ್ತು ಆಳ ಇದನ್ನೆಲ್ಲಾ ಕಂಡಾಗ, ಲೋಕಸಭೆಯಲ್ಲಿ ಮತ್ತು ಅನೇಕ ವಿಧಾನಸಭೆಗಳಲ್ಲಿ ಇಂತಹ ಚಟುವಟಿಕೆಗಳನ್ನು ನಡೆಸಿರುವುದನ್ನು ತಾವು ನೋಡಿದ್ದೀರಿ ಮತ್ತು ತಾವು ಪರಿಜ್ಞಾನವನ್ನು ಹೊಂದಿದವರಿದ್ದೀರಿ ಇಂತಹ ವಿಚಾರದಲ್ಲಿ ಹಿಂದೆ ದೀರ್ಘವಾಗಿ ಎರಡು-ಮೂರು ದಿವಸಗಳಷ್ಟು ಚರ್ಚೆ ನಡೆದಿದ್ದು ಇದೇನೂ ವಿಧಾನಸಭೆಯ ಇತಿಹಾಸದಲ್ಲಿ ಹೊಸದೇನೂ ಅಲ್ಲ. ಮಾನ್ಯ ಅಧ್ಯಕ್ಷರೇ, ಇದು ಸಣ್ಣ ಘಟನೆ ಏನೂ ಅಲ್ಲ. ಇಂತಹ ನಿಲುವಳಿ ಸೂಚನೆ ತಾವು ಅಧ್ಯಕ್ಷರಾದ ಮೇಲೆ ಅಥವಾ ಹಿಂದೆ ಕೂಡ ತಾವು ಸದಸ್ಯರಾಗಿದ್ದಾಗ ಎಷ್ಟು ಸಾರಿ ಬಂದಿದೆ ದಯವಿಟ್ಟು ಹೇಳಿ ಒಂದು ಘಟನೆ ನಡೆದಿದೆ. ಈ ಘಟನೆಯಲ್ಲಿ ಸರ್ಕಾರ ಉರುಳಿಹೋಗಿದೆ. ತಮಗೆ ಗೊತ್ತಿದೆ, ಒಬ್ಬ ಮುಖ್ಯಮಂತ್ರಿಯವರು ರಾಜೀನಾಮೆ ಕೊಡಬೇಕಾದಂಥ ಪ್ರಸಂಗ ಬಂದಾಗಿನಿಂದ ಯಾವ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಂಡಿದ್ದೀರಿ ದಯವಿಟ್ಟು ಹೇಳಿ ಇಷ್ಟು ಗಹನವಾದ ವಿಚಾರಗಳನ್ನು ನಾವು ಬರೇ ನಿಲುವಳಿ ಸೂಚನೆಯ ಒಂದು ಪರಿಧಿಯಲ್ಲಿ ತುರುಕಿಸತಕ್ಕಂಥ ಮತ್ತು ನಾವು ಕೂಡ ಇದನ್ನು ನಿಷ್ಕರ್ಷೆ ಮಾಡಬೇಕಾದ ಪರಿಸ್ಥಿತಿಯಲ್ಲಿಲ್ಲ, ಇವತ್ತು ಎಲ್ಲರೂ ಮಾತನಾಡಲಿ. ಇದು ಒಂದು ಘಟನೆಗೆ ಮಾತ್ರ ಸೀಮಿತವಾಗುವುದಿಲ್ಲ. ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಒಂದು ರೀತಿಯ ಬೆಳಕು ಚೆಲ್ಲತಕ್ಕಂಥ ಒಂದು ಚರ್ಚೆ ಕರ್ನಾಟಕ ವಿಧಾನಸಭೆಯಲ್ಲಿ ಆಗುವುದಿದ್ದರೆ ಅದನ್ನು ತಡೆಯತಕ್ಕಂಥ ಪ್ರಯತ್ನವನ್ನು ತಾವು ಮಾಡಬಾರದು ಮತ್ತು ನಾವು ಕೂಡ ಮಾಡಬಾರದು ಈ ವ್ಯಾಪಕವಾದ ದೃಷ್ಟಿಯಿಂದ ತಾವು ಈ ವಿಚಾರವನ್ನು...

ಅಧ್ಯಕ್ಷರು.—ತಮಗೆ ಇಷ್ಟು ಅವಕಾಶ ಕೊಟ್ಟಿದ್ದು ತಪ್ಪೇನು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಏನು ಆಯಿತು ಈಗ ?

ಅಧ್ಯಕ್ಷರು.—ತಮಗೆ ಅವಕಾಶ ಕೊಟ್ಟಿದ್ದೇನೋ ಇಲ್ಲವೋ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಮಾತನಾಡುವುದು ಬೇಡವೆ ?

ಅಧ್ಯಕ್ಷರು.—ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಾನು ಇಲ್ಲಿ ಚರ್ಚೆ ತಡೆಹಿಡಿಯುವುದು ಬೇಡವೆಂದು ನನಗೆ ಹೇಳುತ್ತಿದ್ದೀರಿ, ನಾನು ತಡೆಹಿಡಿದಿದ್ದೀನಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಆ ಭಾವನೆಯಿಂದ ಹೇಳಲಿಲ್ಲ.

ಅಧ್ಯಕ್ಷರು.—ಅತಿ ಹೆಚ್ಚಿನ ಅವಕಾಶವನ್ನು ನಾನು ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಐದು ಗಂಟೆಯಾದರೆ ತಾವು ತಾಳ್ಮೆ ಕೆಡುವ ಹಾಗೆ ಕಾಣುತ್ತದೆ. ತಮಗೆ ತಾಳ್ಮೆ ಇರಬೇಕು. ನಮಗೂ ತಾಳ್ಮೆ ಇರಬೇಕಾಗುತ್ತದೆ ತಾಳ್ಮೆ ಇಲ್ಲದಿದ್ದರೆ ನಾನು ಮಾತನಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ತಾಳ್ಮೆ ನಿಮಗಿಂತ ಹೆಚ್ಚು ನನಗಿದೆ ರಾತ್ರಿ ೧೨ ಗಂಟೆವರೆಗೂ ಬೇಕಾದರೆ ಕುಳಿತು ಕೊಳ್ಳಿ ಇದನ್ನು ಮುಗಿಸಿಬಿಡೋಣ ಇದಾದಮೇಲೆ ಪ್ರಿವಿಲೇಜ್ ಮೋಶನ್ ನೋಟೀಸ್ ಇದೆ ಅದನ್ನೂ ತೆಗೆದುಕೊಳ್ಳೋಣ ಯಾರು ಬೇಡವೆನ್ನುತ್ತಾರೆ ? ನಾನು ನಿಮಗೆ ಅವಕಾಶ ಕೊಟ್ಟಿದ್ದೇನೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸಿಟ್ಟು ಏಕೆ ಮಾಡಿಕೊಳ್ಳಬೇಕು ?

ಅಧ್ಯಕ್ಷರು.—ಸಿಟ್ಟಿನ ಪ್ರಶ್ನೆ ಅಲ್ಲ ತಾವು ಚೆನ್ನಾಗಿ ಮಾತನಾಡುತ್ತೀರಿ ಎಂದು ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಏನು ತಪ್ಪು ಮಾತನಾಡಿದ್ದೇನೆ ? ಚೆನ್ನಾಗಿಯೇ ಮಾತನಾಡುತ್ತಿದ್ದೇನೆ. ಈಗ ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಟೆಲಿಫೋನ್ ಬಗ್ಗೆ ಚರ್ಚೆ ಬಂದಿದೆ. ನಮ್ಮ ನಾಯಕಿಯವರು, ಉಪನಾಯಕರು ಸಾಕಷ್ಟು ವಿಶ್ಲೇಷಣೆಯನ್ನು ಮಾಡಿದ್ದಾರೆ. ವಿವರಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಪುನಃ ಹೇಳತಕ್ಕಂಥ ಕೆಲಸಕ್ಕೆ ನಾನು ಹೋಗುವುದಿಲ್ಲ ಅದನ್ನು ಪುನರುಚ್ಚಾರ ಮಾಡುವ ಅವಶ್ಯಕತೆ ಇಲ್ಲ ಆದರೆ ಬೇರೆ ಕೆಲವು ವಿಚಾರಗಳು ಇದರಲ್ಲಿ ಉದ್ಭವವಾಗುತ್ತವೆ.

ಟೆಲಿಗ್ರಾಫ್ ಆಕ್ಟ್‌ನಲ್ಲಿ ಈಗಾಗಲೇ ನಮ್ಮ ಉಪನಾಯಕರು ಓದಿ ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ವಿವರಣೆಯನ್ನು ಈ ಕಡೆಯ ಮಾನ್ಯ ಎಂ. ಎಸ್. ಕೃಷ್ಣನ್‌ರವರೂ ಕೊಟ್ಟಿದ್ದಾರೆ ಹಾಗೂ ಇನ್ನೂ ಕೆಲವು ಸನ್ಮಾನ್ಯ ಸದಸ್ಯರೂ ಕೂಡ ಹೇಳಿದ್ದಾರೆ. ಅದರ ಪ್ರಕಾರ ಅಂದರೆ ಸೆಕ್ಷನ್ ೫(೨)ಅನ್ನು ಯಾವ ಸಂದರ್ಭದಲ್ಲಿ ಕರ್ನಾಟಕ ಅಥವಾ ಯಾವುದೇ ಒಂದು ರಾಜ್ಯಸರ್ಕಾರ ಅಥವಾ ಕೇಂದ್ರ ಸರ್ಕಾರ ಇದನ್ನು ಉಪಯೋಗ ಮಾಡಬೇಕು ಎಂದು ಟೆಲಿಗ್ರಾಫ್ ಆಕ್ಟ್‌ನಲ್ಲಿ ಹೇಳಿದ್ದಾರೆ ಹೇಗೆ ಉಪಯೋಗ ಮಾಡಬೇಕೆಂದು ಹೇಳಿದ್ದಾರೆ, ರಾಜ್ಯಸರ್ಕಾರ ಈ ಕಾನೂನು ಉಪಯೋಗ ಮಾಡುವಾಗ ಪಬ್ಲಿಕ್ ಸೇಫ್ಟಿ, ಎಮರ್ಜೆನ್ಸಿ ಇದ್ದರೆ ಮಾಡಬೇಕು ಇದು ಎರಡೂ ಇಲ್ಲದಾಗ ಪಬ್ಲಿಕ್ ಸೇಫ್ಟಿ, ಎಮರ್ಜೆನ್ಸಿ ಇದೆಯೆಂದು ಯಾರು ನಿಷ್ಕರ್ಷೆ ಮಾಡಬೇಕೆಂದರೆ, ಆಯಾ ಜವಾಬ್ದಾರಿಯುಳ್ಳ ರಾಜ್ಯಸರ್ಕಾರಗಳು. ಕೇಂದ್ರಸರ್ಕಾರದ ಪ್ರಶ್ನೆ ಉದ್ಭವವಾದಾಗ, ಕೇಂದ್ರ ಸರ್ಕಾರ ನೋಡಬೇಕು. ರಾಜ್ಯಸರ್ಕಾರ ಆದೇಶ ಕೊಟ್ಟಿದ್ದರೆ. the question of propriety of public safety or propriety of a situation of public emergency is absolutely for the subjective satisfaction of respective State Governments. ಇದು ಸರಿ ಇದೆಯೋ ಇಲ್ಲವೇ ಎಂದು ಹೇಳತಕ್ಕಂತಾದ್ದು ಟೆಲಿಗ್ರಾಫ್ ಆಕ್ಟ್‌ನಲ್ಲಿ ಇಲ್ಲ. Unfortunately or fortunately for this Government... ಇದು ಬಹಳ ಸ್ಪಷ್ಟ ಇವೆ ಏತಕ್ಕೆಂದರೆ,

> "On the occurence of any public emergency, or in the interest of public safety, the Central Government or a State Government or any Officer specifically authorised in this behalf by the Central Government or a State Government may, if satisfied that it is necessary or expedient so to do in the interests of the sovereignity and integrity of India the security of the State, friendly relations with Foreign States or public order or for preventing incitement to the commission of an offence, for reasons to be recorded in writing, by order, direct that...

He has to record, the State Government should recorded or the Chief Secretary or the authority concerned should record it It is not to be intimated. He cannot give qualifying message to the Telegraph Authority. he has to give absolute message which has got to be absolutely adhered to as far as the Telegraph Department or Telephone Department. ಮಾನ್ಯ ರಘುಪತಿಯವರು, ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು ಈ ಟೆಲಿಗ್ರಾಫ್ ಡಿಪಾರ್ಟ್‌ಮೆಂಟ್ ಕೇಂದ್ರಸರ್ಕಾರದ ಅಧೀನದಲ್ಲಿ ಬರುತ್ತದೆ. ಈ ಕಾನೂನಿನ ವ್ಯಾಪ್ತಿಯನ್ನು, ಕಾನೂನಿನ ವ್ಯಾಪ್ತಿಯಲ್ಲಿರತಕ್ಕ ಅಧಿಕಾರವನ್ನು ಟೆಲಿಗ್ರಾಫ್ ಇಲಾಖೆಗೆ ಕೊಟ್ಟಮೇಲೆ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡುವುದಕ್ಕಾಗುವುದಿಲ್ಲ ಬಹುಶಃ ಕೇಂದ್ರಸರ್ಕಾರದವರು ಇದರ ಬಗ್ಗೆ ಏನಾದರೂ ತಿದ್ದುಪಡಿ ತಂದರೆ ಏನು ಹೇಳುತ್ತೀರಿ. ಕೇಂದ್ರಸರ್ಕಾರ, ರಾಜ್ಯಸರ್ಕಾರಗಳಿಗೆ ಹಸ್ತಕ್ಷೇಪ ಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೀರಿ. It is an absolute right given to the State. ಆದರೆ ಈ ಕಾನೂನನ್ನು ಜಾರಿಗೆ ಕೊಡುವಾಗ, ಪಾರ್ಲಿಮೆಂಟ್ ಸದಸ್ಯರ ಅಭಿಪ್ರಾಯ ಏನಿತ್ತು ಎಂದರೆ. ಒಂದು ಜವಾಬ್ದಾರಿಯುಳ್ಳ ಅಧಿಕಾರವನ್ನು ಆಯಾ ರಾಜ್ಯ ಸರ್ಕಾರಗಳು ಮಾಡುತ್ತವೆ, faith, in the process of democracy. Now that faith State Government like Karnataka can misuse it, abuse it and totally disregard to the rights of the individuals or the representative of the people. Now, after such a distant point of time you have made the Lokasabha or the Central Government to reconsider this...ಇದನ್ನು ಮಾಡಿದರೆ. ಈ ಕಾನೂನನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಯಾವ ರೀತಿಯಾಗಿ ದುರುಪಯೋಗ ಮಾಡಬಹುದು. ಈ ಕಾನೂನನ್ನು ಯಾವರೀತಿಯಾಗಿ ಟ್ವಿಸ್ಟ್ ಮಾಡಬಹುದು, ಈ ಕಾನೂನು ಎಂಬ ದೊಡ್ಡ ಆಯುಧದಿಂದ ಯಾವರೀತಿಯಲ್ಲಿ ತೇಜೋವಧೆ ಮಾಡಬಹುದು, ಮಾನಹಾನಿ ಮಾಡಬಹುದು ಮತ್ತು ಬ್ಲಾಕ್ ಮ್ಯಾಜಿಕ್ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. This is really shameful act on the part of the Government. ಇದನ್ನು ತಾವು ಆಲೋಚನೆ ಮಾಡಬೇಕು. ಯಾವ ಕಾನೂನನ್ನು ಪರಮ ವಿಶ್ವಾಸದಿಂದ ಈ ರಾಷ್ಟ್ರದ ಅತ್ಯುನ್ನತ ಪಾರ್ಲಿಮೆಂಟ್ ಕೊಟ್ಟಿತು ಅದನ್ನು ದುರುಪಯೋಗ ಮಾಡಿಕೊಂಡಿದ್ದೀರಿ. ಹಾಗಾದರೆ Is it not that very Chief Minister and very same Government which has said about federalism have you not abused this provision? If this is being misused it is a right, it is a right absolutely delegated to the State and you have proved that you are unfit to take out this right. That means the power which has been delegated to the people of Karnataka, they don't deserve such a delegation in democratic set up. It is a shame to the people of Karnataka and this is what has been done by the present Government. ರಾಜ್ಯಗಳಿಗೆ ಇನ್ನೂ ಹೆಚ್ಚು ಅಧಿಕಾರಬೇಕೆಂದು ತಾವು ಹೇಳುತ್ತೀರಿ. ಇನ್ನೂ ಹೆಚ್ಚು ಅಧಿಕಾರ ಕೊಡಿ ಎಂದು ಹಗಲೂರಾತ್ರಿ ಕಾಳಿತುಕೊಂಡು ಹೇಳುತ್ತೀರಿ. ಡಿಸೆಂಟ್ರಲೈಸ್ ಮಾಡಿ ಎಂದು ತುಟ್ಟತುದಿಯಲ್ಲಿ ಕುಳಿತುಕೊಂಡು ಹೇಳುತ್ತಿದ್ದೀರಿ. On the top of the House you are shouting at it but you are eroding, denigrating it and make people of this State to go down in the eyes of the country or in the whole world that here are a set of scheme of federal set up in the country but don't know how to use the democratic rights of the person. Are we fit to govern ourselves. Now, forget our State...ಇದಕ್ಕಿಂತ ಹೆಚ್ಚು ಅವಮಾನ ಬೇಕೆ ನಮ್ಮ ಕರ್ನಾಟಕದ ಜನರಿಗೆ. Do you think you are fit to govern or this Government is fit to govern the State. This is the question posed for you to answer. ಸಾಕಷ್ಟು ರಾಷ್ಟ್ರೀಯ ಮಹತ್ವಾಕಾಂಕ್ಷೆಯನ್ನು ಇಟ್ಟಂಥ ಸನ್ಮಾನ್ಯ ರಾಮಕೃಷ್ಣಹೆಗಡೆಯವರು ಇವತ್ತು ಇಂತಹ ಒಂದು ಸಣ್ಣ ರಾಜ್ಯ,

ದಲ್ಲಿ ಇಂತಹ ಒಂದು ಸಣ್ಣ ಘಟನೆಯಲ್ಲಿ ಅಧಿಕಾರವನ್ನು ಸರಿಯಾಗಿ ಕಾನೂನಿನ ಹತೋಟಿಯಲ್ಲಿ ಉಪಯೋಗ ಮಾಡಲು ಆಗಲಿಲ್ಲ ಎಂದರೆ ಹೇಗೆ ? Sir, in next clause it is very clearly mentioned "direct that any message or class of messages to or from any person or class of person that means what is the right conferred on you? You can give any message that means specific unit of message or class of messages. ನೀವು ಏನು ಮಾಡಿದ್ದೀರಿ here what you have done is year by year you are going on renewing it. ಇದನ್ನು ತಾವು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡಿದ್ದೀರಿ. ಈಗ ಅಧ್ಯಕ್ಷರೇ after all we have also functioned in the Government. ಇವತ್ತು ರಾಮಕೃಷ್ಣ ಹೆಗಡೆಯವರು ಬರುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ನಿನ್ನೆ ನಾವೇ ನಿಂತು ಹೇಳಿದೆವು. ರಾಮಕೃಷ್ಣಹೆಗಡೆಯವರು ಬರಲಿ ಎಂದು. he might have enlightened this House. He may be in the dock as said by Sri Bangarappa but sometimes even persons in the dock he is entitled to prove innocence He may be innocent but we don't know... ಆದರೆ ಆ ಪರಿಸ್ಥಿತಿ ಬರಲಿಲ್ಲ. ಅವರೇ ಉತ್ತರಕೊಡಬೇಕಾದವರು. ಸನ್ಮಾನ್ಯ ಬೊಮ್ಮಾಯಿಯವರಲ್ಲ. Direct responsibility is on Mr. Hegde who was the Chief Minister at that time... ನಾನು ಇಷ್ಟೇ ಹೇಳುವುದು, ಸನ್ಮಾನ್ಯ ಯಡಿಯೂರಪ್ಪನವರು ಕೂಡಾ ಸ್ವಲ್ಪ ಗಮನ ಇಟ್ಟು ಕೇಳಬೇಕು. Forget about the country for a while ತಮಗೆ ಗೊತ್ತಿದೆ ೧೯೮೩ರ ಮೊದಲು ಕಾಂಗ್ರೆಸ್ ಗೌರ್ನಮೆಂಟ್ ಇತ್ತು. Yoo talk about Congress culture but a minature of Congress which was there in Karnataka before 1983.

Before 1983 or even earlier. About 38 years it has ruled the state also. What is the procedure? To intercept telephone or postal records the DIG Intelligence sends peoposals through the Home Secretary to the Chief Secretary Then it is for the State Government to accept. After all, it is a policy statement. Executive decision is not a routine matter It is not that simple. If you want to be out of suspicion kindly place all the files before the House. Let things be clear. Whether it is the Congress or the Janatha party, on facts we must come to the conclusion. The proposals to intercept arises first from the DIG or Sp intelligence. He sends the proposals to the Chief Secretary through the Home Secretary. The Chief Secretary has the authority because he is the executive head of the Government. On the file the will obtain the signature of the Chief Minister, or else he writes on the file that the Chief Minister has approved. He may even obtain the approval of the Chief Minister through the Secretary to the Chief Minister. He will record saying that the approval of the Chief Minister is obtained. There will be some endorsement of approval of either from the Chief Minister or his Secretary or Chief Secretary himself. These files are available with you.

SRI B.S. YEDIYURAPPA.—While reply to the debate in Parliament the Prime Minister has said like this.

> "Charging that the Karnataka Government had violated the Indian Telegraph Act, both Mr Gandhi and Buta Singh have said that the Centre would amend the Act to ensure that the telephones are not bugged."

ಇದರ ಬಗ್ಗೆ ನನ್ನ ಪಾಯಿಂಟ್ ಏನೆಂದರೆ ಟೆಲಿಫೋನ್ ಆಕ್ಟ್‌ನಲ್ಲಿ ಕದ್ದು ಕೇಳಿದ್ದಕ್ಕೆ ಶಿಕ್ಷೆ ಮಾಡುವುದಕ್ಕೆ ಆಗುವುದಿಲ್ಲವೆಂದು ಏನಾದರೂ ಅವರಿಗೆ ಅನಿಸಿದೆಯೇ? ಒಂದು ವೇಳೆ ಅನಿಸಿದ್ದರೆ ಸಿ ಬಿ ಐ ನವರು ತನಿಖೆ ಮಾಡಿ ಜನಾರ್ಧನಪೂಜಾರಿಯವರು ಹೇಳಿದ ಹಾಗೆ ಶಿಕ್ಷೆ ಮಾಡುವುದಕ್ಕೆ ಆಗುವುದಿಲ್ಲವೇ?

SRI M. VEERAPPA MOILY.—Why it has been said like that by the Prime Minister and Home Minister, I will come back to that. The Chief Minister approves it and then it goes down and the Chief Secretary authorises the DIG (Intelligence) as the person to be intimated and the Chief Secretary will write and enclose a letter with the list of persons whose postal will have to be intercepted or the telephones to be tapped. Then it will be sent to PMG or the GM Telephones as the case may be. This is one process. The next process is, every day evening or the night the Chief Minister and the Chief Secretary simultaneously in a sealed cover, they receive the messages or the summary or details of messages from the Intelligence directly. If the telephones are tapped they will specifically mention as to from whom to whom and when and what are the contents. If they require any details, details are called for and again with a sealed cover it will be conveyed to them and after perusal it will be sent back and not detained with the Chief Minister or the Chief Secretary. Kindly place all these files before the House. Inform the House what the Congress people have done and what the Janatha Party people have done. Kindly tell the House the entire thing. There are two distinct things here. Interception can be made if the public safety is at state. Law and order problem may be there; there may be communal problems or goondaism. There may be people who have been arrested under Coffeeposa or smuggling or any other security reason. It was there before emergency ie., between 1975 to 1977. May be, it may be tapped at that time i.e., before emergency. It was there I know very well it was there. I was a Minister and I can rather challenge it also. Either with the approval of the Chief Minister or the Chief Secretary none of the telephones of the public men including MLAL and Ministers have been tapped during the Congress regime. I am very categorical. We have not resorted to this.

SRI D.T. JAYAKUMAR.—There may be unofficial tapping.

SRI M. VEERAPPA MOILY.—Don't say unefficial. Don't talk about this. Here the Chief Minister either must have approved it or the

Chief Secretary must have recorded it, names of the public men including some of us. If it is not done prosecute them. If the Chief Minister has recorded his approval in the file or the Chief Secretary has mentioned in the file that the Chief Minister has approved it, prosecute the Chief Minister. We are not just asking. Supposing the Chief Minister wants to get away from the tangle. You prosecute him. It is for the public to say whether the Chief Secretary or the Home Secretary will act to name some of us without the authority as criminals, goondas, smugglers: and all sorts of things. Without the approval of the Chief Minister, it is for the public to say. After all,...........

ಡಾ. ಹೆಚ್.ಎಲ್. ತಿಮ್ಮೇಗೌಡ.—ತಾವು ಓದಿದ ಪ್ರಕಾರ ಯಾವುದಾದರೂ ಟೆಲಿಫೋನನ್ನು ಬಗ್ ಮಾಡಬೇಕಾದರೆ, ಯಾರ ಯಾರ ಟೆಲಿಫೋನ್‌ಗಳನ್ನು ಬಗ್ ಮಾಡಬೇಕೆಂದು ನಿಯಮ ಇದೆ. ಚೀಫ್ ಸೆಕ್ರೆಟರಿಯವರು ಮತ್ತು ಐ.ಜಿ.ಪಿ.ಯವರು ಟೆಲಿಫೋನನ್ನು ಬಗ್ ಮಾಡುವುದಕ್ಕೆ ಟೆಲಿಗ್ರಾಫ್ ಆಫೀಸ್ ಜನರಲ್ ಮ್ಯಾನೇಜರ್‌ರವರಿಗೆ ತಿಳಿಸಿದರೆ, ಯಾವ ಯಾವ ಕಾರಣಕ್ಕೋಸ್ಕರ ಟೆಲಿಫೋನ್‌ಗಳನ್ನು ಬಗ್ ಮಾಡಬೇಕೆಂದು ಟೆಲಿಗ್ರಾಫ್ ಆಫೀಸ್ ಜನರಲ್ ಮ್ಯಾನೇಜರ್‌ರವರು ಚೀಫ್ ಸೆಕ್ರೆಟರಿಯವರನ್ನು ಕೇಳಬಹುದು. ಸರಿಯಾದ ರೀಸನ್ ಕೊಡದಿದ್ದರೆ ಟೆಲಿಫೋನ್‌ಗಳನ್ನು ಬಗ್ ಮಾಡುವುದಿಲ್ಲವೆಂದು ಅವರು ಹೇಳಬಹುದು ಕಾರಣವನ್ನು ಕೇಳದೇ ಟೆಲಿಫೋನ್‌ಗಳನ್ನು ಬಗ್ ಮಾಡಿರುವುದು ಟೆಲಿಫೋನ್ ಡಿಪಾರ್ಟ್‌ಮೆಂಟಿನವರು ಕರ್ತವ್ಯ ಲೋಪ ಮಾಡಿದ ಹಾಗೆ ಆಗಲಿಲ್ಲವೆ? ಇದರ ಬಗ್ಗೆಯೂ ತಾವು ಯೋಚನೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅದರ ಬಗ್ಗೆ ನಾನು ಮಾತನಾಡುವ ಪ್ರಥಮದಲ್ಲೇ ಹೇಳಿದ್ದೇನೆ. There is no such thing, not for the reasons to be stated, it is the reasons to be recorded. If it is a reason to be stated to the authorities concerned i.e., to PMG or GM Telephones, then what you said is correct. But, it is for the reasons to be recorded. If it is satisfied, first they say, it should be by the Government.

ಶ್ರೀ ಹೆಚ್ ಎಲ್, ತಿಮ್ಮೇಗೌಡ.—ಟೆಲಿಗ್ರಾಫ್ ಆ್ಯಕ್ಟ್‌ನಲ್ಲಿ ಯಾರ ಯಾರ ಟೆಲಿಫೋನ್‌ಗಳನ್ನು ಬಗ್ ಮಾಡಬಹುದೆಂದು ನಿಯಮಗಳಿವೆ. ದೇಶಕ್ಕೆ ದ್ರೋಹ ಮಾಡತಕ್ಕವರ, ಕಮ್ಯೂನಲ್ ವೈಲೆನ್ಸ್ ಮಾಡತಕ್ಕವರ ಟೆಲಿಫೋನ್‌ಗಳನ್ನು ಬಗ್ ಮಾಡಿ ರೆಕಾರ್ಡ್ ಮಾಡಬೇಕೆಂದು ನಿಯಮವಿದೆ. ಇತರೆಯವರ ಟೆಲಿಫೋನ್‌ಗಳನ್ನು ರೆಕಾರ್ಡ್ ಮಾಡಿ ಎಂದು ಸರ್ಕಾರ ತಿಳಿಸಿದ ಪಕ್ಷದಲ್ಲಿ ಯಾವ ಕಾರಣಕ್ಕೋಸ್ಕರ ರೆಕಾರ್ಡ್ ಮಾಡಬೇಕೆಂದು ಕೇಳುವ ಅಧಿಕಾರ ಟೆಲಿಫೋನ್ ಡಿಪಾರ್ಟ್‌ಮೆಂಟಿನವರಿಗೆ ಇಲ್ಲವೇ.

5–30 P.M.

SRI M. VEERAPPA MOILY.—It is reasons to be recorded if it is satisfied by the Govt......

ಶ್ರೀ ಎಚ್.ಎಲ್. ತಿಮ್ಮೇಗೌಡ.—ನಾವು ಹೇಳಿದ ತತ್‌ಕ್ಷಣ ಇಲಾಖೆಯವರು ಮಾಡುವುದಾದರೆ, ಅವರು ಕಾನೂನಿನ ನಿಯಮಗಳನ್ನು ಅನುಸರಿಸಿದ ಹಾಗೆ ಆಗುತ್ತದೆಯೇ ? ಸಂಬಂಧಪಟ್ಟ ಕಾನೂನಿನ ಪರಿಪಾಲನೆಯ ಜವಾಬ್ದಾರಿ ಆ ಇಲಾಖೆಯವರದ್ದು ಅಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಆಕ್ಟನ್ನು ಲೋಕಸಭೆ ಆಯಾಯಾ ರಾಜ್ಯ ಸರಕಾರದ ಮೇಲೆ ಒಂದು ಪರಮ ವಿಶ್ವಾಸವನ್ನು ಇಟ್ಟು ಹಕ್ಕನ್ನು ಪೂರ್ಣವಾಗಿ ಕೊಟ್ಟಿದೆ. ಅದನ್ನು ರಾಜ್ಯ ಸರಕಾರಗಳು ಸೂಕ್ತ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಧ್ಯಕ್ಷರೆ......

SRI M. VEERAPPA MOILY.—After all, that has happened. ಯಾರು ದೇಶದ್ರೋಹದ ಕಾರ್ಯಗಳಲ್ಲಿ ತೊಡಗಿರುತ್ತಾರೆ, ಯಾರು ಕಾನೂನನ್ನು ಮೀರಿ ರಾಜ್ಯಕ್ಕೆ, ದೇಶಕ್ಕೆ ತೊಂದರೆ ತಂದೊಡ್ಡುತ್ತಾರೆ, ಅಂಥಹವರ ಬಗ್ಗೆ ಇರಲಿ ಎಂದು ಇಂಥ ಒಂದು ಹಕ್ಕನ್ನು ರಾಜ್ಯ ಸರಕಾರಗಳಿಗೆ ಕೊಟ್ಟಿದ್ದೆ. ರಾಜ್ಯ ಸರಕಾರಗಳು ಅದನ್ನು ಅಗತ್ಯತೆ ಮತ್ತು ಸಂದರ್ಭದ ಸೂಕ್ಷ್ಮತೆಯನ್ನು ಅನುಸರಿಸಿಕೊಂಡು ಉಪಯೋಗಿಸಲು ಸಾಧ್ಯ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೇಂದ್ರ ಸರಕಾರದವರು ಇಂಥ ಕಾನೂನು ಮಾಡುವ ಸಂದರ್ಭದಲ್ಲಿ ತಾವು ಖಾಯಂ ಆಗಿ ಅಧಿಕಾರದಲ್ಲಿ ಇರುತ್ತೇವೆ ಎಂದು ಹೀಗೆ ಟೆಲಿಫೋನ್ ಕದ್ದು ಕೇಳುವುದಕ್ಕೆ ಶಾಶ್ವತವಾದ ಅವಕಾಶವನ್ನು ಮಾಡಿ ಕೊಟ್ಟಿದುದರ ಪರಿಣಾಮವಾಗಿ ಈಗ ರಾಜ್ಯಗಳಲ್ಲಿ ಹೀಗೆ ಆಗುತ್ತಾ ಇದೆ. ಈ ತರಹ ಕಾನೂನಿನಲ್ಲಿ ದೋಷಗಳು ಇರುವ ಕಾರಣದಿಂದ ಹೀಗೆ ಆಗುತ್ತಿದೆಯೋ ?

SRI M. VEERAPPA MOILY.—It is a question of faith in a democratic set up. If the State Govt., is looked at with suspicion by the Central Govt., what do you say ?

My friends have mentioned about Section 24 of the Telegraph Act. It reads :

> " The State Govt. or any person can move the criminal court in motion for unlawfully attempting to contempt of messages, if any person does......
>
> x x x
>
> or commit any offence punishable under this Act, he may be punishable with imprisonment for a term which may extent to one year."

If the Chief Minister's signature or his name does not figure prosecute the Chief Secretary and the Home Secretary. Here. mercy question does not come, It is a clear offence committed by them. if you believe that individuals who are concerned, public men or the legislators or the Ministers who are working to jeoparadise the interests of the public satify, of course, if you have records to show that these are all the public men who are disturbing the public safety or responsible for disturbing the public safety. yes, then, you prosecute them. Prosecute all of us. You have to do one of the two. You have no other choice left. You have to prosecute Mr. Deve Gowda, you have to prosecute Mr. Raghupathy and prosecute all of us. You do it. We will face the situation. Let the truth come out. Or, you have no other option but to prosecute Mr. Ramakrishna Hegde if he is responsible because I have not seen the file. He has to be there under the routine administrative set up but one thing, he has taken the responsibility. He says and he admits that it has been done in the routine official business. That means, he has taken the responsibility,

We are responsible legislators. He is a responsible Chief Minister. ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದು ಕಾರ್ಯನಿರ್ವಹಿಸುವವರ ಮೇಲೆ ನಾವು ವಿಶ್ವಾಸ ಇಡುತ್ತೇವೆ ಅದು ನಮ್ಮ ಪ್ರಜಾಪ್ರಭುತ್ವದಲ್ಲಿರುವ ವ್ಯವಸ್ಥೆಯೂ ಆಗಿದೆ. Am I to suspect him ? Never. I have to fully believe that he will discharge his responsibilities according to the spirit of the Constitution. We have got to believe democratically elected Government. ಸಂವಿಧಾನದಲ್ಲಿ ಹೇಳಿದಂತೆ ಕಾರ್ಯನಿರ್ವಹಿಸುವ ಸರಕಾರದ ಮೇಲೆ ನಾವೆಲ್ಲರೂ ವಿಶ್ವಾಸವನ್ನು ಇಡಬೇಕಾಗುತ್ತದೆ. ಕಾನೂನಿಗೆ ತಿದ್ದುಪಡಿ ತರುವ ವಿಚಾರದಲ್ಲಿ, Suppose the Prime Minister has said that there was a need to amend it, then, a national debate has to take place because of the misuse resorted to by them.

They are the custodians of the records. ಎಲ್ಲಾ ರೆಕಾರ್ಡ್ಸನ್ನು ನೀವು ಈಗ ಸಭೆಯ ಮುಂದೆ ಇಡಿ......

Place the records. Let us verify the records. It never said that it should be misused. Public safety, the word public safety, it is coined; Public emergency which has been coined. "not for any other reason and for any other reason". ಎಂದು ಹಾಕಿದ್ದರೆ...The concept and the philosophy of Public safety and public emergency has been very much coined here. If there is a gross misuse of the provision, then the national Government will have to re-consider whether they have got to withdraw or amend so that the rights of the citizens could be safeguarded. That is the point before us.

Another option is the former Chief Minister should be prosecuted for violating the Oath of Secrecy. These are all the messages which are conveyed to him under the Oath of Secrecy. Yes, we know, it is an offence. ಇದು ಪತ್ರಿಕೆಯಲ್ಲೆಲ್ಲ ಬಂತು ಇದು ಚೀಫ್ ಮಿನಿಸ್ಟ್ರು ಮತ್ತು ಚೀಫ್ ಸೆಕ್ರೆಟರಿ ಇಬ್ಬರಿಗೂ ಹೋಗುತ್ತದೆ ದೇವೇಗೌಡರಿಗಂತೂ ಹೋಗುವುದಿಲ್ಲ ಅಥವಾ ಡಿಐಜಿಗೋ ಇನ್ಯಾರಿಗೋ ಬರುತ್ತದೆ ಆದ್ದರಿಂದ. One of the three must be responsible for it. ಚೀಫ್ ಮಿನಿಸ್ಟರ್‌ಗೆ ಇದು ಬರುವುದರಿಂದ ಅವರ ಮೇಲೆ ರೆಸ್ಪಾನ್ಸಿಬಿಲಿಟಿ ಇದೆ.

Thirdly, Officials Secret Act, again has been violated by the Chief Minister, by the Officers concerned, the Chief Secretary and others because the top secret matter has come in the papers. ಇದು ಟಾಪ್ ಸೀಕ್ರೆಟ್ ಎಂದಿರುವುದನ್ನು ತಾವೂ ಮುಖ್ಯಮಂತ್ರಿಯಾದ ಮೇಲೆ ನೋಡಿದ್ದೀರಿ. Then, Prof. Madhu Dandavate produced certain statement i. e; the list of persons whose postals have been intercapted Prof. Dandavate has produced it. ಅದು ಪತ್ರಿಕೆಯಲ್ಲಿ ಬಂದಿದೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಟೈಮಿಲ್ಲ. ಮಧು ದಂಡವತೆಯವರೇ ಇದನ್ನು ಪ್ರಕಟಣೆ ಮಾಡಿದ್ದಾರೆ ಹಿಂದಿನ ಸರ್ಕಾರ ಶಿವಮೊಗ್ಗ ಜಿಲ್ಲೆಯ ಕೆಲವು ವ್ಯಕ್ತಿಗಳ ಪೋಸ್ಟ್‌ಗಳನ್ನು ಇಂಟರ್‌ಸೆಪ್ಟ್ ಮಾಡಿದುದರ ಲಿಸ್ಟ್ ಮಧುದಂಡವತೆಯವರಿಗೆ ಹೇಗೆ ಬಂತು ? ತಾವು ಮುಖ್ಯಮಂತ್ರಿಯಾದ ಮೇಲೆ ಹೋಯ್ತೋ ಅಥವಾ ಹೆಗಡೆಯವರೇ ಅಧಿಕಾರದಲ್ಲಿದ್ದಾಗ ಕೊಟ್ಟಿದ್ದರೋ ? He is an abettor. It has gone from the direct custody of the Hon'ble Chief Minister Sri Ramakrishna Hegde. If he has kept illegally such documents with him, even after leaving the Chief Minister's seat, then it is another offence. He is not

entitled to keep any document or file after he ceases to be the Chief Minister of Karnataka.

SRI R. V. DESHPANDE.—On what basis, you are telling How do you conclude that the Chief Minister has given? Some officials should have leaked it out.

SRI MALLIKARJUN M. KHARGE.—Either Mr. Bommai must have given it or Mr. Ramakrishna Hegde must have given it.

SRI M. VEERAPPA MOILY.—Mr. Bommai is the Chief Minister at that time i. e., at the relevant time of disclosure in the Parlament. The DIG (Inteligence Wing) will directly come under him.

SRI S. R. BOMMAI.—I will answer but how is it that the Union Minister of Communication discloses? From where did he got all the correspondence? From where he got it. I want to know.

SRI M. VEERAPPA MOILY.— It is from your own source.

(Interruption)

SRI M. VEERAPPA MOILY.—By the time Union Communication Minister announced it, it had been disclosed in the press. It was no more a secret.

SRI S. R. BOMMAI.—I will give answer to all that. Union Communication Minister might have leaked it to the press.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಾಗ......

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಏನೂ ಉಳಿದೇ ಇಲ್ಲ. ಬಟ್ಟೆ ಬರೆ ಎಲ್ಲವನ್ನೂ ನೀವು ಕಳಚಿ ಬಿಟ್ಟಿದ್ದೀರಿ, Your Government has already been stripped naked on that issue.

(ಗೊಂದಲ)

SRI S. R. BOMMAI.—Your party is in power in the Centre. While making allegations you should take precaution. You are living in a glass house.

SRI M. VEERAPPA MOILY.—Please investigate. You want to pass on your responsibility.

(Interruption)

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಗ್ಲಾಸ್ ಹೌಸ್‌ನಲ್ಲಿ ಅಲ್ಲ ಅರಗಿನ ಮನೆಯಲ್ಲಿ ಸುಡುತ್ತಿದ್ದೀರಿ ಮಾನ್ಯ ಹೆಗಡೆಯವರು ಮಾಡಿದಂತಹ ಅರಗಿನ ಮನೆಯಲ್ಲಿ ಸುಟ್ಟು ಹೋಗುತ್ತಿದ್ದೀರಿ. ಆ ಬೆಂಕಿ ನಿಮ್ಮನ್ನು ಹಾಗೆ ಬಿಡುವುದಿಲ್ಲ ನಿಮ್ಮನ್ನು ಸುಡುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ಮನೆಯದನ್ನು ನೋಡಿ ಕೊಳ್ಳಿ ಬಾಕಿಯವರದ್ದು ಬೇಡ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ದೇಶಕ್ಕೇ ಬೆಂಕಿ ಹಚ್ಚುತ್ತಿದ್ದೀರಿ ಇಡೀ ದೇಶ ಹತ್ತಿ ಉರಿಯಲಿಕ್ಕೆ ಹತ್ತಿದೆ ಪಂಜಾಬಿನಲ್ಲಿ ಬೆಂಕಿ ಹಚ್ಚಿದ್ದೀರಿ.

(ಗೊಂದಲ)

SRI M. MALLIKARJUN KHARGE.—Who do you always take the name of Punjab, Uttar Pradesh, Bihar ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಾವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಮೊಯಿಲಿಯುವರು ಟೇಪ್ ಹಗರಣದ ಬಗ್ಗೆ ಬಹಳ ಮಾತನಾಡುತ್ತಿದ್ದಾರೆ. ಮಾಜಿ ರಾಷ್ಟ್ರಪತಿಯವರು ತಮ್ಮ ಟೆಲಿಫೋನ್ ಟ್ಯಾಪ್ ಆಯಿತೆಂದು ಹೇಳಿದಾಗ ಏಕೆ ಕೇಳಲಿಲ್ಲ ಸುಪ್ರೀಂ ಕೋರ್ಟ್ ಚೀಫ್ ಜಸ್ಟೀಸ್‌ರವರು ಕೂಡ ಕೇಳಿದರು ಆಗ ತಾವು ಎಲ್ಲಿ ಹೋಗಿದ್ದೀರಿ ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಡ್ರೀಂ ಲ್ಯಾಂಡ್‌ನಲ್ಲಿದ್ದೀರಿ ನಿರ್ದಿಷ್ಟವಾದ ದಾಖಲೆ ನಮ್ಮ ಕಣ್ಣ ಮುಂದಿದೆ, ಟೆಲಿಫೋನ್ ಟ್ಯಾಪ್ ಬಗ್ಗೆ ಮಾನ್ಯ ದೇವೇಗೌಡರವರ ಹೇಳಿಕೆ ನೋಡಿದರೆ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಟೇಪಿನ ಘಟಸರ್ಪ ನಿಮ್ಮನ್ನು ಅಂದರೆ ಜನತಾ ಪಕ್ಷ ಹಾಗೂ ಜನತಾ ಸರ್ಕಾರವನ್ನು ಸುತ್ತುಕೊಂಡಿದೆ. ನಿಮ್ಮನ್ನು ಅದು ಸುಡುತ್ತಿದೆ. The mirror is before you.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಘಟಸರ್ಪ ಇವರನ್ನು ಸುತ್ತು ಹಾಕಿಕೊಂಡಿತ್ತು ಈಗ ಇವರ ಕುತ್ತಿಗೆಗೆ ಟೆಲಿಫೋನ್ ವೈರ್ ಸಿಕ್ಕಿ ಹಾಕಿಕೊಂಡಿದೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಚುನಾವಣೆಗೆ ಇನ್ನು ಒಂದು ವರ್ಷ ಇದೆ. ಆಗ ಗೊತ್ತಾಗುತ್ತದೆ. Have some patience ?

SRI B. A, UMARABBA.—You announce the elections now itself.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಪಾರ್ಲಿಮೆಂಟ್‌ಅನ್ನು dissolve ಮಾಡುವುದಕ್ಕೆ ರಾಜೀವ್ ಗಾಂಧಿಯವರಿಗೆ ಹೇಳಿ.

(ಗೊಂದಲ)

ಅಧ್ಯಕ್ಷರು.—ಉಮರಬ್ಬನವರೇ ಏನು ಇದು ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ,—ಈಗ ಏನಾಗಿವೆ ಎಂದರೆ......

(ಗೊಂದಲ)

ಶ್ರೀ ಬಿ. ಆರ್. ನೀಲಕಂಠಪ್ಪ.—ಗೊತ್ತಿದೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನಾನು ನಿಮಗೂ ಹೇಳುತ್ತೇನೆ, ಅವರಿಗೂ ಹೇಳುತ್ತೇನೆ, ದಯಮಾಡಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ಮಾನ್ಯ ಮೊಯ್ಲಿಯವರು ಹೇಳಿ ದಹಾಗೆ ಟೇಪಿನ ಹಗರಣದಲ್ಲಿ ನಮ್ಮ ಪಕ್ಷ ಸಂಟ್ಟುಹೋಗಿ ಈಗ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಹೆಗಡೆಯವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಆದರೆ ಇದನ್ನು ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡಿದಾಗ ಪ್ರೊಫೆಸರ್ ಮಧು ದಂಡವತೆ ಮತ್ತು ಮಿಕ್ಕವರು ಅಂದರೆ ವಿರೋಧ ಪಕ್ಷದವರು ಇದನ್ನು ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳಿದಾಗ ಪಾರ್ಲಿಮೆಂಟ್‌ನಲ್ಲಿ ನಿಮ್ಮ ಪ್ರಧಾನಮಂತ್ರಿಗಳು ಇದನ್ನು ರೆಫ್ಯೂಸ್ ಮಾಡಿ ಕೇಂದ್ರ ಸರ್ಕಾರವನ್ನು ಸಂಡುವುದಕ್ಕೆ ಅವರೇ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇದನ್ನು ಏತಕ್ಕೆ ರೆಫ್ಯೂಸ್ ಮಾಡಿದ್ದಾರೆ ? ಇಲ್ಲಿ ನೀವೆಲ್ಲಾ ಕೇಂದ್ರ ಸರ್ಕಾರ ಇದು ಯಾವುದಕ್ಕೂ ಇನ್‌ವಾಲ್ವ್ ಆಗಿಲ್ಲ ಎಂದು ಹೇಳುತ್ತೀರಿ. ಹಾಗಿದ್ದರೆ ಇದರ ಬಗ್ಗೆ ಜುಡಿಸಿಯಲ್ ಎನ್‌ಕ್ವೈರಿಗೆ ಕೇಂದ್ರದವರು ಒಪ್ಪಿಕೊಳ್ಳಬಹುದಾಗಿತ್ತು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಿಮ್ಮೇಗೌಡರೇ, ಒಂದು ವಿಷಯವನ್ನು ತಮ್ಮ ಗಮನಕ್ಕೆ ಮಾನ್ಯ ಅಧ್ಯಕ್ಷರ ಮೂಲಕ ತರುತ್ತೇನೆ. ಈ ವಿಷಯದ ಬಗ್ಗೆ ಜುಡಿಶಿಯಲ್ ಎನ್‌ಕ್ವೈರಿಗೆ ಅವರು ಏತಕ್ಕೆ ಒಪ್ಪಿಲ್ಲ ಎಂದು ಹೇಳಿದರೆ ಇದರ ಬಗ್ಗೆ ತಪ್ಪು ಮಾಡಿರತಕ್ಕಂಥವರು ರಾಮಕೃಷ್ಣ ಹೆಗಡೆಯವರು, ಈಗಾಗಲೇ ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆ, ಅದೊಂದೇ ದಾರಿ ಇದ್ದದ್ದು. ಇದಕ್ಕೇ ಕೇಂದ್ರ ಸರ್ಕಾರ ಜುಡಿಸಿಯಲ್ ಎನ್‌ಕ್ವೈರಿಗೆ ಒಪ್ಪಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಡಾ. ತಿಮ್ಮೇಗೌಡರವರು ಬಹಳ ರೆಲೆವೆಂಟ್ ಪಾಯಿಂಟನ್ನು ಹೇಳಿದ್ದಾರೆ. ಅವರ ಗುರುಗಳಾದಂಥ ದೇವೇಗೌಡರ ಸ್ಟೇಟ್‌ಮೆಂಟನ್ನು ಹೇಳಿಬಿಡುತ್ತೇನೆ.

> "Dissident leader H. D. Deve Gowda said that those who were responsible for tapping his telephone would have to pay the price".

It is published on 10-8-88.

> "Speaking to reporters Mr. Gowda questioned the need for a judicial probe into the phone tapping incident".

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಇನ್ನು ಕಷ್ಟವಾಗುತ್ತದೆ ಎಂದು ಹೇಳಿ ನಮ್ಮ ಮೇಲೆ ನೀವು ಬೀಳುತ್ತಿದ್ದೀರಿ ?

(ಗೊಂದಲ)

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇದನ್ನು ದೇವೇಗೌಡರು ಹೇಳಿದ್ದಾರೆ ಎಂದು ಹೇಳಿದಿರಿ.

ಮಧು ದಂಡವತೆಯವರು ಜುಡಿಸಿಯಲ್ ಎನ್‌ಕ್ವೈರಿಗೆ ಹೇಳಿರತಕ್ಕಂಥದ್ದು ಕರ್ನಾಟಕದಲ್ಲಿರತಕ್ಕಂಥದ್ದಕ್ಕೆ ಒಂದಕ್ಕೇ ಅಲ್ಲ. ಈ ದೇಶದಲ್ಲಿರುವುದಕ್ಕೆಲ್ಲಾ ಅವರು ಹೇಳಿದ್ದು.

(ಗೊಂದಲ)

SRI M. VEERAPPA MOILY.—The Central Government has no authority to make judicial enquiry into this. It is the subject before the State. It is the absolute prerogative of the State to make judicial enquiry for the phone tapping. If the Central Government amends the Act and make some provision then I can agree. What authority the Central Government has? I question you about that It is absolutely the State subject. I think, this will be the first judicial enquiry by Mr. S. R. Bommai. They are asking. You institute it. Your Government was very liberal when I demanded the Judicial enquiry. They were very liberal on instituting the judicial enquiry on 'Tape Episode'. If they have got courage, let them institute the judicial enquiry into this. As per the Indian Penal Code Section 166 for violating the oath of secrecy and the provision cited by me earlier. They have got to be prosecuted. There is a clear case forprosecution. Even according to the provision of the Official Secrets Act, for violating those provisions, they have got to be prosecuted. He has given statement that owning the moral responsiblity for this incident, he has resigned. His statement still stands. It is a confession or the omission or the commission committed by his Government and he quits. ಬಹುಶಃ ನೈತಿಕ ಹೊಣೆ ನೀವು ಹೊರಬೇಕಾದ ಅವಶ್ಯಕತೆ ಇರಲಿಲ್ಲ. ನೀವು ತಪ್ಪು ಮಾಡಿಲ್ಲ ಎಂದು ಹೇಳಿದರೆ ಆರ್ಟಿಕ್ ಬಾಟ್ಲಿಂಗ್‌ನಲ್ಲಿ ಹೆಗಡೆಯವರು ರಾಜೀನಾಮೆ ಕೊಟ್ಟಾಗ ಅವರ ಮೆಟ್ಟು ಮತ್ತೊಂದು ಇನ್ನೊಂದನ್ನು ಕೆಲವರು ಜೇಬಿಗೆ ಹಾಕಿಕೊಂಡರಲ್ಲ, ಅದರ ಪ್ರಕಾರ ನೀವು ಮಾಡಬಹುದಿತ್ತಲ್ಲ. They very fact that the Janatha High Command and the very fact that none of the legislators have resisted against this resignation of Sri Ramakishna Hegde goes to show that it is true. He has been held directly responsible for this. Accepting the moral responsibility for this, Sri Ramakrishna Hegde resigned from the office. In the very first Cabinet meeting, Mr. Bommai should have either constituted a Judicial Commission or ordered the prosecution of officers or Mr. Ramakrishna Hegde, if they have got any belief in value-based politics. As a Chief Minister holding the highest office of the State, It was your bounden duty to do that, You have failed in that. I have to charge you. As a Chief Minister you are trying to shield the officers concerned and Mr. Ramakrishna Hegde, who was the then Chief Minister. You are culprit. You have been shielding the culprits. This is the major and substantial issue on which Mr. Ramakrishna Hegde has gone out of office. What have you done? You have not taken any steps. It shows that you want to perpetuate the same tradition, the same heritage and the same immoral act and again continue to perpetuate to tarnish the image of Karnataka. It is the opinion of the people. I am expressing their opinion.

ಶ್ರೀಮಂತಿ ಕೆ. ಎಸ್ ನಾಗರತ್ನಮ್ಮ.—ನಾವೆಲ್ಲರೂ ಜನತೆಯ ಅಭಿಪ್ರಾಯ ಹೇಳುವಾಗ ನಾವು ತಪ್ಪು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಹೌದೌದು, ಸಾಕು, ಸಾಕು ತಾವು ಸುಮ್ಮನೆ ಕುಳಿತು ಕೊಳ್ಳಿ.

ಶ್ರೀ ಡಿ. ಟಿ. ಜಯಕುಮಾರ್.—ಇದು ತಮ್ಮ ವೈಯುಕ್ತಿಕವಾದ ಅಭಿಪ್ರಾಯ.

SRI M. VEERAPPA MOILY.—Mr. Ramakrishna Hegde and his Party They talk much about the sanctity of the Press. There has been an Editorial entitled "Karnatakas Watergate" in the Hindustan Times which reads thus.

> "There was no choice for Mr. Ramakrishna Hegde but to quit"

No moral ground. No ethical ground. He had no other option but to quit.

> "He has got entangled in the tapes his Government used to spy on his political friends and foes. This has clearly tarnished the image of the man who has been pleading for a value-based and principled politics."

SRI S. R. BOMMAI.—He cannot read it.

SRI M. VEERAPPA MOILY.—Why not? You publish the editorials and distribute it to the public. ಈ ಹಿಂದೆ ಸಹ ನೀವು ಇಂತಹ ಕೆಲಸ ಮಾಡಿಲ್ಲವೇ? ಅದೇರೀತಿ ಇದನ್ನು ಸಹ ಪ್ರಕಟಿಸಿ ಇಡೀ ಲೋಕಕ್ಕೆ ಹಂಚಿಕೆ ಮಾಡಿ.

SRI S. R. BOMMAI.—You cannot read the newspapers here. You can speak.

SRI. M. VEERAPPA MOILY.—Why are you afraid?

SRI S. R. BOMMAI.—I am not afraid. He cannot read the newspaper.

SRI M. VEERAPPA MOILY.—Here is the truth.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ಪತ್ರಿಕೆಗಳಲ್ಲಿ ಆ ರೀತಿಯೂ ಬರೆಯುತ್ತಾರೆ, ಮತ್ತೆ ಕೆಲವು ಪತ್ರಿಕೆಗಳಲ್ಲಿ ಈ ರೀತಿಯೂ ಬರೆಯುತ್ತಾರೆ. ಅದಕ್ಕೇನುಮಾಡುವುದು?

ಶ್ರೀ ಎಂ. ವೀರಪ್ಪಮೊಯ್ಲಿ.—ಹಾಗಿದ್ದರೆ ಹಿಂದೂಸ್ಥಾನ್ ಟೈಮ್ಸ್‌ನವರು ನಿಮಗೆ ಅನುಕೂಲ ವಾಗಿಲ್ಲವೇ?

(ಗೊಂದಲ)

SRI R. V. DESHPANDE.—The Pakistan Times wrote editorial saying that After Lal Bahadur Shastri, and Sri Ramakrishna Hegde are the only two persons who set a precedent in India. Why don't you tell that ?

SRI M. VEERAPPA MOILY.—This certificate to Mr. Ramakrishna Hegde should come from the ** of this nation, namely, Pakistan. You have that certificate.

(INTERRUPTION)

SRI S. R. BOMMAI.—Mr. Moily said that the Pakistan is the "worst enemy" of India. It is not correct to say like that. Let it not go on record. It is a neighbouring nation. We want peace with that country.

SRI M. VEERAPPA MOILY.—They waged wars against this country and lakhs and lakhs of people lost their lives. Is Pakistan not our enemy ?

SRI S. R. BOMMAI.—It should not go on record. ತಾವು ಆ ರೀತಿ ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಪಾಕಿಸ್ತಾನ ನಮ್ಮ ಶತ್ರುವಾಗಿದ್ದರೂ ಸಹ ಅವರ ಜೊತೆಯಲ್ಲಿ ಸ್ನೇಹ ಬೆಳೆಸಬಾರದೆಂದು ಅಲ್ಲ. ನಮ್ಮ ಅಕ್ಕಪಕ್ಕದ ರಾಷ್ಟ್ರಗಳ ಜೊತೆ ನಮ್ಮ ಸ್ನೇಹ ವೃದ್ಧಿಯಾಗಬೇಕೆಂಬ ಆಸೆಯಿದ್ದರೂ ಸಹ ಇಂದು ಪಂಜಾಬಿನಲ್ಲಿ ನಡೆಯುತ್ತಿರುವ ಘಟನೆಗಳ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳು ಪತ್ರಿಕೆಗಳಲ್ಲಿ ಸಹ ಪ್ರಕಟವಾಗಿವೆ ಮತ್ತು ಈ ವಿಚಾರ ಪಾರ್ಲಿಮೆಂಟ್‌ನಲ್ಲಿ ಸಹ ಪ್ರಸ್ತಾಪವಾಗಿದೆ.

6-00 P. M.

Sometimes some people have made speeches with reference to Pakistan, mainly regarding helping the terrorists in Punjab. Some people have said without naming Pakistan, that a neighbouring country is responsible for all these things that are going on in certain parts of our country. ಇದನ್ನು ನೋಡಿದಾಗ ನನಗೆ ಏನು ಅನ್ನಿಸುತ್ತದೆ ಅಂದರೆ ಪಾಕಿಸ್ತಾನ ನಿಜವಾಗಲೂ ನಮಗೆ ಎಗೆನಸ್ಟೇ ಹೊರತು, ಫ್ರೆಂಡ್ಲಿ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಹೇಳುವುದು ತಾವು ಸರಿ ಎಂದರೆ ರೆಕಾರ್ಡ್‌ನಲ್ಲಿರಲಿ ಅದನ್ನು ಅಧ್ಯಕ್ಷರಿಗೇ ಬಿಡುತ್ತೇನೆ. ನೇಬರಿಂಗ್ ಸ್ಟೇಟ್‌ಗೆ ವರ್ಸ್ಟ್ ಎನಿಮಿ ಎಂದು ಹೇಳುವುದು ಸರಿಯಲ್ಲ, ಅದು ರಿಕಾರ್ಡ್‌ನಲ್ಲಿರುವುದು ನನ್ನ ಅಭಿಪ್ರಾಯದಲ್ಲಿ ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಅದು ನೆರೆ ರಾಷ್ಟ್ರ. ಪಾಕಿಸ್ತಾನವನ್ನು ವರ್ಸ್ಟ್ ಎನಿಮಿ ಆಫ್ ಇಂಡಿಯಾ ಎಂದು ಹೇಳುವುದು ಸರಿಯಲ್ಲ. In the best interest of the relationship ಅದು ಸರಿಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರು ಹೇಳಿರುವುದು ಸರಿಯಿದೆ. ಅದು ರಿಕಾರ್ಡ್‌ನಲ್ಲೇ ಇರಬೇಕು.

ಅಧ್ಯಕ್ಷರು.—ಅದು ಸರಿಯಿಲ್ಲ, I have expunged it. ತಾವು ಮುಕ್ತಾಯ ಮಾಡಿ.

---

* Expunged as ordered by the chair.

SRI M. S. KRISHNAN.—Hon'ble Member Sri Veerappa Moily has got every right to have his opinion. I don't think it is the opinion even of the Prime Minister Rajiv Gandhi Speaking recently about the relationship with Pakistan, the Prime Minister says that the Relationship must be developed, we are going there and now times are chinging and all that. When this is the position, if the Hon'ble Member says like this .....

SRI M. VEERAPPA MOILY.—We also wish that the relationship should be cordial with Pakistan, because it is our neighbouring country. But even an ordinary citizen of history will say that Pakistan has not been cordial to us till today. We wish that the relationship with Pakistan becomes cordial so that all of us can live in peace.

SRI M. S. KRISHNAN.—It is not correct to say whether best enemy or worst enemy. It is not even the position of your Party. Why do you want to being that ?

SRI M. VEERAPPA MOILY.—Then I will be trading on travesty of truth. Alright, We are very best friends ಎಂದು ಹೇಳಲಿಕ್ಕೆ ಆಗುವುದಿಲ್ಲ. ಅಥವಾ ಫ್ರೆಂಡ್ಲಿ ಕಂಟ್ರಿಯಿಂದ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಪ್ರಶಂಸೆ ಬಂದಿದೆ ಎಂದು ಹೇಳಲೇ ಅಥವಾ ರಾಮಕೃಷ್ಣ ಹೆಗಡೆಯವರಿಗೆ ಒಳ್ಳೆಯ ಸರ್ಟಿಫಿಕೇಟ್ ಬಂದಿದೆ ಎಂದು ಹೇಳಲೇ, ಸನ್ಮಾನ್ಯ ಅಧ್ಯಕ್ಷರೆ, ಒಂದು ಅತ್ಯಂತ ಕ್ಷುಲ್ಲಕವಾದಂಥ ಪ್ರಕರಣ ಇವತ್ತು ಕರ್ನಾಟಕ ರಾಜ್ಯ ಸರ್ಕಾರದಿಂದ ಆಗಿದೆ. ಈಗ ಸನ್ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ, ಸರ್ಕಾರ ಇದೆ. ಆದ್ದರಿಂದ ಇದರ ಬಗ್ಗೆ ಸರಿಯಾದಂಥ ಪ್ರಾಸಿಕ್ಯೂಷನ್ ಮಾಡಬೇಕಾಗುತ್ತದೆ. ಸೀನಿಯರ್ ಮೆಂಬರ್ ಡಾಕ್ಟರ್ ತಿಮ್ಮೇಗೌಡರು ಹೇಳಿದ ಪ್ರಕಾರ ಜುಡಿಷಿಯಲ್ ಕಮಿಷನ್ ನೀವೇ ನೇಮಕ ಮಾಡಬೇಕು It is left to you. ನಮ್ಮ ಡಿಮ್ಯಾಂಡ್ ಏನೆಂದರೆ, they have got to be prosecuted. There is clear evidence. ಅಧ್ಯಕ್ಷರೆ, ನಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೀರಿ. ಆದುದರಿಂದ ತಮಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಕೆ. ಹೆಚ್. ಶ್ರೀನಿವಾಸ್‌ರವರೇ, ತಾವು ಮಾತನಾಡಿ, ತಾವೇ ಲಾಸ್ಟ್ ಸ್ಪೀಕರ್

ಶ್ರೀ ಬಿ. ಬಸವಲಿಂಗಪ್ಪ.—ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಇನ್ನೊಂದು ಸಲ ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಲೆಜಿಸ್ಲೇಚರ್ ಇತಿಹಾಸದಲ್ಲಿ ಇಷ್ಟು ಅವಕಾಶ ಹಿಂದೆ ಯಾರು ಕೊಟ್ಟಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಲಾಸ್ಟ್ ಸ್ಪೀಕರ್ ಎಂದು ಹೇಳಿದಿರಿ. ಅವರು ಮಾತನಾಡಿದ ಮೇಲೆ ಉತ್ತರ ಕೊಡಲಿಕ್ಕೆ ನನಗೆ ಅವಕಾಶ ಕೊಡಬೇಕು.

†ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಇಡೀ ರಾಷ್ಟ್ರದ ಗಮನವನ್ನು ಸೆಳೆದು, ನಮ್ಮ ರಾಜ್ಯದ ಹಿಂದಿನ ಮುಖ್ಯ ಮಂತ್ರಿಗಳ ನಿರ್ಗಮನಕ್ಕೆ ಕಾರಣವಾದಂಥ ಈ ಒಂದು ಗಂಭೀರವಾದ ವಿಷಯದ ಬಗ್ಗೆ ಇನ್ನೂ ವಿವರವಾದ ಚರ್ಚೆಯನ್ನು ಬಯಸಿ ನಾವು ಮನವಿಯನ್ನು ಮಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ ಅದಕ್ಕೆ ನಾನು ತಮಗೆ ತುಂಬ ಕೃತಜ್ಞನಾಗಿದ್ದೇನೆ. ಇವತ್ತು ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿಲ್ಲ. ಅಷ್ಟೇ ಅಲ್ಲ, ಅವರು ಈ ಸದನದಲ್ಲಿ ಕೂಡ ಹಾಜರಾಗಿಲ್ಲ. ಅವರು ನಮ್ಮ ಎದುರಿಗೆ ಇದ್ದಿದ್ದರೆ ನನಗೆ ಇನ್ನೂ ಕೆಲವು ವಿಷಯಗಳನ್ನು ಹೇಳಬೇಕೆಂದು ಇಚ್ಛೆಯಿತ್ತು. ಆದರೆ ಅವೆಲ್ಲವನ್ನು ನಾನು ಈಗ

ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಏಕೆಂದರೆ ನಾಳೆ ದಿನ ಅದು ಅವರ ಬೆನ್ನ ಹಿಂದೆ ಹೇಳಿದಂತಹ ಮಾತೆಂದು ನಾನು ಅಪಾದನೆಗೆ ಗುರಿಯಾಗುತ್ತೇನೆ. ಆದರೆ ಸಾಂಧರ್ಭಿಕವಾಗಿ ಕೆಲವು ವಿಚಾರಗಳು ಈ ವಿಷಯದ ಜೊತೆಯಲ್ಲಿ ಹಾಸುಹೊಕ್ಕಾಗಿರುವುದರಿಂದ ಮಾತನಾಡಲೇ ಬೇಕಾಗುತ್ತದೆ. ನಾನು ಕೂಡ ಅವರು ಸದನಕ್ಕೆ ಹಾಜರಾಗುತ್ತಾರೆಂದು ತಿಳಿದಿದ್ದೆ. ಇವತ್ತು ಹಾಜರಾಗುತ್ತಾರೆಂದು ತಿಳಿಸಲಾಗಿತ್ತು. ಅದಕ್ಕಾಗಿ ಇವತ್ತಿಗೆ ಇಟ್ಟುಕೊಂಡಿದ್ದರು. ಈಗ ಸ್ವಲ್ಪ ಹೊತ್ತಿನಲ್ಲಿ ಅವರು ಇಲ್ಲಿಗೆ ಬಂದಿದ್ದರು ಎಂದು ಕೇಳಿದೆ. ಅವರು ನಮ್ಮ ಭಾಷಣಗಳನ್ನು ತಮ್ಮ ಛೇಂಬರ್‌ನಲ್ಲಿ ಅಥವಾ ಮುಖ್ಯಮಂತ್ರಿಗಳ ಛೇಂಬರ್‌ನಲ್ಲಿ ಕೇಳುತ್ತಿದ್ದಾರೆಂದು ಕೇಳಿದೆ. ಹಾಗಿದ್ದರೆ ಇದು ಇನ್ನೊಂದು ಟ್ಯಾಪಿಂಗ್ ಆಗುತ್ತದೆ.

ಶ್ರೀ ಯು. ಭೂಪತಿ.—ಈಗ ಅವರಿಗೆ ವಿಧಾನ ಸೌಧದಲ್ಲಿ ಯಾವ ಛೇಂಬರ್ ಇದೆ ?

ಶ್ರೀ ಕೆ, ಹೆಚ್ ಶ್ರೀನಿವಾಸ್.—ಅವರಿಗೆ ಛೇಂಬರ್ ಇಲ್ಲದೇ ಇರಬಹುದು. ಆದರೆ ಅವರಿಗೆ ಯಾವ ಛೇಂಬರಿಗೆ ಬೇಕಾದರೂ ಹೋಗುವ ಸ್ವಾತಂತ್ರ್ಯ ಇದೆ. ಅವರು ಇಲ್ಲಿ ಹಾಜರಾಗಲು ಇಷ್ಟವಿಲ್ಲದೆ ಹಾಜರಾಗಿಲ್ಲವೋ ಅಥವಾ ಕಾರ್ಯಭಾರದ ನಿಮಿತ್ತ ಹಾಜರಾಗಿಲ್ಲವೋ ಏನೊ ನನಗೆ ಗೊತ್ತಿಲ್ಲ, ಯಾವುದೇ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಂತಹ ಮುಖ್ಯ ಮಂತ್ರಿಗಳಿಗೆ ವಿಧಾನ ಸಭೆಯಲ್ಲಿ ವಿವರಣೆಯನ್ನು ಕೊಡತಕ್ಕ ಹಕ್ಕಿದೆ. ಅಷ್ಟೆ ಅಲ್ಲದೆ ಇಲ್ಲಿ ನಡೆಯತಕ್ಕ ವಿಷಯವನ್ನು ಪತ್ರಿಕೆಗಳಲ್ಲಿ ಓದಿಕೊಳ್ಳುವುದಕ್ಕಿಂತ ಹೆಚ್ಚಾಗಿ ಯಾರು ಈ ಸಭೆಯಲ್ಲಿ ಐದು ವರ್ಷಗಳಿಂದ ಸಭಾ ನಾಯಕರಾಗಿದ್ದರೋ ಅವರು ನೇರವಾಗಿ ಏನು ಹೇಳುತ್ತಾರೆನ್ನುವುದನ್ನು ಕೇಳತಕ್ಕ ಹಕ್ಕು ಕೂಡ ವಿಧಾನ ಸಭೆಗೆ ಇದೆ. ಆದರೆ ಅವರು ಇವತ್ತು ಅದನ್ನು ನಡೆಸಿಕೊಡಲಿಲ್ಲ. ಪ್ರಶ್ನೆ ಏನೆಂದರೆ, ರಾಮಕೃಷ್ಣ ಹೆಗಡೆಯವರು ಹೇಳಿದ್ದೇನು? ಮಾಡಿದ್ದೇನು? ಇವತ್ತು ಮೌಲ್ಯಗಳ ಪ್ರಶ್ನೆ ಬಂದಾಗ, ನನ್ನ ಮೌಲ್ಯ ಬೇರೆ ಇರಬಹುದು ನಿಮ್ಮ ಮೌಲ್ಯ ಬೇರೆ ಇರಬಹುದು. ದೊಡ್ಡ ದೊಡ್ಡ ವ್ಯಕ್ತಿಗಳೆಲ್ಲಾ ಮೌಲ್ಯಗಳ ಬಗ್ಗೆ ಸಹಮತ ಹೊಂದಿದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಪುರಾಣ ಪುರುಷರನ್ನು ತೆಗೆದುಕೊಂಡರೂ ಸಹ ರಾಮನ ಮೌಲ್ಯವೇ ಬೇರೆ ಇತ್ತು. ಕೃಷ್ಣನ ಮೌಲ್ಯವೇ ಬೇರೆ ಇತು. ಇದು ಏನೂ ತಪ್ಪಲ್ಲ. ಆದರೆ ಅವರು ಹೇಳಿದಂತೆ ನಡೆದುಕೊಂಡರೇ ಅವರು ಯಾವಯಾವ ಮೌಲ್ಯಗಳನ್ನು ಎತ್ತಿಹಿಡಿದರು. ಅದು ಏನಾಯಿತು ಎಂಬುದು ಎಲ್ಲರಿಗೂ ಗೊತ್ತು. ಆಡಳಿತ ಒಂದು ಪರ್ವದಲ್ಲ, ಆರು ತಿಂಗಳದ್ದಲ್ಲ ಐದು ವರ್ಷ ಒಂದು ವರ್ಷವೇ ಕಳೆಯಿತು. ನಾನು ಈ ಪರ್ವದ ತಾತ್ಪರ್ಯ ಏನು ಎಂದು ಕೇಳ ಬಯಸುತ್ತೇನೆ. ಅವರು ಮುಖ್ಯಮಂತ್ರಿಗಳಾದರು, ಐದು ವರ್ಷಗಳ ಅವಧಿ ಮುಗಿಸಿದರು ಒಟ್ಟಿನಲ್ಲಿ ಏನಾಯಿತು ? ನನಗೆ ಔರಂಗಜೇಬನ ಒಂದು ಕತೆ ನೆನಪಾಗುತ್ತದೆ. ಅವರು ಮಹಾಭಾರತವನ್ನು ಪೂರ್ತಿ ಕೇಳಿದ ಮೇಲೆ ಅವನು ಮಹಾಭಾರತದ ಬಗ್ಗೆ ಕನ್‌ಕ್ಲೂಷನ್ ಕೊಟ್ಟು ಮಹಾಭಾರತದ ಬಗ್ಗೆ ಏನಿದೆ ಅಂದರೆ ಏಕ್‌ಬಂಡ್ಡ, ಏಕ್‌ಚೋಕ್ರ ಏಕ್‌ಬದ್ಮಾಷ್ ಎಂದು ಹೇಳಿದನಂತೆ. ಅವನ ತಿಳುವಳಿಕೆಯ ಪ್ರಕಾರ ಏಕ್ ಬುಡ್ಡಾ ಅಂದರ ಭೀಷ್ಮ. ಏಕ್ ಚೋಕ್ರ ಅಂದರೆ ಅಭಿಮನ್ಯು, ಏಕ್ ಬದ್ಮಾಷ್ ಅಂದರೆ ಕೃಷ್ಣ ಎಂದು ಹೇಳಿದಹಾಗೆ ರಾಮಕೃಷ್ಣ ಹೆಗಡೆಯವರ ಪರ್ವ ಈ ದಿವಸ ಏನಾಯಿತೆಂದು ಯೋಚನೆ ಮಾಡಿದರೆ, ಕೊನೆಗೆ ಅದು ಟೇಪ್ ನಿಂದ ಟ್ಯಾಪಿಂಗ್‌ಗೆ ಬಂತು, ಮತ್ತೆ ಏನೂ ಉಳಿಯಲಿಲ್ಲ ಜನಮನದ ಮಧ್ಯೆ ಏನೂ ಉಳಿಯಲಿಲ್ಲ. ಅದೃಷ್ಟ ದುರಾದೃಷ್ಟಗಳು ಇದಕ್ಕೆ ಹೊಂದಿಕೊಂಡಿರುತ್ತದೆ. ಕೆಲವರು ಒಳ್ಳೆ ಕೆಲಸಗಳನ್ನು ಮಾಡಿದರೂ ಕೊನೆಗೆ ಯಾವುದೋ ಒಂದು ತಪ್ಪಿಗೆ ಸಿಕ್ಕಿಕೊಂಡು ಅದೇ ಉಳಿಯುತ್ತದೆ, ಕೆಲವರು ಬಹಳ ತಪ್ಪು ಮಾಡಿದರೂ ಕಡೆ ಕಾಲದಲ್ಲಿ ನಾರಾಯಣ ಎಂದು ಹೇಳಿ ಸತ್ತು ಮೋಕ್ಷ ತೆಗೆದುಕೊಳ್ಳುತ್ತಾರೆ. ಇದಕ್ಕೆ ಇವತ್ತು ಯಾರೂ ಹೆಣೆಯಲ್ಲ ಏನೂ ಉಳಿಯಲಿಲ್ಲ. ಇವತ್ತು ಇವರು ಟೇಪಿನಿಂದ ಪ್ರಾರಂಭ ಮಾಡಿದರೂ ಟ್ಯಾಪಿಂಗ್‌ನಲ್ಲಿ ಮನೆಗೆ ಹೋದರು. ನಾನು ದೆಹಲಿಯಲ್ಲಿನ ಪತ್ರಿಕೆಯನ್ನು ನೋಡಿದೆ. ಅದರಲ್ಲೂ ಹಾಗೆ ಇತ್ತು, "A man who lived on tapes has to die because of tapping" This is the caption which appeared in the front pages ಇವತ್ತು ಮೀಡಿಯದವರಿಗೆ ರಾಮಕೃಷ್ಣ ಹೆಗಡೆಯವರ ಬಗ್ಗೆ ಸಾಕಷ್ಟು ಮಮತೆಯಿದೆ. ಹೆಗಡೆಯವರು ಬಹುಪಾಲು ಮೀಡಿಯದವರಿಗೆ ಮಮತೆಯ ಕೂಸು. ಆದರೂ ಕೂಡ They could not help in this matter. ನಾನು ನೋಡಿದ ಹಾಗೆ ಯಾರು ಕೂಡ ಅವರ ಪರವಾಗಿ ಬರೆದಿಲ್ಲ. ಕಾಂಗ್ರೆಸ್ಸಿನವರು ಬರೆದಿರಬಹುದು. ಆದರೆ ರಾಮಕೃಷ್ಣ ಹೆಗಡೆಯವರನ್ನು ಯಾರೂ ಡಿಫೆಂಡ್ ಮಾಡುವುದಕ್ಕೆ ಸಾಧ್ಯವಾಗದ ಹಾಗೆ ಒಂದು ಪರಿಸ್ಥಿತಿ ನಿರ್ಮಾಣವಾಯಿತು. ಇದರಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ತಾವು ಭಾರತದ ದೃಷ್ಟಿಯಿಂದ ಹೇಳಿದಿರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಭಾರತದ ದೃಷ್ಟಿಯಿಂದ ಹೇಳುವ ಕಾಲ ಬಂದಿಲ್ಲ. ನಿಮ್ಮ ಮಹಾಭಾರತ ಮುಗಿಯಲಿ. ನಿಮ್ಮ ಮಹಾಭಾರತ ಈಗ ಪ್ರಾರಂಭವಾಗುತ್ತಿದೆಯಲ್ಲ, ಅದು ಮುಗಿದ ಮೇಲೆ ಹೇಳೋಣ. ೧೧ನೇ ತಾರೀಖು ಮುಗಿದ ಮೇಲೆ ಹೇಳೋಣ. ಈಗ ನೀವೆಲ್ಲಾ ಬತ್ತಳಿಕೆ, ಬಿರುಸು, ಬಾಣ, ಅವನ ಕತ್ತಿ ಇವನ ಕೈಯಲ್ಲಿ, ಇವನ ಗದೆ ಅವನ ಕೈಯಲ್ಲಿ ಈ ತರಹ ಇಟ್ಟುಕೊಂಡು ಟಯ್, ಟುಯ್ ಎಂದು ಹೊರಟ ಮೇಲೆ ತಾನೆ ಮಹಾಭಾರತ. ಇದು ಆದಮೇಲೆ ಅದರ ಬಗ್ಗೆ ಹೇಳೋಣ. ಈಗ ೧೧ನೇ ತಾರೀಖು ಸಭೆ ಇಟ್ಟುಕೊಂಡಿದ್ದೀರಿ, ಇನ್ನು ಯಾರು ಯಾರಿಗೆ ೧೧೧ ಆಗುತ್ತದೋ ಗೊತ್ತಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ನಮ್ಮದು ೧೧ ಏತಕ್ಕೆ ಅಂದರೆ ಆ ಇನ್ನೊಂದನ್ನು ನಿಮಗೆ ಸೇರಿಸಲಿಕ್ಕೆ, ಅದರಲ್ಲಿ ಬೇರೆ ಯಾವ ಉದ್ದೇಶ ಇಲ್ಲ, ಅದು ಒಂದೇ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ಇನ್ನೊಂದು ನಮ್ಮಿಂದ ಸೇರಿಸಿಕೊಡುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮಗೆ ಯಾವಾಗಲೂ ಇರುವುದು ಇನ್ನೊಬ್ಬರಿಗೆ ೧೧೧ ಮಾಡುವುದು. ನಿಮ್ಮ ಸ್ವಂತಕ್ಕೆ ಯಾವುದೂ ಇಲ್ಲ. ರಾಜ್ಯದ ನಿಮ್ಮೆಲ್ಲರ ಸ್ಟೇಟ್‌ಮೆಂಟ್ ನೋಡಿ, ರಾಜೀವ್‌ಗಾಂಧಿ ಸೋಲಿಸಬೇಕು, ಕಾಂಗ್ರೆಸ್ ಸೋಲಿಸಬೇಕು ಎಂದು ಹೇಳುವುದು ಇದೆಯೋ ಹೊರತು ಮುಂದೆ ಏನು ಮಾಡಬೇಕು ಎಂದು ಯಾರು ಹೇಳಿಲ್ಲ.

SRI J. H. PATEL.—We will cross the bridge when we reach it.

SRI K. H. SRINIVAS.—But only the thing is you have never reached the bridge. I hope this time you will reach it. ಸನ್ಮಾನ್ಯ ಅಧ್ಯಕ್ಷರೆ, ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತೇನೆ. ಏನೆಂದರೆ, ಇದು ಏನು ಟೆಲಿಗ್ರಾಫ್ ಆ್ಯಕ್ಟ್‌ನಲ್ಲಿ ಇದೆ, ಇದು ಇದ್ದ ಮಾತ್ರಕ್ಕೆ ಟೆಲಿಗ್ರಾಫ್ ಆಫೀಸರ್ ಇದನ್ನು ಪ್ರಶ್ನೆ ಮಾಡಬಾರದಾಗಿತ್ತಾ ಅಂತ ಒಂದು ಪ್ರಶ್ನೆಯನ್ನು ಮಾನ್ಯ ತಿಮ್ಮೇಗೌಡರು, ಮಾನ್ಯ ಯಡಿಯೂರಪ್ಪನವರು ಎತ್ತಿದರು. ಈ ಸ್ಯಾಟಿಸ್‌ಫ್ಯಾಕ್ಷನ್ ಎಲ್ಲಾ ಐದರ್ ಫಾರ್ ದಿ ಸ್ಟೇಟ್ ಗೌರ್ನಮೆಂಟ್ ಆರ್ ಸೆಂಟ್ರಲ್ ಗೌರ್ನಮೆಂಟ್. ಅವರಿಗೆ ಸ್ಯಾಟಿಸ್‌ಫೈ ಆದಮೇಲೆ ಅವರ ಫೈಲ್‌ನಲ್ಲಿ ರೀಸನ್ಸ್ ರೆಕಾರ್ಡ್ ಮಾಡಿಕೊಂಡು what they are supposed to issue is a direction in writing. They have to direct the telephone authorities. So he has to obey the directions. He cannot sit in judgement overthat. ಇನ್ನು ಅಮೆಂಡ್‌ಮೆಂಟ್ ವಿಷಯದಲ್ಲಿ ಹೇಳಿದಿರಿ, ನಾವು ಒಂದು ಲೆವೆಲ್‌ನಲ್ಲಿ ಮಾತನಾಡುತ್ತೇವೆ. ಪೊಲಿಟಿಷಿಯನ್ಸ್‌ದು ಯಾರದು ಟ್ಯಾಪ್ ಮಾಡಬಾರದು ಎಂದು, ಅವರಿಗೆ ಏನು ಕೋಡು ಇದೆಯೋ, ಪೊಲಿಟಿಷಿಯನ್ಸ್‌ದು ಯಾರದು ಟ್ಯಾಪ್ ಮಾಡಬಾರದು ಎನ್ನುವ ವಿಚಾರಕ್ಕೆ ನನ್ನ ಸಮ್ಮತಿ ಇಲ್ಲ. ಯಾವುದಕ್ಕೂ ಉದ್ದೇಶ ಮುಖ್ಯ. ಪೊಲಿಟಿಷಿಯನ್ಸ್ ಇರಲಿ, ಇನ್ನೊಬ್ಬ ಯಾರೇ ಇರಲಿ, ಪ್ರಜೆ ಯಾರೇ ಇರಲಿ, ಸ್ಮಗಲರ್ ಇರಲಿ, ಯಾವುದೇ ಚಟುವಟಿಕೆಗೆ ಸಂಬಂಧಪಟ್ಟಿದ್ದು ಟ್ಯಾಪಿಂಗ್...

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಾಗಾದರೆ ಒಂದು ನಿಮಿಷ, ಈ ದೇಶದ ಪ್ರಧಾನಿ ಪೊಲಿಟಿಷಿಯನ್ಸ್‌ದು ಟ್ಯಾಪ್ ಮಾಡಬಾರದು ಎನ್ನುವ ದೃಷ್ಟಿಯಿಂದ ಹೇಳಿರುವ ಮಾತನ್ನು ಹೇಳುತ್ತೇನೆ. "Charging that the Karnataka Government had violated the Indian Telegraph Act, both Mr. Gandhi & Mr. Buta Singh said that the Centre would amend the Act to ensure that the telephones of politicians were not bugged" ಪೊಲಿಟಿಷಿಯನ್ಸ್‌ದು ಯಾವ ಸಂದರ್ಭದಲ್ಲಿ ಬೇಕಾದರೂ ಮಾಡಬಹುದು ಎನ್ನುವುದಾದರೆ, ನಮ್ಮ ಪ್ರೈಮಿನಿಸ್ಟರ್ ರಾಷ್ಟ್ರಮಟ್ಟದಲ್ಲಿ ಏನು ಚಿಂತನೆ ನಡೆಸುತ್ತಿದ್ದಾರೆ, ಇದರ ಅನುಭವದ ಮೇಲೆ ಪೊಲಿಟಿಷಿಯನ್ಸ್ ಸೇರಿಸಿರುವುದು ತಪ್ಪು, ಅದು ಆದಮೇಲೆ ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳುತ್ತಿರುವಂತಾದ್ದು, ಇದೆಲ್ಲಾ ನೋಡಿದರೆ ಪ್ರೈಮಿನಿಸ್ಟರಿಗೆ ತಲೆ ಇಲ್ಲ ಎಂದು ಹೇಳಲಿಕ್ಕೆ ಬರುತ್ತದೆಯೋ ?

SRI K. H. SRINIVAS.—You are mis-interpreting what I am saying. It is not the question of whose telephone is tapped. ಇಲ್ಲಿರತಕ್ಕಂತಾದ್ದು ಏನು ? ಯಾವ ಸಂದರ್ಭದಲ್ಲಿ ಟೆಲಿಫೋನ್ ಟ್ಯಾಪ್ ಮಾಡಬೇಕೆಂದು ಮಾತ್ರ ಇದರೊಳಗೆ ಇದೆ. ಇಲ್ಲಿ ಕಾನೂನಿನಲ್ಲಿರುವ ವಿಷಯ ಮಾತ್ರ ಮಾತನಾಡುತ್ತಿದ್ದೇನೆ. ಇದರಲ್ಲಿ ಯಾವುದೇ ಕ್ಯಾಟಗರಿ ಪ್ರಸ್ತಾಪ ಇಲ್ಲ. ಬಹುಶಃ ಅಮೆಂಡ್‌ಮೆಂಟ್ ಮಾಡಿದರೂ ಕೂಡ ಕ್ಯಾಟಗರಿ ಮಾಡಿ ಇಂತಹವರೆಲ್ಲಾ ಎಕ್ಸೆಮ್ಪ್ಟ್ ಎಂದು ಹೇಳಲಿಕ್ಕೆ ಬರುವುದಿಲ್ಲ. ಏನು ಮಾಡಬಹುದು, ಇವೊತ್ತು ರಾಷ್ಟ್ರದ ಹಿತದ ನೆಪದಲ್ಲಿ, ರಾಜ್ಯದ ಹಿತದ ನೆಪದಲ್ಲಿ, ಶಾಂತಿಭಂಗದ ಹಿತದ ನೆಪದಲ್ಲಿ ತಮ್ಮ ರಾಜಕಾರಣಕ್ಕೋಸ್ಕರ ರಾಜಕಾರಣಿಗಳ ಫೋನ್ ಟ್ಯಾಪ್ ಮಾಡುವುದು ತಪ್ಪಿಸುವುದು ಹೇಗೆ ? ಅಂತಾದ್ದನ್ನು ತಪ್ಪಿಸುವುದಕ್ಕೋಸ್ಕರ ಅಮೆಂಡ್‌ಮೆಂಟ್ ಮಾಡುವುದು ಇದ್ದರೆ, ವಿ ವಿಲ್ ಕನ್‌ಸಿಡರ್ ಎನ್ನುವ ಮಾತನ್ನು ಹೇಳಿದ್ದಾರೆ ತಾವು ಇಡೀ ಡಿಬೇಟ್ ನೋಡಿದರೆ ಸ್ಪಷ್ಟವಾಗಿ ತಮಗೆ ಗೊತ್ತಾಗುತ್ತದೆ. ಯಾರನ್ನೇ ಕ್ಯಾಟಗರೈಸ್ ಮಾಡಿ ಎಕ್ಸೆಮ್ಪ್ಟ್ ಮಾಡುವಂಥ ಅಮೆಂಡ್‌ಮೆಂಟ್ ತಂದರೂ ಕಾನೂನು ಪ್ರಕಾರ ಅದು ನಿಲ್ಲುವುದಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸೆಂಟ್ರಲ್ ಗೌರ್ನ್‌ಮೆಂಟ್‌ನಿಂದ ಡೈರೆಕ್ಷನ್ ಕೊಟ್ಟರೆ, ಟ್ಯಾಪ್ ಮಾಡಲೇ ಬೇಕಾಗುತ್ತದೆಂದು ಹೇಳಿದಿರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದು ಆಫೀಸರ್‌ಗೆ ಹೋಗುತ್ತದೆ. Central Government or the State Government issues a direction to the concerned officer and not from one Government to another Government. ರಾಜ್ಯಸರ್ಕಾರದ ಕಾಗದ ಸೆಂಟ್ರಲ್ ಗೌರ್ನ್‌ಮೆಂಟ್‌ಗೆ ಹೋಗುವುದಿಲ್ಲ. It goes to the officer in the form of a direction, He cannot sit on subjective judgement as to whether you are tapping the politician wheather you are tapping for a right purpose or wrong purpose. ಆ ರೀತಿ ಹೇಳುವುದಕ್ಕೆ ಅವರಿಗೆ ಯಾವುದೇ ಅಧಿಕಾರವೂ ಇಲ್ಲ.

SRI H.L. THIMME GOWDA.—Has the State Government got the power to direct a Central Government officer ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸೆಂಟ್ರಲ್ ಗೌರ್ನಮೆಂಟ್ ಆ್ಯಕ್ಟ್ ಕೆಳಗೆ ಅಲ್ಲ. ಸೆಂಟ್ರಲ್ ಗೌರ್ನಮೆಂಟ್ ಆಫೀಸರ್ಸ್‌ಗೆ ಡೈರೆಕ್ಷನ್ ಕೊಟ್ಟಿದ್ದಾರೆ. ಆದರೆ ಸೆಂಟ್ರಲ್ ಗೌರ್ನಮೆಂಟ್ ಎಂದರೆ ಏನು ಅರ್ಥ ? ಐ.ಎ.ಎಸ್. ಅಧಿಕಾರಿಗಳು ಸೆಂಟ್ರಲ್ ಗೌರ್ನಮೆಂಟೋ ಅಥವಾ ಸ್ಟೇಟ್ ಗೌರ್ನಮೆಂಟೋ ಅಂದರೆ ಏನು ಅರ್ಥ ? The State Government has been given powers in the Act. Like that the Central Government has also been given powers. ಏನು ಕೊಟ್ಟಿದ್ದಾರೆ ? They have to record the directions in writing and then issue the directions. ಟೆಲಿಗ್ರಾಫ್ ಆಫೀಸರ್ಸ್ ಇದನ್ನು ಇಡುವುದಕ್ಕೂ ಕೊಡುವುದಕ್ಕೂ ಸಾಧ್ಯವಿಲ್ಲ. ನಾಳೆ ನೀವು ಇದನ್ನು ತಿದ್ದುಪಡಿ ಮಾಡುವುದಕ್ಕೆ ಬರುತ್ತದೆಯೆ ? ಇದು ರಾಜಕಾರಣಕ್ಕಾಗಿ ಮಾಡತಕ್ಕದ್ದು. ಸಾಮಾನ್ಯವಾದ ಭಾಷೆಯಲ್ಲಿ ನಾವು ರಾಜಕೀಯ ಎಂದು ಕರೆಯುತ್ತೇವೆ. ಅದರಲ್ಲಿ ಸ್ಪರ್ಧೆ ಪೈಪೋಟಿ ಎಲ್ಲಾ ಇದೆ ನಾನು ಅಧಿಕಾರಕ್ಕೆ ಬರಬೇಕು, ನೀನು ಅಧಿಕಾರಕ್ಕೆ ಬರಬೇಕು, ಬೇರೆಯವನು ಬರದಹಾಗೆ ತಡೆಯಬೇಕು, ನಾನೇ ಶಾಶ್ವತವಾಗಿ ಅಧಿಕಾರದಲ್ಲಿ ಇರಬೇಕು. ನಾನು ಸಾಯುವವರೆಗೂ ಬೇರೆಯವರು ಯಾರೂ ಬರಲೇ ಬಾರದು ಎನ್ನುವಂಥಾದ್ದೆಲ್ಲಾ ಇವೆ. ಈ ಉದ್ದೇಶಗಳಿಗಾಗಿ ಟೆಲಿಫೋನ್ ಕಾನ್‌ವರ್ಸೇಷನ್‌ನ್ನು ಬಳಕೆ ಮಾಡುವುದಕ್ಕೆ ಅವಕಾಶವನ್ನು ಕೊಡಕೂಡದು ಎನ್ನತಕ್ಕಂಥದೇ ಇದರಲ್ಲಿರತಕ್ಕ ತಾತ್ಪರ್ಯ. ಇವತ್ತು ಇಲ್ಲಿ ನೀವು ಮಾಡಿರತಕ್ಕದ್ದು ಯಾವ ವಿಷಯಕ್ಕೋಸ್ಕರವಾಗಿ ? ಯಾವುದೇ ರಾಜ್ಯದ ಹಿತಚಿಂತನೆಗೋಸ್ಕರ, ಶಾಂತಿಭಂಗವನ್ನು ಸರಿಪಡಿಸುವುದಕ್ಕೋಸ್ಕರ, ಲಾ ಅಂಡ್ ಆರ್ಡರ್‌ಗೋಸ್ಕರ, ರಾಷ್ಟ್ರದ ಭದ್ರತೆಗೋಸ್ಕರ ಏನೂ ಅಲ್ಲ. ಹೋಗಲಿ, ರಾಜ್ಯದೊಳಗೆ ನಾನೇ ಮುಖ್ಯಮಂತ್ರಿ ಆಗಬೇಕು, ಇನ್ನೊಬ್ಬರು ಮುಖ್ಯ ಮಂತ್ರಿಯಾಗಬಾರದು ಎನ್ನತಕ್ಕ ಕಾರಣಕ್ಕೋಸ್ಕರ ಕೂಡ ಹೌದು. ರಾಷ್ಟ್ರ ಮಟ್ಟದ ಅವರವರ ರಾಜಕೀಯ ಪೈಪೋಟಿಯ ಸಂಬಂಧದಲ್ಲಿ ಈ ಟೆಲಿಫೋನ್ ಟ್ಯಾಪ್ ಮಾಡಿದರು.

ಇದರಲ್ಲಿ ಕೇಂದ್ರಸರ್ಕಾರದ ಪಾತ್ರ ಎಲ್ಲಿಂದ ಬಂತು. ಕೇಂದ್ರಸರ್ಕಾರ ತಾನೇತಾನಾಗಿ ಬಂದಿಲ್ಲ. ಈಗ ಒಂದು ಮಾತನ್ನು ತಮಗೆ ಹೇಳುವುದಾದರೆ, ವಾಟರ್‌ಗೇಟ್ ಹಗರಣದಲ್ಲಿ 2 ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಒಂದನೆಯದು ಎಂದರೆ ಆದಂಥ ಘಟನೆ, ಎರಡನೆಯದೆಂದರೆ ಆ ಘಟನೆಯನ್ನು ಕವರಪ್ ಮಾಡಿರತಕ್ಕಂಥಾದ್ದು. ಪ್ರಪಂಚದಾದ್ಯಂತ ಕವರಪ್ ಮಾಡಿರತಕ್ಕಂಥ ಘಟನೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ, ವಾಟರ್‌ಗೇಟ್‌ಗಿಂತ ವಾಟರ್‌ಕವರಪ್ ಇದೆಯಲ್ಲಾ, ಅದಕ್ಕೇ ಮಹತ್ವ ಬಂತು, Watergate cover-up has attained much more importance. ಇದರಲ್ಲಿ ಏನಾಗಿದೆ ಎಂದರೆ ಟೇಪನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಿದ್ದು. ಈ ಟೇಪನ್ನು ಮುಖ್ಯ ಮಂತ್ರಿಗಳು ಅಪರಪಾಡಿಗೆ ಅವರು ಕೇಳಿದಿದ್ದರೆ ಬಹುಶಃ ಅದು ಯಾರಿಗೂ ಗೊತ್ತೇ ಆಗುತ್ತಿರಲಿಲ್ಲ. ಅದನ್ನು ಇವರು ಯಾವರೀತಿ ತಮ್ಮ ರಾಜಕೀಯ ಬಳಸಿಕೊಳ್ಳಬೇಕೋ ಆ ರೀತಿ ಬಳಸಿಕೊಳ್ಳಲಿಲ್ಲ. ಅದನ್ನು ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಯಾರು ಕೊಟ್ಟರು ? ಏತಕ್ಕೆ ಕೊಟ್ಟರು ? ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ವರ್ಬ್ಯಾಟಿಂನಲ್ಲಿ ಬಂದಾಗ ಅದೂ ಕೂಡ ಏನಾ ಹೇಳಿದ್ದರೆಂದರೆ, ಕೇಂದ್ರಸರ್ಕಾರದ ಸೋರ್ಸಸ್‌ನಿಂದ ಬಂದಿದೆ ಎಂದು ಹೇಳಿದಮೇಲೆ ಕೇಂದ್ರಸರ್ಕಾರ came into picture and then the Central Government was heckled by your hon'ble Members and then in reply they had to say what it is ಇವತ್ತು ಪ್ರಶ್ನೆ ಏನು ಬರುತ್ತದೆ ? ಕೇಂದ್ರ ಸರ್ಕಾರದಲ್ಲೂ ಕೂಡ ಇಂಥಾದ್ದು ನಡೆಯುತ್ತಿರಬಹುದು, ಅಲ್ಲಿಯೂ ಮಾಡುತ್ತಿರಬಹುದು ಎಂದು ಊಹೆ ಮಾಡುವುದರಿಂದ ಏನೂ ಪ್ರಯೋಜನ ಇಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಹಲವಾರುಸಾರಿ ಹೇಳಿದ್ದಾರೆ. ಮೊನ್ನೆ ಕೂಡ ನಾವೆಲ್ಲರೂ ಇದ್ದಂಥ ಒಂದು ಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಯಾವುದೇ ಒಂದು ರಾಜಕಾರಣಕ್ಕೆ ಸಂಬಂಧಪಟ್ಟಂತೆ, ರಾಜಕಾರಣಿಗಳ ಟೆಲಿಫೋನ್‌ನ್ನು ಇಲ್ಲಿ ಟ್ಯಾಪ್ ಮಾಡುತ್ತಿಲ್ಲ. ಪಂಜಾಬ್‌ನ ಸಂಬಂಧದಲ್ಲಿ. ಪಂಜಾಬ್‌ನ ಭದ್ರತೆಯ ವಿಷಯದಲ್ಲಿ ಕೆಲವರ ಫೋನ್ ಟ್ಯಾಪ್ ಆಗುತ್ತಿದೆ ? ಇದರಲ್ಲಿ ಅಲ್ಲಿರತಕ್ಕವರು, ರಾಜಕಾರಣಿಗಳು ಎಂದು ಹೇಳಿಕೊಳ್ಳುವವರು ಒಬ್ಬಿಬ್ಬರು ಇರಬಹುದು, ಆದರೆ ಅದು ನನಗೆ ಗೊತ್ತಿಲ್ಲ, ನಾವಂತೂ ಟೆಲಿಫೋನ್ ಟ್ಯಾಪ್ ಮಾಡುತ್ತಿಲ್ಲ, ಕೋಟ್ಯಾಂತರ ರೂಪಾಯಿಯನ್ನು ಕೊಟ್ಟು ಇದಕ್ಕಾಗಿ ಒಂದು ಯಂತ್ರವನ್ನು ತಂದಿದ್ದಾರೆ ಎಂದು ಕೆಲವರು ಹೇಳುತ್ತಾರಂತೆ. ಆದರೆ ನಮ್ಮ ಸರ್ಕಾರ ಬಂದಮೇಲೆ ನಾನಾಗಲಿ, ಅಥವಾ ನನ್ನ ಸರ್ಕಾರವಾಗಲಿ, ಅಥವಾ ಯಾವುದೇ ಇಲಾಖೆಯಾಗಲಿ ಅಂಥ ಯಾವ ಯಂತ್ರವನ್ನೂ ತಂದಿಲ್ಲ ಎಂದು ಹೇಳಿದರು. ಸ್ವಾಮಿ, ನಾವು ಇವತ್ತು ಅವರ ವಕಾಲತ್ತನ್ನು ಮಾಡುವುದಕ್ಕೆ ಇಲ್ಲಿ ಬಂದು ನಿಂತಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಒಮ್ಮೆ ನೀವೇ ವಾಲಂಟರಿಯಾಗಿ ಹೇಳಿದಿರಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ವಾಲಂಟರಿಯಾಗಿ ಏನು ಯಾವಾಗಲೂ ಹೇಳಿಲ್ಲ. ಪ್ರಶ್ನೆಗಳು ಗಾಳಿಯಲ್ಲಿ ತೇಲುತ್ತಿರುತ್ತವೆ. This has been said a number of times, In one of the meetings we were also present. From the begining he has made it very clear. ರಾಜೀನಾಮೆ ಕೊಟ್ಟಂಥ ಪ್ರಕರಣ ಬಂದಾಗ, ಏನಾದರೂ ಸಾಬೀತಾದಾಗ ನೀವು ಅವರ ರಾಜೀನಾಮೆಯನ್ನು ಕೇಳಿ ಅಥವಾ ಇನ್ನೂ ಏನು ಬೇಕಾದರೂ ಕೇಳಿ. ಆದರೆ ಈಗ ನೀವು ಸಿಕ್ಕಿ ಬಿದ್ದಿರತಕ್ಕ ಪ್ರಕರಣದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಅವರು ಹೇಳುವುದು, ಆಗ ನೀವೂ ಕೂಡ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಹೇಳಿದರೆ if you have got a cold why do you expect Rajiv Gandhi to sneeze Why should he do that?

ಶ್ರೀ ಜೆ. ಹೆಚ್. ಪಟೇಲ್,—ಈರೀತಿ ಕದ್ದು ಕೇಳತಕ್ಕ ಕೆಲಸವನ್ನು ಯಾರೂ ಕೂಡ ಮಾಡಬಾರದೆಂಬುದನ್ನು ನಾವೂ ಒಪ್ಪಿಕೊಳ್ಳುತ್ತೇವೆ.

SRI M. MALLIKARJUNA KHARGE.—What is the purpose of the Act.

ಶ್ರೀ ಜೆ.ಹೆಚ್. ಪಟೇಲ್.—ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ನೀವು ಇದನ್ನು ಕೇಳುತ್ತಿದ್ದೀರಿ. ಆದರೆ ನಿಮ್ಮ ಸರ್ಕಾರ ಇದ್ದಾಗ ಏತಕ್ಕೆ ಕೇಳಲಿಲ್ಲ ?

ಇಲ್ಲಿ ಟೆಲಿಫೋನನ್ನು ಯಾವ ಉದ್ದೇಶಕ್ಕಾಗಿ ಬಳಸುತ್ತಾರೆ ಎನ್ನುವುದು ಮುಖ್ಯ. ಉದ್ದೇಶ ಬಳಸತಕ್ಕಂಥ ಸಂದರ್ಭದಲ್ಲಿ ಅಧಿಕಾರಿಗಳಿಂದಲೇ ತಪ್ಪಾಗಿರಬಹುದು, ಸರ್ಕಾರದಿಂದಲೇ ತಪ್ಪಾಗಿರಬಹುದು. ಹಿಂದಿದ್ದ ರಾಷ್ಟ್ರಪತಿಯವರು ರಾಜೀನಾಮೆ ಕೊಟ್ಟ ಮೇಲೆ ನನ್ನ ಫೋನ್ ಟ್ಯಾಪ

ಆಗುತ್ತಿತ್ತು ಎಂದು ಹೇಳಿದ್ದರು. I can't make any allegations. ಆಗಿದ್ದಂಥ ರಾಷ್ಟ್ರಪತಿಯವರ ಫೋನ್ ಟ್ಯಾಪ್ ಮಾಡತಕ್ಕಂಥ ಸ್ಥಿತಿಗೆ ಬಂದಿದ್ದು ಹೇಗೆ ?

ಶ್ರೀ ಕೆ. ಎಚ್. ಶ್ರೀನಿವಾಸ್.—ನಿಮಗೆ ಗೊತ್ತಿಲ್ಲದ ವಿಷಯಕ್ಕೆ ನೀವು ಏತಕ್ಕೆ ಮರುಕ ಪಡಬೇಕು. ತಮಗೆ ನಂಬಿಕೆ ಇರತಕ್ಕಂಥ ಕೆಲವರ ದಾಟಿಯನ್ನು ತರ್ಜುಮೆ ಮಾಡಿ ಮಾತನಾಡುತ್ತಾರೆ. ಸಾಮಾನ್ಯವಾಗಿ ನನ್ನ ಅಭಿಪ್ರಾಯದ ಪ್ರಕಾರ ಇಲ್ಲಿ ಇವರೂ ಕೂಡ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಫೋನ್‌ಗಳನ್ನು ಕೇಳಲು ಪ್ರಯತ್ನ ಮಾಡಿರಬೇಕು. ಸಂದರ್ಭಗಳಿಗೆ ಅನುಸಾರವಾಗಿ ಮಾಡುತ್ತಾರೆಂದು ಹೇಳುತ್ತೇನೆ ಹೊರತು,ಸೆಂಟ್ರಲ್ ಗವರ್ನ್‌ಮೆಂಟ್ ನವರದ್ದು ತಪ್ಪು ಎಂದರೆ ಇವರು ಪ್ರಾಮಾಣಿಕರೇ? ನಾನು ಹೇಳುತ್ತಿರತಕ್ಕಂಥದ್ದು ಏನೆಂದರೆ ನಿಜವಾಗಿ ಇಂಥ ಪ್ರಕರಣಗಳಲ್ಲಿ ಕತ್ತರಿ ಹಾಕಿ ಟ್ಯಾಂಪರ್ ಮಾಡಿ ಎನ್‌ಕ್ವಯರಿ ಏತಕ್ಕೆ ಮಾಡುತ್ತಾರೆ. I have no business to act for Central Government or for the Prime Minister here because that is not in my realm. ಅಷ್ಟೇ ಹೊರತು ಅಧಿಕಾರಿಗಳು ಅವನ್ನು ಕೇಂದ್ರ ಸರ್ಕಾರದ ಮೇಲೆ ಹೊತ್ತು ಹಾಕಿಬಿಟ್ಟಾಕ್ಷಣ ಆದರಿಂದ ಯಾವುದೇ ರೀತಿಯ ಪ್ರಯೋಜನವಾಗುವುದಕ್ಕೆ ಸಾಧ್ಯವಿಲ್ಲ. ನಾನು ಮೊದಲೇ ಹೇಳಿದೆ, ಸತ್ಯಾಂಶ ಏನು ಇದೆ ಅದು ಎಲ್ಲರಿಗೂ ಗೊತ್ತಾಗಲಿ ಎಂದು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಪತ್ರಿಕೆಗಳ ಮೂಲಕ ಪ್ರಸ್ತಾಪ ಮಾಡಿದ್ದಾರೆ. If you are convinced that it should be enquired into, you enquire. If you do not want to enquire carry the conviction of the House and the people as to why you dont want to. ಯಾರಿಗೆ ಓದಲು ಗೊತ್ತಾಗುತ್ತದೆ. ಒಂದಕ್ಕೆ ತಲೆ ಒಂದಕ್ಕೆ ಕಾಲು ಕತ್ತರಿಸಿ ಒಂದಕ್ಕೊಂದು ಸಂಬಂಧವಿಲ್ಲದಂತೆ ಮಾಡಿದ್ದಾರೆ. ನಿಜ, ಸರ್ಕಾರದ ಮುಂದೆ ಏನು ಇದೆ, ಶ್ರೀಮಾನ್ ಹೆಗಡೆಯವರು he said :

> "During the chaotic press conference, Mr. Hegde made several statements which seemed to contradict each other sometimes. These include (a) that he was not aware of tapping b) that such tapping was routine (c) that the authority that did tapping need not seek the approval of the Chief Minister (d) there was nothing illegal in the tapping done by the officer concerned, that is the DIG (Intelligence) (e) Tapping of telephone purpose was illegal, immoral and must be stopped forthwith ...."

ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟರೆ ಗೊಂದಲವೇ ಇಲ್ಲವೆಂದು ಹೇಳುವುದಿಲ್ಲ. ಆದರೆ ಅವರೇ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲ. ಶ್ರೀಮಾನ್ ಜೆ ಆಮ್ಯಾಯಿಯವರಿಗೆ ಬಿಟ್ಟುಬಿಟ್ಟಿದ್ದಾರೆ. ಈಗ ನಾನು ಹೇಳುತ್ತಿರತಕ್ಕಂಥದ್ದು ಏನು ? ಒಂದು ದೃಷ್ಟಿಯಲ್ಲಿ ರಾಮಕೃಷ್ಣ ಹೆಗಡೆಯವರ ನಿರ್ಗಮನದಿಂದ ಇವರು ಅಧಿಕಾರಕ್ಕೆ ಬಂದರು. ಇದರಲ್ಲಿ ನಿಜವಾಗಿಯೂ ಯಾರದು ತಪ್ಪು. ಅಧಿಕಾರಿಗಳಿಂದ ತಪ್ಪಾಗಿದ್ದರೆ, ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು ಅವರನ್ನು ಸೇರಿಕೊಂಡು ತಪ್ಪು ಮಾಡಿದ್ದರೆ ಇವರಿಗೂ ಶಿಕ್ಷೆಯಾಗಬೇಕು. ಒಂದು ದೃಷ್ಟಿಯಲ್ಲಿ ಇವೊತ್ತು ಇಲ್ಲಿರತಕ್ಕಂಥ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸಹಜವಾಗಿ ಹೋಗಿಬಿಟ್ಟರೆ ಬಿಟ್ಟುಬಿಡಬಹುದು ಎನ್ನುವುದಕ್ಕೆ ಅವಕಾಶವಿಲ್ಲ. ಇಂಡಿಯಾ ದೇಶದ ಪತ್ರಿಕೆಗಳಲ್ಲಿ ಒಂದೇ ಅಲ್ಲ, ಪಾಕಿಸ್ಥಾನದಲ್ಲೂ ಈ ಬಗ್ಗೆ ಬರೆಯುತ್ತಾರೆ. ಐದು ವರ್ಷಗಳ ಕಾಲ ಜನತಾ ಪಾರ್ಟಿ ಅಧಿಕಾರದಲ್ಲಿ ಇರುವುದಿಲ್ಲವೆಂದು. Mr. Ramakrishna Hogde has a duty to tell this House what really happened. He continues to be a member of this House His absence, we are constrained to draw adverse inference, It is an irresistable conclusion to which we are constrained to arrive. ತಾವು ಇನ್‌ವೆಸ್ಟಿಗೇಷನ್ ಮಾಡಿ. ನಮ್ಮ ದೃಷ್ಟಿಯಲ್ಲಿ ಎಲ್ಲ ವಿಚಾರಗಳು ತಮಗೆ ಗೊತ್ತಿದೆ ಎಂದು ತಿಳಿದುಕೊಂಡಿದ್ದೇವೆ. ಮುಖ್ಯಮಂತ್ರಿಗಳಾಗಿ ತಾವು ಎಲ್ಲ ತಿಳಿದುಕೊಂಡಿದ್ದೀರಿ. Everyone will draw adverse

inference against him and this Government cannot tell that this is the end of the episode. ನೀವು ಬೇಕಾದುದನ್ನು ಹೇಳಬಹುದು, ಬೇಡವಾದುದನ್ನು ಬಿಡಬಹುದು. ನಿಮಗೆ ಎಲ್ಲಾ ವಿಷಯಗಳು ಗೊತ್ತಿದ್ದರೆ ತಕ್ಷಣ ತಪ್ಪಿತಸ್ಥರನ್ನು ಪ್ರಾಸಿಕ್ಯೂಟ್ ಮಾಡಿ ಪ್ರಾಸಿಕ್ಯೂಷನ್ ಶುರುವಾದರೆ ಎಲ್ಲಾ ವಿಷಯಗಳು ಹೊರಗಡೆ ಬರುತ್ತವೆ. ನಿಮಗೆ ಅದರಿಂದ ತೃಪ್ತಿಯಾಗದಿದ್ದರೆ ಕೇಂದ್ರ ಸರ್ಕಾರ ಏನು ಮಾಡಬೇಕು ಎಂಬುದನ್ನು ನೋಡಿ ಮಾಡುತ್ತದೆ ಬಿಡಿ. ಇತ್ತೀಚೆಗೆ ತಮ್ಮ ಇಂಟರ್‌ವ್ಯೂ ಒಂದನ್ನು ನೋಡಿದೆ. "I am not the puppet of Ramakrishna Hegde". I liked this Statement. But it should not be for the consumption of the Press. It should be demonstrated by you as a Chief Minister in your actions here. ಮಂತ್ರಿಮಂಡಲದಲ್ಲಿ ಅವರು ಹೇಳಿದ್ದು, ದೇವೇಗೌಡರದ್ದನ್ನು ತೆಗೆದುಕೊಂಡರೆ ಆಗುವುದಿಲ್ಲ, ಅದೆಲ್ಲ ಸುಮ್ಮನೆ make-believe ಎಂದು, ನೀವು ನಿಮ್ಮ ಕರ್ತವ್ಯದಲ್ಲಿ ಹೆಗಡೆಯವರಂತೆ ಆಗಬಾರದು. ಹೆಗಡೆಯವರು ಕಲಿಸಿರತಕ್ಕ ಗಿಳಿಪಾಠ ಇದು. ಏನಾದರೂ ಸುದ್ದಿ ಸಿಕ್ಕಿದರೆ ರಾಜೀವ್ ಗಾಂಧಿ ಸುದ್ದಿ ಎತ್ತಿ, ಆಗ ಕಾಂಗ್ರೆಸ್‌ನವರನ್ನು ಸುಮ್ಮನೆ ಕೂರಿಸಬಹುದೆಂಬ ಗಿಳಿಪಾಠವನ್ನು ನಿಮಗೆ ಹೇಳಿಕೊಟ್ಟಿದ್ದಾರೆ. With all the emphasis at my command, while I request the Hon Chief Minister to show that he is not a puppet of Ramakrishna Hegde by his actions, I also request him not to behave like a parrot and go on repeating what he has done. ಸ್ವಲ್ಪ ಹೊತ್ತಿನ ಮುಂಚೆ ಅವರ ಟೋನ್‌ನಲ್ಲೇ ಇವರು ಶುರು ಮಾಡಿದರು. ಇವರು ಸ್ವಲ್ಪ ಕುರ್ಚಿಯನ್ನು ಸರಿಮಾಡಿಕೊಳ್ಳಬೇಕು. ಅದಕ್ಕೆ ಸ್ವಲ್ಪ ಪಾಲಿಷ್ ಮಾಡಿಸಬೇಕು. ರೆಗ್‌ಜಿನ್ ಅನ್ನು ಹೊಸದಾಗಿ ಹಾಕಿಸಿದರೂ ಪರವಾಗಿಲ್ಲ. ಹೆಗಡೆಯವರು ೫ ವರ್ಷದ ಆಡಳಿತದಲ್ಲಿ ರಾಷ್ಟ್ರೀಯ ರಾಜಕೀಯದ ಮಹತ್ವಾಕಾಂಕ್ಷೆಯಲ್ಲಿ ತಲ್ಲೀನರಾಗಿ ಹಲವಾರು ರಾಜ್ಯಗಳನ್ನು ಹಾಳು ಮಾಡಿದರು, ನಿಮ್ಮಲ್ಲೂ ಕೆಲವರನ್ನು ಹಾಳು ಮಾಡಿದ್ದಾರೆ. ಈಗ ಏನಾದರೂ ಸುಧಾರಣೆಯಾಗಿದ್ದರೆ ಪರವಾಗಿಲ್ಲ, ಆದರೆ ನೀವು ಮಾತ್ರ ಆ ಕೆಲಸವನ್ನು ಮಾಡಬೇಡಿ. ಮುಖ್ಯ ಮಂತ್ರಿಗಳ ಪದವಿ ಏನು, ಪ್ರಧಾನಿಯವರ ಪದವಿ ಏನು ? ಜನರು ಕಣ್ಣೀರು ಹಾಕುವುದಕ್ಕೆ ಯಾವ ಪದವಿಯಾದರೆ ಏನು ? ಕೊನೆಗೆ ಸಿಕ್ಕುವುದಾದರೂ ಏನು ? ಖುರ್ಚಿಯನ್ನು ಯಾರೂ ಹೊತ್ತುಕೊಂಡು ಹೋಗುವುದಿಲ್ಲ. ಕೆಲವು ಕಡೆ ನಡೆದಿದೆ, ಕೇಂದ್ರ ಸರ್ಕಾರ ರಾಜೀವ ಗಾಂಧಿ ಎಂದರೆ, you please establish by holding an impartial enquiry and prosecute all the culprits to show 'here is a State Government which knows it duty to the people.'

(MR. SPEAKER IN THE CHAIR)

ಅದನ್ನು ತೋರಿಸತಕ್ಕ ಅವಕಾಶವನ್ನು ಬಳಸಿಕೊಳ್ಳಬೇಕೇ ಹೊರತು ನಮ್ಮ ಮೇಲೆ ತೂರಿಬಿಡುವ ಪಲಾಯನ ಸೂತ್ರವನ್ನು ಬಳಸಿಕೊಳ್ಳಬೇಡಿ ಎಂದು ಸ್ಪಷ್ಟವಾಗಿ ಸೂಚನೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—Now reply from the Chief Minister.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಇಂದು ಗಂಭೀರವಾದ ಒಂದು ವಿಚಾರವನ್ನು ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ವಿರೋಧ ಪಕ್ಷದ ಗೆಳೆಯರು ಹೇಳಿದಂತೆ ಇದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ಪ್ರಶ್ನೆ. ರಾಷ್ಟ್ರ ಮತ್ತು ಅಂತರಾಷ್ಟ್ರದ ಖ್ಯಾತಿಯನ್ನು ಪಡೆದಂತಹ ಸಮಸ್ಯೆ. ಇಂದು ನಾವು ಚರ್ಚೆ ಮಾಡತಕ್ಕ ವಿಚಾರ ಮೂಲಭೂತವಾಗಿ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯ, ಒಬ್ಬ ನಾಗರೀಕನ ಖಾಸಗಿ ಜೀವನವನ್ನು ರಕ್ಷಣೆ ಮಾಡತಕ್ಕದ್ದು ಮತ್ತು ರಾಜ್ಯಾಂಗದಲ್ಲಿ ಹೇಳಿದಂತಹ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಂದಿದೆಯೋ ಇಲ್ಲವೇ ಎನ್ನುವ ಪ್ರಶ್ನೆಯನ್ನು ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇದನ್ನು ನೋಡುವಾಗ ನಾನು ತಮ್ಮಲ್ಲಿ ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ. ಯಾವುದೇ ವ್ಯಕ್ತಿ ಅಥವಾ ಪಕ್ಷವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಈ ಪ್ರಶ್ನೆಯನ್ನು ನೋಡುವುದಿಲ್ಲ. ಆ ಒಂದು ರಾಗ

ದ್ವೇಷಗಳಿಗೆ ಒಳಗಾಗದೆ ನಿರ್ಲಿಪ್ತವಾಗಿ ಈ ಸಮಸ್ಯೆಯನ್ನು ನಾವು ನೋಡಬೇಕು. ಕಾನೂನು ಏನಿದೆ, ಅಧಿಕಾರಿಗಳ ಜವಾಬ್ದಾರಿ ಏನಿದೆ ಇದನ್ನು ನಾವು ತುಲನಾತ್ಮಕವಾಗಿ ನೋಡುವಾಗ ಹಿಂದೆ ನಡೆದು ಬಂದ ದಾರಿ, ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಈ ಕಾನೂನನ್ನು ಯಾವ ರೀತಿ ನಾವು ಅಳವಡಿಸಿಕೊಂಡಿದ್ದೇವೆ, ಹಾಗೂ ಉಪಯೋಗಿಸಿಕೊಂಡಿದ್ದೇವೆ ಎಂಬುದನ್ನು ನೋಡಬೇಕಾಗುತ್ತದೆ,

೬-೩೦ ಪಿ. ಎಂ.

ಇದನ್ನು ಐಸೋಲೇಟ್ ಆಗಿ ಈ ಒಂದೇ ವಿಷಯವನ್ನು ಎತ್ತಿಕೊಂಡು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಕೆಲವು ವಿಚಾರಗಳ ಬಗ್ಗೆ ಇಲ್ಲಿ ಹೇಳಬಯಸುತ್ತೇನೆ, ಈ ಕಾನೂನು ಸ್ವಾತಂತ್ರ್ಯ ಬಂದ ಮೇಲೆ ತಿದ್ದುಪಡಿಯಾದುದು ಇನ್ನೂ ಜಾರಿಯಲ್ಲಿದೆ. ಈ ಸಭೆಯ ಗಮನಕ್ಕೆ ಆ ವಿಚಾರವನ್ನು ತಲುಪಿಸುವ ಇಚ್ಛೆ ನನಗೆ ಇದೆ. ಅದು ೧೦-೭-೧೯೭೫ರಲ್ಲಿ ಆದಂತಹ ಆಜ್ಞೆ. ಶ್ರೀ ಜಿ. ವಿ. ಕೆ. ರಾವ್ ಅವರು ಅಂದು ಮುಖ್ಯ ಕಾರ್ಯದರ್ಶಿಗಳಾಗಿದ್ದರು.

"In exercise of the powers conferred by sub-sectlon 2 of Section 5 of the India na Telegraphs Act, 1885, the Government of Karnataka hereby specifically authorised the D-I.G. of Police (Intelligence) Bangalore to exercise the powers under sub-section (b) in the interest of public safety."

ಅದು ಮುಂದೆ ಅಂದರೆ ಅದಕ್ಕಿಂತ ಹಿಂದೆಯೋ ಅಂದರೆ ೧೯೭೫ರಲ್ಲೂ ಜಾರಿಯಲ್ಲಿತ್ತು.

ಶ್ರೀ ಎಂ. ವೀರಪ್ಪ ಮೊಯ್ಲಿ.— ನೇಮ್ಸ್‌ಗಳನ್ನು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ನೇಮ್ಸ್‌ಗಳು ಇರುವುದಿಲ್ಲ. ಈ ಆಜ್ಞೆ ಬಂದಿದ್ದು ಯಾವಾಗ ಅಂದರೆ, ಇಲ್ಲಿ ಕಾನೂನು ಬದಲಾವಣೆಯಾಯಿತು. The G. O. No. is HD/60/75-76 dtd. 10-7-75. The General, Manger, Bangalore Telephones has wrirten that the order in this behalf is 10 year-old and a fresh authorisation by the present Government is necessary for extending the facility.

ಶ್ರೀ ಎಂ. ವೀರಪ್ಪ ಮೊಯ್ಲಿ.—We are not disputing.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸೆಕ್ಷನ್ ೫(೨) ಪ್ರಕಾರ ಇದೆ ಅಂತ ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಆಜ್ಞೆ ಬಂದ ಮೇಲೆ ಟೆಲಿಫೋನ್ ಟ್ಯಾಪ್ ಮಾಡುವ ಬಗ್ಗೆ ಮುಖ್ಯ ಕಾರ್ಯದರ್ಶಿಗಳು ಆರ್ಡರ್ ಮಾಡಿದ್ದಾರೆ. ಅದಕ್ಕಿಂತ ಮೊದಲು ಹೋಂ ಸೆಕ್ರೆಟರಿಯವರು ಬರೆದಿರುತ್ತಾರೆ.

"It is understood that they wanted a fresh order regarding the above matter has been examined by the Government. It is felt that there is no need for another Government order on the subject. It is hereby confirmed that the above order holdsgood". ಮುಖ್ಯ ಕಾರ್ಯದರ್ಶಿಗಳು ಸ್ವ ಇಚ್ಛೆಯಿಂದ ಅವರೇ ಈ ಆರ್ಡರನ್ನು ಮಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆಥರೈಜೇಷನ್...

ಶ್ರೀ ಎಸ್. ಆರ್. ಬೊಮ್ಮಾಯಿ.—ಆಥರೈಜೇಷನ್ ಬಗ್ಗೆ ಬರುತ್ತೇನೆ. ಇದನ್ನು ಹೋಂ ಸೆಕ್ರೆಟರಿಯವರು ಹೇಳಿದರೂ ಪುನಃ ಅವರು ಇದನ್ನು ಬದಲಾವಣೆ ಮಾಡಬೇಕು, ೧೯೭೫ನೇ ಇಸವಿಯಲ್ಲಿ ಆದಂತಹ ಆರ್ಡರ್ ಇದು, ಇದು ಬದಲಾವಣೆಯಾಗಬೇಕೆಂದು ಒತ್ತಾಯ ಮಾಡಿದ್ದೇವೆ. then, the authorisation was given by the then Chief Secretary by

the order dated 21st June, 1986. The order of Satishchandran came to be issued only after pressurisation from the General Manager, Telephones Department, not at the instance of anybody, not at the instance of the Chief Minister or the State Government. I must say all these things. Please hear me as to how this order has come. Then the authorisation was issued by the Chief Secretary Satishchandran at the instance, ins stance of the Telephone Department. ಎರಡನೆಯದಾಗಿ ಪುನಃ ಡಿ. ಐ. ಜಿ. ರಘು ರಾಮನ್ ರವರಿಗೆ ಆಥರೈಜೇಷನ್ ಮಾಡಿದ್ದೂ ಕೂಡ ಇದೇ ಪ್ರಕಾರ. ಐ. ಜಿ. ಇಂಟಲಿಜೆನ್ಸ್ ಅವರು ಈ ಒಂದು ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ.

ಶ್ರೀ ರಘುರಾಮನ್‌ರವರು ಡಿ. ಐ. ಜಿ. (ಇಂಟೆಲಿಜೆನ್ಸ್) ಆಗಿದ್ದರು. ಅವರಿಗೆ ಆಥರೈಸೇಷನ್ ಅನ್ನು ಮುಖ್ಯ ಕಾರ್ಯದರ್ಶಿಗಳು ಕೊಟ್ಟಿದ್ದಾರೆ.

> " In excrcise of the powers conferred by sub-section of Section 5 of the Indian Telegraphs Act, the Government of Karnataka hereby specifically authorised the Special Inspector-General of Police (Inteligence and to excrcise the powers under the said sub-section of the interest of public safety ".

ಆಥರೈಸೇಷನ್ ಮಾತ್ರ ಕೊಟ್ಟಿದ್ದಾರೆ. ಶ್ರೀ ಸತೀಶ್‌ಚಂದ್ರನ್ ಮಾಡಿದಂತಹ ಆಜ್ಞೆ ಏನಾದರೆ ಇದು ಒಂದೇ, ಇದನ್ನು ಬಿಟ್ಟು ಯಾವ ಬೇರೆ ಆಜ್ಞೆಯನ್ನೂ ಅವರು ಮಾಡಿಲ್ಲ. ತಾವು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲ್ ರವರು ಮಾತನಾಡುತ್ತಾ ಶ್ರೀ ಸತೀಶ್‌ಚಂದ್ರನ್‌ರವರು ಆರ್ಡರ್ ಮಾಡಿದ್ದಾರೆ, ಆದರೂ ಏಕೆ ಬಾಯಿ ಮುಚ್ಚಿಕೊಂಡು ಸುಮ್ಮನೆ ಇದ್ದಾರೆಂದು ಕೇಳಿದರು. ಮುಖ್ಯ ಕಾರ್ಯದರ್ಶಿಗಳಾಗಿ ಶ್ರೀ ಸತೀಶ್ ಚಂದ್ರನ್‌ರವರು ಆರ್ಡರ್ ಮಾಡಿದ್ದು......

SRI B. BASAVALINGAPPA —It is not a simple thing. It is an order,

SRI S. R. BOMMAI.—It is an order.......

SRI K. H. PATIL.—If there was an order already in every.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೇ ಎರಡನ್ನೂ ನಾನು ಓದಿದ್ದು. ಜನರಲ ಮ್ಯಾನೇಜರ್ ಟೆಲಿಫೋನ್ಸ್‌ಗೆ ಹೋಮ್ ಸೆಕ್ರೆಟರಿಯವರು ಅವಶ್ಯವಿಲ್ಲವೆಂದು ಹೇಳಿದರೂ ಸಹ ಪುನ: ಒತ್ತಾಯ ಮಾಡಿದರು ಬಹಳ ದಿವಸಗಳಾಗಿದೆ ಮತ್ತೊಂದು ಸಲ ಆಜ್ಞೆ ಮಾಡಿ ಎಂದು. In pursuance of that request it was made, not at the instance of the State Government or the Chief Minister and continued what was the necessity of passing another order ?

SRI M. MALLIKARJUNA M. KHARGE.—It is a Government order. In the names are given by the Government, the Chief Minister that is important.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಖ್ಯ ಕಾರ್ಯದರ್ಶಿಗಳು ಆಥರೈಸೇಷನ್ ಆರ್ಡರ್ ಮಾಡಿದ್ದು ಒಂದನ್ನು ಬಿಟ್ಟು ಬೇರೆ ಯಾವುದೇ ಆಜ್ಞೆಯನ್ನು ಮಾಡಿಲ್ಲ.

SRI B. BASAVALINGAPPA.—Please read out the letter of the General Manager.

ಶ್ರೀ ಎಸ್. ಆರ್. ಬೊಮ್ಮಾಯಿ.— ಇನ್ನು ಒಂದು ಸಲ ಓದುತ್ತೇನೆ. ಕೇಳಿ. ಕೇಂದ್ರ ಸರಕಾರದ ಮತ್ತೊಂದು ಆರ್ಡರ್ ಇದೆ. ಅದು ಬಹಳ ದೊಡ್ಡ ಪತ್ರ ಇದೆ. ಎಲ್ಲಾ ರಾಜ್ಯ ಸರಕಾರಗಳಿಗೂ ಬರೆದಿದ್ದಾರೆ, ಕಾನೂನನ್ನು ತಿದ್ದುಪಡಿ ಮಾಡಿ ಎಂದು. ಆ ಪ್ರಕಾರ ಆಥರೈಸೇಷನ್ ಅನ್ನು ಮುಖ್ಯ ಕಾರ್ಯದರ್ಶಿಗಳು ಮಾಡಿದ್ದಾರೆ. ಮಾನ್ಯ ಗುಂಡೂರಾಯರ ಸರಕಾರವಿದ್ದಾಗ ಒಂದು ಆಜ್ಞೆಯನ್ನು ಹೊರಡಿಸಿದ್ದರು. ಶ್ರೀ ಕಾರ್ತಿಕೇಯನ್ ಅವರು ಆಗ ಡಿ.ಐ.ಜಿ. (ಇಂಟಲಿಜೆನ್ಸ್) ಆಗಿದ್ದರು. ಆ ಬಗ್ಗೆ ಈಗ ಮೇಲ್ಮನೆ ಸದಸ್ಯರಾಗಿರುವ ಶ್ರೀ ಶಂಕರಮೂರ್ತಿಯವರು ಒಂದು ರಿಟ್ ಅನ್ನು ಹಾಕಿದ್ದರು. ಅದರಲ್ಲಿ ರಾಜ್ಯ ಸರಕಾರ ತೆಗೆದುಕೊಂಡಂತಹ ನಿಲುವು ಏನು ಇದೆ ಅದರ ಪ್ಯಾರ ಒಂದನ್ನು ನಾನು ಓದುತ್ತೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ಡೈವರ್ಟ್ ಮಾಡುತ್ತಿದ್ದಾರೆ.

(ಗೊಂದಲ)

MR. SPEAKER.— Let there be a fair discussion.

ಶ್ರೀ ಎಸ್. ಆರ್. ಬೊಮ್ಮಾಯಿ.— ಡೈವರ್ಟ್ ಮಾಡುತ್ತಿಲ್ಲ. ಅದರಲ್ಲಿ ಇರತಕ್ಕಂತಹ ಜನರ ಹೆಸರಿನ ಬಗ್ಗೆ ಹೇಳುವುದಾದರೆ ಮಾನ್ಯ ಯಡಿಯೂರಪ್ಪನವರೂ ಕೂಡ ಇದ್ದಾರೆ, ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ) ನಾಯಕರೂ ಇದ್ದಾರೆ. ತಾವು ಪತ್ರಿಕೆಯಲ್ಲಿ ಬಂದದ್ದನ್ನು ಹೇಳಿದ್ದೀರಿ. ಬಿ.ಜೆ.ಪಿ. ಲೀಡರ್‌ಗಳೂ ಇದ್ದಾರೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.— ಅವರನ್ನು ಅರೆಸ್ಟ್ ಮಾಡಿ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಕಮ್ಯುನಲ್ ಕ್ಲಾಷ್ ಮೇಲೆ ಅವರನ್ನು ಅರೆಸ್ಟ್ ಮಾಡಿದ್ದು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಶಂಕರಮೂರ್ತಿಯವರನ್ನು ಅರೆಸ್ಟ್ ಮಾಡಿದರು. ಅವರು ಜನಸಂಘದ ನಾಯಕರಾಗಿದ್ದರು. ಅವರಿಗೆ ಜವಾಬ್ದಾರಿಯುತವಾದ ಸ್ಥಾನ ಮಾನ ಇದೆ.

(ಗೊಂದಲ)

ಅಧ್ಯಕ್ಷರು. — ದಯಮಾಡಿ ಕೂಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಕಮ್ಯುನಲ್ ಅಲ್ಲಿ ಬರುವುದಿಲ್ಲ. ಇಂತಹ ಹೊಸ ರಾಜಕೀಯವನ್ನು ಕಾಂಗ್ರೆಸ್‌ನವರು ಮಾಡಿದರು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ರೆಫರೆನ್ಸ್ ಮಾಡಿ ಹೇಳಿದರು.

SRI. M. MALLIKARJUNA KHARGE.— I am very sorry. ಇವರೂ ಕೂಡ ಆರ್. ಎಸ್. ಎಸ್.ನವರದ್ದನ್ನು ಟ್ಯಾಪ್ ಮಾಡುತ್ತಿದ್ದಾರೆ. ಅದು ನಿಜವೇ ಅಥವಾ ಇಲ್ಲವೇ ಎಂಬುದನ್ನು ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಶಂಕರ ಮೂರ್ತಿಯವರ ಹೆಸರು ಬಂದದ್ದರಿಂದ ಆ ರೀತಿ ಹೇಳಬೇಕಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆರ್.ಎಸ್.ಎಸ್. ಅವರದ್ದನ್ನು ಟ್ಯಾಪ್ ಮಾಡುತ್ತಿಲ್ಲವೋ? ಕೇಳಿ ತಾಕತ್ತು ಇದ್ದರೆ ?

ಅಧ್ಯಕ್ಷರು.— ಒಮ್ಮೆಗೆ ಈ ರೀತಿಯಾದರೆ ಹೇಗೆ –೫೧೦ ಗಂಟೆ ಚರ್ಚೆ ನಡೆದಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಸಿ.ಪಿ.ಐ., ಸಿ.ಪಿ.ಎಂ. ಲೀಡರ್ಸ್‌ಗಳು ಹೆಸರುಗಳು ಇವೆ ಅಂತ ಹೇಳಿದ್ದೀರಿ. Are you justifying it ? ಮತ್ತೊಂದುಸಾರಿ ಹೇಳಿ.

Sri S. R. Bommai.— I am not justifying. I am just saying how things have happened.

ಅಧ್ಯಕ್ಷರು.— ಇವತ್ತು ಪೇಸೆನ್ಸ್ ಏಕೆ ಇಲ್ಲ ?

ಶ್ರೀ ಆರ್. ವೆಂಕಟರಾಮಯ್ಯ.— ಈಗಲಾದರೂ ಈ ಟ್ಯಾಪ್ ಮಾಡುವುದು ಸರಿಯೇ ಅಂತ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅದನ್ನು ನಾನು ಒಪ್ಪುತ್ತೇನೆ. ಈ ಸಭೆಯ ಅಂದಿನ ಸದಸ್ಯರಾಗಿದ್ದ ಶ್ರೀಮಾನ್ ಸಿ. ಎಂ. ಆರ್ಮುಗಂ ರವರು ಒಂದು ಪ್ರಶ್ನೆಯನ್ನು ಎತ್ತಿದಾಗ ಅಂದಿನ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ. ಅದನ್ನು ಓದುತ್ತೇನೆ. ಇಂಡಿಯನ್ ಎಕ್ಸ್‌ಪ್ರೆಸ್ ರವರು ಪಬ್ಲಿಷ್ ಮಾಡಿದರು. ಅದಕ್ಕಾಗಿ ಅವರನ್ನು ಪ್ರಾಸಿಕ್ಯೂಟ್ ಕೂಡ ಮಾಡಿದರು.

> "Sir, certain newspapers have given considerable publicity to a secret communication stated to have been issued by the DIG (Intelligence) in connection with the postal department."

> "I would like to emphasis at the outset that this matter which would be covered by the Official Secrets Act and as such it would not be proper to enter into detailed discussion on the matter. However, in order to remove any misunderstandings and misconceptions, I would like to clarify a few points."

> "Section-26 of the Indian Post Office Act 1898 specifically empowers the State Government or any other officer specially authorised in this behalf by a State Government in the interest of public safety or tranquility may direct by order in writing that postal articles or any class of description of postal articles in the course of transmission by post shall be intercepted or detained or shall be disposed of in such a manner as the authority issuing the order may direct. The hon. member would note that interception of postal articles in the interest of public safety or tranquility is specifically provided for in the law. I would also like to draw the attention of the hon. member, under Section-26(2) of the Indian Post Office Act 1898 which provides for any doubt raised as to whether any act done under Section 26 was in the interest of public safety or tranquillity, a certificate by the State Government shall be a conclusive proof on the point. The hon member would there for appreciate that once the State Government is satisfied that there is need of exercise of powers under Section 26, there can be no question of re-examination of the same by another authority. Section 26 of the IPO Act

provides for delegation of powers to any officers specially authorised in this behalf.''

"I would like to draw the attention of the hon.member to the fact that the powers under section 26 was delegated to DIG (Intelligence) by the State Government through a notification almost twenty years ago i.e. in 1962."

ವೀರೇಂದ್ರಪಾಟೀಲ್ ಅವರು ಹೇಳಿದರು, ನಮ್ಮ ಕಾಲದಲ್ಲಿ ಇದು ಇರಲಿಲ್ಲ ಎಂದು, ಆದಕ್ಕೇ ಈ ರೆಫರೆನ್ಸ್ ಕೊಟ್ಟಿದ್ದುದು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅವೊತ್ತು ರಾಜಕೀಯ ಪಕ್ಷಗಳ ನಾಯಕರ ಹೆಸರುಗಳನ್ನು ಪಟ್ಟಿ ಮಾಡಿ ಅವರ ಟೆಲಿಫೋನ್‌ಗಳನ್ನು ಟ್ಯಾಪ್ ಮಾಡಿ ಅಂತ ಹೇಳಿದ್ದು ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು.

ಶ್ರೀ ಎಸ್. ಆರ್, ಬೊಮ್ಮಾಯಿ.— ಶ್ರೀಮಾನ್ ವೀರೇಂದ್ರಪಾಟೀಲ್‌ರವರು ತಮ್ಮ ಕಾಲದಲ್ಲಿ ಇದು ಇರಲಿಲ್ಲ ಎಂದು ಹೇಳಿದ್ದರು. ಅದಕ್ಕಾಗಿಯೇ ಇದನ್ನು ಉದಾಹರಣೆಯಾಗಿ ಕೊಟ್ಟಿದ್ದುದು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಂತಹ ಆಜ್ಞೆ ಇದ್ದರೆ, ದಯಮಾಡಿ ತಮ್ಮ ಹೆಸರು, ಶಾಸಕರ ಹೆಸರುಗಳನ್ನು ಯಾರಾದರೂ ನೋಟಿಫೈ ಮಾಡಿದ್ದಾರಾ ? ಅದನ್ನು ಹೇಳಿ.

SRI S. R. BOMMAI.— Further,

"The exercise of these powers by the State Government and by the authorised officer is therefore not a new feature. the publication of secret communication of this nature which are meant for the purpose of maintaining public safety or tranquillity by the newspapers can be regarded as an infringement of the Official Secret Act.''

ಶ್ರೀ ಮಲ್ಲಿಕಾರ್ಜುನ ಖರ್ಗೆ.—ತಾವು ವಿರೋಧಪಕ್ಷದ ನಾಯಕರಾಗಿ ಐದು ವರ್ಷಗಳು ಇದ್ದಿರಿ. ಮೇಲ್ಮನೆಯಲ್ಲಿ ವಿರೋಧಪಕ್ಷದ ನಾಯಕರಾಗಿ ಇದ್ದಿರಿ. ಈ ಸದನದಲ್ಲೂ ವಿರೋಧ ಪಕ್ಷದ ನಾಯಕರಾಗಿ ಇದ್ದವರು, ನಿಮ್ಮ ಟೆಲಿಫೋನ್ ಟ್ಯಾಪ್ ಆಗುತ್ತಿತ್ತೇ, ಈ ಮನೆಯ ಮಾನ್ಯ ಸದಸ್ಯರುಗಳ ಫೋನ್ ಟ್ಯಾಪ್ ಆಗುತ್ತಿತ್ತೇ ? ಲೋಕ ಸಭಾ ಸದಸ್ಯರುಗಳ ಫೋನ್ ಟ್ಯಾಪಿಂಗ್ ಆಗಿದ್ದರೆ ಹೇಳಿ ನಾವು ಒಪ್ಪೋಣ.

SRI M. VEERAPPA MOILY.—This is not the reply. We wan clarification.

ಶ್ರೀ ಎಸ್ ಆರ್. ಬೊಮ್ಮಾಯಿ,—ನೀವು ಹೇಳಿದ್ದನ್ನು ನಾನು ಕೇಳಿದ್ದೇನೆ. ನಾನು ಹೇಳುವುದನ್ನು ನೀವು ಕೇಳಬೇಕು.

SRI M. VEERAPPA MOILY.—Attention divert ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳಿದ್ದನ್ನು ನಾನು ಶಾಂತ ರೀತಿಯಲ್ಲಿ ಕೇಳಿದ್ದೇನೆ ನಾನು ಹೇಳುವುದನ್ನು ನೀವು ಕೇಳಬೇಕು.

SRI M. VEERAPPA MOILY.—That means you have nothing to reply.

SRI S. R. BOMMAI.—Sir, it was further said

"...The State Governmet is examiniag whether or not a pros cution should be launched against the concerned newspapers in this connection. I would also further like to bring to the notice of this House and to the hon. member that none of the names given in the newspapers has been added by the present government. It is all there for the time of the past Government."

ಇದೇ ಪ್ರಶ್ನೆ ಪಾರ್ಲಿಮೆಂಟ್‌ನಲ್ಲಿ ಬಂದಿತ್ತು. ಐ. ಬಿ. ಟ್ಯಾಪಿಂಗ್ ಬಗ್ಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆ ದಿನಾಂಕ ೩-೮-೭೮ರಲ್ಲಿ ಈ ರೀತಿ ವರದಿಯಾಗಿದೆ :—

"Government on IB tapping of phones " How does the Government judge the veracity of the report of the IB on the fact of the materials particulars of individuals ? The Minister of State for Home, Sri Mandal said to Sri B, C. Kamble in the Lok Sabha in an written answer that it would be in public interest not to disclose this, ಸಾರ್ವಜನಿಕ ಹಿತದೃಷ್ಟಿಯಿಂದ ಡಿಸ್‌ಕ್ಲೋಸ್ ಮಾಡುವುದಿಲ್ಲವೆಂದು ಹೇಳಿದ್ದಾರೆ,

SRI K. H. PATIL.--Instead of quoting others, I quote Mr. Bommai himself. ತಾವೇ ಹೇಳಿದ್ದೀರಿ, ಆರ್ಥಿಕ ಅಪರಾಧ ಮಾಡುವವರು ಟೆಲಿಫೋನ್‌ಗಳನ್ನು ಕೇಳಬಹುದೆಂದು. ಇದರಲ್ಲಿ ನೀವು ಬರುತ್ತಿದ್ದಿರಾ ? ಇದ್ದರೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನಮ್ಮನ್ನು ನೋಡಿದರೆ ನಿಮಗೆ ಏನು ಅನಿಸುತ್ತದೆ.

SRI M, VEERAPPA MOILY.—He is defending a case. which can not be defended.

SRI S. R. BOMMAI.—Hon. Sri K. H, Srinivas said that I should not be a puppet of anybody and I should not be a parrot of anybody. I cannot be a parrot and puppet of you people also I am the Leader of the House and the Chelf Minister of the State, I would promise that I will keep the honour of this office. Please believe me.

(ಗೊಂದಲ)

ಅಧ್ಯಕ್ಷರು.—ಆಯಿತು ಮಾನ್ಯ ಬಂಗಾರಪ್ಪನವರೇ ನಿಮಗೆ ಭರವಸೆ ಸಿಕ್ಕಿದೆ

ಶ್ರೀ ಎಸ್.ಬಂಗಾರಪ್ಪ.—ನಿಮ್ಮ ಕಡೆಯವರು ಮೇಜು ತಟ್ಟುತ್ತಿದ್ದಾರೆ, ನಮ್ಮ ಕಡೆಯವರು ತಟ್ಟಿದರೆ ನಮಗೆ ಅಧಿಕಾರವಿಲ್ಲ, ತಟ್ಟಿ ತಟ್ಟಿ ಒಬ್ಬರನ್ನು ಮನೆಗೆ ಕಳುಹಿಸಿ ಬಿಟ್ಟರು. ಮತ್ತೆ ತಟ್ಟುತ್ತಿದ್ದಾರೆ ನೀವು ಸಲ್ಪ ಎಚ್ಚರಿಕೆಯಿಂದ ಇರಿ.

ಶ್ರೀ ಆರ್. ವಿ. ದೇಶಪಾಂಡೆ.—ನೀವು ಮಾತನಾಡುವಾಗ ಎಷ್ಟು ತಟ್ಟುತ್ತಾರೋ ಅಷ್ಟನ್ನು ಬೇರೆಯವರು ಮಾತನಾಡುವಾಗ ಯಾರೂ ತಟ್ಟುವುದಿಲ್ಲ.

ಶ್ರೀ ಎಸ್.ಆರ್.ಬೊಮ್ಮಾಯಿ.—ಮಾನ್ಯ ಬಂಗಾರಪ್ಪನವರೇ ನೀವೇ ಹೇಳಿದ್ದೀರಿ. ಏನೆಂದರೆ ಸೆಕ್ಷನ್ ೫(೨) ಅನ್ನು ಬಹಳ ಜನ ಓದಿದ್ದಾರೆ ಎಂದು, ನಾನು ರಿಲೆವೆಂಟ್ ಪೋರ್ಷನ್ ಮಾತ್ರ ಓದುತ್ತೇನೆ

"On the occurence of any public emergency.., the security of the State friendly relations with Foreign

State or public order for preventing incitment to the commission of an offence, for reasons to be recorded in writing by order. direct that any message or class of messages..."

That is the Act. "Public Safety' and Public tranquivity these are the circumstances under which telehpone tapping could be done.

Then Sir, I would like to refer to Section-5 of the Official Secret Act.

" If any person having in his possesssion or control any secret official code or pass-word or any sketch, plan, model, article note document or information which relates to or is used in a prohibited place or relates to anything in such a place or which is likely to assist directly or indirectly, an enemy or which relates to a matter the disclosure of which is likely do affect the sovereignty and integrity of India, the security of the State or friendly relations with foreign States or which has been made or obtained in contravention of ihe Act or which has been entrusted in confidence to him by any person holding office under (government) or which he has obtained or to which he has assess owing to his position as a person who holds or has held office under (government) or as a person who holds or has held the contract made on behalf of (government) or as a person who is or hai been employed under a person who holds or has held such an office on contract "

This is the most important thing. ಪ್ರಧಾನಮಂತ್ರಿಗಳು ಇರಲಿ, ಮುಖ್ಯಮಂತ್ರಿಗಳು ಇರಲಿ, ಮಂತ್ರಿಗಳು ಇರಲಿ, ಸರ್ಕಾರದ ಅಧಿಕಾರಿಗಳೇ, ಇರಲಿ, ಆತನಿಗೆ ಸಂಬಂಧಪಟ್ಟಿದ್ದು ಇದು, ಬಹಳ ಮಹತ್ವದ್ದು. ಇದನ್ನು ಮತ್ತೊಮ್ಮೆ ಓದುತ್ತೇನೆ.—

I would read it again

"...which has been entrusted in confidence to him by any person holding office under (government) or which he has obtained or to which he has access owing to his position as a person who holds or has held office under (government) or as a person who holds or has hold the contract made on behalf of (government) or as a person who is or has been employed under a person who holds or has held such an office on contract."

"Wilfully communicates the code or pass-word sketch, plan, model, article, note, document or information to any person other than a person to whom he has authorised to

communicate it or a court of justice or a person to whom it is in the interests of the State his duty to communicate it..."

Punishment is there. ನಾವೆಲ್ಲರೂ ಪ್ರತಿಜ್ಞಾ ವಿಧಿಯನ್ನು ಮಾಡಿದ್ದೇವೆ.

ಈಗ ತಾವೆಲ್ಲರೂ ಹೇಳಿದಿರಿ. ಮುಖ್ಯವಾದ ವಿಚಾರ ಮೊದಲನೆಯದು ಮುಖ್ಯಮಂತ್ರಿ ರಾಮ ಕೃಷ್ಣ ಹೆಗಡೆಯವರ ಆಜ್ಞೆ ಮೇಲೆಯೇ ಈ ಟ್ಯಾಪಿಂಗ್ ಆಗಿದೆ ಎನ್ನತಕ್ಕ ವಿಚಾರ ಹೇಳಿದಿರಿ. ಮಾನ್ಯ ಮೊಯ್ಲಿಯವರು ಪ್ರೊಸೀಜರ್ ಬಗ್ಗೆ ಹೇಳಿದರು ನಾವು ಯಾವ ಅಧಿಕಾರಿಗೆ ಯಾವ ಯಾವ ಅಧಿಕಾರ ಕೊಟ್ಟಿದ್ದೇವೆ, ಅವನು ಅವುಗಳನ್ನು ಸ್ವಯಂ ಆಗಿ ನಿರ್ವಹಿಸುತ್ತಾನೆ.

SRI B. BASAVALINGAPPA.—I am very sorry. You are trying to mislead the Constitution of India. According to Article 167 whether any officer can correspond...

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ, ಅವರು ಕೊಡತಕ್ಕ ಉತ್ತರವನ್ನು ಕೇಳುವುದಕ್ಕೂ ತಮಗೆ ಸಮಾಧಾನ ಇಲ್ಲವೇ...

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ಗೆ ಸೆಕ್ಷನ್ ೧೨೪ ಪ್ರಕಾರ ಪವರ್ಸ್ ಇದೆ...

SRI M. VEERAPPA MOILY.—That is why I am asking you to look into the delegation of powers relating to the naming of the person. Then the cat will be out of the bag.

SRI S R. BOMMAI.—If there is a cat it will be out. If there is no cat, nothing will come out.

SRI M. VEERAPPA MOILY.—You are killing the cat.

SRI S. R. BOMMAI.—Whenever we authorise an officer we fully authorise him to use his discretion and act. In number of Acts we have authorised the officers, Every time he need not come to the ministers and take orders. Otherwise, how Government works? We have delegated powers. He gets power under the delegated act.

ಶ್ರೀ ಎಸ್.ಬಂಗಾರಪ್ಪ,—ಹಾಗಾದರೆ ಹೆಗಡೆಯವರು ಏಕೆ ರಾಜಿನಾಮೆ ಕೊಟ್ಟರು? ಆಫೀಸರ್ ತಪ್ಪು ಮಾಡಿದ್ದರೆ, ಇವರು ರಾಜೀನಾಮೆ ಕೊಡುವಂತಹ ಪ್ರಸಂಗ ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯ್ಲಿಯವರು ಗೃಹ ಮಂತ್ರಿಗಳಾಗಿರಲಿಲ್ಲ, ಮುಖ್ಯಮಂತ್ರಿಗಳಾಗಿರಲಿಲ್ಲ. ಇವರು ಮುಖ್ಯಮಂತ್ರಿ ಗುಂಡೂರಾಯರ ಗೆಳೆಯರಾಗಿದ್ದರು. ಡಿ.ಐ.ಜಿ. ಇಂಟೆಲಿಜೆನ್ಸ್‌ಗೆ ಬಂದಂತ ಮಾಹಿತಿ ನಮ್ಮ ಕೊಲಿಗ್ಸ್‌ಗೆ ಯಾರಿಗೂ ಹೋಗುವುದಿಲ್ಲ. ಇವೆಲ್ಲಾ ಕಾನ್‌ಫಿಡೆನ್ಷಿಯಲ್ ಕಮ್ಯುನಿಕೇಷನ್ಸ್. ಸರ್ಕಾರದಲ್ಲಿ ಮಂತ್ರಿಯಾಗಿದ್ದರೆ ಇವೆಲ್ಲಾ ಗೊತ್ತಾಗುವುದಿಲ್ಲ.

SRI M. VEERAPPA MOILY.—But we know the procedure don't admit, alright you institute a judicial inquiry and place before it all the files. Let the truth come out.

೭-00 ಪಿ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಟ್ರುಥ್ ಹೊರಗೆ ಬರುತ್ತದೆ. ಮಾನ್ಯ ಮೊಯಿಲಿಯವರು ಇವತ್ತು ಉತ್ಸಾಹದ ಭರದಲ್ಲಿ ಮುಖ್ಯ ಮಂತ್ರಿಯವರ ಅಧಿಕಾರವನ್ನು ಅನುಭವಿಸುವ ಗೃಹ ಮಂತ್ರಿ ಯವರ ಅಧಿಕಾರವನ್ನು ಅನುಭವಿಸುವ ಕನಸನ್ನು ಕಂಡು ಮಾತನಾಡಿದರು. ಕನಸನ್ನು ಕಂಡು ಮಾತ ನಾಡಿದರು. ಇಲ್ಲದೇ ಹೋದರೆ ಅವರಿಗೆ ಇದೆಲ್ಲಾ ಏನು ಗೊತ್ತಾಗುತ್ತಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರೊಸೀಜರ್ ಹೇಳಿದರೆ ಕನಸು ಕಾಣುತ್ತಿದ್ದಾರೆ ಎಂದು ಹೇಳುತ್ತಿದ್ದೀರಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರೊಸೀಜರ್ ಬೇರೆಯವರಿಗೆ ಗೊತ್ತಾಗುವುದಿಲ್ಲ. ಅವರ ಇಲಾಖೆಯ ಬಗ್ಗೆ ಹೇಳಿದರೆ ಒಪ್ಪುತ್ತೇನೆ, ಆದರೆ ಬೇರೆಯವರಿಗೆ ಇದೆಲ್ಲಾ ಗೊತ್ತಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರಕಾರದಲ್ಲಿ ಇದ್ದು ಪ್ರೊಸೀಜರ್ ಗೊತ್ತಿಲ್ಲ. ಎಂದು ಹೇಳಿದರೆ. I have to pity your ignorance. ಕನಿಕರ ಪಡಬೇಕಾಗಿದೆ. ನೀವು ನನಸಿನಲ್ಲಿ ಇದ್ದು ಕನಸಿನಲ್ಲಿ ಮಾತನಾಡಿದಹಾಗೆ ಮಾತನಾಡುತ್ತಿದ್ದೀರಿ.

ಶ್ರೀ ಡಿ. ಜಿ ಬಸವನಗೌಡ.—ಪದೇಪದೇ ವಿರೋಧ ಪಕ್ಷದವರು ಇಂಟರ್‌ವೀನ್ ಆದರೆ ಮುಖ್ಯ ಮಂತ್ರಿಗಳಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇಷ್ಟೇ ಹೇಳಬಯಸುತ್ತೇನೆ, ಇಂತಹ ಆಜ್ಞೆಗಳು ಏನಿದ್ದಾವೆ, ಇದನ್ನು ಎಲ್ಲಾ ರಾಜ್ಯ ಸರಕಾರಗಳೂ ಹೊರಡಿಸಿವೆ.

ಶ್ರೀ ಎಸ್. ಬಂಗಾರಪ್ಪ,—ಆಜ್ಞೆಗಳು ಇದ್ದಾವೆ, We have not disputed it.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವರು ಇನ್ನೊಂದು ವಿಚಾರ ಎತ್ತಿದ್ದಾರೆ. ಏನೆಂದರೆ, ಈ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕು ಇಲ್ಲವೇ ಹೌಸ್ ಕಮಿಟಿ ಆಗಬೇಕು ಎಂದು,

SRI B. BASAVALINGAPPA.—You raised about the power of delegation. Who delegates ? Who does it ? Whether an Officer can delegate it to another Government servant ?

SRI S. R. BOMMAI.—Yes.

SRI B. BASAVALINGAPPA.—That is impossible.

ಅಧ್ಯಕ್ಷರು.—ಅವರು ಉತ್ತರ ಹೇಳುತ್ತಾರೆ ಕೂಡಿರಿ. ಬಸವಲಿಂಗಪ್ಪನವರೇ ತಾವು ದಯವಿಟ್ಟು ಕೂಡಿರಿ. ತಾವು ದಯವಿಟ್ಟು ಕೂಡಿರಿ. ಅವರು ಉತ್ತರವನ್ನು ಮುಕ್ತಾಯ ಮಾಡಲಿ, ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

SRI S. R. BOMMAI.—Under the Act the State Government can authorise an officer.

SRI B. BASAVALINGAPPA.—Where ? To renew the order of the previous year where it has been authorised ? Where it has been authorised.

(INTERRUPTION)

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಓದಿ ಹೇಳಿದ್ದೇನೆ. ತಾವು ಇರಲಿಲ್ಲ ಎಂದು ಕಾಣುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಇಲ್ಲೇ ಇದ್ದೆ.

ಅಧ್ಯಕ್ಷರು,—ತಮಗೆ ಉತ್ತರ ಕೇಳುವುದು ಬೇಕಾಗಿಲ್ಲವೇ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಕೆಲವರು ಮತ್ತೊಂದು ವಿಚಾರ ಎತ್ತಿದ್ದು, ಶ್ರೀಮಾನ್ ಹೆಗಡೆಯವರಿಗೆ ಗೊತ್ತಿದ್ದೇ ಈ ಆಜ್ಞೆಗಳು ಆಗಿದ್ದಾವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ ಟೆಲಿಫೋನ್ ಟ್ಯಾಪಿಂಗ್‌ನಲ್ಲಿ ಬಂದಂಥ ಹೆಸರುಗಳು ಇದ್ದಾವಲ್ಲ ಅದನ್ನು ಪಾರ್ಲಿಮೆಂಟ್‌ನಲ್ಲಿ ಮಿನಿಸ್ಟರ್

ಫಾರ್ ಕಮ್ಯುನಿಕೇಷನ್ಸ್ ವೀರಬಹಾದ್ದೂರ್ ಸಿಂಗ್‌ರವರು ಹೇಳಿದ್ದಾರೆ. ಅದನ್ನು ಓದಿ ಹೇಳಿದ್ದಾರೆ. ಹೆಸರುಗಳನ್ನು ಹೇಳಿದ್ದಾರೆ, ಆರ್ಡರ್ ಸಂಖ್ಯೆ ಹೇಳಿದ್ದಾರೆ, details have been told to the Parliament. ಇಲ್ಲಿ ಪ್ರಶ್ನೆ ಏನು ಉದ್ಭವವಾಗುತ್ತದೆ ಎಂದರೆ, ಈ ಆಜ್ಞೆಗಳೆಲ್ಲ ರಾಜ್ಯ ಸರಕಾರದ್ದು. ರಾಜ್ಯ ಸರಕಾರದ ಆಜ್ಞೆಗಳ ಬಗ್ಗೆ, ರಾಜ್ಯ ಸರಕಾರಕ್ಕೆ ಸಂಬಂಧಪಟ್ಟ ವಿಷಯಗಳು ಲೋಕಸಭೆಯಲ್ಲಿ ಎತ್ತಿದರೆ, ಕೇಂದ್ರ ಸರಕಾರದವರು ರಾಜ್ಯ ಸರಕಾರಕ್ಕೆ ಬರೆಯುತ್ತಾರೆ. ಬರೆದಮೇಲೆ ನಾವು ಮಾಹಿತಿ ಕೊಡುತ್ತೇವೆ. ಆಮೇಲೆ ಅವರು ಉತ್ತರಕೊಡತಕ್ಕಂಥಾದ್ದು ಪದ್ಧತಿ.

SRI M. VEERAPPA MOILY.—It is there in the custody of the Telegraph Department.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಲ್ಲಿಗೇ ಬರುತ್ತಿದ್ದೇನೆ, ತಮಗೆ ಸ್ವಲ್ಪ ತಾಳ್ಮೆ ಇರಲಿ. ಈ ವಿಚಾರದಲ್ಲಿ ಕೇಂದ್ರದ ಮಂತ್ರಿಗಳು ರಾಜ್ಯ ಸರಕಾರಕ್ಕೆ ಬರೆದಿಲ್ಲ. ಮಾನ್ಯ ಮೊಯಿಲಿಯವರು ಹೇಳಿದಂತೆ ಅದನ್ನು ಪೋಸ್ಟ್ ಅಂಡ್ ಟೆಲಿಗ್ರಾಫ್ ಅಧಿಕಾರಿಗಳ ಮುಖಾಂತರ ಪಡೆದುಕೊಂಡಿದ್ದಾರೆ. ಅವರ ಮುಖಾಂತರ ಪಡೆದುಕೊಂಡಂಥ ಹೆಸರುಗಳನ್ನು ಆಜ್ಞೆಗಳನ್ನು ಲೋಕಸಭೆಗೆ ತಿಳಿಸಿದ್ದಾರೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. That is the fact I am saying.

ಶ್ರೀ ಎಸ್. ಬಂಗಾರಪ್ಪ.—ಅಷ್ಟರೊಳಗೆ ಸರ್ಕ್ಯುಲೇಟ್ ಆಗಿಹೋಗಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಜಗಜ್ಜಾಹೀರಾಗಿದೆ. It is no more a secret.

ಶ್ರೀ ಎಸ್.ಆರ್. ಬೊಮ್ಮಾಯಿ.—ಇವತ್ತು ಕೇಂದ್ರದ ಮಂತ್ರಿಗಳು ಪತ್ರಿಕೆಯ ಆಧಾರದ ಮೇಲೆ ಉತ್ತರ ಕೊಟ್ಟಿಲ್ಲ. ಅಫಿಷಿಯಲ್ ಡಾಕ್ಯುಮೆಂಟ್ಸ್ ಸಿಕ್ಕಿದ ಮೇಲೆ ಉತ್ತರ ಕೊಟ್ಟಿದ್ದಾರೆ.

SRI M. VEERAPPA MOILY.—He may have his own source of information. Not from you or from Devegowda or from Azeez Sait.

SRI S. R. BOMMAI.—My learned friend. you have been a Minister. ಯಾವುದೇ ಮಂತ್ರಿಗಳಾಗಲಿ ಕೇಂದ್ರದ ಮಂತ್ರಿಗಳಾಗಲಿ ಅಫಿಷಿಯಲ್ ಇನ್‌ಫರ್‌ಮೇಷನ್ ಆಧಾರದ ಮೇಲೆ ಉತ್ತರ ಕೊಡುತ್ತಾರೆಯೇ ವಿನಹಃ ಪತ್ರಿಕೆಗಳಲ್ಲಿ ಬಂದ ಮಾಹಿತಿಯ ಮೇಲೆ ಅಲ್ಲ. ಜವಾಬ್ದಾರಿಯಾಗಿ ಮಂತ್ರಿಗಳು ಹೇಳಬೇಕೆಂದರೆ ಅಫಿಷಿಯಲ್ ಇನ್‌ಫರ್‌ಮೇಷನ್ ಬೇಕು. He is a responsible minister of the Government of India. ಯಾವುದೋ ಒಂದು ಪತ್ರಿಕೆಯಲ್ಲಿ ಬಂದ ಸುದ್ದಿಯ ಆಧಾರದ ಮೇಲೆ ಹೇಳುವುದಕ್ಕೆ ಆಗುವುದಿಲ್ಲ. ಏನಿದ್ದರೂ ಅಫಿಷಿಯಲ್ ಆಗಿಯೇ ಉತ್ತರ ಕೊಡಬೇಕಾಗುತ್ತದೆ. ಈ ಉತ್ತರ ಕೊಡತಕ್ಕಂಥ ವಿಚಾರದಲ್ಲಿ ನಾನು ಒಂದು ಮಾತನ್ನು ಕೇಳುತ್ತೇನೆ, ರಾಜ್ಯ ಸರ್ಕಾರದ ಆಜ್ಞೆಗಳು, ರಾಜ್ಯ ಸರ್ಕಾರದ [illegible] ಆಜ್ಞೆಗಳು, ರಾಜ್ಯ ಸರ್ಕಾರದ ಅಧಿಕಾರಿಗಳು ಟೆಲಿಫೋನ್ ಡಿಪಾರ್ಟ್‌ಮೆಂಟ್‌ಗೆ ಕೊಡುವ ಮಾಹಿತಿ ಆಜ್ಞೆಗಳು ಇದನ್ನು ಹೇಳತಕ್ಕಂಥ ಅಧಿಕಾರ ಅವರಿಗೆ ಇದೆಯೇ ? It violates the Official Secret Act. I want to be very fair.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮ್ಮಲ್ಲಿಯೇ ಯಾರೋ ಕೊಟ್ಟಿರಬೇಕು.

(Interruption)

SRI S. R. BOMMAI.—I will write a letter to the Government of India.

ಶ್ರೀ ಕೆ. ಹೆಚ್. ಪಾಟೀಲ್.—ನೀವು ನಮ್ಮನ್ನು ಏನು ಕೇಳುತ್ತೀರಿ. ಅವರನ್ನೇ ಕೇಳಿ.

SRI S. R. BOMMAI.—I will write.

(interruption)

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಮುಖ್ಯವಾಗಿ ನಾನು ಹೇಳುವುದೇನೆಂದರೆ, ಮಾನ್ಯ ಮಂತ್ರಿಗಳಾದ ಶ್ರೀ ವೀರಬಹದ್ದೂರ್‌ಸಿಂಗ್‌ರವರು ಕೊಟ್ಟಂತಹ ಹೆಸರುಗಳು ಸರಿಯೋ ತಪ್ಪೋ ಎಂದು ನಾನು ಹೇಳುವುದಕ್ಕಾಗುವುದಿಲ್ಲ. I am bound by the Official Secret Act, I am bound by the Law. ಇರತಕ್ಕಂತಹ ಹೆಸರುಗಳು ಯಾವುವು? ಯಾವ ಕಾರಣಕ್ಕಾಗಿ ಮಾಡಿದ್ದಾರೆ. ಯಾವ ಅಧಿಕಾರಿ ಎಂದು ಹೇಳುವಂತಹ ಅಧಿಕಾರ ನನಗೂ ಸಹ ಇಲ್ಲ, I am bound by the Law, ನಾನು ಅಧಿಕಾರದಲ್ಲಿ ಇರುವವರಿಗೆ ಅಫಿಷಿಯಲ್ ಸಿಕ್ರೇಟ್ ಅನ್ನು ಕಾನೂನು ಪ್ರಕಾರ ಹೊರಗಡೆ ಹೇಳಲು ನನಗೂ ಸಹ ಅಧಿಕಾರ ಇಲ್ಲ. ಹೇಳಿದರೆ ನನಗೆ ಕಷ್ಟವಾಗುತ್ತದೆ. ನಾನು ಕಾನೂನಿನ ಅನ್ವಯ ನಡೆಯುತ್ತೇನೆ.

SRI M. VEEBAPPA MOILY.—Whatever you have done it is in excercise of the powers conferred on you.

SRI K. H. SRINIVAS.—It is true that you cannot reveal certain things on account of the provisions of the Official Secret Act. But. if it becomes necessary for discharging your duty, you are duty bound to discharge the same.

SRI S. R. BOMMAI.—The Act is very clear. If it is amended, in public interest one can use it for disclosure. As long as the Act is there any message or information received in the capacity of the Office I hold it cannot be disclosed. If I disclose, tomorrow somebody can prosecute me. ಇನ್ನೊಂದು ವಿಚಾರವನ್ನು ಅವರು ಎತ್ತಿದರು, ಅದೇನೆಂದರೆ ನಮ್ಮ ಅಧಿಕಾರಿಗಳು ಟೆಲಿಫೋನ್ ಟ್ಯಾಪ್ ಮಾಡಬೇಕಾದರೆ ಯಾವುದೋ ಒಂದು ನಂಬರು ಕೊಡುತ್ತಾರೆ. ಆ ನಂಬರಿಗೆ ಟೆಲಿಫೋನ್ ಡಿಪಾರ್ಟ್‌ಮೆಂಟ್‌ನವರು ಕನೆಕ್ಟ್ ಮಾಡಿ ಕೊಟ್ಟ ಮೇಲೆ ಟ್ಯಾಪ್ ಮಾಡಬೇಕಾಗುತ್ತದೆ. ಅವರು ಕನೆಕ್ಟ್ ಮಾಡಿಕೊಡದಿದ್ದರೆ ಆಗುವುದಿಲ್ಲ ಎಂದು Whatever the communications Minister disclosed in the Parliament, I never denied or accepted it. He is not the custodian, the State Government is the custodian of it. ನಾನು ಪ್ರೊಸಿಜರ್ ಹೇಳುತ್ತಿದ್ದೇನೆ. ಟೆಲಿಫೋನ್ ಡಿಪಾರ್ಟ್‌ಮೆಂಟ್‌ನವರ ಸಹಕಾರ ಇಲ್ಲದೇ ಅವರ ಒಪ್ಪಿಗೆ ಇಲ್ಲದೆ ಮಾಡುವುದಕ್ಕೆ ಬರುವುದಿಲ್ಲ,

SRI M. VEERAPPA MOILY.—His Department is the custodian.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಇರುವ ಪ್ರಶ್ನೆ ಟೆಲಿಫೋನ್ ಡಿಪಾರ್ಟ್‌ಮೆಂಟ್‌ನವರ ಒಪ್ಪಿಗೆ ಪಡದೇ ಇಲ್ಲ ಎನ್ನುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕೆ.ಹೆಚ್. ಪಾಟೀಲರು ಗೌರ್ನರ್‌ರವರು ಇದರ ಬಗ್ಗೆ ಮಾಹಿತಿ ಕೇಳಿದಾಗ ತಾವು ಏಕೆ ಕೊಡಲಿಲ್ಲವೆಂಬ ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಏಕೆ ಮಾಹಿತಿ ಕೊಡಲಿಲ್ಲವೆಂದರೆ......

ಶ್ರೀ ಎಸ್. ಬಂಗಾರಪ್ಪ.—ನಮ್ಮ ಹೆಸರುಗಳನ್ನೆಲ್ಲಾ ಟೆಲಿಫೋನ್ ಇಲಾಖೆಗೆ ಏಕೆ ಕೊಟ್ಟಿರಿ?

SRI S. R. BOMMAI.—Once the Stat Government asks it, they are bound to give it.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಸರ್ಕಾರ ನಮ್ಮ ಹೆಸರುಗಳನ್ನೆಲ್ಲ ಕೊಟ್ಟಿದೆ. He owns the responsibility. It means, your provious Government.

ಶ್ರೀ ಎಸ್. ಆರ್. ಬೊಮ್ಮಾಯಿ.–ಇದರ ಬಗ್ಗೆ ನಾವು ಈಗಾಗಲೇ ಗೌರ್ನರ್‌ರವರಿಗೆ ಉತ್ತರವನ್ನು ಕೊಟ್ಟಿದ್ದೇವೆ.

Article 167 is relevant. It reads thus :

"It shall be the duty of the Chief Minister of each State.—

a) to communicate to the Governor of the State all decisions of the Council of Ministers relating to the administration of the affairs of the State and proposals for legislation ;

b) to furnish information relating to the administration of the affairs of the State and proposals for legislation as the Governor may call for ; and

c) the Governor so requires, to submit for the consideration of the Council of Ministers any matter on which a decision has been taken by a Minister but which has not been considered by the Council."

Then, I will read Article 166 also. It says :

"(1) All executive action of the Government of a State shall be expressed to be taken in the name of the Governor,

(2) Orders and other instruments made and executed in the name of the Governor shall be authenticated in such manner as may be specified in rules to be made by the Governor, and the validity of an order or instrument which is so authenticated shall not be called in question on the ground that it is not an order or instrument made or executed by the Governor,

(3) The Governor shall make rules for the more convenient transaction of the business of the Government of the State and for the allocation among Ministers of the said business, in sofar as it is not business with respect to which the Governor is by or under this Constitution required to act in his discretion."

SRI MALLIKARJUN M. KHARGE.—As per Article 167, you are bound to give information. Similarly Article 166 says that shall executive action of the Government of a State shall be expressed to be taken in the name of the Governor.

SRI S.R. BOMMAI.—Here, Governor is bound to act on the advice of Council of Ministers. We need not furnish him the information. There are number decisions of the Supreme Court and there are

conventions between the Prime Minister and the President, Chief Minister and the Governor. The Governor is bound to act on the advice of the Council of Ministers. It is for the Chief Minister to give information. It is within his discretion. There are convertions and precedents. There are number of decisions of the Supreme Court. There are number of judicial pronouncements. This is the legal position and therefore, I have not given.

SRI MALLIKARJUNA M. KHARGE.--We are not asking that... ..

SRI M. VEERAPPA MOILY.—We will have a debate on that.

SRI MALLIKARJUNA M. KHARGE.—That will be issued in the name of the Governor only.

ಶ್ರೀ ಎ. ಲಕ್ಷ್ಮೀಸಾಗರ್.—I rise to a point of order. ನಾನು ಸನ್ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡತಕ್ಕ ಸಂದರ್ಭದಲ್ಲಾಗಲೀ, ಯಾರೇ ಮಾತನಾಡುವಾಗಲಿ, ತಮ್ಮ ಅಭಿಪ್ರಾಯವನ್ನು ಪರಿಪೂರ್ಣವಾಗಿ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಉತ್ತರದಿಂದ ಅವರಿಗೆ ಸಮಾಧಾನವಾಗ ದಿದ್ದರೆ ಅಥವಾ ಅವರು ಎತ್ತಿದಂಥ ಪ್ರಶ್ನೆಗೆ ಪೂರ್ಣ ಉತ್ತರ ಸಿಗದಿದ್ದರೆ ಅವರು ಸ್ಪಷ್ಟೀಕರಣವನ್ನು ಕೇಳಬಹುದು. ಅದನ್ನು ಬಿಟ್ಟು ಮುಖ್ಯ ಮಂತ್ರಿಗಳು ಒಂದೊಂದು ವಾಕ್ಯ ಹೇಳುವ ಹಾಗಿಲ್ಲ, ಅರ್ಧ ವಾಕ್ಯ ಹೇಳುವ ಹಾಗಿಲ್ಲ. ಅದಕ್ಕೆ ತಡೆ ಮಾಡಿದರೆ ಡಿಬೇಟ್‌ನ್ನು ಸರಿಯಾಗಿ ನಡೆಸುವುದಕ್ಕೆ ಆಗುವುದಿಲ್ಲ. ಈ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ಉತ್ತರವನ್ನು ಹೇಳುತ್ತಿದ್ದಾರೆ.

ಸನ್ಮಾನ್ಯರಾದ ಬಂಗಾರಪ್ಪನವರು, ಖರ್ಗೆಯವರು, ಮೊಯಿಲಿಯವರು ಈ ರೀತಿ ಮಾಡುವುದರಿಂದ ಡಿಬೇಟ್‌ನ್ನು ಸರಿಯಾಗಿ ನಡೆಸುವುದಕ್ಕೆ ಆಗುವುದಿಲ್ಲ. ಈಗ ರಾಜ್ಯದ ಮುಖ್ಯ ಮಂತ್ರಿಗಳು ತಮ್ಮ ಉತ್ತರವನ್ನು ಹೇಳುತ್ತಾ ಇದ್ದಾರೆ. ಅವರಿಗೆ ಉತ್ತರ ಬೇಡ ಅಂದರೆ ಬೇಕಾದರೆ ಉತ್ತರವನ್ನು ಇಲ್ಲಿಗೇ ಮುಗಿಸೋಣ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ನಾನು ಇಷ್ಟೇ ಹೇಳುತ್ತೇನೆ, ಅವರು ಹೇಳುವುದರಲ್ಲಿ ಏನೂ ಹುರುಳಿಲ್ಲ. ದುರುದ್ದೇಶದಿಂದ ಹೇಳುತ್ತಾ ಇದ್ದಾರೆ. ರಾಜಕೀಯ ಕಾರಣಗಳಿಗೋಸ್ಕರವಾಗಿ ಹೇಳುತ್ತಾ ಇದ್ದಾರೆ, ಆದುದರಿಂದ ನಾವು ಉತ್ತರ ಕೊಡುವ ಆವಶ್ಯಕತೆ ಇಲ್ಲ ಎಂಬ ಅಭಿಪ್ರಾಯಕ್ಕೆ ಬಂದರೆ ಆಗ ಏನಾಗುತ್ತದೆ ? ಆದುದರಿಂದ ದಯವಿಟ್ಟು ಹಾಗೆ ಆಗುವುದು ಬೇಡ, ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪರಿಪೂರ್ಣವಾದ ಉತ್ತರವನ್ನು ಕೊಡುತ್ತಾ ಇದ್ದಾರೆ. ಅವರಿಗೆ ಅವಕಾಶ ಮಾಡಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ...

ಅಧ್ಯಕ್ಷರು.—ಬಂಗಾರಪ್ಪನವರೇ, ದಯವಿಟ್ಟು ತಾವು ಕುಳಿತುಕೊಳ್ಳಬೇಕು. ನಾನು ಈ ಚರ್ಚೆಗೆ ೫ ಘಂಟೆ ೧೦ ನಿಮಿಷಗಳಷ್ಟು ಕಾಲಾವಧಿಯನ್ನು ಒದಗಿಸಿಕೊಟ್ಟಿದ್ದೇನೆ ನನ್ನ ಉದ್ದೇಶ ಏನೆಂದರೆ, ಚರ್ಚೆಯಲ್ಲಿ ನಿಮಗೆಲ್ಲಾ ಸೂಕ್ತವಾದ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕೆನ್ನುವುದಾಗಿದೆ. ನಿಮ್ಮೆಲ್ಲರ ಭಾಷಣವಾದ ಮೇಲೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಿದ್ದಾರೆ, ಅವರು ಮಾತನಾಡುವಾಗ ನೀವು ಅಡ್ಡ ಬರುವುದು ಸರಿಯಲ್ಲ. ನೀವು ಮಾತನಾಡುವಾಗ ಬೇರೆಯವರು ಅಡ್ಡಿ ಪಡಿಸಿದಾಗ ಹಾಗೆ ಅಡ್ಡಿ ಪಡಿಸಬಾರದು ಎಂದು ನಾನು ಅವರಿಗೆ ಹೇಳಿ ನಿಮಗೆ ಸೂಕ್ತ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇನೆ. ಈಗ ಮುಖ್ಯ ಮಂತ್ರಿಗಳು ನಿಮಗೆ ಉತ್ತರವನ್ನು ಚೆನ್ನಾಗಿ ಕೊಡಬೇಕು, ಅನಂತರ ನಿಮಗೆ ಕ್ಲಾರಿಫಿಕೇಶನ್ ಕೇಳಬೇಕಾದಲ್ಲಿ ಪುನಃ ಅವಕಾಶವನ್ನು ಕೊಡುತ್ತೇನೆ. ಈಗ ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ವೀರಪ್ಪ ಮೊಯಿಲಿಯವರು ರಿಕಾರ್ಡ್ಸನ್ನು ಇಲ್ಲಿ ಇಡಬೇಕೆಂದು ಹೇಳುತ್ತಾರೆ. ಆದರೆ ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಈ ಇಂಟಲಿಜೆನ್ಸ್, ಐ.ಬಿ., ಸಿ.ಬಿ.ಐ., ಮುಂತಾಗಿ ಗುಪ್ತ ವ್ಯವಹಾರಗಳು ಏನಿವೆ ಅವುಗಳು ಒಂದು ಕಾನೂನಿಗೆ ಒಳಪಟ್ಟು

ಇರಬೇಕಾಗುತ್ತದೆ. ಅಂತಹ ವ್ಯವಹಾರಗಳನ್ನು ಬಹಿರಂಗ ಮಾಡಿದಲ್ಲಿ ನಾನು ಅಪರಾಧಿಯಾಗುತ್ತೇನೆ. I will be committing an offence. That is the reason.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ...

ಅಧ್ಯಕ್ಷರು.—ಮೊಯಿಲಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ...

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ತಾವು ನನಗೆ ಏಕೆ ಆಕ್ಷೇಪಣೆ ಮಾಡುತ್ತಿದ್ದೀರಿ ? ಇಂತಹದ್ದೆಲ್ಲಾ ಡಿಬೇಟ್‌ನಲ್ಲಿ ನಡೆಯುತ್ತದೆ. ಮುಖ್ಯ ಮಂತ್ರಿಗಳು ಇಂಟಲಿಜೆನ್ಸ್ ವಿಚಾರದ ರೆಕಾರ್ಡ್‌ನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ಕೊಡಿ ಎಂದು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ರಾಮಕೃಷ್ಣ ಹೆಗಡೆಯವರೇ, ಆಗಿರಲಿ. ಬೊಮ್ಮಾಯಿಯವರೇ ಆಗಿರಲಿ, ಅಥವಾ ಅವರ ಪಕ್ಷಕ್ಕೆ ಆಗರಲಿ They believe in an open Society. ಒಂದು ವೇಳೆ ಸತ್ಯ ಇದ್ದರೆ ಅದನ್ನು ಅಡಗಿಸಿಡುವುದು ಏತಕ್ಕಾಗಿ ? ಜಗತ್ತಿನ ಮುಂದೆ ಸತ್ಯವನ್ನು ಅಡಗಿಸಿಡುವುದು ಏತಕ್ಕೆ ? ರಾಮಕೃಷ್ಣ ಹೆಗಡೆಯವರಿಗೆ ಹಾಗೂ ಅವರ ಪಕ್ಷಕ್ಕೆ ಏನೊಂದು ಕಳಂಕ ಬಂದಿದೆ ಆ ಕಳಂಕವು ಹೋಗುವುದು ಬೇಡವೇ ? ಒಂದು ವೇಳೆ ಆ ಕಳಂಕವು ಶಾಶ್ವತವಾಗಿ ಇರಲಿ ಎಂದು ನಿಮ್ಮ ಮನಸ್ಸಿನಲ್ಲಿದ್ದರೆ ರಿಕಾರ್ಡ್‌ನ್ನು ಇಡುವುದು ಬೇಡ. ಕಳಂಕ ಹೋಗ ಬೇಕೆನ್ನುವುದಾದಲ್ಲಿ ರಿಕಾರ್ಡ್ಸ್‌ನ್ನು ಈ ಸಭೆಯ ಮುಂದೆ ಇಡಬೇಕಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲಿ ರಾಮಕೃಷ್ಣ ಹೆಗಡೆಯವರ, ಬೊಮ್ಮಾಯಿಯವರ ಪ್ರಶ್ನೆ ಬರುವುದಿಲ್ಲ. ನಾವು ರಾಜ್ಯಾಂಗದ ಪ್ರಕಾರವೇ ಕಾನೂನನ್ನು ಜಾರಿ ಮಾಡಬೇಕಾಗುತ್ತದೆ. ರಾಜ್ಯಾಂಗ ಇರುವಾಗ ಅದನ್ನು ಮೀರಿ ನಾವು ನಡೆಯುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ, ನನ್ನ ಮೇಲೆ ಚಾರ್ಜ್ ಮಾಡುತ್ತೀರಿ. ದೇವೇಗೌಡರ ಮೇಲೆ ಚಾರ್ಜ್ ಮಾಡುತ್ತೀರಿ...

ಶ್ರೀ ಎಸ್.ಆರ್. ಬೊಮ್ಮಾಯಿ.—ಯಾರ ಮೇಲೆಯೂ ಇಲ್ಲ. ಸ್ವಲ್ಪ ದಯವಿಟ್ಟು ಕೇಳಬೇಕು. ಇದು ಅಫೀಷಿಯಲ್ ಸಿಕ್ರೆಟ್ ಆ್ಯಕ್ಟ್. ಅದು ಎಲ್ಲಿಯ ವರೆಗೆ ಇರುತ್ತದೆಯೋ ಅಲ್ಲಿಯ ತನಕ ಇದನ್ನು ಬಹಿರಂಗ ಮಾಡುವುದಕ್ಕೆ ಆಗುವುದಿಲ್ಲ. I must discharge my duties under that Act. Anybody in the Office must discharge. As long as the Act is on the Statute book, one must obey. If I Voilate, it will be an offence. ಆ ಕಾರಣಕ್ಕಾಗಿ ರಿಕಾರ್ಡ್ಸ್‌ನ್ನು ಸಭೆಯ ಮುಂದೆ ಇಡಲಿಕ್ಕೆ ಸಾಧ್ಯ ಇಲ್ಲ. ಇನ್ನು ಮಾನ್ಯ ಸದಸ್ಯರುಗಳು ಜ್ಯುಡಿಶಿಯಲ್ ಎನ್‌ಕ್ವಾಯರಿಯನ್ನು ರಾಜ್ಯ ಸರಕಾರವೇ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಈ ವಿಚಾರ ಬಹಿರಂಗ ಹೇಗೆ ಆಯಿತು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಹೀಗೆ ಬಹಿರಂಗವಾದ ಬಗ್ಗೆ ನಾನು ಸರಿ ಅಥವಾ ತಪ್ಪು ಎಂದು ಹೇಳಲಿಲ್ಲ. That I have not said it. Neither I confirm it nor deny it. ಹೀಗೆ ಅಲ್ಲಿ ಹೆಸರುಗಳನ್ನು ಹೇಳಿದ್ದು ಸರಿ ಎಂದು ನಾನು ಹೇಳುವುದಿಲ್ಲ. ಅದರಲ್ಲಿ ಯಾವ ಯಾವ ಹೆಸರುಗಳು ಇತ್ತು ಎಂದು ನನಗೆ ಗೊತ್ತಿಲ್ಲ. ಹಾಗೆ ಅವರು ಹೆಸರುಗಳನ್ನು ಹೇಳಿದ್ದು ಸರಿಯಲ್ಲ ಎಂದೂ ಹೇಳಬಹುದು, ಅಥವಾ ಸರಿಯಾಗಿದೆ ಎಂದೂ ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್ —ಹಾಗಾದರೆ ಬಹಿರಂಗವಾದುದನ್ನು ಒಪ್ಪಿಕೊಳ್ಳುತ್ತೀರಾ ? ಸರಿಯೋ, ತಪ್ಪೋ, ಎನ್ನುವುದು ನಂತರದ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ.—ಪತ್ರಿಕೆಗಳಲ್ಲಿ ಹೆಸರುಗಳು ಬಂದಿವೆ...

ಅಧ್ಯಕ್ಷರು.—ಬಂಗಾರಪ್ಪನವರೆ, ತಾವು ಕುಳಿತುಕೊಳ್ಳಿ...

ಶ್ರೀ ಎಸ್. ಬಂಗಾರಪ್ಪ.—ನೀವು ಹೆಸರು ಹೇಳುವವರೆಗೆ ನಮಗೆ ಗೊತ್ತಿರಲಿಲ್ಲ. ಅಫಿಷಿಯಲ್ ಸಿಕ್ರೆಟ್ ಆ್ಯಕ್ಟ್ ಪ್ರಕಾರ ಏನು ಸಿಕ್ರೆಟ್ ಮಾಡಿದ ಹಾಗೆ ಆಯಿತು ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ಕೇಳಿದ ಪ್ರಶ್ನೆಗಳಿಗೆ ನೀವು ಉತ್ತರ ಕೊಡಿ ಎಂದು ನಾನು ಕೇಳಿದ್ದೇನೆ, ನೀವು ಕೊಟ್ಟಿಲ್ಲ...

ಅಧ್ಯಕ್ಷರು.—ಮಾನ್ಯ ಖರ್ಗೆಯವರೆ, ಅಶಿಸ್ತು ಅಂದರೆ ಏನಿದು ? ಸ್ವಲ್ಪ ಜವಾಬ್ದಾರಿಯಿಂದ ಮಾತನಾಡುವುದನ್ನು ಕಲಿಯಿರಿ. You should not interfere. ನಾನು ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡುತ್ತೇನೆ. ಆಗ ಪುನಃ ನೀವುಗಳು ಹೇಳಬಹುದು. ಮುಖ್ಯ ಮಂತ್ರಿಗಳು ಮಾತ ನಾಡುವಾಗ ನೀವುಗಳು ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯೇ ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನೀವು ಅವಕಾಶ ಮಾಡಿಕೊಡುತ್ತೀರಿ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಮುಖ್ಯಮಂತ್ರಿಯವರ ಉತ್ತರ ನಮ್ಮ ಪ್ರಶ್ನೆಗೆ ಸರಿಯಾದ ಉತ್ತರವಲ್ಲ ಎಂದು...

ಅಧ್ಯಕ್ಷರು.—ಅವರಿಗೆ ತಮ್ಮ ಉತ್ತರವನ್ನು ಹೇಳುವುದಕ್ಕೆ ಹಕ್ಕು ಇದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಮಗೆ ಆ ಉತ್ತರದಿಂದ ಪ್ರಯೋಜನವಿಲ್ಲ. ನಮ್ಮ ಹೆಸರು ಏಕೆ ಪತ್ರಿಕೆಗಳಲ್ಲಿ ಬಂತು ಎಂದು ನಾವು ಕೇಳುತ್ತಾ ಇರುವುದು.

ಅಧ್ಯಕ್ಷರು.—ಅವರು ತಮ್ಮ ಉತ್ತರವನ್ನು ಹೇಳುತ್ತಿದ್ದಾರೆ. ನೀವು ಅದರಿಂದ ಪ್ರಯೋಜನ ಇಲ್ಲ ಎಂದು ಹೇಳುತ್ತೀರಿ. ಅವರು ಹೇಳಿದ್ದನ್ನು ನೀವು, ನೀವು ಹೇಳಿದ್ದನ್ನು ಅವರು ಹಂಸಕ್ಷೀರ ನ್ಯಾಯದಂತೆ ತೆಗೆದುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾನು ಈಗ ವಿಷಯಕ್ಕೆ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ನೀವು ಹಂಸಕ್ಷೀರ ನ್ಯಾಯದ ವಿಚಾರವನ್ನು ಹೇಳುತ್ತಿರು ವುದು ಏನು ? ನಮ್ಮ ಹೆಸರನ್ನು ಬಹಿರಂಗ ಮಾಡಿ ದೇಶದ ತುಂಬಾ ನಮ್ಮನ್ನೆಲ್ಲಾ ಹರಾಜು ಮಾಡುತ್ತಿದ್ದೀರಾ ? ನಮ್ಮ ಹೆಸರು ಏಕೆ ಬಂತು ? ಏನು ಹೇಳುತ್ತಾ ಇದ್ದೀರಿ ನೀವು ?

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವಯರಿಯನ್ನು ರಾಜ್ಯ ಸರ್ಕಾರ ಮಾಡಬೇಕೆಂದು ಹೇಳುತ್ತಾ ಇದ್ದಾರೆ. ರಾಜ್ಯ ಸರ್ಕಾರ ಎನ್‌ಕ್ವಯರಿ ಮಾಡ ಬೇಕಾದರೆ ಈ ಎಲ್ಲ ವಿಚಾರಗಳಿಗೂ ಸಂಬಂಧಪಟ್ಟ ಇಲಾಖೆಗಳ ವ್ಯವಹಾರಗಳು ರಾಜ್ಯ ಸರ್ಕಾರದ ಅಧೀನದಲ್ಲಿರಬೇಕು. ಆದುದರಿಂದ ಅದು ಆಗುವುದಿಲ್ಲ. ನಾನು ಬೇರೆ ವಿಚಾರಗಳನ್ನು ಹೇಳುವುದಿಲ್ಲ. ನಮ್ಮ ರಾಜ್ಯದ ಈ ಪ್ರಕರಣದ ಬಗ್ಗೆ ಸಂಪೂರ್ಣವಾದ ಸತ್ಯ ಹೊರಗೆ ಬರಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆನ್ನುವುದು ನನ್ನ ಅಭಿಪ್ರಾಯ...

ಶ್ರೀ ಎಸ್. ಬಂಗಾರಪ್ಪ.—ನಮ್ಮ ಹೆಸರು ಏತಕ್ಕೆ ಬಹಿರಂಗ ಮಾಡಿದರು ? ಅಂತಹವರ ಮೇಲೆ ಕೇಸ್ ಹಾಕಿ ?

SRI R. V. DESHPANDE.—Your name has been released in the Parliament, not here. ಆದ್ದರಿಂದ ನಾವು ಯಾರಮೇಲೆ ಕೇಸ್ ಹಾಕಬೇಕು ?

ಶ್ರೀ ಎಸ್. ಬಂಗಾರಪ್ಪ.—ನನ್ನ ಹೆಸರನ್ನು ಅದರಲ್ಲಿ ಹೇಗೆ ಸೇರಿಸಿದರು ಎಂಬ ಬಗ್ಗೆ ಹೇಳಬೇಕು.

SRI R. V. DESHPANDE.—You prove it ?

ಶ್ರೀ ಎಸ್. ಬಂಗಾರಪ್ಪ.— ಈಗ ಆಫೀಸರ್ ತಲೆಯಮೇಲೆ ಹಾಕಿ ನೀವು ಹೀಗೆ ಕೆಲಸ ಮಾಡುತ್ತೀರಿ ಹೆಸರುಗಳು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಹೇಗೆ ಬಂತು ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಯವಿಟ್ಟು ಸ್ವಲ್ಪ ಕೇಳಿ...

(ಗೊಂದಲ)

ಇವೊತ್ತು ಯಾರೇ ಆಗಿರಲಿ ಅವರು ತಪ್ಪು ಮಾಡಿದ್ದರೆ, ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿದ್ದರೆ, ಅದರ ಬಗ್ಗೆ ಸೂಕ್ತ ವಿಚಾರಣೆ ಆಗಬೇಕೆಂದು ನಾನು ಹೇಳುತ್ತಾ ಇದ್ದೇನೆ, ಟೆಲಿಫೋನ್

ಟ್ಯಾಪ್‌ಗೆ ಸಂಬಂಧಪಟ್ಟ ಇಲಾಖೆ ಏನಿದೆ, ಅದು ಕೇಂದ್ರ ಸರ್ಕಾರದ ಅಧೀನದಲ್ಲಿ ಇರುವ ಇಲಾಖೆ. ಈ ವಿಚಾರದಲ್ಲಿ ನ್ಯಾಯ ದೊರೆಯಬೇಕು. ಸತ್ಯ ಹೊರಕ್ಕೆ ಬರಬೇಕು ಎನ್ನುವ ಇಚ್ಛೆ ಮಾನ್ಯ ಪ್ರಧಾನಿಯವರಿಗೆ ಇದ್ದರೆ ಅವರೇ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಏಕೆ ಮಾಡಬಾರದು ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವೇ ಏಕೆ ಮಾಡಬಾರದು ?

(ಗೊಂದಲ)

ಅಧ್ಯಕ್ಷರು.—ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

MR. SPEAKER.—Nothing will go on record.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಜ್ಯುಡಿಷಿಯಲ್ ಪ್ರೋಬ್ ಮಾಡಿದರೆ ಇವರದ್ದೆಲ್ಲಾ ಹೊರಗೆ ಬೀಳುತ್ತದೆಂದು ಹೇಳಿಬಿಟ್ಟು... ಇದರ ಅರ್ಥ ಏನು ಎಂದರೆ ಅಧ್ಯಕ್ಷರೇ, ಜ್ಯುಡಿಷಿಯಲ್ ಪ್ರೋಬ್‌ಗೆ ಇವರು ಒಪ್ಪುವುದಿಲ್ಲ. ಇವರು ಕಾನ್‌ಸ್ಟಿಟ್ಯೂಟ್ ಮಾಡುವುದಿಲ್ಲ. ಇಂತಹ ಉತ್ತರ ನಮಗೆ ಬೇಕಾಗಿಲ್ಲ. ಇವರು ಸಮಾಧಾನಕರವಾದ ಉತ್ತರವನ್ನು ಕೊಡುತ್ತಿಲ್ಲ. ಈ ರೀತಿಯ ಉತ್ತರ ನಮಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಒಂದು ಮಾತನ್ನು ಹೇಳುತ್ತೇನೆ. ಈಗ ಪ್ರಾಸಿಕ್ಯೂಟ್ ಮಾಡಿ...

SRI M. MALLIKARJUNA KHARGE.—He has violated individual liberty, and privacy. You are now telling of oath of secrecy.

(*Interruption*)

ಅಧ್ಯಕ್ಷರು.—ದಯವಿಟ್ಟು ಸಮಾಧಾನವಾಗಿ ಕೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಷ್ಟು ಉನ್ನತವಾದ ವಿಧಾನಸಭೆಗೆ ಇದಕ್ಕೆ ಸಂಬಂಧಪಟ್ಟ ರೆಕಾರ್ಡ್ಸ್ ಕೊಡುವುದಕ್ಕೆ, ಫೈಲ್ಸ್ ಕೊಡುವುದಕ್ಕೆ ಆಗುವುದಿಲ್ಲ. ಇದು ಅಫಿಷಿಯಲ್ ಸೀಕ್ರೆಟ್ ಎಂದು ಹೇಳುತ್ತೀರಿ. ಹಾಗಿದ್ದರೆ ನಾಳೆ ಕೇಂದ್ರದವರು ಜ್ಯುಡಿಷಿಯಲ್ ಕಮಿಷನ್ ಮಾಡಿದಲ್ಲಿ ನೀವು ಯಾರು ನಮ್ಮನ್ನು ಕೇಳುವವರು ಎಂದು ನೀವು ಛಾಲೆಂಜ್ ಮಾಡುವುದಿಲ್ಲವೇ ? ಸುಮ್ಮನೆ ತಲೆ ತಪ್ಪಿಸಿಕೊಳ್ಳತಕ್ಕ ಕೆಲಸ ಮಾಡಬೇಡಿ. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆಯವರ ಬಗ್ಗೆ ತನಿಖೆ ಮಾಡುವುದಕ್ಕೆ, ಪ್ರಾಸಿಕ್ಯೂಷನ್ ಮಾಡುವುದಕ್ಕೆ ನನಗೆ ಬಹಳ ಹೆದರಿಕೆಯಾಗುತ್ತದೆ, ಮತ್ತೆ ನಮಗೆ ಏನೂ ಹೇಳುವುದಕ್ಕೆ ಬರುವುದಿಲ್ಲವೆಂದು ಕೂಡಾ ಹೇಳಿಬಿಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಸಂಪೂರ್ಣವಾದ ವಿಚಾರಣೆ ಆಗಬೇಕಾದರೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಮಾಹಿತಿ ಪಡೆಯಬೇಕಾದರೆ ಕೇಂದ್ರ ಸರ್ಕಾರ ಒಂದೇ ವಿಚಾರಣೆ ಮಾಡುವುದಕ್ಕೆ ಸಾಧ್ಯವಿದೆ. ಬೇರೆ ಸರ್ಕಾರ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆ ಇವರು ತಮ್ಮ ಪ್ರಭಾವ ಬೀರಿ, ಪ್ರಧಾನಮಂತ್ರಿಗಳ ಮೇಲೆ ಒತ್ತಾಯ ತಂದು ನಮ್ಮ ಹಗರಣ ಇದ್ದರೆ ಅದನ್ನು ಹೊರಗೆಡವಬಾರದು ? ಹೆಗಡೆಯವರೇ ಈ ಬಗ್ಗೆ ಪತ್ರವನ್ನೂ ಸಹ ಬರೆದಿದ್ದಾರೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪಾಪದ ಹೊರೆ ನೀವು ಮಾಡಿರುವುದು. ಅದು ನಿಮ್ಮದು. ನೀವು ಮಾಡಿರೋದು. ನಾವೆಲ್ಲ ಕಳ್ಳರಾ ? ಪಾಪದ ಹೊರೆ ನಿಮ್ಮದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರೈಮಿನಿಸ್ಟರ್ ಏಕೆ ತನಿಖೆ ಮಾಡುತ್ತಿಲ್ಲ? ಇದರ ಗುಟ್ಟೇನು ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಏಕೆ ಮಾಡಬೇಕು ? ಪ್ರೈಮಿನಿಸ್ಟರ್ ಏಕೆ ಮಾಡಬೇಕು ? ಪಾಪದ ಹೊರೆ ನಿಮ್ಮದು. ನೀವು ಮಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲಿ ಅಫಿಶಿಯಲ್ ಸೀಕ್ರೆಟ್ಸನ್ನು ವಯಲೇಟ್ ಮಾಡಿದ್ದು ಯಾರು ? ನಿಮ್ಮ ರಾಮಕೃಷ್ಣ ಹೆಗ್ಗಡೆಯವರು. ಅಫಿಶಿಯಲ್ ಸೀಕ್ರೆಟ್ಸನ್ನು ವಯಲೇಟ್ ಮಾಡಿದ್ದು ಯಾರು ? ನಿಮ್ಮ ಸರ್ಕಾರದ ಅಧಿಕಾರಿಗಳು. ನಿಮ್ಮ ಕರ್ನಾಟಕದಲ್ಲಿ ನೀವು ಪ್ರಾಸಿಕ್ಯೂಟ ಮಾಡಬೇಕಾದುದು ಕೇಂದ್ರದವರು ಪ್ರಾಸಿಕ್ಯೂಟ್ ಮಾಡುವುದು ಅಲ್ಲ. ಕೇಂದ್ರದವರು ವಿಚಾರ ಮಾಡುವುದು ಅಲ್ಲ. ನಿಮ್ಮ ರಾಡಿಯನ್ನು ನೀವೇ ತೊಳೆಯಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಗುಟ್ಟು ಏನೆಂದರೆ, ಕೇಂದ್ರ ಸರ್ಕಾರ ಮಾಡಿದರೆ ಎಲ್ಲಾ ಹೊರಗಡೆ ಬರುತ್ತದೆಂದಲ್ಲವೇ ಇದರ ಒಳಗುಟ್ಟು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮ್ಮ ಪಾಪದ ಹೊರೆಯನ್ನು ಅವರು ಏತಕ್ಕೆ ಹೊತ್ತುಕೊಳ್ಳಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಕಾಂಗ್ರೆಸ್–ಐ ಮಿತ್ರರಿಗೆ ನಾನು ಕೇಳಿಕೊಳ್ಳುತ್ತಿದ್ದೇನೆ. ನೀವು ಪ್ರಧಾನಿಯವರಿಗೆ ಒಪ್ಪಿಸಿ. ಇದರ ವಿಚಾರಣೆಯಾಗಲಿ. ನಾವು ಇಲ್ಲಿ ಇದನ್ನು ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಪ್ರಧಾನಿಯವರಿಗೆ ಹೇಳಿ.

SRI M. MALLIKARJUNA KHARGE.—Under Section 5 (2) you have got a right to prosecute. Home Ministry is under your control, ನಿಮ್ಮ ಕಂಟ್ರೋಲ್‌ನಲ್ಲೇ ಬರುತ್ತದೆ. ಇದಕ್ಕೆ ಪ್ರೈಮಿನಿಸ್ಟರ್ ಬೇಕೇ ? ಈ ಬಗ್ಗೆ ಎಫ್.ಐ.ಆರ್ ಹಾಕಿ ಛಾರ್ಜ್‌ಶೀಟ್ ಹಾಕುವುದಕ್ಕೆ ರಾಜೀವಗಾಂಧಿಯವರು ಬೇಕೇ ? ಪ್ರೈಮಿನಿಸ್ಟರ್ ಬೇಕೇ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮುಕ್ತಾಯ ಮಾಡುತ್ತಿದ್ದೇನೆ.

SRI M. MALLIKARJUNA KHARGE.—You promise us that you will prosecute Hegde.

(*Interruption*)

MR. SPEAKER.—I with hold my consent for the adjournment motion. Now the House stands adjourned to meet at 11 A.M. tommorrow.

The House adjourned at 30 minutes past 7 of the Clock to meet again at 11 a.m. on 6-10-1988.